ಸಂವಾದ

ಮೇ ೨೦೧೦ ರೂ. ೨೦

ನೆನಪು:

ಹನುಮಂತಯ್ಯ

ಕನು ಸನ್ಯಾಲ್

ಸೆನ್ಸಸ್-2010

ಜನಗಣತಿಯೋ? ಬೇಹುಗಾರಿಕೆಯೋ?

ಸಂವಾದ

ಮಾಸ ಪತ್ರಿಕೆ

ಸಂಪುಟ ೮ ಸಂಚಿಕೆ ೭
ಮೇ ೨೦೧೦

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091

✆ Editorial: 9448048306
✆ Circulation: 080-23480278, 9945264687
e-mail : **samvaada@hotmail.com**
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩
❑ ಹೊಸ ಪುಸ್ತಕ ೦೪
❑ ಅಂತರಂಗ ೦೫
❑ ಸಂಪಾದಕರೊಂದಿಗೆ ಸಂವಾದ:
○ ಶಿವಸುಂದರ್ ೦೬
○ ಡಿ. ಎಸ್ ನಾಗಭೂಷಣ ೦೮
○ ಪ್ರಗತಿನಂದ ೦೯
❑ ಜಾಗತೀಕರಣ ಮತ್ತು ಆಧುನಿಕ ಕನ್ನಡ ಪರಂಪರೆ
○ ಗೌಸುದ್ದೀನ್ ೧೨
❑ ಸೆನ್ಸಸ್ -೨೦೧೦
ಜನಗಣತಿಯೋ? ಬೇಹುಗಾರಿಕೆಯೋ?!
○ ಶಿವಸುಂದರ್ ೧೪
❑ ಎದೆ ಹಾಲಿನಲ್ಲಿ ಅದ್ದಿ ಬರೆಯುವುದು
○ ತೇಜಸ್ವಿ ಕಟ್ಟೀಮನಿ ೧೭
❑ ಕನು ಸನ್ಯಾಲ್: ಕ್ರಾಂತಿಕಾರಿಯ ದಾರುಣ ಅಂತ್ಯ
○ ನಾ ದಿವಾಕರ ೨೦



❑ ಎನ್.ಕೆ. ಹನುಮಂತಯ್ಯ
ಹೀಗೆ ತೀರಿ ಹೋಗಬೇಕಿತ್ತೇ...
○ ರಹಮತ್ ತರೀಕೆರೆ ೨೨
❑ ದಲಿತರಲ್ಲಿ ಎಡ-ಬಲ
ಮೈತ್ರಿ ಪ್ರಾಮಾಣಿಕವಾದದ್ದೆ?
○ ದಾಸನೂರು ಕೂಸಣ್ಣ ೨೪
❑ ಬ್ರಾಹ್ಮಣವಾದಿಗಳ ದೃಷ್ಟಿಯಲ್ಲಿ ಬುದ್ಧ;
ಮುಂದುವರಿದ ವಿಶ್ಲೇಷಣೆ!
○ ಸಿ. ಎಚ್. ರಾಜಶೇಖರ್ ೨೬
❑ ಕಥೆ:
ಚಮ್ಮಾವುಗೆ
○ ಡಾ. ಎಚ್.ಟಿ ಪೋತೆ ೩೨
❑ ಕಾಲಮಾನ... ೬
○ ಡಾ. ಮುಜಾಫರ್ ಅಸ್ಸಾದಿ ೩೮
❑ ನಾಟಕ ಅವಲೋಕನ:
ರಂಗಕ್ಕೆ ಬಂದ ಗಾಂಧಿ
○ ಡಾ॥ ಕಾ. ವೆಂ. ಶ್ರೀನಿವಾಸಮೂರ್ತಿ ೪೧
❑ ಧರೆ ಹತ್ತಿ ಉರಿದರೆ... ೨೧
ಅಲಕ್ಷಿತರ ಪದತಲದಿಂದ ಅಭಿವೃದ್ಧಿಯ ಆರಂಭ
○ ಡಾ. ಟಿ. ಆರ್ ಚಂದ್ರಶೇಖರ್ ೪೨
❑ ದಲಿತ್ ಡೈರಿ
○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
❑ ಬುದ್ಧಾಯಣ ೫೦
○ ಸಿ. ಎಚ್. ರಾಜಶೇಖರ್



ಕವನಗಳು : ❑ ರಣ ಹದ್ದುಗಳು ೧೩ ❑ ದೇವರು ಅವರ ಒಕ್ಕಲು ೩೭

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

'ಸಮಾಜವನ್ನು ಒಡೆಯುವ ಕೆಲಸ'

ಮಾನ್ಯರೇ,

ದೇವನೂರು ಮಹದೇವ ಒಬ್ಬ ವಿಶಿಷ್ಟ ವ್ಯಕ್ತಿ ಹರಿಜನರಾಗಿ ನೋವು ಉಂಡವರು. ಚಿಂತನಶೀಲರು. ಸಮಾಜದಲ್ಲಿ ಮನೆಮಾಡಿರುವ ಅಸಮಾನತೆ, ಮೇಲು ಕೀಳು ಭಾವನೆ, ಶೋಷಣೆ ಬಡವರ ಬಗ್ಗೆ ನಿರ್ಲಕ್ಷ್ಯತೆ ಇವೆಲ್ಲ ತೊಲಗಬೇಕೆಂದು ಬಯಸುವವರು. ಈ ವರ್ಷದ ಏಪ್ರಿಲ್ ಮಾಹೆಯ 'ಸಂವಾದ' ಪತ್ರಿಕೆಯಲ್ಲಿ ದೇವನೂರು ಮಹಾದೇವ ಅವರು ನೀಡಿದ ಒಂದು ಭಾಷಣವನ್ನು ಪ್ರಕಟಿಸಲಾಗಿದೆ. ಅವರು ಎತ್ತಿರುವ ಈ ಕೆಲವು ಪ್ರಶ್ನೆಗಳಿಗೆ ಎಲ್ಲ ಕೋಮಿನ ಹಿಂದೂಗಳೂ, ಎಲ್ಲ ಮಠಗಳವರೂ ಉತ್ತರ ಕೊಡಬೇಕಾಗಿದೆ. ಅಷ್ಟೇ ಅಲ್ಲ ಅವರೆಲ್ಲ ಜಾತೀಯತೆಯಿಂದ ಹೊರಬರಬೇಕಾಗಿದೆ. ಮಹಾದೇವು ಅವರು ಎತ್ತಿರುವ ಪ್ರಶ್ನೆಗಳು ಇವು.

1. ಸಂವಿಧಾನದ ಸಮಾನತೆಯನ್ನು ಒಂದು ಮೌಲ್ಯವೆಂದು ಪರಿಗಣಿಸಿದೆ. ಆದರೆ ಹಿಂದುಗಳ, ಹಿಂದು ಮಠಗಳ ಭೂತಕಾಲದ ಸುಪ್ತ ಪ್ರಜ್ಞೆ, ಶ್ರೇಣೀಕೃತ ಸಮಾಜವನ್ನೂ, ಅಸ್ಪೃಶತೆಯನ್ನೂ, ಜಾತಿ ತಾರತಮ್ಯಗಳನ್ನೂ ಸಮಾಜದ ಮೌಲ್ಯಗಳನ್ನಾಗಿ ಉಳಿಸಿಕೊಂಡು ಬರಲು ಹೆಣಗುತ್ತಿವೆ. ಈ ಕಾರಣದಿಂದ ಸಂವಿಧಾನದ ಕನಸುಗಳು ನನಸಾಗದೆ ಉಳಿದಿವೆ. ಈ ಪರಿಸ್ಥಿತಿಗೆ ಕಾರಣರಾದವರೆಲ್ಲ ತಮ್ಮ ನಡವಳಿಕೆ ಬದಲಿಸಿಕೊಳ್ಳಬೇಕು.

2. ಅಸ್ಪೃಶತೆಯನ್ನು ತೊಡೆದು ಹಾಕಲು ಸಂವಿಧಾನ ಹೇಳುತ್ತದೆ. ಪೂರಿ ಜಗದ್ಗುರುಗಳು ಎರಡು ವರ್ಷಗಳ ಹಿಂದೆ ಅಸ್ಪೃತೆಯನ್ನು ಎತ್ತಿಹಿಡಿದು ಘೋಷಣೆ ಮಾಡಿದರೂ. ಅವರ ಹೇಳಿಕೆ ರಾಜ್ಯಂಗಾ ವಿರೋಧವಾಗಿದ್ದರೂ ಸರ್ಕಾರ ಅವರ ಮೇಲೆ ಕ್ರಮ ಕೈಗೊಳ್ಳಲಿಲ್ಲ. ಸಂವಿಧಾನದ ಹೆಸರಿನಲ್ಲಿ ಪ್ರಮಾಣ ಮಾಡಿ, ಆಡಳಿತ ನಡೆಸಲು ಬರುವ ಪ್ರಧಾನ ಮಂತ್ರಿಗಳು, ಮುಖ್ಯಮಂತ್ರಿಗಳು ಸಂವಿಧಾನವನ್ನು ಧಿಕ್ಕರಿಸಿ, ಈ ರೀತಿ ಹೇಳಿಕೆ ಇತ್ತವರ ಮೇಲೆ ಕ್ರಮ ಕೈಗೊಳ್ಳಲಿಲ್ಲವೆಂದ ಮೇಲೆ ಅಂತಹವರು ಅಧಿಕಾರದಲ್ಲಿ ಮುಂದುವರೆಯಬಹುದೇ? ಇದು ಮಹಾದೇವು ಅವರ ಪ್ರಶ್ನೆ.

3. ಬಾಹ್ಯ ಒತ್ತಡದಿಂದ ಶಾಲೆ, ಹೋಟೆಲ್‌ಗಳಿಗೆ ಪ್ರವೇಶ, ರೈಲು ಬಸ್ಸುಗಳಲ್ಲಿ ಸಹ ಪ್ರಯಾಣ ಎಲ್ಲ ನಡೆದಿವೆ. ಅಂತರಂಗದ ಬದಲಾವಣೆ ಸವರ್ಣರಲ್ಲಿ ಆಗಿಯೇ ಇಲ್ಲ. ಬ್ರಾಹ್ಮಣರು, ಒಕ್ಕಲಿಗರು, ಕುರುಬರು, ಲಿಂಗಾಯತರು(?) ಎಲ್ಲರೂ ಅಂತರಂಗ ಶುದ್ಧಿಮಾಡಿಕೊಳ್ಳಬೇಕು. ರಾಜ್ಯಾಂಗದಲ್ಲಿ ನಮೂದಿಸಲಾಗಿರುವ ಸಮಾನತೆಯ ತತ್ವವನ್ನು ಕಾಯಾ ವಾಚಾ ಮನಸಾ ಒಪ್ಪಿಕೊಳ್ಳಬೇಕು. ಆಚರಣೆಗೆ ತರಬೇಕು.

4. ವಿಶ್ವೇಶ್ವರತೀರ್ಥರು ಇತ್ತೀಚಿನ ದಿನಗಳಲ್ಲಿ ಹರಿ ಜನ ಕೇರಿಗಳಿಗೆ ಭೇಟಿ ನೀಡುತ್ತಾರೆ. ಒಂದು ಪ್ರಸಂಗ ಅವರನ್ನು ಈ ತೀರ್ಮಾನ ಕೈಗೊಳ್ಳಲು ಪ್ರೇರಣೆ ನೀಡಿತು. ಪರ್ಯಾಯ ನಡೆಯುವ ಸಂದರ್ಭದಲ್ಲಿ ಮಠದ ಜಮೀನಿನಲ್ಲಿ ದುಡಿಯುವ ಎಲ್ಲರಿಗೂ ಮಾರ್ಯದೆ ಮಾಡುವುದು ಅಲ್ಲಿಯ ಸಂಪ್ರದಾಯ.

ಹೀಗೆ ಮರ್ಯಾದೆ ಮಾಡುವಾಗ ಸವರ್ಣರನ್ನು ಒಳಗೆ ಬಿಟ್ಟುಕೊಳ್ಳುವುದು ಹರಿಜನರನ್ನು ಹೊರಗೇ ನಿಲ್ಲಿಸಿ ಮರ್ಯಾದೆ ಮಾಡುವುದು ಹಿಂದಿನಿಂದಲೂ ನಡೆದುಬಂದಿದೆ. ವಿಶ್ವೇಶ್ವರತೀರ್ಥರು ಶ್ರೀ ಕೃಷ್ಣನ ಪೂಜೆಯನ್ನು ವಹಿಸಿಕೊಂಡ ವರ್ಷಒಳಗೆ ಮರ್ಯಾದೆ ಮಾಡಿಸಿಕೊಂಡ ಒಬ್ಬ ರೈತ ಹರಿಜನ ಮತದಿಂದ ಕ್ರೈಸ್ತ ಮತಕ್ಕೆ ಮತಾಂತರ ಗೊಂಡವನಾಗಿದ್ದ. ಹರಿಜನ ಒಬ್ಬ ಕ್ರಿಶ್ಚಿಯನ್ನಾದರೆ ಅವನಿಗೆ ಮಠದಳೊಗಡೆಗೆ ಪ್ರವೇಶ, ಅವನು ಹರಿಜನನಾಗಿಯೇ ಹಿಂದುವಾಗಿಯೇ, ಉಳಿದರೆ ಅವನಿಗೆ ಹೊರಗೇ ನಿಲ್ಲುವ ಶಿಕ್ಷೆ. ಇದು ಸರಿಯೇ ಎಂದು ವಿಶ್ವೇಶ್ವರತೀರ್ಥರು ಉಡುಪಿಯ ಅಷ್ಟ ಮಠದ ಇತರೆ ಯತಿಗಳನ್ನು ಕೇಳಿದರು.

ಎಲ್ಲರೂ ಮೌನ ತಾಳಿದರು. ಆಗ ವಿಶ್ವೇಶ್ವರತೀರ್ಥರು ಏಕಾಂಗಿ ನಿರ್ಧಾರವೊಂದನ್ನು ತೆಗೆದುಕೊಂಡರು. ಹರಿಜನ ಕೇರಿಗೆ ಭೇಟಿ ನೀಡುವ ಸಂಕಲ್ಪ ಮಾಡಿದರು. ಇಷ್ಟರಮಟ್ಟಿನ ಪರಿವರ್ತನೆ ಅವರಲ್ಲಿ ಆಯಿತು. ಆದರೆ ಉಳಿದ ಏಳು ಮಠಗಳವರು ಇದಕ್ಕೆ ಒಪ್ಪಿಗೆ ನೀಡಲಿಲ್ಲ. ಆದರೆ ಅವರು ವಿಶ್ವೇಶ್ವರತೀರ್ಥರನ್ನು ಪ್ರತಿಭಟಿಸುವ ಸಾಹಸವನ್ನೂ ಮಾಡಲಿಲ್ಲ.

ಮಹದೇವು ಹೇಳುವಂತೆ ಕನಕದಾಸರು ಅಷ್ಟಮಠಗಳನ್ನು, ನವಮಠಗಳನ್ನಾಗಿ ಪರಿವರ್ತಿಸುವರು ಎಂದು ಪ್ರಶ್ನಿಸುತ್ತಾ ಸುಮಾರು ವರ್ಷಗಳಿಂದ ಕಾದು ಕೂತಿದ್ದಾರೆ. ಆದರೆ ಅದರ ಪ್ರಸ್ತಾಪವನ್ನೇ ಅಷ್ಟರುವಗಳವರು ಮಾಡಲು ಇಚ್ಚಿಸುವು ದಿಲ್ಲ. ವಸ್ತುಸ್ಥಿತಿ ಹೀಗಿರುವಾಗ ಹರಿಜನ ಕೇರಿಯ ಬಾಲಕನೊಬ್ಬ ಸ್ವಾಮಿಜಿ, ನನ್ನನ್ನು ನಿಮ್ಮ ಮಠಕ್ಕೆ ಕರೆದೊಕೊಂಡು ಹೋಗಿ ಶಿಕ್ಷಣ, ಸಂಸ್ಕಾರ ನೀಡಿ ನಿಮ್ಮ ತನನ್ನಾಗಿ ಮಾಡಿಕೊಳ್ಳಿ ಎಂದು ಅಂಗಲಾಚಿ ಬೇಡಿದರೆ ವಿಶ್ವೇಶ್ವರತೀರ್ಥರು ಆ ಕೆಲಸ ಮಾಡಿಯಾರೇ? ಹಾಗೆ ಒಬ್ಬ ಹರಿಜನ ಹುಡುಗನನ್ನು ಉಡುಪಿ ಮಠಕ್ಕೆ ದಾಖಲಿಸಲು ಕರೆದುಕೊಂಡು ಹೋದರೆ, ವಿಶ್ವೇಶ್ವರತೀರ್ಥರನ್ನು ಅಷ್ಟಮಠದ ಒಬ್ಬ ಸಂನ್ಯಾಸಿಯಾಗಿ ಉಳಿಯಲು ಉಳಿದ ಏಳು ಮಠಗಳವರು ಬಿಟ್ಟಾರೆ ಎಂದು ಪ್ರಶ್ನಿಸಬೇಕಾಗುತ್ತದೆ.

ತಮ್ಮ ಮಠಕ್ಕೆ ಉತ್ತರಾಧಿಕಾರಿಯಾಗಲು, ಅವಕಾಶ ಮಾಡಿಕೊಡಬೇಕೆಂದು ಯಾರಾದರೂ ಹರಿಜನ ಹುಡುಗ ವಿನಂತಿಸಿಕೊಂಡರೆ ಏನು ಗತಿ ಎಂಬ ಭಯದಿಂದಲೇ ಮುರುಘಮಠಾಧಿಪತಿಗಳು ಎಲ್ಲ ಕೆಳ ಜಾತಿಯವರಿಗೂ ಒಂದೊಂದು ಮಠ ಸ್ಥಾಪಿಸಿ ಕೊಟ್ಟು ಆ ಜನಾಂಗದ ಒಬ್ಬರನ್ನೂ ಮಠಾಧಿಪತಿಯನ್ನಾಗಿ ಮಾಡಲು ಹೊರಟಿದ್ದಾರೆ. ಮಹದೇವು ಹೇಳುವಂತೆ ಶ್ರೇಣೀಕೃತ ಕಟ್ಟಳೆಗಳೇ ಈಗ ಧರ್ಮವೆನಿಸಿಕೊಂಡಿದೆ. ಸಮಾಜವನ್ನು ಒಡೆಯುವ ಕೆಲಸ ಮಠಾಧಿಪತಿಗಳಿಂದ ಅವ್ಯಾಹತವಾಗಿ ನಡೆಯುತ್ತಿದೆ.

ಎಚ್. ಎಸ್. ದೊರೆಸ್ವಾಮಿ,
ಬೆಂಗಳೂರು

ಪತ್ರಗಳು

ಗುತ್ತಿಗೆ ಹಿಡಿದ ಗೋಸುಂಬೆ ತಲೆಗಳು

ಮಾನ್ಯರೇ,

ಏಪ್ರಿಲ್ 2010 'ಸಂವಾದ'ದಲ್ಲಿ ಪ್ರಕಟವಾದ ದೇವನೂರು ಮಹಾದೇವ ಅವರ 'ಭಾರತ ಸಂವಿಧಾನಕ್ಕೆ ಭೂತ ಚೇಷ್ಟೆ!' ಲೇಖನ ಹಲವು ವಾಸ್ತವ ಸಂಗತಿಗಳನ್ನು ಬೆತ್ತಲಾಗಿ ನಿಲ್ಲಿಸುತ್ತದೆ. ನಮ್ಮ ಲಿಖಿತ ಸಂವಿಧಾನಕ್ಕೆ ಸೆಡ್ಡು ಹೊಡೆದು ನಿಲ್ಲಬಲ್ಲ, ಅಲಿಖಿತ ಸಂವಿಧಾನವೊಂದು ಅಂದಿನಿಂದ ಇಂದಿನವರೆಗೆ ನಮ್ಮ ನಡುವೆ ಉಸಿರಾಡುತ್ತ ದಲಿತ ಜನಾಂಗದ ಮೇಲೆ ತನ್ನ ಹಿಡಿತವನ್ನು ಸಾಧಿಸುತ್ತಿದೆ. ದಬ್ಬಾಳಿಕೆಯನ್ನು ನಡೆಸುತ್ತಿದೆ. ಮೇಲ್ವರ್ಗದ ಬುದ್ಧಿವಂತ ತಲೆಗಳು ಅಲಿಖಿತ ಸಂವಿಧಾನದಲ್ಲಿಟ್ಟಿರುವ ವಿಶ್ವಾಸವನ್ನೂ ಲಿಖಿತ ಸಂವಿಧಾನದ ಮೇಲೆ ಇಟ್ಟುಕೊಂಡಿಲ್ಲ. ಕಾರಣ ಸಾಮಾಜಿಕವಾಗಿ, ರಾಜಕೀಯವಾಗಿ. ಆರ್ಥಿಕವಾಗಿ, ಶೈಕ್ಷಣಿಕವಾಗಿ ಕೂಡ ದಲಿತರ ಮೇಲೆ ಇನ್ನಿಲ್ಲದ ಬೌದ್ಧಿಕ ಅತ್ಯಾಚಾರವನ್ನು ನಡೆಸಲು ಸಾಧ್ಯವಾಗುವುದಿಲ್ಲ ಎಂದು.

ದಲಿತರಿಗೆ ಅವಕಾಶ, ಅಧಿಕಾರ ಕೊಟ್ಟಂತೆ ಮಾಡಿ, ಕಿತ್ತುಕೊಳ್ಳುತ್ತಿರುವುದನ್ನು ನೋಡಿದರೆ ಸಂಚಿನಿಂದಲೇ ಹಂಚಿಕೆ ತಳ್ಳಿ ಸಂಪೂರ್ಣವಾಗಿ ಹೊರಗಿಡುವ ವ್ಯವಸ್ಥಿತ ಜಾಲವೇ ಭಾರತದಲ್ಲಿ, ಅದರಲ್ಲೂ ಕರ್ನಾಟಕದಲ್ಲಿ ಹೆಚ್ಚಾಗಿಯೇ ತಳವೂರುತ್ತಿವೆ. ಇದಕ್ಕೆ ಮಠಗಳು, ಮಠಾಧಿಪತಿಗಳು, ರಾಜಕೀಯ ಮತಾಂಧರು ಶಿಕ್ಷಣದ ಗುತ್ತಿಗೆ ಹಿಡಿದವರಂತೆ ನಟಿಸುವ ಗೋಸುಂಬೆ ತಲೆಗಳು ಬದಲಾಗದೆ ಲಿಖಿತ ಸಂವಿಧಾನಕ್ಕೆ ಅಸ್ತಿತ್ವವಿಲ್ಲ.

ಹಳ್ಳಿ ವೆಂಕಟೇಶ್, ಹಾಸನ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೪೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ದೇವರು ಅವರ ಒಕ್ಕಲು

ಇರುಳ ನಾಲಿಗೆಯನ್ನು ಕತ್ತರಿಸಿದ ದಿನವೇ
ಇವನು ಅವನದಲ್ಲದ ಆ ಊರಿಗೆ
ಓಡಿ ಬಂದಿದ್ದಾನೆ
ಕದನ ಭೂಮಿಯಲ್ಲಿ ಕ್ರೂರ ಡ್ರ್ಯಾಗನ್‌ಗಳೊಂದಿಗೆ
ಜಿದ್ದಿಗೆ ಬಿದ್ದವರಿಗೆ
ಫಕೀರನ ಸುಳಿವು ಸಿಕ್ಕಿಬಿಟ್ಟಿದೆ
ದೇವರು ಅವರ ಒಕ್ಕಲು

ಸೊಂಟದ ಕೆಳಗಿನ ಬಟ್ಟೆಬಿಚ್ಚಿ
ಧರ್ಮವನ್ನು ಪತ್ತೆಹಚ್ಚುವ ಊರಿನಲ್ಲಿ
ಇವನು
ಮೋಂಬತ್ತಿ ಹಿಡಿದು ಸಹಾಯಕ್ಕೆ
ಅವರ ದೇವರ ಮೊರೆ ಹೋಗಿದ್ದಾನೆ
ಹಗಲು ರಾತ್ರಿಗಳನು ಕದನ ಭೂಮಿಯಲ್ಲಿ
ಸುಟ್ಟವರಿಗೆ
ದಿಗ್ವಿಜಯ ಸಾರುವ ಮುನ್ನ
ಫಕೀರನ ದೇವರ ಕೊಲ್ಲುವ ಆಸೆ



ಮಿನಾರುಗಳು ಆಕಾಶವನ್ನು ಮುತ್ತಿಡುವ
ಊರಿನಲ್ಲಿ
ಇವನ ದೇವರಿಗೆ ಮುಖವಿಲ್ಲ
ಮಧುಶಾಲೆ, ಅವಳ ಮನೆ ಒಂದೇ ಓಣಿಯಲಿ
ಇವನದು ನಿರ್ಲಜ್ಜ ಆಯ್ಕೆ:
ಮುರಿದ ಮಧುಬಟ್ಟಲು
ಲೋಕದ ಕಣ್ಣಿಗೆ ಇವನು ಯಾವತ್ತೂ ಕಾಫಿರ್

ಇವನು ಕಾಲಿಟ್ಟ ಬೀದಿಯನ್ನು
ಮೈಲಿಗೆ ಎಂದವರು
ಗಂಗೆಯ ಹರಿವ ದಿಕ್ಕನು ಬದಲಿಸಿ
ಪಾಪವನು ತೊಳೆದರು
ಮುಖವಿಲ್ಲದ ದೇವರು ನಗುತ್ತಿದ್ದ
ಇವನ ಮಾಯದ ಹೆಜ್ಜೆಗುರುತುಗಳ
ಅಳಿಯಲಾಗದವರು
ನೆಲದ ಕಿಬ್ಬೊಟ್ಟೆಯೊಳಗೆ ತೂರಿಕೊಂಡರು.

○ ಕೆ.ಎಲ್. ಚಂದ್ರಶೇಖರ್ ಐಜೂರ್

ಸಂಪಾದಕೀಯ

ಹರಾಜಿಗೆ ನಿಂತ ಹಳ್ಳಿಗಳು!

ಏಪ್ರಿಲ್ ತಿಂಗಳ ಒಂದು ವಾರ ಪೂರ್ತಿ ಹಳ್ಳಿಯಲ್ಲಿದ್ದೆ. ಗ್ರಾಮ ಪಂಚಾಯ್ತಿ ಚುನಾವಣೆಗಳು ಸಮಿಪಿಸುತ್ತಿದ್ದ ಕಾರಣ ಹಳ್ಳಿಯಲ್ಲಿ ಹಿಂದೆಂದೂ ಇರದಷ್ಟು ಲವಲವಿಕೆ, ಉತ್ಸಾಹಗಳು ಕಾಣಿಸುತ್ತಿದ್ದವು. ಜನ ಗುಂಪು ಕೂಡುವುದು, ಆಸಕ್ತ ಉಮೇದುವಾದರ ಪರ ವಕಾಲತ್ತು ವಹಿಸುವುದು, ಗ್ರಾಮದ ಸಮಸ್ಯೆ-ಅಭಿವೃದ್ಧಿ ಇತ್ಯಾದಿ ಕುರಿತ ಚರ್ಚೆ, ಅದರ ಮಧ್ಯೆ ಬಿಜೆಪಿ, ಜೆಡಿಎಸ್, ಕಾಂಗ್ರೆಸ್, ಇವುಗಳಲ್ಲಿ ಯಾವ ಪಕ್ಷದ ಪರ ಸೇರಿಕೊಳ್ಳುವುದು ಇವೇ ಲೆಕ್ಕಾಚಾರಗಳು ನಡೆಯುತ್ತಿದ್ದವು.

ಒಂದು ಬೆಳಗ್ಗೆ ೨೫-೩೦ರ ವಯಸ್ಸಿನ ಹುಡುಗನೊಬ್ಬ ನನ್ನನ್ನು ಕಾಣಲು ಬಂದ. 'ಊರಿಗೆ ಅಂತ ಐವತ್ತು ಸಾವಿರ ರೂಪಾಯಿ ಕೇಳುತ್ತಿದ್ದಾರೆ. ಹಣ ಕೊಟ್ಟರೆ ಅವಿರೋಧವಾಗಿ ಆಯ್ಕೆಮಾಡ್ತಾರಂತೆ, ಏನು ಮಾಡಲಿ' ಅಂತ ಕೇಳಿದ. ನನಗೆ ಕಕ್ಕಾಬಿಕ್ಕಿಯಾಯಿತು. ಇವನು ಬೇಡ ಅಂದರೆ ಮತ್ಯಾರೋ ಇನ್ನೊಬ್ಬ ಅಷ್ಟೇ ದುಡ್ಡು ಕೊಟ್ಟು ಆ ಸ್ಥಾನವನ್ನು ಕೊಂಡುಕೊಳ್ಳಲು ಸಿದ್ದನಾಗಿದ್ದಾನೆ ಎಂಬುದು ತಿಳಿದ ಮೇಲಂತೂ ಮತ್ತಷ್ಟು ಕಸಿವಿಸಿಯಾಯಿತು. 'ನಿನಗೆ ಇಷ್ಟ ಬಂದಂತೆ ಮಾಡು. ಊರಿನ ಚುನಾವಣೆ ವಿಷಯದಲ್ಲಿ ನನಗೆ ಆಸಕ್ತಿ ಇಲ್ಲ' ಅಂತ ಹೇಳಿ ನಾನು ನುಣಚಿಕೊಂಡೆ.

ಆ ಹುಡುಗ ಹೋದ ಮೇಲೆ ನನ್ನಲ್ಲಿ ಗಾಢ ವಿಷಾದ ತುಂಬಿತು. ನ್ಯಾಯ, ಸಮಾನತೆ, ಪ್ರಜಾಸತ್ತೆಯ ಉಳಿವು, ಜನರಿಗೇ ಆಡಳಿತ, ಮಾತದಾರನೇ ಸಾರ್ವಭೌಮ, ವಿಕೇಂದ್ರಿಕರಣ ಅಂತೆಲ್ಲ ಜೀವಮಾನವಿಡೀ ಹೋರಾಡಿ ಸಾಧಿಸಿದ್ದೇನು ಎನ್ನುವ ಹತಾಷೆ ತುಂಬಿ ಮತ್ತಷ್ಟು ಕುಸಿದುಹೋದೆ. ಕೆಲವು ದಿನಗಳ ಹಿಂದಷ್ಟೆ ಪಂಚಾಯ್ತಿಗೆ ಪಂಚಾಯ್ತಿಗಳೇ ಹೀಗೆ ಹರಾಜಿಗೆ ಒಳಗಾಗಿದ್ದನ್ನು ಪತ್ರಿಕೆಗಳಲ್ಲಿ ಓದಿದ್ದೆ. ಪ್ರಜಾಪ್ರಭುತ್ವ ಮತ್ತು ಚುನಾವಣೆಗಳು ಮುಟ್ಟಿರುವ ಸ್ಥಿತಿ ಕಂಡು ಆಕ್ರೋಶ-ಯಾತನೆ ಎರಡೂ ಒಟ್ಟಿಗೆ ಆಗತೊಡಗಿದವು.

ಗ್ರಾಮಪಂಚಾಯ್ತಿಗಳಲ್ಲಿ ಸ್ಥಾನಗಳನ್ನು ಹೀಗೆ ಹರಾಜು ಹಾಕುವುದು ಹೊಸದೇನೂ ಅಲ್ಲ. ಹಿಂದಿನ ಒಂದೆರಡು ಚುನಾವಣೆಗಳಲ್ಲಿ ಅಲ್ಲಲ್ಲಿ ಇಂಥ ಘಟನೆಗಳು ನಡೆದಿವೆ. ಆದರೆ, ಈ ಬಾರಿಯ ಚುನಾವಣೆಯಲ್ಲಿ ಇದೊಂದು ದಂಧೆಯ ರೂಪ ಪಡೆದುಕೊಳ್ಳತೊಡಗಿದೆ. ಗ್ರಾಮಸ್ಥರು ಸರ್ಕಾರದಿಂದ ಕೆಲಸ ಮಾಡಿಸಿಕೊಳ್ಳುವ ಬದಲು ಅಭ್ಯರ್ಥಿಗಳಿಂದ ಹಣ ಕಸಿದು ಗ್ರಾಮದ ಕೆಲಸಗಳನ್ನು ಮಾಡಿಕೊಳ್ಳಲು ಮುಂದಾಗುತ್ತಿದ್ದಾರೆ. ಅದರಲ್ಲೂ ಗ್ರಾಮದ ಕೆಲಸವೆಂದರೆ, ದೇವಸ್ಥಾನ ಕಟ್ಟುವುದು ಅಥವಾ ಹಳೆ ದೇವಸ್ಥಾನಗಳ ಜೀರ್ಣೋದ್ಧಾರ ಮಾಡುವುದು ಮಾತ್ರ ಎಂಬುದು ಗ್ರಾಮಸ್ಥರ ನಂಬಿಕೆ.

ಈಗಲೂ ಹಳ್ಳಿಗಳಲ್ಲಿ ಕುಡಿಯಲು ನೀರಿಲ್ಲ, ಮನೆಗಳಲ್ಲಿ ಕಕ್ಕಸ್ಸುಗಳಿಲ್ಲ, ರಸ್ತೆ ಇಲ್ಲ, ಬೀದಿ ದೀಪಗಳಿಲ್ಲ, ಚರಂಡಿಗಳಿಲ್ಲ, ಇತರೆ ನಾಗರಿಕ ಸೌಲಭ್ಯಗಳಂತೂ ಇಲ್ಲವೇ ಇಲ್ಲ. ಈ ಕೆಲಸಗಳನ್ನು ಮಾಡಬೇಕಾದ ಸರ್ಕಾರ, ಹಾಗೂ ಸ್ಥಳೀಯ ಆಡಳಿತಗಳು ಅಭಿವೃದ್ಧಿ ಹೆಸರಿನ ದಲ್ಲಾಳಿಗಳಾಗಿವೆಯೇ ಹೊರತು ಬೇರೇನೂ ಮಾಡುತ್ತಿಲ್ಲ. ಇಂಥ ಸಂದರ್ಭದಲ್ಲಿ ಇಡೀ ಹಳ್ಳಿಗಳು ಸಾಮೂಹಿಕ ಸನ್ನಿಗೊಳಗಾದಂತೆ ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮಾರಾಟ ಮಾಡಲು ನಿಂತಿರುವುದು ಇಡೀ ದೇಶ ಹಾಗೂ ಸಮಾಜದ ಅಧಃಪತನದಂತೆ ನನಗೆ ಕಾಣಿಸುತ್ತಿದೆ. ನಮ್ಮದು ಜಗತ್ತಿನ ಅತ್ಯಂತ ಶ್ರೇಷ್ಠ ಪ್ರಜಾಸತ್ತಾತ್ಮಕ ವ್ಯವಸ್ಥೆ ಎಂದು ಜಗತ್ತೇ ಕೊಂಡಾಡುತ್ತಿದೆ. ಅದರಲ್ಲೂ ವಿಕೇಂದ್ರೀಕರಣದ ಪ್ರಕ್ರಿಯೆ ಆರಂಭವಾಗಿ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿಗಳಾಗಿ ಅಧಿಕಾರ ಹಂಚಿಕೊಂಡ ನಂತರವಂತೂ ಅದು ಮತ್ತಷ್ಟು ಅರ್ಥಪೂರ್ಣವಾಗಬೇಕಾಗಿತ್ತು. ಜನರ ನೋವು-ಸಂಕಷ್ಟಗಳಿಗೆ ಅವರ ಮನೆ ಬಾಗಿಲಲ್ಲೇ ಪರಿಹಾರ ಸಿಗಬೇಕಾಗಿತ್ತು. ಸಣ್ಣ ಪುಟ್ಟ ಸವಲತ್ತುಗಳಿಗಾಗಿ ದೂರದ ಸರ್ಕಾರಿ ಕಚೇರಿಗಳಿಗೆ ಅಲೆಯುವುದು ತಪ್ಪಬೇಕಾಗಿತ್ತು.

ಆದರೆ ಆಗಿರುವುದಾದರೂ ಏನು? ಜನರ ಬವಣೆ, ದುಃಖ-ದುಮ್ಮಾನಗಳು ಮತ್ತಷ್ಟು ಹೆಚ್ಚಾಗುತ್ತಿವೆಯೇ ಹೊರತು ಕಡಿಮೆ ಆಗುತ್ತಿಲ್ಲ. ಮತದಾರ ಸಾರ್ವಭೌಮ ಆಗುವುದಕ್ಕೆ ಬದಲಾಗಿ ಆಯ್ಕೆಯಾದ 'ಜನ ಪ್ರತಿನಿಧಿ' ಸಾರ್ವಭೌಮನಾಗಿ ಮೆರೆಯುತ್ತಿದ್ದಾನೆ. ಪ್ರಜಾಸತ್ತೆ ಪ್ರಜೆಗಳ ಭಾಗವಹಿಸುವಿಕೆಯೇ ಇಲ್ಲದೆ ಕೇವಲ ಡಂಬಾಚಾರದ ನಾಟಕದಂತಾಗಿದೆ. ಪ್ರತಿಯೊಂದು ರಾಜಕೀಯ ಪಕ್ಷಗಳ ಕಾರ್ಯಕರ್ತರು, ಮುಖಂಡರುಗಳಲ್ಲಿ 'ಅಭಿವೃದ್ಧಿ ಕೆಲಸ'ಗಳ ಕಂಟ್ರಾಕ್ಟರು ಮತ್ತು ದಲ್ಲಾಳಿಗಳಾಗಿದ್ದಾರೆ. ಕಂಟ್ರಾಕ್ಟರ್ ಅಥವಾ ವ್ಯಾಪಾರಿಗಳಲ್ಲದ ರಾಜಕೀಯ ಕಾರ್ಯಕರ್ತರು ಎಲ್ಲೂ ಕಾಣಿಸುತ್ತಿಲ್ಲ. ಇಂಥವರು ಮಾತ್ರ ರಾಜಕೀಯ ಮಾಡಲು ಲಾಯಕ್ಕು ಎಂದು ಜನರೂ ನಿರ್ಧರಿಸಿಬಿಟ್ಟಿದ್ದಾರೆ!

ಅಧಿಕಾರ ವಿಕೇಂದ್ರೀಕರಣ ಪ್ರಕ್ರಿಯೆ ಆರಂಭವಾದಾಗ ಸ್ಥಳೀಯ ಸಂಸ್ಥೆಗಳು ನಡೆಸುವ ಸ್ವಯಂ ಆಡಳಿತ ಗ್ರಾಮೀಣ ಭಾರತಕ್ಕೆ ಹೊಸ ದಿಕ್ಕನ್ನೇ ತೋರಿಸಬಹುದೆಂಬ ಮಹದಾಸೆ ರಾಜಕೀಯ ಚಿಂತಕರಲ್ಲಿತ್ತು. ಆದರೆ ಪ್ರಕ್ರಿಯೆ ಆರಂಭವಾದ ಕೂಡಲೇ ಅಧಿಕಾರದ ಲಾಭ ನಷ್ಟದ ಲೆಕ್ಕಚಾರದಲ್ಲಿ ಮಂತ್ರಿ, ಶಾಸಕರೂ, ಸಂಸದರು ಮತ್ತು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ನಡುವೆ ಬಹುದೊಡ್ಡ ಸಂಘರ್ಷವೇ ನಡೆಯಿತು.

ವಿಚಿತ್ರವೆಂದರೆ ತತ್ವ ಸಿದ್ಧಾಂತ ಮುಂತಾದ ಮಾತುಗಳನ್ನಾಡಿ ಜನರನ್ನು ವಂಚಿಸುತ್ತಲೇ ಅಧಿಕಾರಕ್ಕೆ ಬಂದ ಬಿಜೆಪಿ ಇಂಥ ಜನವಿರೋಧಿ ಕೃತ್ಯಕ್ಕೆ ಬೆಂಗಾವಲಾಗಿ ನಿಂತಿದೆ. ಹಿಂದಿನ ಯಾವ ಸರ್ಕಾರಗಳಲ್ಲೂ ಇಷ್ಟರ ಮಟ್ಟಿಗಿನ ಜನತಂತ್ರ ವಿರೋಧಿ ಕೆಲಸಗಳಂತೂ ನಡೆದಿರಲಿಲ್ಲ. ಆಷಾಢಭೂತಿತನವನ್ನೇ ತನ್ನ ಬಂಡವಾಳ ಮಾಡಿಕೊಂಡಿರುವ ಬಿಜೆಪಿ, ಅಧಿಕಾರ ಹಿಡಿಯುವ ಏಕೈಕ ಉದ್ದೇಶದಿಂದ ಇಡೀ ಹಳ್ಳಿಗಳ ಬದುಕಿಗೆ, ವಿಶ್ವಾಸಾರ್ಹತೆಗೆ ಬೆಂಕಿ ಹಚ್ಚಿದೆ. 'ಒಳ್ಳೆಯವನ ಕೈ ನಡೆಯುವುದಿಲ್ಲ' ಎಂಬ ವ್ಯಾವಹಾರಿಕ ತತ್ವವನ್ನ ಸಾರ್ವತ್ರಿಕ ಮೌಲ್ಯವೆಂದು ಬಲವಂತವಾಗಿ ಒಪ್ಪಲೇಬೇಕಾದ ದುಃಸ್ಥಿತಿಗೆ ಗ್ರಾಮೀಣ ಸಮಾಜವನ್ನು ಬಿಜೆಪಿ ತಂದು ನಿಲ್ಲಿಸಿದೆ.

ನಮ್ಮ ದೇಶದ ದೊಡ್ಡ ದುರಂತವೆಂದರೆ ಆಡುವ ಮಾತಿಗೂ ಮಾಡುವ ಕೆಲಸಕ್ಕೂ ಸಂಬಂಧ ಇಲ್ಲದೇ ಇರುವುದು. ನಮ್ಮ ಪ್ರಜಾಸತ್ತೆ ಮತ್ತು ಸಂವಿದಾನ ಪುಸ್ತಕಗಳಲ್ಲಿ, ಮಾತುಗಳಲ್ಲಿ ಎಷ್ಟು ಶ್ರೇಷ್ಠವೋ, ಜಾರಿ ಪ್ರಕ್ರಿಯೆಯಲ್ಲಿ ಅಷ್ಟೇ ಹೀನಾಯ ಸ್ಥಿತಿಯಲ್ಲಿವೆ. ಕಾನೂನುಗಳ ಸ್ಥಿತಿಯೂ ಅಷ್ಟೇ. ಜನರ ಅವಿವೇಕ, ಆಸೆಬುರುಕತನ ಇಂಥ ದುರಂತವನ್ನು ಮತ್ತಷ್ಟು ಹೆಚ್ಚಿಸಿವೆ. ದೇಶವನ್ನು, ಸಮಾಜವನ್ನು, ಪ್ರಜಾಸತ್ತೆಯನ್ನು ಉಳಿಸಬೇಕಾದ ಶಕ್ತಿಗಳು ಅಸಹಾಯಕವಾಗಿ ಕೈಚೆಲ್ಲಿ ಕುಳಿತಿವೆ. ಇಂಥ ವ್ಯವಸ್ಥೆಯನ್ನು ಬುಡಮೇಲು ಮಾಡದಿದ್ದರೆ ದೇಶಕ್ಕೆ ಉಳಿಗಾಲವಿಲ್ಲ.

○ ಇಂದೂಧರ ಹೊನ್ನಾಪುರ

ಸಂಪಾದಕರೊಡನೆ ಸಂವಾದ

ನಕ್ಸಲರ ದಾಳಿ: ಪ್ರಭುತ್ವ, ನಾಗರಿಕ ಸಮಾಜ ಮತ್ತು ಮಾವೋವಾದಿಗಳಿಗೆ ಕೆಲವು ಪ್ರಶ್ನೆಗಳು!

ಶಿವಸುಂದರ್

> **ಇಂದು ಸಿಆರ್‌ಪಿಎಫ್ ಯೋಧರ ಹತ್ಯೆ ನಡೆದಿರುವಾಗಲೂ ಮತ್ತೆ ಇದೇ ಬಗೆಯ ಆರೋಪ-ಪ್ರತ್ಯಾರೋಪಗಳ ನಿರರ್ಥಕ ವಾಗ್ವಾದಗಳು ನಡೆಯುತ್ತಿವೆ. ನಿಜಕ್ಕೂ ಶಾಶ್ವತ ಶಾಂತಿ ಬಯಸುವವರನ್ನು ಮಾವೋವಾದಿಗಳ ಬೆಂಬಲಿಗ ರಂತೆಯೂ, ಯೋಧರ ಹತ್ಯೆಯ ವಿರುದ್ಧ ಮಾವೋವಾದಿಗಳ-ಅವರ ಬೆಂಬಲಕ್ಕೆ ನಿಂತಿರುವ ಆದಿವಾಸಿಗಳ ಸಾಮೂಹಿಕ ಹತ್ಯೆ ಮಾಡಲು ಯುದ್ಧ ಘೋಷಿಸಬೇಕೆನ್ನುವವರನ್ನು ಮಹಾನ್ ದೇಶಭಕ್ತ ರಂತೆಯೂ ಮಾಧ್ಯಮ-ಸರ್ಕಾರ ಚಿತ್ರಿಸುತ್ತಿದೆ. ಕಳೆದ 43 ವರ್ಷಗಳಿಂದ ಇದೇ ಬಗೆಯ ವ್ಯರ್ಥ ವಾಗ್ವಾದಗಳೂ, ಪ್ರಾಣ ಹರಣಗಳೂ ನಡೆದಿದ್ದು ಇನ್ನಾದರೂ ಸೈನಿಕರ ಪ್ರಾಣ, ಮಾವೋವಾದಿಗಳ ಪ್ರಾಣ-ಆದಿವಾಸಿಗಳ ಪ್ರಾಣ ಹರಣವಾಗುತ್ತಿರುವ ಸಂದರ್ಭವನ್ನು ಬದಲಿಸುವ ಬಗ್ಗೆ ನಿಜವಾದ ಶಾಂತಿಪ್ರಿಯರು ತಲೆಕೆಡಿಸಿಕೊಳ್ಳಬೇಕಿದೆ.**

ಇದೇ ಏಪ್ರಿಲ್ 6ರಂದು ಬೆಳಿಗ್ಗೆ ನಕ್ಸಲ್ ಚಳವಳಿಯ ಇತಿಹಾಸದಲ್ಲೇ ನಡೆಸಲಾದ ಅತಿ ದೊಡ್ಡದಾದ ದಾಳಿಯಲ್ಲಿ ಸಿಪಿಐ (ಮಾವೋವಾದಿ) ಪಕ್ಷದ ಪಿಎಲ್‌ಎ ಗೆರಿಲ್ಲಾ ಪಡೆಗಳು ಸಿಆರ್‌ಪಿಎಫ್‌ನ 76 ಕ್ಕೂ ಹೆಚ್ಚು ಯೋಧರನ್ನು ಕೊಂದುಹಾಕಿವೆ. ಪ್ರಾಯಶಃ ಸಾವಿನ ಸಂಖ್ಯೆ ಇನ್ನೂ ಹೆಚ್ಚಲಿದ್ದು ಸ್ವಾತಂತ್ರ್ಯ ನಂತರದಲ್ಲಿ ಈಶಾನ್ಯ ಭಾರತದಲ್ಲಿ ಬಿಟ್ಟರೆ ಭಾರತದ ಅರೆ ಸೈನಿಕ ಪಡೆಯ ಇಡೀ ಕಂಪನಿಯೊಂದು ಈ ರೀತಿ ಅಂತರಿಕ ಸಂಘರ್ಷದಲ್ಲಿ ಹತವಾದದ್ದು ಇದೇ ಮೊದಲಿರಬಹುದು. ಸರ್ಕಾರ ಕೂಡಲೇ ಇದಕ್ಕೆ ದೊಡ್ಡ ಮಟ್ಟದಲ್ಲಿ ಪ್ರತೀಕಾರ ತೀರಿಸಿಕೊಳ್ಳಲು ಸಜ್ಜಾಗುತ್ತಿದೆ. ಈ ದಾಳಿ ನಡೆದ ಸಂಜೆಯೇ ತುರ್ತಾಗಿ ನಡೆದ ರಾಷ್ಟ್ರೀಯ ಭದ್ರತಾ ಮಂಡಳಿಯ ಸಭೆಯಲ್ಲಿ ಮಾವೋವಾದಿಗಳನ್ನು ಮಟ್ಟಹಾಕಲು ಸೇನಾಪಡೆಗಳನ್ನು ಬಳಸುವ ಬಗ್ಗೆ ಗುಪ್ತ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ.

ಇದರ ಹಿಂದಿನ ದಿನ ತಾನೇ ಗೃಹಮಂತ್ರಿ ಚಿದಂಬರಂ ಲಾಲ್‌ಘಡ್‌ನಲ್ಲಿ ಒಂದುಕಡೆ ನಕ್ಸಲರನ್ನು ಮಾತುಕತೆಗೂ ಆಹ್ವಾನಿಸಿ ಮತ್ತೊಂದು ಕಡೆ "ನಕ್ಸಲ್ ಪೀಡೆಯನ್ನು ಇನ್ನು ಮೂರು ವರ್ಷಗಳಲ್ಲಿ ಸಂಪೂರ್ಣವಾಗಿ ಹತ್ತಿಕ್ಕಲಾಗುವುದೆಂದೂ" ಏಕಕಾಲದಲ್ಲಿ ಘೋಷಿಸಿದ್ದರು. ಅದರ ಮರುದಿನವೇ ಈ ದಾಳಿ ನಡೆದಿರುವುದು ಸರ್ಕಾರಕ್ಕೆ ಮುಖಭಂಗವಾಗಿದೆ. ಹೀಗಾಗಿ ಇದನ್ನು ಸರ್ಕಾರ ಸವಾಲೆಂದು ಸ್ವೀಕರಿಸಿರುವುದು ಅದರ ಹೇಳಿಕೆಗಳು ಮತ್ತು ನಡೆಸುತ್ತಿರುವ ತಯಾರಿಗಳಿಂದ ಸ್ಪಷ್ಟವಾಗುತ್ತಿದೆ. ಇದರ ಒಟ್ಟು ಫಲಿತಾಂಶವೆಂದರೆ ಚತ್ತೀಸ್‌ಘಡ್‌ದ ಚಂದ್ರಾವತಿ ನದಿಯಲ್ಲಿ ಇಷ್ಟರಲ್ಲೇ ರಕ್ತದ ಹೊಳೆಯೇ ಹರಿಯಲಿದೆ. ಅಲ್ಲಿ ಹರಿಯುವ ರಕ್ತದಲ್ಲಿ ಪೊಲೀಸ್ ಮತ್ತು ಅರೆ ಸೈನಿಕ ಪಡೆಗಳ ಪಾಲೆಷ್ಟು, ಮಾವೋವಾದಿಗಳ ಪಾಲೆಷ್ಟು ಮತ್ತು ಅಮಾಯಕ ಆದಿವಾಸಿಗಳ ಪಾಲೆಷ್ಟು ಎಂಬ ಚರ್ಚೆಯಲ್ಲಿ ತೊಡಗುವುದು ನಿರರ್ಥಕ ಮತ್ತು ಕ್ರೂರ. ಅಷ್ಟೇ ವ್ಯರ್ಥವಾದದ್ದು ಈ ಸಂದರ್ಭದಲ್ಲಿ ಹಿಂಸೆ ಮತ್ತು ಅಹಿಂಸೆಗಳ ಅಮೂರ್ತ ನೈತಿಕ ವಾಗ್ವಾದಗಳಲ್ಲಿ ತೊಡಗಿಕೊಳ್ಳುವುದು.

ಏಕೆಂದರೆ ಪ್ರಭುತ್ವ ಮಾವೋವಾದಿಗಳ ಮೇಲೆ ಅಥವಾ ಆದಿವಾಸಿಗಳ ಮೇಲೆ ನಡೆಸುತ್ತಿರುವ "ಪ್ರಭುತ್ವ ಹಿಂಸೆ" ಇರಬಹುದು ಅಥವಾ ಅದಕ್ಕೆ ಪ್ರತಿಕ್ರಿಯೆಯಾಗಿ ಮಾವೋವಾದಿಗಳು ನಡೆಸುವ "ಕ್ರಾಂತಿಕಾರಿ ಹಿಂಸೆ" ಇರಬಹುದು ಅಮೂರ್ತದಲ್ಲಿ ನಡೆಯುತ್ತಿಲ್ಲ. ಅವು ಒಂದು ನಿರ್ದಿಷ್ಟ ಸಂದರ್ಭದಲ್ಲಿ ಘಟಿಸುತ್ತಿವೆ. ಯಾವುದೇ ಬಗೆಯ ಹಿಂಸೆಯನ್ನು "ಅನಿವಾರ್ಯ" ಮಾಡುವ ಸಂದರ್ಭವನ್ನೇ ಬದಲಿಸದ ಹೊರತು ಅಹಿಂಸೆಯ ಬಗೆಗಿನ ಹಪಹಪಿಕೆಗಳು ಅರಣ್ಯರೋದನವಷ್ಟೇ ಆಗುತ್ತದೆ. ಈ ಹಿಂಸಾತ್ಮಕ ಸಂದರ್ಭದಲ್ಲಿರುವ ಹಿಂಸೆಯನ್ನು ಇಲ್ಲವಾಗಿಸದೆ ಕೇವಲ ಒಂದು ಬಗೆಯ ಹಿಂಸಾಚಾರವನ್ನು ಮಾತ್ರ ಖಂಡಿಸುವುದು ಅದಕ್ಕೆ ಪ್ರತಿಯಾಗಿರುವ ಹಿಂಸಾಚಾರದ ಪರೋಕ್ಷ ಸಮರ್ಥನೆಯಾಗುತ್ತದೆಯೇ ವಿನಃ ಅಹಿಂಸೆಯ ಪ್ರತಿಪಾದನೆಯಾಗುವುದಿಲ್ಲ.

ಮಾವೋವಾದಿಗಳ ದಾಳಿ ನಡೆದು ಪ್ರಾಣಹಾನಿ ಸಂಭವಿಸಿದಾಗಲೆಲ್ಲಾ ಈ ದೇಶದ ಮಾನವ ಹಕ್ಕು ಹೋರಾಟಗಾರರ ಮೇಲೆ ಸರ್ಕಾರಗಳು ಮತ್ತು ಬಲ ಪಂಥೀಯರು ಹರಿಹಾಯುತ್ತಾರೆ. "ಮಾವೋವಾದಿಗಳ ಮೇಲೆ ದಾಳಿ ನಡೆದಾಗ ಮಾತ್ರ ಮಾನವ ಹಕ್ಕುಗಳ ಉಲ್ಲಂಘನೆಯಾಯಿತೆಂದು ಕೂಗಾಡುವ ನೀವು ಪೊಲೀಸರ ಹತ್ಯೆಯಾದಾಗ ಅವರ ಮಾನವ ಹಕ್ಕು ಹರಣ ಮಾಡಿದ ನಕ್ಸಲರ ವಿರುದ್ಧವೇಕೆ ಮಾತಾಡುವುದಿಲ್ಲ" ಎಂದು ಪ್ರಶ್ನಿಸುತ್ತಾರೆ. ಆದರೆ ಇದೇ ಮಾಧ್ಯಮಗಳು ಮತ್ತು ತಥಾಕಥಿತ ಅಹಿಂಸಾವಾದಿಗಳು "ಪ್ರಭುತ್ವ ಹಿಂಸೆ"ಯ ಬಗ್ಗೆಯಾಗಲೀ, ಈ ತಾರತಮ್ಯ ವ್ಯವಸ್ಥೆ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ವ್ಯವಸ್ಥೆಯ ಹಿಂಸೆಯ ಬಗ್ಗೆಯಾಗಲೀ ಮಾತನಾಡಿದ್ದೇ ಅಪರೂಪ. ಅಸಹನೀಯ ಬದುಕು ಸೃಷ್ಟಿಸುತ್ತಿರುವ ಪ್ರತಿರೋಧದ ಸಂದರ್ಭದ ಭಾಗವಾಗಿ ಹಿಂಸೆ-ಪ್ರತಿಹಿಂಸೆಯ ವಿದ್ಯಮಾನವನ್ನು ಅರ್ಥಮಾಡಿಕೊಳ್ಳುವುದಂತೂ ಕನ್ನಡದ ಸಂದರ್ಭದಲ್ಲಿ ಇಲ್ಲವೇ ಇಲ್ಲ ಎನುವಷ್ಟು ಕಡಿಮೆ.

ಇಂದು ಸಿಆರ್‌ಪಿಎಫ್ ಯೋಧರ ಹತ್ಯೆ ನಡೆದಿರುವಾಗಲೂ ಮತ್ತೆ ಇದೇ ಬಗೆಯ ಆರೋಪ-ಪ್ರತ್ಯಾರೋಪಗಳ ನಿರರ್ಥಕ ವಾಗ್ವಾದಗಳು ನಡೆಯುತ್ತಿವೆ. ನಿಜಕ್ಕೂ ಶಾಶ್ವತ ಶಾಂತಿ ಬಯಸುವವರನ್ನು ಮಾವೋವಾದಿಗಳ ಬೆಂಬಲಿಗರಂತೆಯೂ, ಯೋಧರ ಹತ್ಯೆಯ ವಿರುದ್ಧ ಮಾವೋವಾದಿಗಳ ಮತ್ತು ಅವರ ಬೆಂಬಲಕ್ಕೆ ನಿಂತಿರುವ ಆದಿವಾಸಿಗಳ ಸಾಮೂಹಿಕ ಹತ್ಯೆ ಮಾಡಲು ಯುದ್ಧ ಘೋಷಿಸಬೇಕೆನುವವರನ್ನು ಮಹಾನ್ ದೇಶಭಕ್ತರಂತೆಯೂ ಮಾಧ್ಯಮ ಮತ್ತು ಸರ್ಕಾರ ಚಿತ್ರಿಸುತ್ತಿದೆ. ಕಳೆದ 43 ವರ್ಷಗಳಿಂದ ಇದೇ ಬಗೆಯ ವ್ಯರ್ಥ ವಾಗ್ವಾದಗಳೂ, ಪ್ರಾಣಹರಣಗಳೂ ನಡೆದಿದ್ದು ಇನ್ನಾದರೂ ಸೈನಿಕರ ಪ್ರಾಣ, ಮಾವೋವಾದಿಗಳ ಪ್ರಾಣ ಹಾಗೂ ಆದಿವಾಸಿಗಳ ಪ್ರಾಣ ಹರಣವಾಗುತ್ತಿರುವ ಸಂದರ್ಭವನ್ನು ಬದಲಿಸುವ ಬಗ್ಗೆ ನಿಜವಾದ ಶಾಂತಿಪ್ರಿಯರು ತಲೆಕೆಡಿಸಿಕೊಳ್ಳಬೇಕಿದೆ.

ಹೀಗಾಗಿ ನಾಗರಿಕ ಸಮಾಜ ಕೇಳಬೇಕಿರುವ ಪ್ರಶ್ನೆ:

"ಆಪರೇಷನ್ ಗ್ರೀನ್ ಹಂಟ್ ಮತ್ತು ಅದಕ್ಕೆ ಪ್ರತಿಯಾಗಿ ಈ ಯೋಧರ ಸಾವಿಗೆ ಕಾರಣವಾಗಿರುವ ಮಾವೋವಾದಿಗಳ "ಕ್ರಾಂತಿಕಾರಿ ಹಿಂಸೆ" ಹುಟ್ಟಿಕೊಂಡಿರುವ ಸಂದರ್ಭವೇನು?"

ಈ ದೇಶದ ನಾಗರೀಕರ ಹೆಸರಲ್ಲಿ, ಈ ದೇಶದ ಪ್ರಜಾಸತ್ತೆಯನ್ನು ಮತ್ತು ಕಾನೂನುಬದ್ಧ ಆಡಳಿತವನ್ನು (ರೂಲ್ ಆಫ್ ಲಾ) ಉಳಿಸುವ ಹೆಸರಿನಲ್ಲಿ ಛತ್ತೀಸ್‌ಘಡ್‌ದಲ್ಲಿ ಸರ್ಕಾರ ಯುದ್ಧವನ್ನು ಪ್ರಾರಂಭಿಸಿದೆ. ಈ ದೇಶದ ಸಕಲ ಶೋಷಿತ ಜನತೆಯ ಹೆಸರಿನಲ್ಲಿ, "ನವ ಪ್ರಜಾಸತ್ತಾತ್ಮಕ ಕ್ರಾಂತಿಯ" ಹೆಸರಿನಲ್ಲಿ ಮಾವೋವಾದಿ

ಗಳೂ ಸಹ ಸಶಸ್ತ್ರ ಹೋರಾಟವನ್ನು ಪ್ರಾರಂಭಿಸಿದ್ದಾರೆ. ಸ್ಥೂಲವಾಗಿ ಇದು ಮೇಲ್ನೋಟಕೆ ಎರಡೂ ಕಡೆಯವರು ಘೋಷಣೆಗಳಿಂದ ಅರ್ಥವಾಗುವ ಸನ್ನಿವೇಶ. ಆದರೆ ಕಳೆದ 60 ವರ್ಷಗಳಲ್ಲಿ ಸಂವಿಧಾನದ ನಿರ್ದೇಶನ ತತ್ವಗಳ ಆಶಯಕ್ಕೆ ವಿರುದ್ಧವಾಗಿಯೇ ಈ ದೇಶದ ರೂಲ್ ಆಫ್ ಲಾ ನಡೆದುಕೊಂಡು ಬಂದಿರುವುದೇ ಈ ದೇಶದ ಪ್ರಜಾಸತ್ತೆಯ ವಿಪರ್ಯಾಸ. ಹೀಗಾಗಿ ಈ Rule Of Law ಒಂದು ಕಡೆ ಈ ದೇಶದ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಸಕಲ ಸಂಪತ್ತನ್ನೆಲ್ಲಾ ಲೂಟಿ ಮಾಡುವುದನ್ನು ಕಾನೂನು ಬದ್ಧಗೊಳಿಸಿದ್ದರೆ, ಈ ನೀತಿಗಳಿಗೆ ಬಲಿಯಾಗಿರುವ ಈ ದೇಶದ ದಲಿತ, ಆದಿವಾಸಿ, ರೈತ ಕೂಲಿ ಕಾರ್ಮಿಕರ ಬದುಕನ್ನೇ Unlawful Activity(ಕಾನೂನು ಬಾಹಿರ ಚಟುವಟಿಕೆ)ಯನ್ನಾಗಿ ಮಾಡಿಬಿಟ್ಟಿದೆ. ಹೀಗಾಗಿಯೇ ಇಂದು Unlawful Activity Prevention Act (UAPA) ಅಡಿ ಅತಿಹೆಚ್ಚು ಬಂಧನವಾಗಿರುವುದು ಚತ್ತೀಸ್‌ಘಢ್‌ದ ಆದಿವಾಸಿಗಳದ್ದೇ.

ಚತ್ತೀಸ್‌ಘಡ್‌ನಲ್ಲಿ ಆಗುತ್ತಿರುವುದು ಇದೆ. ಅಲ್ಲಿ ಅಪರೂಪದ ಖನಿಜ ನಿಕ್ಷೇಪಗಳಿವೆ. ಅದರ ಒಟ್ಟು ಬೆಲೆ ಏನಿಲ್ಲವೆಂದರೂ 10 ಲಕ್ಷ ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಹೀಗಾಗಿ ಅದರ ಮೇಲೆ ಈ ದೇಶದ ಮತ್ತು ಸಾಮ್ರಾಜ್ಯಶಾಹಿ ದೇಶಗಳ ಗಣಿ ಬಹುರಾಷ್ಟ್ರೀಯ ಕಂಪನಿಗಳ ಕಣ್ಣು ಬಿದ್ದಿದೆ. ಈಗಾಗಲೇ ಸರ್ಕಾರಗಳು 1,50,000 ಕೋಟಿಗೂ ಹೆಚ್ಚಿನ ಮೌಲ್ಯದ ಒಪ್ಪಂದಗಳನ್ನು ಮಾಡಿಕೊಂಡಿದೆ. ಈ ಗಣಿಗಾರಿಕೆ ನಿರಾತಂಕವಾಗಿ ನಡೆಯಬೇಕೆಂದರೆ ಶತಮಾನಗಳಿಂದ ಕಾಡನ್ನೇ ನಂಬಿ ಬದುಕುತ್ತಿರುವ ಲಕ್ಷಾಂತರ ಮಂದಿ ಆದಿವಾಸಿಗಳನ್ನು ಎತ್ತಂಗಡಿ ಮಾಡಬೇಕಿದೆ. ಆದರೆ ಸರ್ಕಾರದಿಂದ ತಮ್ಮ ಬದುಕಿನ ಪ್ರತಿಹೆಜ್ಜೆಯಲ್ಲೂ ಬರಿಯೇ ದಮನವನ್ನು ಎದುರಿಸುತ್ತಾ ಕುಗ್ಗಿ, ಬಗ್ಗಿ ಬದುಕುತ್ತಿದ್ದ ಈ ಆದಿವಾಸಿಗಳ ಬೆಂಬಲಕ್ಕೆ ನಿಂತಿದ್ದು ಮಾಧ್ಯಮಗಳು ಅಲ್ಲ, ಅಮೂರ್ತ ಅಹಿಂಸಾವಾದಿಗಳು ಅಲ್ಲ. 60 ವರ್ಷಗಳಿಂದ ಸರ್ಕಾರದ ಒಬ್ಬ ಪ್ರತಿನಿಧಿಯೂ ಕಾಲಿಡದ ಆ ಗೊಂಡಾರಣ್ಯದ ಮೂಲೆಮೂಲೆಗೂ ತಲುಪಿ ಆದಿವಾಸಿಗಳನ್ನು ಸಂಘಟಿಸಿ, ಹೊಸ ಬದುಕು ಕಲಿಸಿದವರು ಈ ಹಿಂಸಾವಾದಿ ಮಾವೋವಾದಿಗಳೇ. ಹೀಗಾಗಿಯೇ ನಾಗರಿಕ ಸಮಾಜ ಒಪ್ಪಲಿ ಬಿಡಲಿ ಈ ದೇಶದ "ಪ್ರಜಾಪ್ರಭುತ್ವವಾದಿ ಸರ್ಕಾರಕ್ಕಿಂತ", "ಅಹಿಂಸಾವಾದಿ ನಾಗರಿಕ ಸಮಾಜಕ್ಕಿಂತ", "ನಿಷ್ಪಕ್ಷಪಾತಿ ಮಾಧ್ಯಮಗಳಿಗಿಂತ" ಈ ಆದಿವಾಸಿಗಳಿಗೆ "ಹಿಂಸಾವಾದಿ ಮಾವೋವಾದಿಗಳೇ" ಅಚ್ಚುಮೆಚ್ಚು.

ಈಗ ಕೆಲವೇ ಮಂದಿಯ ಲಾಭಕ್ಕೆ ದೇಶದ ಸಂಪತ್ತನ್ನೇ ಲೂಟಿ ಹೊಡೆದು ಆದಿವಾಸಿಗಳನ್ನು ಎತ್ತಂಗಡಿ ಮಾಡುವ ಪರಮ ದೇಶದ್ರೋಹಿ ಕಾರ್ಯಕ್ಕೆ ಸರ್ಕಾರ 70,000ಕ್ಕೂ ಹೆಚ್ಚು ಯೋಧರನ್ನು ನಿಯೋಜಿಸಿದೆ. ಅವರ ಕಣ್ಣುಮುಂದೆ ಬಂದೂಕು ಹಿಡಿದ ನಕ್ಸಲರನ್ನು ಮತ್ತು ಅವರನ್ನು ಬೆಂಬಲಿಸುವ ಆದಿವಾಸಿಗಳನ್ನು ದೇಶದ ಶತೃಗಳನ್ನಾಗಿ ಚಿತ್ರಿಸಲಾಗಿದೆ. ಅಂದರೆ ಕೆಲವರ ಹಿತಾಸಕ್ತಿಯನ್ನೇ ದೇಶದ ಹಿತಾಸಕ್ತಿಯೆಂದು ಬಣ್ಣಿಸುತ್ತಾ 70,000 ಯೋಧರ ಬದುಕನ್ನು ಬಲಿಗೊಡಲಾಗಿದೆ. ತಮ್ಮ ಅಣ್ಣತಮ್ಮಂದಿರನ್ನು ತಾವೇ ಕೊಲ್ಲುವಂತೆ ಅಥವಾ ಅವರಿಂದ ಹತರಾಗುವಂತ ದುರಂತ ಸಂದರ್ಭವನ್ನು ಸೃಷ್ಟಿಸಿದೆ. ಹೀಗೆ ಇಂದು ಸಹೋದರರ ನಡುವೆ ಯುದ್ಧ ಘೋಷಣೆಯಾಗಿದೆ. ಭ್ರಾತೃಹತ್ಯೆಯ ಲಾಭವನ್ನು ಮಾತ್ರ ನಾಗರಿಕ ಸಮಾಜದ ಉದ್ಯಮಿಗಳು ಪಡೆಯುತ್ತಿರುತ್ತಾರೆ. ಅಲ್ಲಿಯತನಕ ಯೋಧರೋ, ನಕ್ಸಲರೋ-ಆದಿವಾಸಿಗಳೋ ಪರಸ್ಪರ ಹತ್ಯೆಯಾಗುತ್ತಲೇ ಇರುತ್ತಾರೆ. ಆದ್ದರಿಂದಲೇ ನಾಗರಿಕ ಸಮಾಜ ಈ ಹತ್ಯೆಗೆ ಕಾರಣವಾಗುತ್ತಿರುವ ನೀತಿಗಳನ್ನು ಬದಲಿಸಲು ಯತ್ನಿಸದೆ ಕೇವಲ ಹಿಂಸೆಯ ಬಗ್ಗೆ ಮಾತನಾಡುವುದೇ ಅತ್ಯಂತ ಹಿಂಸಾತ್ಮಕವಾದದ್ದು.

ಅದೇ ರೀತಿ ಸಮಾಜ ಬದಲಾವಣೆಯ ಉದಾತ್ತ ಆದರ್ಶಗಳಿಗಾಗಿ ಮಾವೋವಾದಿಗಳು ಪ್ರಾಣವನ್ನೇ ಬಲಿಕೊಡುವ ಅಥವಾ ಬಲಿತೆಗೆದುಕೊಳ್ಳುವಷ್ಟು ಬದ್ಧತೆ ಹೊಂದಿದ್ದಾರೆ, ನಿಜ. ಆದರೆ ಈ ಬದ್ಧತೆಯು ಮೊಂಡು ಹಠಮಾರಿತನವಾದರೆ, ಬದಲಾಗುತ್ತಿರುವ ಸಂದರ್ಭದ ವಿವೇಕಕ್ಕೆ ತೆರೆದುಕೊಳ್ಳದಿದ್ದರೆ ಹೇಗೆ ಕುರುಡನ್ನೂ ಮತ್ತು ವಿನಾಶವನ್ನೂ ತರುತ್ತದೆ ಎಂಬುದನ್ನು ನಕ್ಸಲ್ ಚಳವಳಿ ಪ್ರಾರಂಭದಲ್ಲೇ ಅನುಭವಿಸಿತ್ತು.

ದೇಶಾದ್ಯಂತ ಜನಸಮೂಹದ ರಾಜಕೀಯ ಹೋರಾಟಗಳ ಅಲೆ ಏರದೆ ಯಾವುದೋ ಮೂಲೆಯಲ್ಲಿ ಮಾತ್ರ ತಾರಕಕ್ಕೆ ಮುಟ್ಟುವ ಕ್ರಾಂತಿಕಾರಿ ಚಳವಳಿಯನ್ನು ಪ್ರಭುತ್ವ ಕ್ರೂರವಾಗಿ ಹೊಸಕಿಹಾಕುತ್ತದೆಂಬುದನ್ನು 74ರಲ್ಲೂ ಇತ್ತೀಚೆಗೆ ಆಂಧ್ರ-ತೆಲಂಗಾಣದಲ್ಲೂ ಮಾವೋವಾದಿ ಚಳವಳಿ ತಾನೇ ಅನುಭವಿಸಿದೆ

ದೇಶಾದ್ಯಂತ ಜನಸಮೂಹದ ರಾಜಕೀಯ ಹೋರಾಟಗಳ ಅಲೆ ಏರದೆ ಯಾವುದೋ ಮೂಲೆಯಲ್ಲಿ ಮಾತ್ರ ತಾರಕಕ್ಕೆ ಮುಟ್ಟುವ ಕ್ರಾಂತಿಕಾರಿ ಚಳವಳಿಯನ್ನು ಪ್ರಭುತ್ವ ಅತ್ಯಂತ ಕ್ರೂರವಾಗಿ ಹೊಸಕಿಹಾಕುತ್ತದೆಂಬುದನ್ನು 74ರಲ್ಲೂ, ಇತ್ತೀಚೆಗೆ ಆಂಧ್ರ-ತೆಲಂಗಾಣದಲ್ಲೂ ಮಾವೋವಾದಿ ಚಳವಳಿ ತಾನೇ ಅನುಭವಿಸಿದೆ. ಆದರೆ ಅರ್ಥಮಾಡಿಕೊಂಡಂತಿಲ್ಲ. ಹೀಗಾಗಿ ಅದರಿಂದ ಏನೇನೂ ಪಾಠವನ್ನು ಕಲಿಯದೆ ಮತ್ತೊಮ್ಮೆ ಚತ್ತೀಸ್‌ಘಡ್‌ದಲ್ಲಿ ಅದೇ ರೀತಿಯ ಸಂದರ್ಭವನ್ನು ಸೃಷ್ಟಿಸಿಕೊಂಡಿದೆ. ಆ ಪ್ರದೇಶದ ಇಡೀ ಆದಿವಾಸಿ ಸಮುದಾಯವನ್ನು ತನ್ನ ತಪ್ಪು ವ್ಯೂಹತಂತ್ರಗಳಿಂದ ಸಾಮೂಹಿಕ ಹತ್ಯೆಯ ಅಪಾಯಕ್ಕೂ ದೂಡಿದೆ. ಚತ್ತೀಸ್‌ಘಡದ ಆದಿವಾಸಿಗಳ ಹೋರಾಟ ಏಕೆ ನಡೆಯುತ್ತಿದೆ ಎಂಬ ಬಗ್ಗೆ ಈ ದೇಶದ ಶೇ.90ರಷ್ಟು ಜನತೆಗೇ ಗೊತ್ತೇ ಇಲ್ಲ. ಇನ್ನು ಅವರಿಂದ ಬೆಂಬಲ ದೊರಕಿಸಿಕೊಳ್ಳುವುದು ದೂರದ ಮಾತು. ತಮ್ಮದೇ ಅನುಭವದಿಂದ ಅವರು ಪಾಠ ಕಲಿತಿದ್ದರೆ ಶೇ.90ರಷ್ಟು ಭಾರತದ ಜನತೆ ಇದರ ಬಗ್ಗೆ ಮೌನವಾಗಿದ್ದಾಗ ಅಥವಾ ದೇಶಾದ್ಯಂತ ಆಳುವವರ್ಗಗಳನ್ನು ಬಿಕ್ಕಟಿಗೆ ಸಿಲುಕಿಸುವಂಥ ಬೃಹತ್ ರಾಜಕೀಯ ಹೋರಾಟಗಳ ಸಂದರ್ಭವಿಲ್ಲದಿದ್ದಾಗ ಭಾರತದ ಪ್ರಭುತ್ವವನ್ನು ಯಾವುದೋ ಒಂದು ಮೂಲೆಯಲ್ಲಿ ಕೇವಲ ಸೇನಾತ್ಮಕವಾಗಿ ಮುಖಾಮುಖಿಯಾಗುವ ಸ್ಟ್ರಾಟಜಿಯನ್ನು ಅನುಸರಿಸುತ್ತಿರಲಿಲ್ಲ. ಇಂಥ ರಾಜಕೀಯವನ್ನು ಸಾಕ್ಷಾತ್ ಮಾವೋ ಅವರೇ ದುಸ್ಸಾಹಸ ಮತ್ತು ಕ್ರಾಂತಿಗೆ ಹಾನಿಕರ ಎಂದು ಬಣ್ಣಿಸಿದ್ದರು.

ಮಾವೋವಾದಿಗಳು ಪದೇಪದೇ ಇದೇ ಬಗೆಯ ದುಸ್ಸಾಹಸವನ್ನು ಮಾಡುತ್ತಾ ಈ ದೇಶದ ಕ್ರಾಂತಿಯನ್ನು ಮುಂದೂಡುತ್ತಲೇ ಬಂದಿದ್ದಾರೆ. ಏಪ್ರಿಲ್ 6ರಂದು ಅವರ ಗೆರಿಲ್ಲಾ ಪಡೆಗಳು ನಡೆಸಿದ ದಾಳಿ ಇಂಥಾ ಒಂದು ದುಸ್ಸಾಹಸವಾದೀ ವ್ಯೂಹತಂತ್ರದ ಒಂದು ಭಾಗವೆಂದು ಕಾಣುತ್ತದೆ. ಇದೂ ಸಹ ಚತ್ತೀಸ್‌ಘಡ್‌ನ ಇಂದಿನ "ಹಿಂಸಾತ್ಮಕ" ಸಂದರ್ಭವನ್ನು ಪ್ರಭಾವಿಸುತ್ತಿರುವ ಸಂಗತಿಯಾಗಿದೆ.

ಈ ಸಂಗತಿಗಳೆ ಸ್ವತಂತ್ರ ಭಾರತ ಹಿಂದೆಂದೂ ಕಾಣದಂಥ ಅಂತರಿಕ ಯುದ್ಧದ ಸಂದರ್ಭವನ್ನು ಸೃಷ್ಟಿಸಿದೆ. ಯುದ್ಧವೆಂದರೆ ಹಿಂಸಾಚಾರವೇ. ಕೆಲವೊಮ್ಮೆ ಯೋಧರ ಸಾವು. ಕೆಲವೊಮ್ಮೆ ಮಾವೋವಾದಿಗಳ-ಆದಿವಾಸಿಗಳ ಸಾವು. ಆದರೂ ಇದು ಅನ್ಯಾಯದ ಯುದ್ಧ. ಏಕೆಂದರೆ ಈ ಯುದ್ಧದ ಉದ್ದೇಶ ಆದಿವಾಸಿಗಳನ್ನು ಎತ್ತಂಗಡಿ ಮಾಡಿ ಈ ದೇಶವನ್ನು ವಿದೇಶಿ ಕಂಪನಿಗಳ ವಸಾಹತುವನ್ನಾಗಿ ಮಾಡುವುದಾಗಿದೆ. ಹೀಗಾಗಿ ಹಿಂಸೆಗೆ ಪ್ರಮುಖ ಕಾರಣವೇ ಈ ಅನ್ಯಾಯಯುತ ಯುದ್ಧವಾದ್ದರಿಂದ ಮೊದಲು "ಆಪರೇಷನ್ ಗ್ರೀನ್‌ಹಂಟ್" ಎಂಬ ಈ ಯುದ್ಧವನ್ನು ಬೇಷರತ್ತಾಗಿ ವಿರೋಧಿಸುವ ಮೂಲಕವೇ ಯೋಧರ ಮತ್ತು ಆದಿವಾಸಿಗಳ ಪ್ರಾಣವನ್ನು ರಕ್ಷಿಸಬೇಕಿದೆ. ಹಾಗೆಯೇ ಮಾವೋವಾದಿಗಳ ಅವಿವೇಕದ ಪಾಲೂ ಇದರಲ್ಲಿದೆ. ಅದನ್ನೂ ಮನವರಿಕೆ ಮಾಡಿಸಬೇಕಿದೆ.

ಹೀಗೆ ಮಾಡಿದಲ್ಲಿ ಮಾತ್ರ ನಾಗರಿಕ ಸಮಾಜಕ್ಕೆ ಯಾವುದೇ ಹಿಂಸಾಚಾರವನ್ನು ಖಂಡಿಸುವ ನೈತಿಕ ಅರ್ಹತೆ ಬರುತ್ತದೆ. ಇಲದಿದ್ದರೆ ಅದು ಕೇವಲ ಪ್ರಭುತ್ವದ "His Masters Voice" ಆಗಿಬಿಡುವ ಅಪಾಯವಿದೆ. □

ಸಂಪಾದಕರೊಡನೆ ಸಂವಾದ

ಪುಸ್ತಕ ಅವಲೋಕನ: ಒಂದು ಪ್ರತಿಕ್ರಿಯೆ

ಡಿ.ಎಸ್. ನಾಗಭೂಷಣ

ಪ್ರಿಯ ಸಂಪಾದಕರೇ,

ಕಳೆದ ಸಂಚಿಕೆಯಲ್ಲಿ ಬಂಜಗೆರೆ ಜಯಪ್ರಕಾಶರು ನನ್ನ 'ವಸಿಷ್ಠರು ಮತ್ತು ವಾಲ್ಮೀಕಿಯರು' ಪುಸ್ತಕದ ವಿಮರ್ಶೆ ಮಾಡಿರುವುದನ್ನು ಓದಿದೆ. ಪುಸ್ತಕ ಪ್ರಕಟವಾದ ಒಂದು ವರ್ಷದ ನಂತರವಾದರೂ ಅದಕ್ಕೆ ಕನ್ನಡದ ಒಂದು ಪತ್ರಿಕೆಯಲ್ಲಿ ವಿಮರ್ಶೆ ದೊರಕಿತಲ್ಲಾ, ಅದೇ ನನ್ನ ಸೌಭಾಗ್ಯವೆಂದು ಭಾವಿಸಿದ್ದೇನೆ! ಇರಲಿ, ಬಂಜಗೆರೆಯವರು ಪುಸ್ತಕದ ಬಗ್ಗೆ ಸಾಕಷ್ಟು ವಿಸ್ತಾರವಾಗಿಯೇ ಮತ್ತು ಪುಸ್ತಕದ ಬಗ್ಗೆ ಸಾಕಷ್ಟು ಒಳ್ಳೆಯ ಮಾತುಗಳನ್ನೇ ಬರೆದಿದ್ದಾರೆ. ಹಾಗೇ ಪುಸ್ತಕದ ಕೆಲವು ಲೇಖನಗಳ ಮಿತಿಗಳ ಬಗ್ಗೆಯೂ ಬರೆದಿದ್ದಾರೆ. ಅವರಿಗೆ ಮತ್ತು ನಿಮಗೆ ನನ್ನ ಧನ್ಯವಾದಗಳು. ಆದರೆ ಕೆಲವು ಲೇಖನಗಳ ಬಗ್ಗೆ ಅವರು ಆಡಿರುವ ಮಾತುಗಳು ಮತ್ತು ನನ್ನ ಕೆಲವು ನಿಲುಗಳ ಬಗ್ಗೆ ವ್ಯಕ್ತಪಡಿಸಿರುವ ಅನುಮಾನಗಳು, ಪುಸ್ತಕ ಓದದವರಲ್ಲಿ ತಪ್ಪು ತಿಳುವಳಿಕೆ ಉಂಟುಮಾಡಬಹುದಾದ್ದರಿಂದ, ಇಲ್ಲಿ ಕೆಲವು ಸ್ಪಷ್ಟೀಕರಣಗಳನ್ನು ನೀಡಬಯಸುವೆ:

1. ನಾನು ಲಂಕೇಶರ ಪತ್ರಿಕಾ ಬರಹಗಳ ಬಗ್ಗೆ ಟೀಕೆ ಮಾಡಿಲ್ಲ. ನನ್ನ ಈ ಹಿಂದಿನ ಪುಸ್ತಕವೊಂದರ ಬರಹಗಳ ಶೈಲಿಯನ್ನು ಲಂಕೇಶರ ಬರಹಗಳ ಶೈಲಿಗೆ ಹೋಲಿಸಿ ವಿಮರ್ಶಕರೊಬ್ಬರು ಬರೆದಿದ್ದ ಮಾತುಗಳಿಗೆ ಪ್ರತಿಕ್ರಿಯೆಯಾಗಿ, ಇಂತಹ ಹೋಲಿಕೆ ಏಕೆ ಸಲ್ಲದೆಂದು ಕೆಲವು ಕಾರಣಗಳನ್ನು ನೀಡಿದ್ದೆನಷ್ಟೆ. ಅವರ ಸಂದರ್ಭ, ಉದ್ದೇಶಗಳೇ ಬೇರೆ, ನನ್ನ ಸಂದರ್ಭ, ಉದ್ದೇಶಗಳೇ ಬೇರೆ; ಹಾಗಾಗಿ ಶೈಲಿಗಳೂ ಬೇರೆ ಬೇರೆ ಎಂಬುದಷ್ಟೇ ಲಂಕೇಶರ ರಾಜಕೀಯ ಬರಹಗಳನ್ನು ಕುರಿತ ನನ್ನ ಮಾತುಗಳ ತಾತ್ಪರ್ಯ. ಹಾಗೆ ನೋಡಿದರೆ, ಅವರ ಜೀವಿತದ ಕೊನೆಯ ಕೆಲವು ವರ್ಷಗಳ ಬರಹಗಳ ಹೊರತಾಗಿ, ನಾನೂ ಕರ್ನಾಟಕದ ಬಹಳ ಜನರಂತೆ ಅವರ ಪತ್ರಿಕೆಯ ಅಭಿಮಾನಿ ಓದುಗರಲ್ಲೊಬ್ಬನಾಗಿದ್ದೆ.

2. ಮುಖ್ಯಮಂತ್ರಿ ಚಂದ್ರು ಅವರನ್ನು ಒಪ್ಪಿಕೊಂಡಿದ್ದೆನೆಂದು ನಾನೆಲ್ಲೂ ಘೋಷಿಸಿಲ್ಲ. ನಾನೂ ಭಾಗವಹಿಸಿದ್ದ ಒಂದು ಸಭೆಯಲ್ಲಿ ಅವರಾಡಿದ ಮಾತುಗಳಿಂದ ಅವರನ್ನು ಏನೋ ಅಂದುಕೊಂಡಿದ್ದೆ; ಅದರೆ ಅವರು ಹಾಗಲ್ಲ ಎಂಬುದು ಅವರ ಮುಂದಿನ ನಡಾವಳಿಯಿಂದ ಗೊತ್ತಾಗಿ ವಿಷಾದವೆನಿಸಿತು ಎಂಬ ನನ್ನ ಮಾತನ್ನು, ನಾನು ಅವಸರದಲ್ಲಿ ತೀರ್ಮಾನಗಳಿಗೆ ಬರುವುದರ ಮತ್ತು ಅನಗತ್ಯ ನಿಷ್ಠುರತೆಯ ಮಾದರಿಯ ಉದಾಹರಣೆ ಎಂದು ಅರ್ಥೈಸುವುದು ಉಚಿತವಲ್ಲ ಎಂದೇ ನನ್ನ ಭಾವನೆ.

3. ವಿ.ಪಿ.ಸಿಂಗ್ ಮಾದರಿಯಷ್ಟೇ ಸಮರ್ಥವಾದದ್ದು, ದೇವರಾಜ ಅರಸರ ಸಾಮಾಜಿಕ ನ್ಯಾಯದ ಮಾದರಿ ಎಂಬುದನ್ನು ನಾನು ಆ ಲೇಖನದ ಸಂದರ್ಭದಲ್ಲೇ ಸೂಚಿಸಿದ್ದೇನೆ.

4. 'ಹಿಂದ್ ಸ್ವರಾಜ್'ನ್ನು ಅದರ ಸಕಲ ವಿವರಗಳೊಂದಿಗೆ ಒಪ್ಪಿಕೊಳ್ಳಬೇಕೆಂದು ನಾನೆಲ್ಲೂ ಹೇಳಿಲ್ಲ. ಅದು ಎಂದೂ ನನ್ನ ನಿಲುವಾಗಿಲ್ಲ ಕೂಡಾ. ನನ್ನ ಲೇಖನದಲ್ಲಿ ನಾನು ಈ ಕೃತಿಯನ್ನು ಚರ್ಚಿಸಿರುವುದು ಇಂದಿನ ರಾಜಕಾರಣದ ಪರಿಪ್ರೇಕ್ಷ್ಯದಲ್ಲಿ. ಇಂದಿನ ರಾಜಕಾರಣ–ನಿರ್ದಿಷ್ಟವಾಗಿ, ಅಮೆರಿಕಾದೊಡನೆಯ ಪರಮಾಣು ಒಪ್ಪಂದದ ಸಂದರ್ಭದಲ್ಲಿ–ಎತ್ತಿ ಹಿಡಿಯುತ್ತಿರುವ ಅಭಿವೃದ್ಧಿ ಮಾದರಿಯ ಎದುರಿನಲ್ಲಿ 'ಹಿಂದ್ ಸ್ವರಾಜ್' ಕೃತಿಯು ತನ್ನ ಆಶಯಗಳ ನೆಲೆಯಲ್ಲಿ ಎಷ್ಟು ಪ್ರಸ್ತುತವಾಗಿದೆ ಎಂಬುದರ ಪರಿಶೀಲನೆಯ ಯತ್ನವನ್ನಷ್ಟೇ ನಾನು ಆ ಲೇಖನದಲ್ಲಿ ಮಾಡಿರುವುದು. ಇಂದಿನ ನಗರೀಕರಣದಸ್ವರೂಪ– ಅದು ತಂದೊಡ್ಡುತ್ತಿರುವ ಸಂಕಷ್ಟಗಳ ಹಿನ್ನೆಲೆಯಲ್ಲಿ ಗಾಂಧಿ ಮಾತುಗಳನ್ನು ಅರ್ಥೈಸಿಕೊಳ್ಳಬೇಕಾದ ನೆಲೆಯನ್ನು ಸೂಚಿಸುತ್ತಲೇ, ಬಂಜಗೆರೆಯವರು ಉಲ್ಲೇಖಿಸಿರುವ' ಯಂತ್ರ ಬೇಡ, ರೈಲು ಬೇಡ, ನ್ಯಾಯಾಲಯ ವ್ಯವಸ್ಥೆ ಬೇಡ. ಎನ್ನುವ ಗಾಂಧಿ ಮಾತುಗಳನ್ನು ಈ ನೆಲೆಯಲ್ಲೇ ಅರ್ಥ ಮಾಡಿಕೊಳ್ಳಬೇಕೆಂಬ ಮಾತನ್ನು ನಾನು ಆಡಿರುವುದು.

5. ಗಾಂಧೀಜಿಯವರನ್ನು ಇವೊತ್ತಿಗೆ ಪ್ರಸ್ತುತಗೊಳಿಸಿಕೊಳ್ಳುವ ಸಂದರ್ಭದಲ್ಲಿ, ಅವರು ಮೊದಲೇನೇನಾಗಿದ್ದರು ಎಂಬುದಕ್ಕಿಂತ, ಅವರು ಕೊನೆಗೇನಾದರು ಎಂಬುದಷ್ಟೇ ಮುಖ್ಯವಾಗುತ್ತದಲ್ಲವೆ? ಹಾಗೆ ನೋಡಿದರೆ ಗಾಂಧಿ ಸಾರತಃ ಏನೂ ಬದಲಾಗಲಿಲ್ಲ. ತಮ್ಮ ನಂಬಿಕೆಗಳನ್ನು ಹೊರಗಿನ ವಾಸ್ತವ–ಒತ್ತಡಗಳ ಎದುರಿನಲ್ಲಿ ಇನ್ನಷ್ಟು ವಿವರವಾಗಿ, ತೀವ್ರವಾಗಿ ನೋಡುತ್ತಾ ಹೋದ ಹಾಗೆ, ಅವರು ಕಂಡುಕೊಂಡಿದ್ದ ಸತ್ಯಇನ್ನಷ್ಟು ಸ್ಪಷ್ಟವಾಗುತ್ತಾ ಹೋಯಿತು ಎಂದು ಹೇಳಬಹುದಷ್ಟೆ. ಗಾಂಧೀಜಿ ಎಂದೂ ಜಾತಿ ಪದ್ಧತಿಯನ್ನು ಸಮರ್ಥಿಸಿರಲಿಲ್ಲ. ಅವರು ವರ್ಣ ವ್ಯವಸ್ಥೆಯ ಮೂಲಕ ಜಾತಿ ಪದ್ಧತಿಯನ್ನು ಅರ್ಥಮಾಡಿಕೊಳ್ಳಲು ಯತ್ನಿಸಿ ಸೋತರಷ್ಟೇ ಎಂದು ನಾನು ತಿಳಿದಿದ್ದೇನೆ.

6. ಇಂದಿನ ಸಂದರ್ಭದಲ್ಲಿ ಹಿಂದೂ ಧರ್ಮದಲ್ಲಿದ್ದುಕೊಂಡೇ ಬೌದ್ಧನಾಗಿರುವ ಮೂಲಕ ಹಿಂದೂ ಧರ್ಮದ ಕೊಳೆಯನ್ನು, ಅದರ ಪುರೋಹಿತಶಾಹಿ ಸ್ವರೂಪವನ್ನು ತೊಡೆಯಲು ಸಾಧ್ಯ ಎಂಬುದು ನನ್ನ ಬಲವಾದ ನಂಬಿಕೆ. ಏಕೆಂದರೆ ಇಂದಿನ ಹಿಂದೂ(ಬುದ್ಧ ಪೂರ್ವ ವೈದಿಕ ಅಲ್ಲ) ಧರ್ಮದ ಕೇಂದ್ರ ಬೌದ್ಧವೇ ಆಗಿದೆ. ಆ ಕೇಂದ್ರ ವಿಚಲಿತಗೊಂಡಿದೆಯಷ್ಟೆ. ಅದನ್ನು ಸರಿ ಪಡಿಸಬೇಕಷ್ಟೆ. ಹೊರಗೆ ನಿಂತರೆ, ಹೊರ ನಿಂತದ್ದೇ ಕಾರಣವಾಗಿ ಅಸಹನೆ, ಕ್ರೋಧ, ವಿನಾಶ ಬುದ್ಧಿ ಹೆಚ್ಚಾಗುತ್ತದೆ – ಆ ಮೂಲಕ ಕೆಲಸ ಕೆಡುತ್ತದಷ್ಟೆ. ಬೌದ್ಧವೇ ಆಗಿಬಿಡುವುದು ಎಂದರೇನೆಂಬುದನ್ನು ನನ್ನ ಕೆಲವು ಸ್ನೇಹಿತರ 'ಬೌದ್ಧತನ'ವನ್ನು ನೋಡಿ ನಾನು ಗಾಬರಿಯಾಗಿದ್ದೇನೆ. ಅಲ್ಲಿಯ ಪುರೋಹಿತಶಾಹಿ ಇಲ್ಲಿನದಕ್ಕಿಂತ ಹೆಚ್ಚಿಲ್ಲದಿದ್ದರೂ, ಇಷ್ಟೇ ಮೂರ್ಖತನದಿಂದ ಕೂಡಿದೆ. ಅದಕ್ಕೆ ಬಲ ಬಂದರೆ, ಅದೂ ಇದರಂತೆ ಶೋಷಕವಾಗುವ ಎಲ್ಲ ಲಕ್ಷಣಗಳಿವೆ.

7. ನಾನು ಕೆಲವೆಡೆ ಅತೀಂದ್ರತೆಯನ್ನು ಪೋಷಿಸಿರುವೆ ಎಂಬರ್ಥದ ಮಾತುಗಳನ್ನು ಬಂಜಗೆರೆಯವರು ಬರೆದಿದ್ದಾರೆ. ಇಂದ್ರಿಯತೆಯೋ, ಅತೀಂದ್ರತೆಯೋ, ಆಗಿದ್ದನ್ನು, ಅನಿಸಿದ್ದನ್ನು ಬರೆಯುದರಲ್ಲಿ ತಪ್ಪೇನಿದೆ? ಅದನ್ನೆಲ್ಲ ನಾನು ಇಂದ್ರಿಯಾತೀತ ಅನುಭವವೆಂದು ನಂಬಿ ಎಂದು ಯಾರ ಮೆಲೂ ಹೇರಿಲ್ಲ. ನನ್ನ ಬೆರಗನ್ನಷ್ಟೇ ನಾನಲ್ಲಿ ಹೇಳಿಕೊಂಡಿರುವೆ. ಹಾಗೇ ನಾನು ಎಂದೂ ನನ್ನನ್ನು ವಿಚಾರವಾದಿ ಎಂದು ಹೇಳಿಕೊಂಡವನಲ್ಲ. ಪ್ರಪಂಚವನ್ನು ಇನ್ನೂ ಬೆರಗುಗಣ್ಣುಗಳಲ್ಲೇ ನೋಡುತ್ತಿರುವವನು ನಾನು. ಇನ್ನು ಚುನಾವಣಾಪೂರ್ವ ಫಲಿತಾಂಶ ಕುರಿತಂತೆ ನನ್ನ 'ಅಂತರ್ವಾಣಿ'ಯ ಪ್ರಸ್ತಾಪ ಮಾಡಿರುವುದೇ ಅರ್ಧ ಅನುಮಾನದ ಲಘು ಶೈಲಿಯಲ್ಲಿಯೇ ಹೊರತು, ಅದನ್ನೊಂದು ವಿಶ್ವಾಸಾರ್ಹ ವಿದ್ಯಮಾನವೆಂಬಂತೆ ಅಲ್ಲ ಎಂಬುದು ಬಂಜಗೆರೆಯವರ ಗಮನಕ್ಕೆ ಬರದೇ ಹೋಗಿರುವುದು ಆಶ್ಚರ್ಯಕರ. ಅಥವಾ ಅದು ನನ್ನ ಬರವಣಿಗೆ ಶೈಲಿಯ ವೈಫಲ್ಯವಿರಬಹುದು.

8. ನನ್ನದು ಗಟ್ಟಿ ನಂಬುಗೆ ಮತ್ತು ಖಚಿತ– ಆಗ್ರಹಪೂರ್ವಕ ನಿಲುವು ಎಂದಿದ್ದಾರೆ ಬಂಜಗೆರೆಯವರು. ಇದನ್ನು ಮೆಚ್ಚುಗೆಯ ಮಾತುಗಳೆಂದು ಸ್ವೀಕರಿಸಬಹುದಾದರೂ, ನಾನು ಹಾಗೆ ಸ್ವೀಕರಿಸಲಾರೆ. ಏಕೆಂದರೆ, ಈ ಜಗತ್ತಿನಲ್ಲಿ ಆತ್ಯಂತಿಕ ಅರ್ಥದಲ್ಲಿ ಯಾವುದೂ ಗಟ್ಟಿಯೂ ಅಲ್ಲ ಖಚಿತವಾದದ್ದೂ ಅಲ್ಲ ಎಂದು ನಂಬಿದವನು ನಾನು. ಆದರೆ ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿದಂತೆ, ಲೌಕಿಕವೆನಿಸುವ ವಿದ್ಯಮಾನಗಳ ಬಗ್ಗೆ ನಮ್ಮ ನಂಬುಗೆ, ಅಭಿಪ್ರಾಯ–ನಿಲುವುಗಳು, ನಮ್ಮ ಕೌಟುಂಬಿಕ ಸಂಬಂಧಗಳ ಹಾಗೆಯೇ; ಅವು ನಮಗೆ ಅನುಮಾನಾಸ್ಪದ ವೆನ್ನಿಸುವವರೆಗಾದರೂ ಗಟ್ಟಿಯಾಗಿ, ಖಚಿತವಾಗಿರಬೇಕೆಂದು ನಂಬಿರುವವನು, ನಾನು. ಇಲ್ಲದಿದ್ದರೆ, ದ್ವಂದ್ವಗಳ ಲಾಳಿಯಾಟದಲ್ಲಿ ನಾವು ಕಳೆದು ಹೋಗುವ ಎಲ್ಲ ಸಂಭ ವವುಂಟು. ನಮ್ಮ ಬಹಳಷ್ಟು ಬುದ್ಧಿಜೀವಿಗಳು ಈಗ ಕಳೆ ದುಹೋಗಿರುವುದೂ ಹಾಗೆಯೇ. ಹಾಗಾಗಿಯೇ ಇಂದು ನಾವು ಬಲಪಂಥೀಯ ಕೋಮುವಾದಿಗಳಿಗೆ ರಾಜ್ಯ ಒಪ್ಪಿಸಿ ಇವರ ರಾಜ್ಯಭಾರ ಮುಗಿಯದೇ ಹೋದೀತೇನೋ ಎಂದು, ಫ್ಯಾಸಿಸ್ಟ್ ರಾಜ್ಯ ಸ್ಥಾಪನೆಯ ಆತಂಕದಲ್ಲಿ ಕೈಕೈ ಹೊಸೆಯುತ್ತಾ ಕೂತಿರುವಂತಾಗಿರುವುದು. ಈ ಹಿನ್ನೆಲೆಯಲ್ಲಿಯೇ ನನ್ನ ಮಾತುಗಳು ಕೆಲವೆಡೆ ಆವೇಶದ– ಆಗ್ರಹಪೂರ್ವಕತೆಯ ವೇಷತೊಟ್ಟಿರುವುದು ಎಂದು ಕಾಣುತ್ತದೆ!

ಇನ್ನು ನನ್ನ ಪುಸ್ತಕದ ಶೀರ್ಷಿಕೆಗೆ ಕಾರಣವಾಗಿರುವ 'ವಸಿಷ್ಠರು ಮತ್ತು ವಾಲ್ಮೀಕಿಯರು' ಲೇಖನ ಮತ್ತು ಬಾಲಗಂಗಾಧರರ ಹೊಸ ಜಾತಿ ಮೀಮಾಂಸೆ ಕುರಿತಂತಿರುವ–ಬಹುಶಃ ಈ ಸಂಗ್ರಹದ ಮುಖ್ಯ–ಲೇಖನಗಳ ಕಡೆ ಬಂಜಗೆರೆಯವರ ಗಮನ ಹರಿಯದಿರುವುದು ಆಶ್ಚರ್ಯಕರ ಎಂದಷ್ಟೇ ಇಲ್ಲಿ ಹೇಳಬಯಸುವೆ. □

ಸಂಪಾದಕರೊಡನೆ ಸಂವಾದ

ಗೋಹತ್ಯೆ ನಿಷೇಧ: ಒಂದು ಅವಲೋಕನ

ಪ್ರಗತಿನಂದ

ಇತ್ತೀಚೆಗೆ ಕರ್ನಾಟಕ ಸರ್ಕಾರವು ಗೋಹತ್ಯೆ ನಿಷೇಧ ಕಾಯ್ದೆ-2010ಅನ್ನು ಜಾರಿಗೆ ತರಲು ತೀರ್ಮಾನಿಸಿದೆ. ಇದು ಎಷ್ಟರ ಮಟ್ಟಿಗೆ ಪರಿಸರ ಸಮತೋಲನಕ್ಕೆ ಹತ್ತಿರವಾಗಿದೆ ಎಂಬುದನ್ನಷ್ಟೇ ಚರ್ಚಿಸೋಣ. ಪುರಾಣ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ, ಭಾವನಾತ್ಮಕ ನೆಲೆಗಳಲ್ಲಿ ಚರ್ಚಿಸಿದರೆ ಉದ್ವೇಗ, ದ್ವೇಷ, ಅಸೂಯೆ, ಆಕ್ರೋಶಗಳೇ ಮೇಲಾಟವಾಗಿ; ವಿವೇಕ, ಸತ್ಯ ಎಲ್ಲೋ ಅಡಗಿ ಹೋಗಬಹುದು. ಆದ್ದರಿಂದ ವಿನಯ, ಸಂಯಮದ ಚೌಕಟ್ಟಿನಲ್ಲಿ ವೈಜ್ಞಾನಿಕ ಹಿನ್ನೆಲೆ ಇಟ್ಟುಕೊಂಡು, ಸಮಷ್ಟಿ ಪ್ರಜ್ಞೆಯಿಂದ, ಸತ್ಯವನ್ನರಿಯಲು ಪ್ರಯತ್ನಿಸೋಣ.

ನಮ್ಮ ದೇಶದ ಜನರ ಆಹಾರ ಪದ್ಧತಿ ಮಾಂಸಾಹಾರ-ಸಸ್ಯಾಹಾರವಾಗಿದೆ. ಅದರಲ್ಲೂ ಶೇ.90ಕ್ಕಿಂತ ಮಿಗಿಲಾಗಿ ಮಾಂಸಾಹಾರಿಗಳೇ ಇದ್ದಾರೆ. ಇವರಲ್ಲಿ ಮೀನು, ಕೋಳಿ, ಕುರಿ, ಆಡು, ಹಂದಿ, ದನದ ಮಾಂಸ ತಿನ್ನುವವರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಇವರನ್ನು ಸಾಂಪ್ರದಾಯಿಕ ಮಾಂಸಾಹಾರಿಗಳೆನ್ನಬಹುದು. ಇವರಲ್ಲದೆ ಅತ್ಯಂತ ತಳಸಮುದಾಯಗಳು; ಮುಖ್ಯವಾಗಿ ಅಲೆಮಾರಿ ಜನಾಂಗಗಳು ತೋಡ, ಹಾವು, ಬೆಕ್ಕು, ಕೋತಿ, ಹಕ್ಕಿ-ಪಕ್ಷಿಗಳು, ಮಳೆಗಾಲದ ಚಿಟ್ಟೆಗಳು, ಆಮೆ, ಮೊಲ, ಮುಂಗುಸಿ, ಅಳಿಲು, ಒಂಟೆ-ಹೀಗೆ ವಿವಿಧ ಜಾತಿಯ ಪ್ರಾಣಿಗಳನ್ನು ಆಹಾರವಾಗಿ ಬಳಸುವ ಪದ್ಧತಿ ಇದೆ. ಈ ಆಹಾರ ಸರಪಳಿ ಒಂದಕ್ಕೊಂದು ಕೊಂಡಿಯಾಗಿ ಪರಿಸರ ಸಮತೋಲನದಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಇದು ಪ್ರಾಥಮಿಕ ಶಿಕ್ಷಣದಿಂದಲೇ ತಿಳಿದು ಬಂದಿರುವ ವಿಚಾರವಾಗಿದೆ.

ಹೀಗೊಂದು ಕ್ಷಣ ಆಹಾರ ಸರಪಳಿಯ ಒಂದು ಕೊಂಡಿ ಕಳಚಿದರೆ, ಅದರ ದೂರಗಾಮಿ ಪರಿಣಾಮ ಪರಿಸರದ ಅಸಮತೋಲನದಲ್ಲಿ ಕೊನೆಯಾಗಲಿದೆ. ಈಗ ಗೋಹತ್ಯೆ ನಿಷೇಧದಿಂದ ದನ ಮತ್ತು ಎಮ್ಮೆಗಳ ಮಾಂಸಕ್ಕೆ ತಡೆ ಬೀಳಲಿದೆ. ಈ ಮೂಲಕ ದನದಮಾಂಸಾಹಾರಿಗಳು ಅನಿವಾರ್ಯವಾಗಿ ಸಸ್ಯಾಹಾರಿಗಳು ಅಥವಾ ಇನ್ನಿತರ ಮಾಂಸಾಹಾರಿಗಳಾಗಿ ಕಡ್ಡಾಯವಾಗಿ ಬದಲಾಗಬೇಕಾಗುತ್ತದೆ. ಈಗ ಕೈಗೆಟುಕುವ ಬೆಲೆಯಲ್ಲಿ ಮತ್ತು ಬಡವರ ಆಹಾರವಾಗಿ ದನದ ಮಾಂಸ ಬಳಕೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಇನ್ನಿತರ ಮಾಂಸಗಳ ಮತ್ತು ಸಸ್ಯಾಹಾರದ ಮೇಲೆ ತೀವ್ರತರವಾದ ಬೇಡಿಕೆಯುಂಟಾಗಿ ಅಸಮತೋಲನ ಕಾಡಲು ಪ್ರಾರಂಭವಾಗುತ್ತದೆ. ಕಡಿಮೆ ಬೆಲೆಯಲ್ಲಿ ದೊರೆಯುತ್ತಿದ್ದ ಪೌಷ್ಟಿಕಾಂಶದ ಆಹಾರ ಇನ್ನಿಲ್ಲವಾಗಿ, ಅಪೌಷ್ಟಿಕತೆಯಿಂದ ನರಳಲಿರುವ ಹೊಸ ಸಮುದಾಯ ನಿರ್ಮಾಣವಾಗಿ ಸಮಾಜದ ಸ್ವಾಸ್ಥ್ಯಸ್ಥಿತಿ ಹದಗೆಡಬಹುದು.

ಈಗಾಗಲೇ ಜಾಗತೀಕರಣದ ಪ್ರಭಾವದಿಂದ ನಗರೀಕರಣ, ಕೈಗಾರೀಕರಣ ಮತ್ತು ವಿಶೇಷ ಆರ್ಥಿಕ ವಲಯಗಳಿಗಾಗಿ ಭೂಸ್ವಾಧೀನದಂತಹ ಪ್ರಕ್ರಿಯೆಗಳು ಹೆಚ್ಚಾಗುತ್ತಿವೆ. ಇದರಿಂದಾಗಿ ಕೃಷಿಭೂಮಿ ಕಡಿಮೆಯಾಗುತ್ತಿದೆ. ಇದರ ಪರಿಣಾಮವಾಗಿ ಕೃಷಿ-ಕಾರ್ಮಿಕರು ನಗರಮುಖಿಗಳಾಗಿ ಕೃಷಿಯನ್ನು ತ್ಯಜಿಸುತ್ತಿದ್ದಾರೆ. ಹೀಗೆ ರೈತರು, ಕೃಷಿ-ಕಾರ್ಮಿಕರು ಕೃಷಿ ಚಟುವಟಿಕೆಗಳನ್ನು ಕೈಬಿಡುವುದರಿಂದ ಆಹಾರೋತ್ಪಾದನೆ ಕುಂಠಿತವಾಗಿದೆ. ಹೀಗಾಗಿ ಆಹಾರದ ಕೊರತೆ ಕಾಡಲಿದೆ. ವಸ್ತುಸ್ಥಿತಿ ಹೀಗಿರುವಾಗ ಮತ್ತೆ ಮತ್ತೆ ಸಸ್ಯಾಹಾರಿ ಉತ್ಪನ್ನಗಳ ಮೇಲೆ ಒತ್ತಡ ಜಾಸ್ತಿಯಾದರೆ ಪರಿಸರದಲ್ಲಿ ಅಸಮತೋಲನವುಂಟಾಗಿ, ಅದರ ದೂರಗಾಮಿ ಪರಿಣಾಮ ಈಗಾಗಲೇ ಏರುತ್ತಿರುವ ಭೂತಾಪಮಾನ ಮತ್ತಷ್ಟು ಜಾಸ್ತಿಯಾಗಲಿದೆ.

ಭೂತಾಪಮಾನ ಜಾಸ್ತಿಯಾಗಲು ಭಾರತದ ಭತ್ತದ ಬೆಳೆ ಪ್ರಮುಖ ಕಾರಣ; ಈ ಮೂಲಕ ಭತ್ತದ ಗದ್ದೆಯಿಂದ ಮೀಥೇನ್ ಹೆಚ್ಚ ಬಿಡುಗಡೆಯಾಗಿ ಭೂಮಿಯ ಕಾವಿಗೆ ಕಾರಣವಾಗಿದೆ ಎಂಬ ವಾದವನ್ನು ಪ್ರಮುಖವಾಗಿ ವಿಶ್ವಸಂಸ್ಥೆ ಭಾರತದ ಮೇಲೆ ಆರೋಪ ಮಾಡುತ್ತಿದೆ. ಹೆಚ್ಚುತ್ತಿರುವ ಭೂತಾಪಮಾನವನ್ನು ನಿಯಂತ್ರಿಸುವ ಸಲುವಾಗಿ ಸಹಿ ಹಾಕಲು ಭಾರತಕ್ಕೆ ವಿಶ್ವಮಟ್ಟದಲ್ಲಿ ತೀವ್ರತರವಾದ ಒತ್ತಡವಿದೆ. ಪರಿಸ್ಥಿತಿ ಈ ಮಟ್ಟಿಗೆ ಬಿಗಡಾಯಿಸಿರುವಾಗ ನಾವು ದನದ ಮಾಂಸದ ನಿಷೇಧದಿಂದಾಗಿ ಸಸ್ಯಾಹಾರಕ್ಕಾಗಿ ತೀವ್ರ ಬೇಡಿಕೆಯುಂಟಾದಾಗ ಸ್ವಾಭಾವಿಕವಾಗಿ ಭತ್ತದ ಗದ್ದೆಗಳು ಹೆಚ್ಚಾಗಲಿವೆ. ಈ ಮೂಲಕ ಭೂತಾಪಮಾನ ಹೆಚ್ಚಾಗಲಿದೆ.

ಇನ್ನು ಗೋಹತ್ಯೆ ನಿಷೇಧದಿಂದ ಜಾನುವಾರುಗಳ ಸಂಖ್ಯೆ ಹೆಚ್ಚಾಗಲಿದೆ. ಅವುಗಳ ಮೇವಿನ ಆಹಾರಕ್ಕಾಗಿ ಮತ್ತೆ ಕೃಷಿಭೂಮಿ ಮೇಲೆ ಒತ್ತಡ ಹೆಚ್ಚಾಗುತ್ತದೆ. ಕೊನೆಗೆ ಅರಣ್ಯ ನಾಶಕ್ಕೆ ಇದು ದಾರಿ ಮಾಡಿಕೊಡುವ ಸಾಧ್ಯತೆ ನಿಚ್ಚಳವಾಗಿದೆ. ಅರಣ್ಯ ನಾಶದಿಂದಲೂ ಭೂತಾಪಮಾನ ಜಾಸ್ತಿಯಾಗಲಿದೆ. ಇದೇ ಮಾದರಿಯಲ್ಲಿ ಜಾನುವಾರುಗಳ ಸಂಖ್ಯೆ ಹೆಚ್ಚಾದಾಗ, ಅವುಗಳ ಸಗಣಿಯ ಪ್ರಮಾಣ ಜಾಸ್ತಿಯಾಗುತ್ತದೆ. ಸಗಣಿಯಿಂದಲೂ ಮೀಥೇನ್ ಬಿಡುಗಡೆಯಾಗಿ ಭೂತಾಪಮಾನ ಜಾಸ್ತಿಯಾಗಲಿದೆ ಎಂಬ ವಾದವೂ ಪ್ರಚಲಿತವಾಗಿದೆ. ಈ ಎಲ್ಲಾ ವಿಚಾರಗಳೂ ಊಹಾತ್ಮಕ ವಿಚಾರಗಳಾಗಿರದೆ ಇವುಗಳಿಗೆ ವೈಜ್ಞಾನಿಕ ಹಿನ್ನೆಲೆ ಇದೆ.

ಇದಿಷ್ಟು ಪರಿಸರ ಅಸಮತೋಲನಕ್ಕೆ ದಾರಿ ತೋರಿದರೆ, ವಾಸ್ತವಿಕ ನೆಲೆಗಟ್ಟಿನಲ್ಲಿ ಸತ್ಯವನ್ನು ನೋಡುವುದಾದರೆ, ಕರ್ನಾಟಕವು ರಾಷ್ಟ್ರದಲ್ಲೇ ಹಾಲು ಉತ್ಪಾದನೆಯಲ್ಲಿ ಮೊದಲೆರಡು ಸ್ಥಾನಕ್ಕೆ ಪೈಪೋಟಿ ನಡೆಸುತ್ತಿದೆ. ಈ ಮೂಲಕ ವ್ಯವಸಾಯ ಜಾನುವಾರುಗಳಿಗಿಂತ ಹಾಲು ಉತ್ಪಾದಿಸುವ ಹಸುಗಳು ಹೆಚ್ಚಾಗಿವೆ. ಅದರಲ್ಲೂ ಮಿಶ್ರ ತಳಿ ಹಸುಗಳಾದ ಹೋಲೆಸ್ಟಿಯನ್ ಫ್ರಿಸಿಯನ್ ಮತ್ತು ಜರ್ಸಿ ಹಸುಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಇವತ್ತಿನ ಕೃಷಿ ಕ್ರಾಂತಿಯಲ್ಲಿ ಯಾಂತ್ರೀಕರಣ ಹೆಚ್ಚಾಗಿ ವ್ಯವಸಾಯ ಹಸುಗಳ ಸಂಖ್ಯೆ ತೀರಾ ಕಡಿಮೆಯಾಗಿದೆ. ಹೆಚ್‌ಎಫ್ ಮತ್ತು ಜರ್ಸಿ ಹಸುಗಳು ಅತಿ ಹೆಚ್ಚು ಹಾಲು ಕೊಡುವ ತಳಿಗಳಾಗಿದ್ದು ಇವುಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿವೆ. ಇವು ಅತಿಹೆಚ್ಚು ಹಾಲು ಕೊಡುವುದರಿಂದ ಕೆಚ್ಚಲು ಬಾವು ಕಾಯಿಲೆ ಹೆಚ್ಚು ಬರುತ್ತದೆ. ಕೆಲವೊಮ್ಮೆ ತೀವ್ರತರವಾದ ಕೆಚ್ಚಲು ಬಾವು ಆದಾಗ ನಾಲ್ಕು ಮೊಲೆತೊಟ್ಟುಗಳು ನರಗಟ್ಟುವಿಕೆಗೆ ಒಳಗಾಗಿ ಶಾಶ್ವತವಾಗಿ ಹಾಲು ಉತ್ಪಾದನೆ ನಿಂತುಹೋಗುತ್ತದೆ. ಇವುಗಳು ಕೃಷಿ ಚಟುವಟಿಕೆಗಳಿಗೂ ಪ್ರಯೋಜನಕ್ಕೆ ಬರುವುದಿಲ್ಲ.

ಅಂತಹ ಹಸುಗಳನ್ನು ಏನು ಮಾಡುವುದು? ಹಲವೊಮ್ಮೆ ಆಕಸ್ಮಿಕಗಳಿಂದ ಜಾರಿ ಬಿದ್ದಾಗ ಸರಿಪಡಿಸಲಾಗದ ಮೂಳೆ ಮುರಿತಗಳು, ಮೂಳೆ ಜರುಗುವಿಕೆಗಳಿಂದ ಎದ್ದು ನಿಲ್ಲಲಾರದ ಪರಿಸ್ಥಿತಿಗೆ ಒಳಪಡುತ್ತವೆ. ಅಂತಹ ಹಸುಗಳನ್ನು ಏನು ಮಾಡುವುದು? ಮತ್ತೆ ಹಾಲು ಕರೆಯುವ ಹಸುಗಳಲ್ಲಿ ಗಂಡು ಕರು ಹಾಕಿದರೆ ಏನು ಮಾಡುವುದು? ಹಲವಾರು ಕಾಯಿಲೆಗಳಿಂದ ಶಾಶ್ವತ ಬಂಜೆತನಕ್ಕೆ ಒಳಗಾಗುವ ಹಸುಗಳನ್ನು ಏನು ಮಾಡುವುದು? ಈ ಎಲ್ಲ ಅನುಪಯುಕ್ತ ಹಸುಗಳನ್ನು ರೈತರು ಸ್ವಾಭಾವಿಕವಾಗಿ ಆರ್ಥಿಕ ದೃಷ್ಟಿಯಿಂದ ಅವುಗಳನ್ನು ದನದ ಮಾಂಸ ಉತ್ಪಾದಕರಿಗೆ ಮಾರಾಟ ಮಾಡುತ್ತಾರೆ. ಇದು ಕಾಲಾನುಕಾಲದಿಂದಲೂ ಅನೂಚಾನವಾಗಿ ನಡೆದುಕೊಂಡು ಬಂದಿರುವ ಕೃಷಿ ಚಟುವಟಿಕೆಯಾಗಿದೆ. ಈ ವಾಸ್ತವಿಕ ನೆಲೆಗಟ್ಟಿನಿಂದ ಹೊರಬರುವುದು ಹೇಗೆ?

ಈಗ ಮಾಂಸದ ದನಗಳ ವಧೆಯಿಂದ ಸಿಗುತ್ತಿರುವ ಉಪ ಉತ್ಪನ್ನಗಳಾದ ಕೊಬ್ಬು, ಮೂಳೆ, ರಕ್ತ, ಕೊಂಬು, ಚರ್ಮಗಳು ದೇಶದ ಬಹುದೊಡ್ಡ ಉದ್ಯಮವಾಗಿರುವ ಔಷಧೋತ್ಪನ್ನಗಳಿಗೆ ಮತ್ತು ಚರ್ಮೋದ್ಯಮಕ್ಕೆ ಮೂಲ ಸರಕಾಗಿವೆ. ಇಂತಹ ಸನ್ನಿವೇಶದಲ್ಲಿ ನಮ್ಮ ಔಷಧ ಉತ್ಪಾದನೆಯ ಪರಿಸ್ಥಿತಿ ಏನಾಗಬಹುದು? ಚರ್ಮೋದ್ಯಮಗಳ ಸ್ಥಿತಿ ಏನಾಗಬಹುದು? ದೇಶದ ಜನರ ಆರೋಗ್ಯದ ಪರಿಸ್ಥಿತಿ ಏನಾಗಬಹುದು?

ಇವತ್ತಿನ ಸರ್ಕಾರದಲ್ಲಿ ಹೆಚ್ಚಿನ ಪರಿಸರವಾದಿಗಳು ಮತ್ತು ರೈತ ಕಾಳಜಿಯುಳ್ಳವರಾದ ಅನಂತ ಹೆಗಡೆ ಅಶೀಸರ, ವೈ.ಬಿ. ರಾಮಕೃಷ್ಣ, ಆನಂದ, ಶೋಭಾ ಕರಂದ್ಲಾಜೆ ಮುಂತಾದವರು ಜವಾಬ್ದಾರಿಯುತ ಸ್ಥಾನಗಳಲ್ಲಿದ್ದಾರೆ. ಇವರನ್ನು ಒಳಗೊಂಡಂತೆ ಪಶುವೈದ್ಯರು, ಪಶು ವಿಜ್ಞಾನಿಗಳು, ಆಹಾರತಜ್ಞರು, ಸಾಮಾಜಿಕ ವಿಜ್ಞಾನಿಗಳು, ಕೃಷಿತಜ್ಞರು-ಇವರೆಲ್ಲರನ್ನೂ ಒಂದೆಡೆ ಸೇರಿಸಿ ವೈಜ್ಞಾನಿಕ ವಿಚಾರ ಮಂಥನ ನಡೆಸಿ, ಎಲ್ಲಾ ಸಾಧಕ ಬಾಧಕಗಳ ಬಗ್ಗೆ ಬೆಳಕು ಚೆಲ್ಲಿ ಆನಂತರ ಗೋಹತ್ಯೆ ನಿಷೇಧದ ಬಗ್ಗೆ ತೀರ್ಮಾನ ಕೈಗೊಳ್ಳುವುದು ಸಮಂಜಸವಾಗಿರುತ್ತದೆ. □

ಮಂಗಳೂರು ವಿ.ವಿ ಉಪಕುಲಪತಿಯವರಿಗೊಂದು

ಪ್ರತಿಭಟನಾ ಪತ್ರ

ಒಂದು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ವಿಶ್ವ ವಿದ್ಯಾನಿಲಯಕ್ಕೆ ಇರುವ ಕರ್ತವ್ಯ ಮತ್ತು ಜವಾಬ್ದಾರಿ ಕುರಿತದ್ದು. ಮುಕ್ತ ಚಿಂತನೆಯನ್ನು ಬೆಳೆಸುವ, ಭಿನ್ನಾಭಿಪ್ರಾಯಗಳೊಂದಿಗೇ ಬೌದ್ಧಿಕವಾಗಿ ಬೆಳೆಯುವ, ದೇಶದ ಸಂವಿಧಾನ ನೀಡಿರುವ ಹಕ್ಕುಗಳ ಬಗ್ಗೆ ಯುವ ಪೀಳಿಗೆಯನ್ನು ಎಚ್ಚರಿಸುವ ಮತ್ತು ಈ ಹಿನ್ನೆಲೆಯಲ್ಲಿ ಸಮಾಜದ - ಪ್ರಭುತ್ವದ ದಮನಕಾರಿ ನೀತಿ - ಆಚರಣೆಗಳನ್ನು ಪ್ರಶ್ನಿಸುವ ಭೂಮಿಕೆಯನ್ನು ಸೃಷ್ಟಿ ಮಾಡಬೇಕಾದ್ದು ಉನ್ನತ ಶೈಕ್ಷಣಿಕ ಸಂಸ್ಥೆಗಳ ಪ್ರಾಥಮಿಕ ಕರ್ತವ್ಯ. ಇಂಥ ಕ್ರಿಯಾಶೀಲತೆ ಮಾತ್ರ ಒಂದು ಉನ್ನತ ವಿದ್ಯಾ ಸಂಸ್ಥೆಯನ್ನು ಜೀವಂತವಾಗಿಡಲು ಸಾಧ್ಯ. ಆದರೆ ಮಂಗಳೂರು ವಿಶ್ವವಿದ್ಯಾನಿಲಯದ ವರ್ತನೆ ಈ ಉದ್ದೇಶವನ್ನು ಕಡೆಗಣಿಸಿದೆ; ತನ್ನ ಗುರಿ ಕೇವಲ ಉದ್ಯೋಗಿಗಳನ್ನು ತಯಾರು ಮಾಡುವುದು ಮಾತ್ರ ಎಂದು ಮಂಗಳೂರು ವಿವಿ ಅಂದುಕೊಂಡಂತಿದೆ.

ಮಂಗಳೂರು ವಿಶ್ವವಿದ್ಯಾನಿಲಯದ ಕಾಲೇಜಿನಲ್ಲಿ ಇಂಗ್ಲಿಷ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಶ್ರೀ ಪಟ್ಟಾಭಿರಾಮ ಸೋಮಯಾಜಿಯವರಿಗೆ ಸಂಘಪರಿವಾರ ಪದೇ ಪದೇ ಕಿರುಕುಳ ನೀಡುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಚಾರವೇ ಆಗಿದೆ. ಈಗ ಅವರು ಮತ್ತೊಮ್ಮೆ ಸಂಘಪರಿವಾರ ಮತ್ತು ವಿವಿಯಿಂದ ತೊಂದರೆಗೆ ಒಳಗಾಗಿದ್ದಾರೆ. ಮುಕ್ತ ಚಿಂತನೆ, ವಿಚಾರಗಳನ್ನು ಕಲಿಸಿ, ಬೆಳೆಸಬೇಕಾದ ಜವಾಬ್ದಾರಿಯಿರುವ ವಿಶ್ವವಿದ್ಯಾನಿಲಯವೇ ಕಾಲೇಜು ಅಧ್ಯಾಪಕರ ಅಭಿಪ್ರಾಯದ ಹಕ್ಕನ್ನು ಮೊಟಕುಗೊಳಿಸಲು ಹೊರಟಿರುವುದನ್ನು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ಎಲ್ಲ ಪ್ರಜ್ಞಾವಂತರೂ ಪ್ರತಿಭಟಿಸಬೇಕಾಗಿದೆ.

ಸೋಮಯಾಜಿಯವರು ಕರಾವಳಿಯಲ್ಲಿ ಹೆಚ್ಚುತ್ತಿರುವ ಕೋಮುವಾದ, ಹಿಂಸೆಯ ವಿರುದ್ಧ ತಮ್ಮ ಧ್ವನಿ ಎತ್ತಿ, ಮಾನವೀಯತೆ ಮತ್ತು ಕೋಮು ಸಾಮರಸ್ಯದ ಪರವಾಗಿ ನಿಂತಿರುವುದೇ ಸಂಘಪರಿವಾರದ ಆಕ್ರೋಶಕ್ಕೆ ಕಾರಣ ಎಂಬುದು ಸ್ಪಷ್ಟ. ದುರಂತವೆಂದರೆ, ಸಂಘಪರಿವಾರದ ಶಕ್ತಿಗಳನ್ನು ಪ್ರೋತ್ಸಾಹಿಸುವ ರೀತಿಯಲ್ಲಿ ವಿಶ್ವವಿದ್ಯಾನಿಲಯವೂ ಕೂಡ ಸೋಮಯಾಜಿಯವರಿಗೆ ನಿರಂತರವಾಗಿ ಕುರುಕುಳ ಕೊಡುತ್ತಾ ಬಂದಿರುವುದು. ಒಂದು ವರ್ಷದ ಹಿಂದೆ ಮಂಗಳೂರಿನಲ್ಲಿ ಕೋಮು ಗಲಭೆಯಾದಾಗ ಟಿವಿ ಚಾನೆಲ್ ಒಂದು ಅವರ ಅಭಿಪ್ರಾಯ ಪಡೆಯಲು ಅವರನ್ನು ಸಂದರ್ಶಿಸಿತ್ತು. ಅವರ ಮಾತುಗಳು ಟಿವಿಯಲ್ಲಿ ಪ್ರಸಾರವಾಗುವ ಮುನ್ನವೇ ಸಂಘಪರಿವಾರದ ಕೆಲವು ವಿದ್ಯಾರ್ಥಿಗಳು ಕಾಲೇಜಿನಲ್ಲಿ ದಾಂದಲೆ ಎಬ್ಬಿಸಿದರು; ಬಲಾತ್ಕಾರಪೂರ್ವಕವಾಗಿ ತರಗತಿಗಳನ್ನು ನಡೆಯಲು ಬಿಡದೆ ಒಂದು ವಾರದ ಕಾಲ ಇಡೀ ಕಾಲೇಜನ್ನೇ ಹೆಚ್ಚುಕಮ್ಮಿ ಮುಚ್ಚಿಸಿಬಿಟ್ಟಿದ್ದರು. ಸಂಘಪರಿವಾರದ ಸುಮಾರು 60–70 ವಿದ್ಯಾರ್ಥಿಗಳು ಸೋಮಯಾಜಿಯವರ ವಿರುದ್ಧ ವಿವಿಗೆ ದೂರನ್ನು ನೀಡಿದ್ದರೆ ಸುಮಾರು 400–500 ವಿದ್ಯಾರ್ಥಿಗಳು ಸೋಮಯಾಜಿಯವರ ಬೆಂಬಲಕ್ಕೆ ನಿಂತು ಅವರ ಪರವಾಗಿ ವಿವಿಗೆ ಮನವಿ ಸಲ್ಲಿಸಿದ್ದರು.

ಸೋಮಯಾಜಿಯವರು ಯಾವುದೇ ಕಾನೂನನ್ನು ಉಲ್ಲಂಘಿಸದಿದ್ದರೂ, ಸಂಘಪರಿವಾರದ ವಿದ್ಯಾರ್ಥಿ ಗುಂಪಿನ ದೂರನ್ನು ಪುರಸ್ಕರಿಸಿದ ಕಾಲೇಜು ಮತ್ತು ವಿವಿ, ಈ ಬಗ್ಗೆ ಸೋಮಯಾಜಿಯವರಿಗೆ ಒಂದು ನೋಟೀಸನ್ನು ಜಾರಿ ಮಾಡಿದ್ದವು. ವಿವಿಯ ಘನತೆಗೆ ತಕ್ಕುದಲ್ಲದ ಇಂಥ ಕ್ರಮದ ವಿರುದ್ಧ ಪ್ರತಿಭಟಿಸಿ ಶ್ರೀ ಯು. ಆರ್. ಅನಂತಮೂರ್ತಿ, ಮಂಗಳೂರಿನ ಶಾಸಕ ಶ್ರೀ ಯು.ಟಿ. ಖಾದರ್, ಅನೇಕ ಮಾನವ ಹಕ್ಕು ಹೋರಾಟಗಾರರು ಮತ್ತು ಲೇಖಕರ ಒಂದು ತಂಡ ವಿವಿಯ ಕುಲಾಧಿಪತಿಗಳೂ ಆಗಿರುವ ರಾಜ್ಯಪಾಲರನ್ನು ಭೇಟಿಮಾಡಿ, ಮಂಗಳೂರು ವಿವಿ ಆಡಳಿತವು ರಾಜಕೀಯ ಪಕ್ಷವೊಂದರ ವಕ್ತಾರನಂತೆ ವರ್ತಿಸುವುದರ ಅಪಾಯಗಳನ್ನು ಕುರಿತಂತೆ ಮನವಿ ಸಲ್ಲಿಸಿತ್ತು. ಆಗ ಕೆಲ ದಿನ ತಣ್ಣಗಾಗಿದ್ದ ಅಲ್ಲಿನ ಸಂಘಪರಿವಾರ ಈಗ ಮತ್ತೆ ಸೋಮಯಾಜಿಯವರ ಮೇಲೆ ಹರಿಹಾಯ್ದಿದೆ. ಯಥಾಪ್ರಕಾರ ವಿವಿ ಕೂಡ ಸಂಘಪರಿವಾರದ ಶಕ್ತಿಗಳಿಗೆ ಪೂರಕವಾಗಿ ವರ್ತಿಸಿ ತನಗೆ ಸ್ವಂತ ಅಸ್ತಿತ್ವವೇ ಇಲ್ಲ ಎನ್ನುವುದನ್ನು ಮತ್ತೊಮ್ಮೆ ಸಾದರ ಪಡಿಸಿದೆ.

ಈಗಿನ ಪ್ರಕರಣದ ಹಿನ್ನೆಲೆ ಹೀಗಿದೆ. ಶ್ರೀ ಪಟ್ಟಾಭಿರಾಮ ಸೋಮಯಾಜಿಯವರು ಭಾರತೀಯ ಆಹಾರಪದ್ಧತಿಯ ರಕ್ಷಣಾ ಆಂದೋಳನ ಇದರ ದ.ಕ. ಮತ್ತು ಉಡುಪಿ ಜಿಲ್ಲಾ ಘಟಕಗಳು ದಿನಾಂಕ 25–2–2010ರಂದು ಮಂಗಳೂರಿನಲ್ಲಿ ಕರೆದಿದ್ದ ಒಂದು ಜಂಟಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದರು. ಇದು ಯಾವುದೇ ರಾಜಕೀಯ ಪಕ್ಷದ ಸಭೆಯಾಗಿರಲಿಲ್ಲ. ಸರ್ಕಾರ ಜಾರಿಗೊಳಿಸಲು

ಹೊರಟಿರುವ 'ಗೋಹತ್ಯೆ ಮಸೂದೆ'ಯಲ್ಲಿನ ಕೆಲವು ಅಂಶಗಳ ಸಾಂವಿಧಾನಿಕ ಸಾಧ್ಯತೆ-ಬಾಧ್ಯತೆಗಳನ್ನು ಚರ್ಚಿಸುವ ಸಲುವಾಗಿ ಕರೆದಿದ್ದ ಸಭೆ ಅದು. ಸೋಮಯಾಜಿ ಅವರು ವಿಶ್ವವಿದ್ಯಾನಿಲಯದ ಸೇವಾನಿಯಮಗಳನ್ನು ಪಾಲಿಸಿ, ಸಾಂದರ್ಭಿಕ ರಜೆಯ ಅರ್ಜಿಯನ್ನು ಅದರ ಹಿಂದಿನ ದಿನವೇ ಕ್ರಮಬದ್ಧವಾಗಿ ಸಲ್ಲಿಸಿ, ಅಂದಿನ ಆ ಸಭೆಯಲ್ಲಿ ಪಾಲ್ಗೊಂಡು ಓರ್ವ ಜವಾಬ್ದಾರಿಯುತ ನಾಗರಿಕನ ಕರ್ತವ್ಯವನ್ನು ಪಾಲಿಸಿದ್ದರು. ಅವರು ಹೀಗೆ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡು ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ ಎಂಬ ನೆಪವಿಟ್ಟುಕೊಂಡು ಸಂಘಪರಿವಾರದ ಕೆಲವು ವಿದ್ಯಾರ್ಥಿಗಳು ತರಗತಿಗಳನ್ನು ಬಲಾತ್ಕಾರವಾಗಿ ಮುಚ್ಚಿಸಿ, ಗಲಾಟೆ ನಡೆಸಿ ಕ್ಯಾಂಪಸ್ ಒಳಗಡೆ ಭಯದ ವಾತಾವರಣ ಮೂಡಿಸಿದರು.

ಬಳಿಕ ಕಾಲೇಜಿನ ಪ್ರಾಂಶುಪಾಲರಿಗೂ, ವಿವಿ ಕುಲಪತಿಗಳಿಗೂ ಮನವಿನೀಡಿ ಸೋಮಯಾಜಿಯವರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದರು. ಪ್ರತಿಯಾಗಿ ವಿದ್ಯಾರ್ಥಿಗಳ ದೊಡ್ಡ ಗುಂಪೊಂದು ಸೋಮ ಯಾಜಿಯವರ ಪರವಾಗಿ ಪ್ರತಿಭಟನೆ ನಡೆಸಿ ನೂರಾರು ಸಹಿಗಳಿರುವ ಮನವಿಪತ್ರವೊಂದನ್ನು ಸಲ್ಲಿಸಿತು. ಆದರೆ ಈ ಬಾರಿಯೂ ವಿವಿ ಕೇವಲ ಸಂಘಪರಿವಾರದ ವಿದ್ಯಾರ್ಥಿಗಳದೂರನ್ನು ಮಾತ್ರ ಪುರಸ್ಕರಿಸಿದೆ. ಮತ್ತು ಅದನ್ನು ಯಥಾವತ್ತಾಗಿ ಪಾಲಿಸಲು ತಾನು ಕಟಿಬದ್ಧವೇನೋ ಎಂಬಂತೆ ಇಡೀ ಪ್ರಕರಣದ ಬಗ್ಗೆ ವಿವರಣೆ ಕೇಳಿ ಸೋಮಯಾಜಿಯವರಿಗೆ ನೋಟೀಸು ಜಾರಿ ಮಾಡಿದೆ. ದಾಂದಲೆ ಮಾಡಿ ದೂರು ನೀಡಿದ ವಿದ್ಯಾರ್ಥಿಗಳಿಗೆ ಮತ್ತು ಸೋಮಯಾಜಿ ಪರವಾಗಿ ಮನವಿ ನೀಡಿದ ವಿದ್ಯಾರ್ಥಿಗಳಿಗೆ ವಿವಿ ಯಾವ ಸೂಚನೆ, ಸಲಹೆ, ಮಾರ್ಗದರ್ಶನವನ್ನೂ ಕೊಟ್ಟಿಲ್ಲ.

ಮಾನ್ಯ ಕುಲಪತಿಗಳು ಈ ದೂರಿನ ಹಿನ್ನೆಲೆಯ ಬಗ್ಗೆ ಮತ್ತು ಸೋಮಯಾಜಿಯವರು ಈ ಸಭೆಯಲ್ಲಿ ಭಾಗವಹಿಸಿದ್ದರ ಬಗ್ಗೆ ತಾವೇ ವಿವರಗಳನ್ನು ಸಂಗ್ರಹಿಸಿದ್ದರೆ, ವಿವಿಯ ನೀತಿಸಂಹಿತೆಯನ್ನು ಉಲ್ಲಂಘಿಸುವ ಯಾವ ಅಪರಾಧವನ್ನೂ ಸೋಮಯಾಜಿಯವರು ಮಾಡಿಲ್ಲವೆಂಬುದನ್ನೂ, ಕೇವಲ ಕಿರುಕುಳವನ್ನು ಕೊಡುವ ಏಕೈಕ ಉದ್ದೇಶದಿಂದಲೇ ವಿದ್ಯಾರ್ಥಿಗಳ ಒಂದು ಗುಂಪು ಈ ದೂರನ್ನು ಸಲ್ಲಿಸಿದೆ ಎಂಬುದನ್ನೂ ಕುಲಪತಿಗಳು ಗ್ರಹಿಸಬಹುದಾಗಿತ್ತು. ಈ ಪ್ರಕರಣ ಮಾಧ್ಯಮಗಳಲ್ಲಿಯೂ ವ್ಯಾಪಕವಾಗಿ ಪ್ರಕಟವಾಗಿರುವುದರಿಂದ ವಿವರಗಳನ್ನು ಆ ಮೂಲಗಳಿಂದಲೂ ಕಲೆಹಾಕಬಹುದಾಗಿತ್ತು. ವಿಪರ್ಯಾಸವೆಂದರೆ, ವಿದ್ಯಾಭ್ಯಾಸದಲ್ಲಿ ನಿಜಕ್ಕೂ ಆಸಕ್ತಿ ಇರುವ ಮತ್ತು ಸಂಘಪರಿವಾರದ ವಿದ್ಯಾರ್ಥಿಗಳಿಂದ ನಿರಂತರ ಕಿರುಕುಳಕ್ಕೊಳಗಾಗಿರುವ ಇನ್ನೊಂದು ವಿದ್ಯಾರ್ಥಿಗಳ ದೊಡ್ಡ ಗುಂಪು ಸೋಮಯಾಜಿಯವರ ಪರವಾಗಿ-ಸಂಘ ಪರಿವಾರದ ಗುಂಪಿನ ದುರುದ್ದೇಶವನ್ನು ಖಂಡಿಸಿ ವಿವಿಗೆ ಮನವಿ ಸಲ್ಲಿಸಿದೆಯಾದರೂ ಈ ಮನವಿಯ ಬಗ್ಗೆ ಚಕಾರವೆತ್ತದ ವಿವಿ ಕೇವಲ ಒಂದು ಗುಂಪಿನ ಕೆಲವೇ ವಿದ್ಯಾರ್ಥಿಗಳ ಅಭಿಪ್ರಾಯವನ್ನೇ ತನ್ನ ಅಧಿಕೃತ ಮಾಹಿತಿ ಎಂಬಂತೆ ನಡೆದುಕೊಂಡು, ತನ್ನ ಕುರುಡುತನವನ್ನು ಎತ್ತಿ ತೋರಿದೆ.

ಸೋಮಯಾಜಿಯವರು ಯಾವುದೇ ಕಾನೂನನ್ನು ಉಲ್ಲಂಘಿಸದಿದ್ದರೂ, ಸಂಘಪರಿವಾರದ ವಿದ್ಯಾರ್ಥಿ ಗುಂಪಿನ ದೂರನ್ನು ಪುರಸ್ಕರಿಸಿದ ಕಾಲೇಜು ಮತ್ತು ವಿವಿ ಈ ಬಗ್ಗೆ ಸೋಮಯಾಜಿಯವರಿಗೆ ಒಂದು ನೋಟೀಸನ್ನು ಜಾರಿ ಮಾಡಿದ್ದವು. ವಿವಿಯ ಘನತೆಗೆ ತಕ್ಕುದಲ್ಲದ ಇಂಥ ಕ್ರಮದ ವಿರುದ್ಧ ಪ್ರತಿಭಟಿಸಿ ಶ್ರೀ ಯು. ಆರ್. ಅನಂತ ಮೂರ್ತಿ, ಮಂಗಳೂರಿನ ಶಾಸಕ ಶ್ರೀ ಯು.ಟಿ. ಖಾದರ್, ಅನೇಕ ಮಾನವ ಹಕ್ಕು ಹೋರಾಟಗಾರರು-ಲೇಖಕರ ಒಂದು ತಂಡ ವಿವಿಯ ಕುಲಾಧಿಪತಿಗಳೂ ಆಗಿರುವ ರಾಜ್ಯಪಾಲರನ್ನು ಭೇಟಿಮಾಡಿ, ಮಂಗಳೂರು ವಿವಿ ಆಡಳಿತವು ರಾಜಕೀಯ ಪಕ್ಷವೊಂದರ ವಕ್ತಾರನಂತೆ ವರ್ತಿಸುವುದರ ಅಪಾಯಗಳನ್ನು ಕುರಿತಂತೆ ಮನವಿ ಸಲ್ಲಿಸಿತ್ತು.

ಶ್ರೀ ಸೋಮಯಾಜಿಯಂಥ ಧೀಮಂತಿಕೆಯುಳ್ಳ ಅಧ್ಯಾಪಕ, ಲೇಖಕ ಮತ್ತು ಚಿಂತಕ ತನ್ನಲ್ಲಿ ಕೆಲಸಮಾಡುತ್ತಿರುವುದು ಯಾವುದೇ ವಿಶ್ವವಿದ್ಯಾನಿಲಯಕ್ಕೆ ಹೆಮ್ಮೆಯ ವಿಷಯವಾಗಬೇಕು. ಆದರೆ, ಮಂಗಳೂರು ವಿಶ್ವವಿದ್ಯಾನಿಲಯವು ಅಂಥವರ ಬಾಯನ್ನೇ ಮುಚ್ಚಲು ಹೊರಟು, ನಮ್ಮ ದೇಶವು ಒಪ್ಪಿಕೊಂಡಿರುವ ಸಂವಿಧಾನ, ಸಾಂಸ್ಕೃತಿಕ, ನೈತಿಕ ನೇಮಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಮಂಗಳೂರು ವಿವಿ ಈ ವಿಷಯದಲ್ಲಿ ತಪ್ಪೆಸಗುತ್ತಿದೆ ಎಂದು ಬಲವಾಗಿ ಹೇಳಬೇಕಾಗಿದೆ. ಈ ಪ್ರಕರಣ ಭಾರತದ ಪ್ರಜಾತಾಂತ್ರಿಕ ಹಕ್ಕನ್ನು ಕುರಿತಂತೆ, ಅದರಲ್ಲೂ ಉನ್ನತ ಶೈಕ್ಷಣಿಕ ಸಂಸ್ಥೆಗಳ ಅಭಿಪ್ರಾಯ, ಚಿಂತನಾಸ್ವಾಯತ್ತತೆ ಕುರಿತಂತೆ ಅನೇಕ ಮೂಲಭೂತ ಪ್ರಶ್ನೆಗಳಿಗೆ ಎಡೆ ಮಾಡಿಕೊಡುತ್ತದೆ.

ಮೊದಲನೆಯದಾಗಿ, ಮಾನವಹಕ್ಕುಗಳನ್ನು ಕುರಿತಂತೆ ವಿಶ್ವಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಸಮುದಾಯವು ಮಾಡಿಕೊಂಡ ಒಪ್ಪಂದಗಳಿಗೆ ನಮ್ಮ ದೇಶವು ಸಹಿಮಾಡಿದೆ ಎನ್ನುವುದನ್ನು ನೆನೆಯಬೇಕು. ಈ ಒಪ್ಪಂದಗಳ ಪ್ರಕಾರ ತಮಗೆ ಸರಿಕಂಡ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಅಭಿಪ್ರಾಯಗಳನ್ನು ಹೊಂದಿರಲು, ಅವುಗಳನ್ನು ವ್ಯಕ್ತಪಡಿಸಲು ಮತ್ತು ಅವುಗಳಂತೆ ಬಾಳಲು ಎಲ್ಲರಿಗೂ ಹಕ್ಕಿದೆ.

ಎರಡನೆಯದು, ಒಂದು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಇರುವ ಕರ್ತವ್ಯ ಮತ್ತು ಜವಾಬ್ದಾರಿ ಕುರಿತದ್ದು. ಮುಕ್ತ ಚಿಂತನೆಯನ್ನು ಬೆಳೆಸುವ, ಭಿನ್ನಾಭಿಪ್ರಾಯಗಳೊಂದಿಗೇ ಬೌದ್ಧಿಕವಾಗಿ ಬೆಳೆಯುವ, ದೇಶದ ಸಂವಿಧಾನ ನೀಡಿರುವ ಹಕ್ಕುಗಳ ಬಗ್ಗೆ ಯುವ ಪೀಳಿಗೆಯನ್ನು ಎಚ್ಚರಿಸುವ ಮತ್ತು ಈ ಹಿನ್ನೆಲೆಯಲ್ಲಿ ಸಮಾಜದ ಮತ್ತು ಪ್ರಭುತ್ವದ ದಮನಕಾರಿ ನೀತಿ ಹಾಗೂ ಆಚರಣೆಗಳನ್ನು ಪ್ರಶ್ನಿಸುವ ಭೂಮಿಕೆಯನ್ನು ಸೃಷ್ಟಿಮಾಡಬೇಕಾದ್ದು ಉನ್ನತ ಶೈಕ್ಷಣಿಕ ಸಂಸ್ಥೆಗಳ ಪ್ರಾಥಮಿಕ ಕರ್ತವ್ಯ. ಇಂಥ ಕ್ರಿಯಾಶೀಲತೆ ಮಾತ್ರ ಒಂದು ಉನ್ನತ ವಿದ್ಯಾ ಸಂಸ್ಥೆಯನ್ನು ಜೀವಂತವಾಗಿಡಲು ಸಾಧ್ಯ. ಆದರೆ ಮಂಗಳೂರು ವಿಶ್ವವಿದ್ಯಾನಿಲಯದ ವರ್ತನೆ ಈ ಉದ್ದೇಶವನ್ನು ಕಡೆಗಣಿಸಿದೆ; ತನ್ನ ಗುರಿ ಕೇವಲ ಉದ್ಯೋಗಿಗಳನ್ನು ತಯಾರು ಮಾಡುವುದು ಮಾತ್ರ ಎಂದು ಮಂಗಳೂರು ವಿವಿ ಅಂದುಕೊಂಡಂತಿದೆ.

ಮೂರನೆಯದು, ಅಧ್ಯಾಪಕರೂ ಸೇರಿದಂತೆ ಎಲ್ಲ ಸರ್ಕಾರಿ ನೌಕರರಿಗೆ ಇರುವ ಹಕ್ಕುಗಳನ್ನು ಕುರಿತದ್ದು. ತನ್ನಿಂದ ಸಂಬಳ ಪಡೆಯುವವರು ತನ್ನ ವಿರುದ್ಧ ಮಾತನಾಡಕೂಡದು ಎಂಬುದು ಒಂದು ಊಳಿಗಮಾನ್ಯ, ವಸಾಹತುಶಾಹಿ ಧೋರಣೆಯಲ್ಲದೆ ಮತ್ತೇನಲ್ಲ. ಇಂದು ಕೂಡ ನೀತಿಸಂಹಿತೆಯ ಹೆಸರಿನಲ್ಲಿ ಇಂಥ ಕಂದಾಚಾರದ ಕಾನೂನುಗಳನ್ನು ಪಾಲಿಸಿಕೊಂಡು ಬರುವುದು ಆಧುನಿಕ ಪ್ರಜಾತಾಂತ್ರಿಕ ವ್ಯವಸ್ಥೆಯ ಲಕ್ಷಣವಲ್ಲ. ಇದರಿಂದ ಪ್ರಜಾಪ್ರಭುತ್ವದ ಹೆಸರಿನಲ್ಲಿ ಫ್ಯಾಶಿಷ್ಟ್ ಆಳ್ವಿಕೆಯನ್ನು ನಡೆಸುವ ಪಕ್ಷಗಳಿಗೆ ನೆರವಾಗಬಹುದೇ ವಿನಃ, ನಿಜವಾದ ಪ್ರಜಾತಾಂತ್ರಿಕತೆಗೆ ಪೆಟ್ಟು ಬೀಳುತ್ತದೆ. ಸೋಮಯಾಜಿಯವರ ಪ್ರಕರಣ ಸಾಬೀತು ಮಾಡುವುದು ಇದನ್ನೇ. ಈ ಸಂಹಿತೆಗಳನ್ನು ಅಕ್ಷರಶಃ ಪಾಲಿಸಲು ಹೊರಟರೆ, ನಮ್ಮ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಲ್ಲಿನ ಮಾನವಿಕ ವಿಭಾಗಗಳನ್ನೇ ಮುಚ್ಚಬೇಕಾಗುತ್ತದೆ. ಈ ಸಂಹಿತೆಯನ್ನು ಉಲ್ಲಂಘಿಸದೆ ಯಾವ ಪ್ರಜ್ಞಾವಂತ ಅಧ್ಯಾಪಕರೂ ಸಾಹಿತ್ಯವನ್ನಾಗಲೀ, ಸಮಾಜ ಶಾಸ್ತ್ರವನ್ನಾಗಲೀ ಕಲಿಸಲು ಸಾಧ್ಯವಿಲ್ಲ. ನಮ್ಮ ಪ್ರಭುತ್ವದ ಆಡಳಿತ ನೀತಿ, ಧೋರಣೆಗಳು ಯಾವ ಹೀನ ಸ್ಥಿತಿಗೆ ಇಳಿದಿವೆ ಎಂದರೆ, ಅರ್ಥಶಾಸ್ತ್ರದ ಪ್ರಾಥಮಿಕ ಪಾಠಗಳು ಕೂಡ ವ್ಯವಸ್ಥೆಯ ವಿರುದ್ಧದ ಚಿಂತನೆಯ ಹಾಗೆ ಭಾಸವಾಗಲು ಸಾಧ್ಯವಿದೆ.

ಮೇಲಿನ ಮೂರೂ ಅಂಶಗಳು ವಿಶ್ವವಿದ್ಯಾನಿಲಯಗಳ ಸಂರಚನೆ, ಉದ್ದಿಶ್ಯ, ಸಮಾಜದಲ್ಲಿ ಅವುಗಳಿಗೆ ಇರಬೇಕಾದ ಸ್ಥಾನ, ಅಧ್ಯಾಪಕರ ಬೌದ್ಧಿಕ ಸ್ವಾತಂತ್ರ್ಯ ಇತ್ಯಾದಿ ವಿಚಾರಗಳನ್ನು ಕುರಿತಂತೆ ಮರುಚಿಂತನೆ ನಡೆಸುವ ಅಗತ್ಯವನ್ನು ಎತ್ತಿ ತೋರುತ್ತವೆ. ಪಟ್ಟಾಭಿಯವರ ಮೇಲಿನ ದೂರು ಕೇವಲ ಒಂದು ವ್ಯಕ್ತಿಗತ ಅಭಿಪ್ರಾಯಕ್ಕೆ ಸಂಬಂಧಪಟ್ಟದ್ದಲ್ಲ ಎಂಬುದು ಮುಖ್ಯ. ಅದ್ದರಿಂದ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ನಂಬಿಕೆಯಿರುವ, ಅಭಿಪ್ರಾಯ ಸ್ವಾತಂತ್ರ್ಯವನ್ನು ಒಪ್ಪುವ, ಕಾಲೇಜು-ವಿಶ್ವವಿದ್ಯಾನಿಲಯದ ಅಧ್ಯಾಪಕರ ಮುಕ್ತ ಚಿಂತನೆಯ ಹಕ್ಕನ್ನು ಎತ್ತಿಹಿಡಿಯುವ ನಾವೆಲ್ಲರೂ, ಮಂಗಳೂರು ವಿಶ್ವವಿದ್ಯಾನಿಲಯದ ಈ ಕ್ರಮವನ್ನು ಖಂಡಿಸುತ್ತೇವೆ ಮತ್ತು ಶ್ರೀ ಪಟ್ಟಾಭಿರಾಮ ಸೋಮಯಾಜಿಯವರ ಅಭಿಪ್ರಾಯ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತೇವೆ. ಹಾಗೆಯೇ ಸಂಘಪರಿವಾರದ ದುರುದ್ದೇಶ ಪೂರಿತ ದೂರುಗಳನ್ನು ತಾವು ಪುರಸ್ಕರಿಸಬಾರದು ಎಂದು ಮನವಿ ಮಾಡುತ್ತೇವೆ.

ಇತಿ ತಮ್ಮ ವಿಶ್ವಾಸಿಗಳು,
ನಮಸ್ಕಾರಗಳೊಂದಿಗೆ,

ಪ್ರೊ. ನಗರಿ ಬಾಬಯ್ಯ
ಪ್ರೊ. ವಿ.ಎಸ್. ಶ್ರೀಧರ
ಪ್ರೊ. ನಗರಗೆರೆ ರಮೇಶ್
ಪ್ರೊ. ಜಿ.ಕೆ. ರಾಮಸ್ವಾಮಿ
ಪ್ರಜಾತಾಂತ್ರಿಕ ಜನರ ವೇದಿಕೆಯ ಪರವಾಗಿ.

ಜಾಗತೀಕರಣ ಮತ್ತು ಆಧುನಿಕ ಕನ್ನಡ ಪರಂಪರೆ

ಗೌಸುದ್ದೀನ್

ಇಪ್ಪತ್ತೊಂದನೆಯ ಶತಮಾನದ ಪ್ರಾರಂಭದಲ್ಲಿ ಜಾಗತೀಕರಣ ಪ್ರಭಾವದಿಂದ ಅಧುನಿಕತೆಯು ಇಂದು ನಮ್ಮ ಬದುಕಿನ ಎಲ್ಲಾ ಭಾಗಗಳನ್ನು ಆಕ್ರಮಸಿಕೊಂಡಿದೆ. ಜಾಗತೀಕರಣದ ಈ ಸಂಕ್ರಮಣದ ಸ್ಥಿತಿಯಲ್ಲಿ ಕನ್ನಡ ಪರಿಕಲ್ಪನೆಯನ್ನು ಭಾಷೆ, ಸಾಹಿತ್ಯ, ಬದುಕು ಮತ್ತು ಅದರ ಆಧುನಿಕ ಸನ್ನಿವೇಶಗಳಲ್ಲಿ ತಿಳಿದುಕೊಳ್ಳುವ ಮತ್ತೇ ಕಟ್ಟುವ ಕೆಲಸವನ್ನು ವಿದ್ವಾಂಸರು ಇಂದು ಜಾಗತೀಕರಣ ಮತ್ತು ಸಾಹಿತ್ಯದ ನೆಪದಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಹೊಸ ಹೊಸ ಆಲೋಚನೆಗಳು, ಹೊಸ ಸಂವಾದ ಮತ್ತು ಸಂದರ್ಭಗಳನ್ನು ರೂಪಿಸಬೇಕಾಗಿದೆ. ಆಧುನಿಕತೆಯು ಸೃಷ್ಟಿಸುವ ಭ್ರಮಾಲೋಕದಲ್ಲಿ ನಾವಿಂದು ತಿರುಗಾಡುವುದರ ಮೂಲಕ ಕನ್ನಡ ಸಾಹಿತ್ಯ ಬೆಳಸಬೇಕಾಗಿದೆ.

ಜಾಗತೀಕರಣ ಸಂದರ್ಭದಲ್ಲಿ ಮಾಹಿತಿ ತಂತ್ರಜ್ಞಾನವೂ ಪ್ರಮುಖ ಅಸ್ತ್ರವಾಗಿ ಬಳಕೆಯಾಗುತ್ತಿದೆ. ಇದರ ಸದುಪಯೋಗವನ್ನು ಪಡೆದುಕೊಂಡು. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಜಗತ್ತಿನ ತುಂಬೆಲ್ಲಾ ಹರಡುವ ಕೆಲಸ ಈಗ ಸುಲಭ ಮಾರ್ಗವಾಗಿ ತೋರುತ್ತದೆ.

ಜಾಗತೀಕರಣದ ಆಧುನಿಕ ಪರಂಪರೆ ಇಲ್ಲಿಂದಲೇ ಪ್ರಾರಂಭವಾಯಿತೆಂದು ಹೇಳುವಂತಿಲ್ಲ. ಪಂಪರನ್ನರ ಕಾಲದಿಂದಲೂ ಜಾಗತೀಕರಣ ನಡೆಯುತ್ತಲೇ ಇದೆ. ಸಂಸ್ಕೃತದ ಜಾಗತೀಕರಣ ಕನ್ನಡ ಸಾಹಿತ್ಯದ ಮೇಲೆ ಆಗದೇ ಇರಲಿಲ್ಲ. ಪಂಪನ ದೇಶಿಯತೆಯೊಂದಿಗೆ ಸಂಸ್ಕೃತದ ದಟ್ಟಪ್ರೇಮ ಅದರಲ್ಲಿ ಸೇರುವುದರ ಮೂಲಕ ಚಂಪೂಕಾವ್ಯದಲ್ಲಿ ಸಾಹಿತ್ಯವನ್ನು ಬರೆದು ದೊಡ್ಡ ಕವಿ ಎನಿಸಿಕೊಂಡು ಬಂದು ಪರಂಪರೆ ಇದೆ ಎನ್ನುವ ಮಾಹಿತಿಯನ್ನು ತಂತ್ರಾಶಗಳ ಮುಖಾಂತರ ಹಳೆಯ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವಲ್ಲಿ ಸಹಾಯಮಾಡುತ್ತದೆ. ಜಾಗತೀಕರಣದ ಸಂದರ್ಭದಲ್ಲಿ ಕನ್ನಡ ಭಾಷೆಯ ಪುಸ್ತಕಗಳನ್ನು ಬೇರೆ ಬೇರೆ ಭಾಷೆಗಳಲ್ಲಿ ಅನುವಾದ ಮಾಡುವುದರಿಂದ ನಮ್ಮಲ್ಲಿನ ಪ್ರತಿಭೆಯನ್ನು ಜಾಗತಿಕ ಮಟ್ಟದಲ್ಲಿ ಎತ್ತಿ ತೋರಿಸುವಂತಾಗುತ್ತದೆ. ಅದರ ಜೊತೆಗೆ ವಿಶ್ವದೆಲ್ಲೆಡೆ ಕನ್ನಡ ಬರಹಗಾರರಿಗೆ ಉತ್ತೇಜನ ನೀಡುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಸಾಹಿತ್ಯಕೃತಿಗಳು ಹೊರಗೆರಲು ಸಾಧ್ಯ.

ಪರಂಪರೆಯ ತಿಕ್ಕಾಟದೊಂದಿಗೆ ಜಾಗತೀಕರಣದ ಕ್ರೀಯೆ ನಡೆದೇ ಇರುತ್ತದೆ. ಇತ್ತೀಚಿನ ದಿನಗಳಲ್ಲಿ ಇದು ಸಾಹಿತ್ಯ, ಸಂಸ್ಕೃತಿಯೊಂದಿಗೆ ಹೊರತಾಗಿಲ್ಲವೆಂಬ ಮಾತು ಅಷ್ಟೇ ಸತ್ಯ, ಏಕೆಂದರೆ ಮನುಷ್ಯನ ಬದುಕಿನ ಬದಲಾವಣೆಯೇ ಜಾಗತೀಕರಣ.

ಜಾಗತೀಕರಣದ ಮತ್ತು ಆಧುನೀಕತೆಯನ್ನು ಕುರಿತಾದ ಸಂದರ್ಭದಲ್ಲಿ ಸಮೋಹ ಮಾಧ್ಯಮದ ಪಾತ್ರ ಅತ್ಯಂತ ಮುಖ್ಯವಾಗಿದೆ. ಮಹಿಳೆಯಂತೂ ಮಾರುಕಟ್ಟೆಯ ಸರಕಾಗಿದ್ದಾಳೆ. ಜಗತ್ತಿನ ಎಲ್ಲಾ ದೇಶಗಳು ತಮ್ಮ ತಮ್ಮ ವಸ್ತುಗಳನ್ನು ಮಾರಟ ಮಾಡಲು ಮಹಿಳೆಯನ್ನೇ ಪ್ರಮುಖ ಆಕರ್ಷಣೆಯಾಗಿ ಜಾಹಿರಾತಿನ ಒಂದು ಭಾಗವಾಗುವಂತೆ ಬಳಸಿಕೊಳ್ಳುತ್ತವೆ ಇದು ಜಾಗತೀಕರಣದ ಆಧುನಿಕತೆ ಎಂದೇ ಭಾವಿಸಬೇಕಾಗಿದೆ. ದೃಶ್ಯ ಮಾಧ್ಯಮಗಳಂತೂ ಹೆಚ್ಚುಹೆಚ್ಚು ಮಹಿಳೆಯ ಇಂಚು ದೇಹದ ಭಾಗಗಳನ್ನು ಪ್ರದರ್ಶನ ಮಾಡುವುದರಿಂದ ವಹಿವಾಟು ಹೆಚ್ಚಾಗುತ್ತದೆಂಬ ಭ್ರಮಾಲೋಕದಲ್ಲಿ ಸ್ತ್ರೀಸಂವೇಧನೆಯನ್ನೇ ಮರೆತು ಸಂಸ್ಕೃತಿ ನಾಶವಾಗುವಂತಹ ನೈತಿಕ ಅಧಃಪತನವನ್ನು ತಂದುಕೊಡುವಷ್ಟರ ಮಟ್ಟಿಗೆ ಏಕತಾನತೆಯಿಂದ ಅವು ನಮ್ಮನ್ನು ಆಕರ್ಷಿಸಿವೆ.

ನಮ್ಮ ಮನೆಯ ಕುರ್ಚಿ, ಮೇಜು, ಡೈನಿಂಗ್ ಟೇಬಲ್, ಟಿವಿ, ಫ್ರೀಜು ಕುಟುಂಬದ ಮನಿವಾರ್ಯತೆ ಎನ್ನುವಷ್ಟರ ಮಟ್ಟಿಗೆ ನಮ್ಮ ಮೈಮನಸ್ಸನ್ನು ಆವರಿಸಿಕೊಂಡಿವೆ. ಇದು ಅಧುನಿಕ ಪರಂಪರೆಯ ಮೇಲೆ ಜಾಗತೀಕರಣ ಪ್ರಭಾವವಲ್ಲದೆ ಮತ್ತೇನೂ ಅಲ್ಲ. ಇದರಿಂದ ಮನುಷ್ಯನ ಸ್ವಾರ್ಥ, ಭೌತಿಕ ಲಾಭಗಳೇ ಹೆಚ್ಚು ಎನ್ನೂವಷ್ಟರ ಮಟ್ಟಿಗೆ ಚಿಂತನೆಗೆ ಎಡೆ ಮಾಡಿಕೊಟ್ಟಿವೆ.

ಸಾಹಿತ್ಯದ ಪರಂಪರೆಯಲ್ಲಿ ಜಾಗತೀಕರಣದ ಪಾತ್ರ ಮಹತ್ವ ಟೈಟಾನಿಕ ವರ್ರಸ್ಸ್ ಬರೆದ ರಶ್ದಿ ಮಹಾಚೈತ್ರ ಬರೆದ. ಎಚ್. ಎಸ್. ಶಿವಪ್ರಕಾಶ, ಲಜ್ಜಾಕಾದಂಬರಿ ಬರೆದ ತಸ್ಲಿಮಾ ನಸ್ರೀನ್. ಬಸವ ವಚನ ದಿಪ್ತಿ ಬರೆದ ಮಾತೆ ಮಹಾದೇವಿಯಂತಹ ಲೇಖಕರು ಒಂದೇ ರಾತ್ರಿಯಲ್ಲಿಯ ಜನಬಾಯಿಯ ಮಾತಾದರು ಏಕೆಂದರೆ ಸಾಹಿತ್ಯ ಕೃತಿಯನ್ನು ಬರೆಯುವದರ ಮೂಲಕ ಅವರ ವಿಮರ್ಶೆ ಎಷ್ಟರಮಟ್ಟಿಗೆ ಸತ್ಯವೋ ತಿಳಿಯದು. ಆದರೆ ಜಾಗತೀಕರಣ ಪ್ರವಾಹದ ಒಳಹರಿವಿನಲ್ಲಿ ಅವರು ಕೊಚ್ಚಿ ಹೋದರು ಅವರು ಬರೆದ ಸಾಹಿತ್ಯವಾದರೂ ಏನು ಎನ್ನುವಷ್ಟರ ಮಟ್ಟಿಗೆ ಬೆಳೆದುನಿಂತರು ಸ್ವಾರ್ಥ ಮತ್ತು ಭೌತಿಕ ಲಾಭವನ್ನು ಗಳಿಸಲು ಬಳಿಸಿಕೊಂಡ ಮಾರ್ಗ ವೆಂದರೆ ತಪ್ಪಾಗಲಿಕ್ಕಿಲ್ಲ.

ನಾವಿಂದು ಪ್ರತಿಯೊಬ್ಬರು ಆಧುನಿಕತೆಯ ಆಕರ್ಷಣೆ ಒಳಗಾಗದೆ ಅದರ ಅಂತರಾಳದ ಕರಾಳತೆಯ ದರ್ಶನವನ್ನು ಮಾಡಬೇಕಾಗಿದೆ.

ಎಲ್ಲಿಯವರೆಗೆ ಮನುಷ್ಯ ಹಣದ ಆಸೆ ಸ್ವಾರ್ಥ ಸಾಧನೆ ಇವುಗಳ ಹಿಂದೆ ಬೀಳುತ್ತಾನೋ ಅಲ್ಲಿಯವರೆಗೆ ಜಾಗತೀಕರಣದ ಸಂದರ್ಭದಲ್ಲಿ ಅವನು ನೆಮ್ಮದಿಯ ಬದುಕನ್ನು ಬಾಳಲಾರ. ಬದುಕಿನ ಪ್ರತಿಕ್ಷಣದಲ್ಲಿಯೂ ಅಧುನಿಕವನ್ನು ಬಯಸುವಾಗ ಕೆಲವೊಂದು ಸಂದರ್ಭದಲ್ಲಿ ಆತನ ಕೈಗೆಟುಕದೇ ಇರುವ ಎಷ್ಟೋ ವಸ್ತುಗಳನ್ನು ಪಡೆಯಲು ತವಕಿಸುತ್ತಾನೆ ಪಾಶ್ಚತ್ಯ ಪರಂಪರೆಯನ್ನು ಮೈಗೂಡಿಸಿಕೊಳ್ಳುತ್ತಾನೆ.

ಇಂದಿನ ಜಾಗತೀಕರಣದ ಯುಗದಲ್ಲಿ ದೇಶದೇಶಗಳಿಂದ ವ್ಯಾಪಾರ ವ್ಯವಹಾರದ ಅನುಸಂದಾನ ಮಾರ್ಗದಿಂದ ಸರಹದ್ದುಗಳು

ಸಾಹಿತ್ಯದ ಪರಂಪರೆಯಲ್ಲಿ ಜಾಗತೀಕರಣದ ಪಾತ್ರ ಮಹತ್ವ. ಟೈಟಾನಿಕ ವರ್ರಸ್ಸ್ ಬರೆದ ರಶ್ದಿ ಮಹಾ ಚೈತ್ರ ಬರೆದ. ಎಚ್. ಎಸ್. ಶಿವಪ್ರಕಾಶ, ಲಜ್ಜಾಕಾದಂಬರಿ ಬರೆದ ತಸ್ಲಿಮಾ ನಸ್ರೀನ್. ಬಸವ ವಚನ ದಿಪ್ತಿ ಬರೆದ ಮಾತೆ ಮಹಾದೇವಿಯಂತಹ ಲೇಖಕರು ಒಂದೇ ರಾತ್ರಿಯಲ್ಲಿಯ ಜನಬಾಯಿಯ ಮಾತಾದರು ಏಕೆಂದರೆ ಸಾಹಿತ್ಯ ಕೃತಿಯನ್ನು ಬರೆಯುವದರ ಮೂಲಕ ಅವರ ವಿಮರ್ಶೆ ಎಷ್ಟರಮಟ್ಟಿಗೆ ಸತ್ಯವೋ ತಿಳಿಯದು. ಆದರೆ ಜಾಗತೀಕರಣ ಪ್ರವಾಹದ ಒಳಹರಿವಿನಲ್ಲಿ ಅವರು ಕೊಚ್ಚಿ ಹೋದರು ಅವರು ಬರೆದ ಸಾಹಿತ್ಯವಾದರೂ ಏನು ಎನ್ನುವಷ್ಟರ ಮಟ್ಟಿಗೆ ಬೆಳೆದುನಿಂತರು ಸ್ವಾರ್ಥ ಮತ್ತು ಭೌತಿಕ ಲಾಭವನ್ನು ಗಳಿಸಲು ಬಳಿಸಿಕೊಂಡ ಮಾರ್ಗವೆಂದರೆ ತಪ್ಪಾಗಲಿಕ್ಕಿಲ್ಲ.

ಮಾಯವಾಗುತ್ತಿವೆ. ಮುಕ್ತ ವ್ಯಾಪಾರ ವ್ಯವಸ್ಥೆ ಅದು ಸಾಹಿತ್ಯಿಕವಾಗಿ ಸಾಂಸ್ಕೃತಿಕವಾಗಿ ನಡೆದೆಯಿದೆ. ಕನ್ನಡಿಗರ ಮುಂದೆ ಇಂದು ನೂರಾರು ಸವಾಲುಗಳನ್ನು ಇಂದು ಸೃಷ್ಠಿ ಮಾಡಿದೆ. ಕಾಲಾನುಕಾಲಕ್ಕೆ ಹೊಸ ಅವಿಷ್ಕಾರದ ಜೊತೆಗೆ ಹೊಸ ಹೊಸ ಸಮಸ್ಯೆ ಎದುರಿಸುವುದನ್ನು ಕಾಣುತ್ತೇವೆ. ಇದು ಅನಿವಾರ್ಯ ಪ್ರಕ್ರಿಯೇ ಎಲ್ಲಾ ಕಾಲಕ್ಕೂ ಎಲ್ಲಾ ಸಂಸ್ಕೃತಿ, ಸಾಹಿತ್ಯ, ಬದುಕಿನೊಂದಿಗೆ ಬೆಳೆದು ಬಂದಿದೆ. ಇತ್ತೀಚೆಗಷ್ಟೆ ನಾವಿಂದು ಜಾಗತೀಕರಣ ವೆಂಬ ಪದಪ್ರಯೋಗ ಮಾಡುತ್ತಿದ್ದೇವಷ್ಟೇ.

ಕಾವ್ಯದಲ್ಲಿ ಕಾದಂಬರಿಯಲ್ಲಿ ನಾಟಕದಲ್ಲಿ, ಆಹಾರ ಪಾನೀಯಗಳಲ್ಲಿ, ಕಥೆಗಳಲ್ಲಿ, ಕೃಷಿತಾಂತ್ರಿಕತೆಗಳಲ್ಲಿ, ಬದಲಾವಣೆ ಪಾತ್ರ ಸನ್ನಿವೇಶ, ಆಶಯಗಳು, ಊಟ, ಉಡಗೆ, ತೊಡಿಗೆಯ ಬದಲಾವಣೆಗಳು, ರಸಗೊಬ್ಬರ ಬೆಳೆಯ ತಾಂತ್ರಿಕತೆಗಳ ಮೇಲೆ ಎಲ್ಲಿಲ್ಲದ ಬದಲಾವಣೆಯನ್ನು ಜಾಗತೀಕರಣದ ಪ್ರಭಾವವೆಂದು ಕರೆಯದೇ ಮತ್ತೇನೆಂದು ಕರೆಯಲು ಸಾಧ್ಯ. ಇಂಥ ನವೋದಯದ ಹರವು ಇಟ್ಟುಕೊಂಡೇ ದೇವನೂರು ಮಹಾದೇವ, ಬರಗೂರು ರಾಮಚಂದ್ರಪ್ಪನವರ ಸಾಹಿತ್ಯ ಜಾಗತೀಕರಣದ ಪರಂಪರೆಯನ್ನು ಸೋಂಕದೆ ಬಿಡಲಿಲ್ಲ.

ಇವರಲ್ಲಿ ಸಾಮಾಜಿಕ ಕಳಕಳಿ ವೈಚಾರಿಕತೆಯ ಪ್ರಖರತೆಯನ್ನು ಕಾಣುತ್ತೇವೆ. ಜಾಗತೀಕರಣ ಸಂದರ್ಭದಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನು ಮೇಳವಿಸಿ ಅನುವಾದ ಕಲೆ, ಸಾಹಿತ್ಯಗಳ ಮೂಲಕ ಜಾನಪದ ಪರಿಕರಗಳ ಮೂಲಕ ವಿಶ್ವದಲ್ಲೆಡೆಯಲ್ಲಿ ಕನ್ನಡ ಭಾಷೆ ಸಾಹಿತ್ಯವನ್ನು ನಾವಿಂದು ಬೆಳೆಸಬೇಕಾಗಿದೆ.

ಜಾಗತೀಕರಣದ ಅನುಕೂಲಗಳನ್ನು ಕುರಿತಾಗಿ ಮಾತನಾಡುವಾಗ ಬಂಡವಾಳದ ಹರಿವು, ಉದ್ಯೋಗದ ಅವಕಾಶ, ಉನ್ನತಗುಣಮಟ್ಟ ಮತ್ತು ತಾಂತ್ರಿಕತೆ, ಸಾಹಿತ್ಯ, ಸಂಸ್ಕೃತಿ, ಎಲ್ಲವನ್ನೂ ಒಳಗೊಂಡ ವಿಸ್ತ್ರತ ಮಾರುಕಟ್ಟೆಯನ್ನು ಪಡೆದಿರುತ್ತದೆ. ಸಾಫ್ಟವೇರ್ ಕಂಪನಿಗಳಿಂದ ನಮ್ಮ ಎಷ್ಟೂ ನಿರುದ್ಯೋಗಿ ಯುವಕರು ಕೆಲಸ ಪಡೆದು ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ.

ಎಷ್ಟೂ ಜನ ಇಂಜಿನೀಯರುಗಳು ಇಂದು ಹೊರ ದೇಶಗಳಲ್ಲಿ ಉಪಜೀವನ ಮಾಡುತ್ತಿದ್ದಾರೆ. ಅನಾನುಕೂಲತೆಗಳನ್ನು ಹೇಳುವಾಗ ಸಣ್ಣ ಉದ್ದಿಮೆಗಳು ನಾಶವಾಗಬಹುದು. ಅನ್ಯ ಭಾಷಾಜನಗಳು ಒಲಸೆ ಬರಬಹುದು. ಸಂಸ್ಕೃತಿ ನಾಶವಾಗಬಹುದು ಎಂಬಿತ್ಯಾದಿ ಆಲೋಚನೆಗಳು ಇಂದು ಅಪ್ರಸ್ತುತವೆನಿಸುತ್ತವೆ.

ಸಣ್ಣ ಉದ್ದಿಮೆಗಳಿಂದ ಎಷ್ಟು ಜನ ಬದುಕಲು ಸಾಧ್ಯ? ಅನ್ಯಭಾಷಾಜನರು ನಮ್ಮಲ್ಲಿಗೆ ಬಂದರೆ ನಮ್ಮವರು ಬೇರೆಕಡೆಗೆ ಹೋಗುವುದಿಲ್ಲವೆ? ಸಂಸ್ಕೃತಿ ನಾಶವಾಗುತ್ತದೆ ಎಂದು ಹೇಳುವವುದು ಸತ್ಯವಲ್ಲದ ಮಾತು.

ಜಾಗತೀಕರಣ ಅಂಶಗಳು ಸದುಪಯೋಗ ಪಡೆದುಕೊಂಡು ಅಧುನಿಕ ಬದುಕಿನೊಂದಿಗೆ ಪರಂಪರೆಯೊಂದಿಗೆ ಬಾಳಿಬದುಕುವುದೇ ನಾಳಿನ ಚಿಂತೆ.

ಜಾಗತೀಕರಣವೆಂದೂ ಯಾರನ್ನು ನಾಶಮಾಡದು. ಆದರೆ ಸಮಾಜದಲ್ಲಿ ನೈತಿಕತೆಯನ್ನು ತಾನೇ ಕಂಡುಕೊಳ್ಳುವುದರಿಂದ ಬದುಕು ಹಸನಾಗುತ್ತದೆ.

ಕನ್ನಡ ಕ್ಷಾತ್ರಪರಂಪರೆ ಯಾವ ಕಾಲಕ್ಕೂ ಮೊಂಡಾಗಲಾರದು ಆಧುನಿಕ ಬದುಕಿನೊಂದಿಗೆ ತೆರೆದುಕೊಳ್ಳುತ್ತದೆ, ವಿಶ್ವಸ್ಥವಾಗುತ್ತದೆ. □

ರಣಹದ್ದುಗಳು



ಹುಟ್ಟುತ್ತಲೇ ಕಟ್ಟಿದ್ದರು
ಜಾತಿಯ ಪಟ್ಟವ
ಹಸುಗೂಸಿನ ಎದೆಯೊಳು
ವಿಷಬೀಜವ ಬಿತ್ತಿದರು

ಬಾಲ್ಯದ ಕನಸುಗಳು ಕರಗಿ
ಕೈಗಳಾದವು ಇನ್ನೊಬ್ಬರ ಜೀತದಾಳುಗಳು
ಕಾಲಿಗೆ ಬಿದ್ದವು
ಕಬ್ಬಿಣದ ಸರಪಳಿಗಳು

ದಣಿದ ದೇಹವಾಯಿತು
ಮತ್ತೊಬ್ಬರ ಸ್ವತ್ತು
ಕಣ್ಣಾಲಿಗಳು ಬತ್ತಿ ಹೋದವು
ಹಸಿವಿನ ಬೇಗೆಗೆ ಬೆಂದು

ನೆತ್ತರಾಯಿತು ಬೆವರಿನ ಹನಿಗಳು
ಮನಸಿನ ಮೇಲೆ ಮೂಡಿವೆ
ಮಾಸದ ಗಾಯಗಳು

ಸತ್ತು ಹೋದರು ಜೀವದ ದನಿಯ
ಕಿತ್ತು ತಿನ್ನಲು ಕಾದಿವೆ
ಜಾತಿಯ ರಣಹದ್ದುಗಳು.....

❍ ರವಿ ಕುಮಾರ್ .ಪಿ

ಸೆನ್ಸಸ್-೨೦೧೦ ಜನಗಣತಿಯೋ? ಬೇಹುಗಾರಿಕೆಯೋ?!

ಶಿವಸುಂದರ್

ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಇದು ಏಳನೇ ಬೃಹತ್ ಜನಗಣತಿ. ಈ ಜನಗಣತಿಯನ್ನು ಇನ್ನೂ ಜನಸಮುದಾಯಗಳ ಪರವಾಗಿರಬೇಕೆಂದು ಆಗ್ರಹಿಸಿ ಅದರಲ್ಲಿ ಜಾತಿ ಕಾಲಂ ಸೇರಿಸಬೇಕೆಂಬ, ವೀರ ಶೈವ ಧರ್ಮವನ್ನು ಪ್ರತ್ಯೇಕ ಧರ್ಮವಾಗಿ ನೋಂದಣಿ ಮಾಡಬೇಕೆಂಬ ಹಲವು ಆಗ್ರಹಗಳು ಕೇಳಿಬರುತ್ತಿವೆ. ಆದರೆ ಜನರು ಈ ರೀತಿ ಜನಗಣತಿಯನ್ನು ಹೇಗೆ ಇನ್ನಷ್ಟು ಜನರ ಪರ ಮಾಡಬೇಕೆಂಬ ಯೋಚನೆಯಲ್ಲಿದ್ದರೆ ಸರ್ಕಾರ ಈ ಬಾರಿಯ ಜನಗಣತಿಯನ್ನು ಹೇಗೆ ಭಾರತವನ್ನು ಪ್ರಜಾಪ್ರಭುತ್ವದ ಬದಲಿಗೆ ಪೊಲೀಸ್ ಪ್ರಭುತ್ವವನ್ನಾಗಿ ಮಾಡಬಹುದೆಂಬ ಯೋಚನೆಯಲ್ಲಿದೆ. ಜನರಿಗೆ ಗೊತ್ತಿಲ್ಲದಂತೆ ಈ ಜನಗಣತಿಯನ್ನು ಜನರ ಮೇಲೆ ಬೇಹುಗಾರಿಕೆ ನಡೆಸಲುಬೇಕಾದ ಮಾಹಿತಿಯನ್ನು ಪಡೆದುಕೊಳ್ಳಲು ಬಳಸಿಕೊಳ್ಳುತ್ತಿದೆ.

ಭಾರತದ ಇತಿಹಾದದಲ್ಲೇ ಏಕೆ ಮನುಕುಲದ ಇತಿಹಾಸದಲ್ಲೇ ಅತಿದೊಡ್ಡದಾದ ಜನಗಣತಿ ಕಾರ್ಯಾಚರಣೆಯು ಇದೇ ತಿಂಗಳಿಂದ ಭಾರತದಲ್ಲಿ ಪ್ರಾರಂಭವಾಗಿದೆ. ಸಾಮಾನ್ಯವಾಗಿ ಜನಗಣತಿಗಳು ತಮ್ಮ ದೇಶದಲ್ಲಿ ಇರುವ ಜನತೆಯ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳ ಬಗ್ಗೆ ವಿವರಗಳನ್ನು ನೀಡಿ ಅವುಗಳನ್ನು ಉತ್ತಮಗೊಳಿಸಲು ಬೇಕಾದ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸುತ್ತವೆ. 1873ರಲ್ಲಿ ಬ್ರಿಟಿಷರು ಈ ದೇಶದಲ್ಲಿ ಜನಗಣತಿ ಆರಂಭಿಸಿದಾಗ ಅವರಿಗೆ ಈ ಉದ್ದೇಶವೇನೂ ಇರಲಿಲ್ಲ. ತಾವು ಆಳುತ್ತಿರುವ ದೇಶವನ್ನು ನಿರಾತಂಕವಾಗಿ ಸುಲಿಗೆಮಾಡಲು ಆ ದೇಶವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕೆಂಬ ಪಕ್ಕಾ ಬಂಡವಾಳಶಾಹಿ ಮನೋಭಾವವೇ ಅದರ ಹಿಂದಿದ್ದ ಪ್ರೇರಣೆ. ಆದ್ದರಿಂದಲೇ ಈ ದೇಶದ ಪ್ರಾಕೃತಿಕ ಸಂಪನ್ಮೂಲಗಳ ವಿವರವನ್ನು ಪಡೆಯಲು ಸರ್ವೇಯನ್ನು ಪ್ರಾರಂಭಿಸಿದಂತೆ ಸಮಾಜವನ್ನು ಅರ್ಥಮಾಡಿಕೊಳ್ಳಲು ಸೆನ್ಸಸ್ ಅನ್ನೂ ನಡೆಸುತ್ತಾ ಬಂದರು. ವಾಸ್ತವವಾಗಿ ಈ ಜನಗಣತಿಗಳ ವಿವರಗಳ ಹೊರಬಂದ ಮೇಲೆ ಬ್ರಿಟಿಷ್ ಭಾರತದ ರಾಜಕಾರಣದ ರೀತಿಯೇ ಬೇರೆ ದಿಕ್ಕು ಹಿಡಿದದ್ದು ಈಗ ಇತಿಹಾಸ.

ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಇದು ಏಳನೇ ಬೃಹತ್ ಜನಗಣತಿ. ಈ ಜನಗಣತಿಯನ್ನು ಇನ್ನೂ ಜನಸಮುದಾಯಗಳ ಪರವಾಗಿರಬೇಕೆಂದು ಆಗ್ರಹಿಸಿ ಅದರಲ್ಲಿ ಜಾತಿ ಕಾಲಂ ಸೇರಿಸಬೇಕೆಂಬ, ವೀರಶೈವ ಧರ್ಮವನ್ನು ಪ್ರತ್ಯೇಕ ಧರ್ಮವಾಗಿ ನೋಂದಣಿ ಮಾಡಬೇಕೆಂಬ ಹಲವು ಆಗ್ರಹಗಳು ಕೇಳಿಬರುತ್ತಿವೆ. ಆದರೆ ಜನರು ಈ ರೀತಿ ಜನಗಣತಿಯನ್ನು ಹೇಗೆ ಇನ್ನಷ್ಟು ಜನರಪರ ಮಾಡಬೇಕೆಂಬ ಯೋಚನೆಯಲ್ಲಿದ್ದರೆ ಸರ್ಕಾರ ಈ ಬಾರಿಯ ಜನಗಣತಿಯನ್ನು ಹೇಗೆ ಭಾರತವನ್ನು ಪ್ರಜಾಪ್ರಭುತ್ವದ ಬದಲಿಗೆ ಪೊಲೀಸ್ ಪ್ರಭುತ್ವವನ್ನಾಗಿ ಮಾಡಬಹುದೆಂಬ ಯೋಚನೆಯಲ್ಲಿದೆ. ಜನರಿಗೆ ಗೊತ್ತಿಲ್ಲದಂತೆ ಈ ಜನಗಣತಿಯನ್ನು ಜನರ ಮೇಲೆ ಬೇಹುಗಾರಿಕೆ ನಡೆಸಲು ಬೇಕಾದ ಮಾಹಿತಿಯನ್ನು ಪಡೆದುಕೊಳ್ಳಲು ಬಳಸಿ ಕೊಳ್ಳುತ್ತಿದೆ.

ಈಗ ಪ್ರಾರಂಭವಾಗಿರುವ ಈ 15ನೇ ಜನಗಣತಿಯ ಉದ್ದೇಶ ಈ ದೇಶದ ಜನಸಂಖ್ಯೆ ಎಷ್ಟೆಂದು ತಿಳಿಯುವುದು ಮಾತ್ರವಲ್ಲ. ಭಾರತದ ಅಂದಾಜು 120 ಕೋಟಿ ಜನರ ಹೆಸರು, ಧರ್ಮ, ಲಿಂಗ ಇನ್ನಿತ್ಯಾದಿ ಮಾಮೂಲು ವಿವರಗಳನ್ನು ಕಲೆಹಾಕುವುದರ ಜೊತೆಗೆ 15 ವರ್ಷಕ್ಕೆ ಮೇಲ್ಪಟ್ಟ ಭಾರತೀಯರ ಬಯೋಮೆಟ್ರಿಕ್ ಅಂದರೆ ದೈಹಿಕ ಮತ್ತು ಜೈವಿಕ ಸಂಕೇತಗಳನ್ನು ಒಳಗೊಂಡ ನ್ಯಾಷನಲ್ ಪಾಪ್ಯುಲೇಷನ್ ರಿಜಿಸ್ಟ್ರಿಯನ್ನು ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರನ್ನು(NPR) ತಯಾರಿಸುವುದೂ ಈ ಜನಗಣತಿಯ ಉದ್ದೇಶವಾಗಿದೆ. ಅಂದರೆ ಈ ಬಾರಿಯ ಜನಗಣತಿಯಲ್ಲಿ ಸಾಮಾನ್ಯ ವಿವರಗಳ ಜೊತೆಜೊತೆಗೆ ಜನರು ತಮ್ಮ ಫೋಟೋ ಹಾಗೂ ಬಯೋಮೆಟ್ರಿಕ್ ವಿವರಗಳಾದ ಹತ್ತೂ ಬೆರಳುಗಳ ಬೆರಳಚ್ಚು, ಹಾಗೂ ಕಣ್ಪೊರೆಯ ಸ್ಕ್ಯಾನ್ ಪ್ರತಿ ಇವುಗಳನ್ನೆಲ್ಲಾ ಒದಗಿಸಬೇಕಾಗುತ್ತದೆ. ಇದರ ಉದ್ದೇಶವೇನು? ಸರ್ಕಾರದ ಪ್ರಕಾರ ಇದರ ಮೂಲಕ ಈ ದೇಶದ 64ಕೋಟಿ ಪ್ರೌಢ ವಯಸ್ಕರಲ್ಲಿ ಪ್ರತಿಯೊಬ್ಬರಿಗೂ ಬೇರೆಯಾರೂ ನಕಲು ಮಾಡಲಾಗದಂಥ ನಿರ್ದಿಷ್ಟವಾದ ವಿವರಗಳು ದಾಖಲಾಗುತ್ತವೆ.

ಈ ವಿವರಗಳನ್ನು UIDAI- Unique Identity Card Authority of India- ಭಾರತೀಯ ಯುನೀಕ್ ಗುರುತು ಚೀಟಿ ಪ್ರಾಧಿಕಾರಕ್ಕೆ ನೀಡಲಾಗುತ್ತದೆ. NPR ನೀಡಿದ ವಿವರಗಳನ್ನು ಆಧರಿಸಿ ನಂದನ್ ನಿಲೇಕಣಿ ಸಾರಥ್ಯದಲ್ಲಿರುವ ಈ ಪ್ರಾಧಿಕಾರ ಪ್ರತಿಯೊಬ್ಬರಿಗೂ 16 ಸಂಖ್ಯೆಗಳನ್ನುಳ್ಳ ಬೇರೆಯಾರೂ ನಕಲು ಮಾಡಲು ಸಾಧ್ಯವಿಲ್ಲದ (ಯುನೀಕ್!) ಗುರುತು ಪತ್ರವನ್ನು ನೀಡುತ್ತದೆ. ಅದರಲ್ಲಿ ನಾವು ನಾವೇ ಹೊರತು ಬೇರೆ ಯಾರೂ ಅಲ್ಲ ಎಂದು ಗುರುತಿಸಲು ಅನುಕೂಲವಾಗುವಂತೆ ನಮ್ಮ ಬೆರಳಚ್ಚು, ಫೋಟೋ, ಮತ್ತು ಕಣ್ಪೊರೆಯ ಸ್ಕ್ಯಾನ್ ನಕಲು ಇರುತ್ತದೆ. ಇದರಿಂದ ಜನರಿಗೆ ಈವರೆಗೆ ಆಗುತ್ತಿರುವ ಅನ್ಯಾಯಗಳೆಲ್ಲಾ ನಿಂತುಹೋಗುತ್ತವೆ ಎಂದು ಭಾರತ

ಸರ್ಕಾರ ಮತ್ತು ಎಲ್ಲಾ ಧಾಜಕೀಯ ಪಕ್ಷಗಳು ದೊಡ್ಡ ಧ್ವನಿಯಲ್ಲಿ ಪ್ರಚಾರ ನಡೆಸಿವೆ. ಇದರಿಂದಾಗಿ ಪಡಿತರ ಪದ್ಧತಿ ಮತ್ತು ಮಹಾತ್ಮಾ ಗಾಂಧಿ ರೋಜ್‌ಗಾರ್ ಯೋಜನಾದಂಥ ಯೋಜನೆಗಳಲ್ಲಿ ಅನರ್ಹರು ಲಾಭ ಪಡೆಯುವುದು ತಪ್ಪುತ್ತದೆ ಎಂಬುದು ಯೂನೀಕ್ ಕಾರ್ಡ್ ಯೋಜನೆಯ ಪರವಾಗಿ ಸರ್ಕಾರ ಮುಂದಿಡುತ್ತಿರುವ ಪ್ರಮುಖವಾದ. ವಾಸ್ತವವಾಗಿ ಈ ಯೋಜನೆಯ ಬಗ್ಗೆ ಜನರಲ್ಲಿ ಇರುವ ಸಕಾರಣ ಆತಂಕ ಮತ್ತು ವಿರೋಧಗಳನ್ನು ಮಣಿಸಲು ಸರ್ಕಾರ ಬಡಜನರ ಉದ್ಧಾರದ ಈ ಕಾರ್ಡನ್ನೇ ದೇಶದ ಮುಂದೆ ತೋರಿಸುತ್ತಿದೆ.

ಆದರೆ ಈ ಎರಡೂ ಯೋಜನೆಗಳಲ್ಲಿ ಹೇರಾಫೇರಿ ನಡೆಯುತ್ತಿರುವುದಕ್ಕೆ ನಕಲಿ ಕಾರ್ಡುಗಳಿಗಿಂತ ಸರ್ಕಾರವು ಈ ಯೋಜನೆಗಳನ್ನು ರೂಪಿಸಿರುವ ರೀತಿ ಮತ್ತು ಅದಕ್ಕೆ ಪ್ರತಿವರ್ಷ ಧನಸಹಾಯ ಕಡಿತಗೊಳಿಸುತ್ತಿರುವುದೇ ಕಾರಣವೆಂದು ಈಗಾಗಲೇ ಹಲವು ಸರ್ಕಾರಿ ಸಮಿತಿಗಳೇ ಹೇಳಿವೆ. ಉದಾಹರಣೆಗೆ ಭಾರತದ ಗ್ರಾಮೀಣ ಪ್ರದೇಶದಲ್ಲಿ ಶೇ.70ಕ್ಕಿಂತ ಹೆಚ್ಚು ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ ಎಂದು ಅರ್ಜುನ್ ಸೇನ್ ಗುಪ್ತಾ ವರದಿ ಹೇಳುತ್ತದೆ. ಅಂದರ ವಾಸ್ತವದಲ್ಲಿ ಇಡಿ ಹಳ್ಳಿಗೇ ರೇಷನ್ ಕಾರ್ಡುಗಳನ್ನು ಕೊಡಬೇಕೇ ಹೊರತು ಅವರಲ್ಲಿ ಬಡವ–ಕಡುಬಡವ ಎಂದು ಬೇಧಭಾವ ಮಾಡಬಾರದು. ಆದರೆ ಎಲ್ಲಾ ಬಡವರಿಗೆ ರೇಷನ್ ಕೊಡಲಾಗದು ಎಂಬ ಕಾರಣಕ್ಕಾಗಿಯೇ ಅವರಲ್ಲಿ ಕಡುಬಡವರು ಎಂಬ ಹೊಸವರ್ಗವನ್ನೂ ಮತ್ತು ಅವರನ್ನು ಗುರುತಿಸುವ ಬಗೆಯನ್ನೂ ಹುಡುಕಲಾಗುತ್ತಿದೆ! ನಮ್ಮ ದೇಶದ ಹಳ್ಳಿಗಳಲ್ಲಿ ಜನಸಂಖ್ಯೆ ಹೆಚ್ಚೂಕಡಿಮೆ ಸ್ಥಾಯಿಯಾಗಿರುತ್ತದೆ. ಹಳ್ಳಿಗಳಿಂದ ನಗರಕ್ಕೆ ವಲಸೆ ಹೋಗುತ್ತಾರೆಯೇ ವಿನಃ ನಗರಗಳಿಂದ ಹಳ್ಳಿಗಳಿಗಲ್ಲ. ಹೀಗಾಗಿ ಹಳ್ಳಿಗಳಲ್ಲಿ ನಿಜವಾದ ಫಲಾನುಭವಿಗಳನ್ನು ಒಮ್ಮೆ ಗುರುತಿಸಿದ ನಂತರ ಅದನ್ನು ಪದೇಪದೇ ಪರೀಕ್ಷಿಸುವ ಸಂದರ್ಭವೇ ಒದಗುವುದಿಲ್ಲ. ಹೀಗಾಗಿ ಯುನೀಕ್ ಐಡೆಂಟಿಟಿ ಕಾರ್ಡು ಇಲ್ಲದಿರುವುದೇ ಗ್ರಾಮೀಣ ಬಡವರಿಗೆ ಪಡಿತರ ಅಥವಾ ರೋಜ್‌ಗಾರ್ ಕೆಲಸಸಿಗದೇ ಹೋಗಲು ಕಾರಣವಲ್ಲ. ಆದ್ದರಿಂದಲೇ ಯುನೀಕ್ ಕಾರ್ಡ್ ಕೊಟ್ಟರೂ ಈ ಸಮಸ್ಯೆ ಬಗೆಹರಿಯುವುದಿಲ್ಲ!

ಈ ದೇಶದಲ್ಲಿ 6 ಲಕ್ಷ ಹಳ್ಳಿಗಳಿವೆ. ಹೆಚ್ಚೂಕಡಿಮೆ 3ಲಕ್ಷ ರೇಷನ್ ಅಂಗಡಿಗಳಿವೆ. ಈ ಯೋಜನೆಯ ಪ್ರಕಾರ ಯುನೀಕ್ ಕಾರ್ಡನ್ನು ಪರಿಣಾಮಕಾರಿಯಾಗಿ ಬಳಸಬೇಕೆಂದರೆ ಅಷ್ಟೂ ರೇಷನ್ ಅಂಗಡಿಗಳಲ್ಲಿ ಫಲಾನುಭವಿಗಳ ಬೆರಳಚ್ಚನ್ನು ಗುರುತಿಸುವ ಯಂತ್ರಗಳಿರಬೇಕು! ಅವುಗಳ ಖರೀದಿ ವೆಚ್ಚದಲ್ಲಿ ಗ್ರಾಮದ ಎಲ್ಲರಿಗೂ ರೇಷನ್ ಕಾರ್ಡು ತಲುಪಿಸಬಿಡಬಹುದು! ಇಷ್ಟೆಲಾ ಆಗಿಯೂ ಆ ಯಂತ್ರಗಳು ಒಮ್ಮೆ ಕೆಟ್ಟುಕುಳಿತರೆ ಅವು ಮತ್ತೆ ಈ ಅಧಿಕಾರಶಾಹಿ ವ್ಯವಸ್ಥೆಯಲ್ಲಿ ಸರಿಯಾಗುವ ತನಕ ಯಾವ ನಿಜವಾದ ಫಲಾನುಭವಿಗಳಿಗೂ ಪಡಿತರವಾಗಲೀ, ಕೂಲಿಯಾಗಲೀ ಸಿಗುವುದಿಲ್ಲ. ಅಷ್ಟು ಮಾತ್ರವಲ್ಲದೆ ಈ ಬಾರಿ ಸಂಗ್ರಹಿಸಲಾಗುತ್ತಿರುವ ಬೆರಳಚ್ಚಿನಂತ ಬಯೋಮೆಟ್ರಿಕ್ ವಿವರಗಳು ಶಾಶ್ವತವಾಗಿ ಒಂದೇ ರೂಪದಲ್ಲಿ ಇರುವುದಿಲ್ಲ. ಅದರಲ್ಲೂ ದೈಹಿಕ ಕೆಲಸದಲ್ಲಿ ತೊಡಗಿರುವವರ ಹಣೆಬರಹ ಬದಲಾಗದೇ ಹೋದರೂ ಅವರ ಬೆರಳ ಗೆರೆಗಳು ಮಾತ್ರ ಬದಲಾಗುತ್ತಾ ಹೋಗುತ್ತವೆ. ಹೀಗಾಗಿ ಕ್ರಮೇಣ ವ್ಯಕ್ತಿ ಅವರೇ ಆಗಿದ್ದರೂ ಅವರ ಬೆರಳ ಗೆರೆಗಳು ಬದಲಾದ ಕಾರಣಕ್ಕೆ ಈ ಯಂತ್ರಗಳು ಅವರನ್ನು ಅನರ್ಹಗೊಳಿಸುವ ವಿಪ

ಭಾರತದ ಗ್ರಾಮೀಣ ಪ್ರದೇಶದಲ್ಲಿ ಶೇ. 70ಕ್ಕಿಂತ ಹೆಚ್ಚು ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ ಎಂದು ಅರ್ಜುನ್ ಸೇನ್ ಗುಪ್ತಾ ವರದಿ ಹೇಳುತ್ತದೆ. ಅಂದರೆ ವಾಸ್ತವದಲ್ಲಿ ಇಡಿ ಹಳ್ಳಿಗೇ ರೇಷನ್ ಕಾರ್ಡುಗಳನ್ನು ಕೊಡಬೇಕೇ ಹೊರತು ಅವರಲ್ಲಿ ಬಡವ–ಕಡುಬಡವ ಎಂದು ಬೇಧಭಾವ ಮಾಡಬಾರದು. ಆದರೆ ಎಲ್ಲಾ ಬಡವರಿಗೆ ರೇಷನ್ ಕೊಡಲಾಗದು ಎಂಬ ಕಾರಣಕ್ಕಾಗಿಯೇ ಅವರಲ್ಲಿ ಕಡುಬಡವರು ಎಂಬ ಹೊಸವರ್ಗವನ್ನೂ ಮತ್ತು ಅವರನ್ನು ಗುರುತಿಸುವ ಬಗೆಯನ್ನೂ ಹುಡುಕಲಾಗುತ್ತಿದೆ!

ರ್ಯಾಸವನ್ನೂ ಬಡಜನರು ಎದುರಿಸಬೇಕಾಗುತ್ತದೆ! ಹೀಗಾಗಿ ಈ ಯೂನೀಕ್ ಐಡೆಂಟಿಟಿ ಕಾರ್ಡ್ ಪದ್ಧತಿ ಜಾರಿಗೆತರಲು ಬಡವರ ಒಳಿತಿನ ಯಾವ ಉದ್ದೇಶವೂ ಇಲ್ಲ. ಅದರ ಅಸಲೀ ಉದ್ದೇಶ ಬೇರೆಯೇ ಆಗಿದೆ. ಈ 15ನೇ ಜನಗಣತಿಯನ್ನು ಸರ್ಕಾರ ಬಳಸಿಕೊಳ್ಳುತ್ತಿರುವ ಉದ್ದೇಶವೂ ಬೇರೆಯೇ ಇದೆ.

ವಾಸ್ತವವಾಗಿ ಈ ಜನಗಣತಿಯಲ್ಲಿ ನಾವು ಕಡ್ಡಾಯವಾಗಿ ಕೊಡಲೇ ಬೇಕಾದ ವಿವರಗಳನ್ನು ಮತ್ತು ಪ್ರತಿಯೊಬ್ಬರ ಬಯೋಮೆಟ್ರಿಕ್ ವಿವರಗಳನ್ನು ರಾಷ್ಟ್ರೀಯ ಜನಸಂಖ್ಯಾ ದಾಖಲಾತಿ(NPR)ಯಲ್ಲಿ ಸಂಗ್ರಹಿಸಿಡಲಾಗುತ್ತದೆ. ಈ ಓಕಖನಲ್ಲಿ ದಾಖಲಾದ ವಿವರಗಳನ್ನು ಕೇವಲ ಐಡೆಂಟಿಟಿ ಕಾರ್ಡ್‌ಗಾಗಿ ಮಾತ್ರವಲ್ಲದೆ ಅದನ್ನು ಸರ್ಕಾರವು ಹೊಸದಾಗಿ ರಚಿಸಿರುವ National Intelligence Grid– NATGRID- ರಾಷ್ಟ್ರೀಯ ಬೇಹುಗಾರಿಕಾ ಜಾಲಕ್ಕಾಗಿಯೂ ಕಲೆಹಾಕಲಾಗುತ್ತಿದೆ. ಈ ನ್ಯಾಟ್‌ಗ್ರಿಡ್ ಎಂಬ ಸಂಸ್ಥೆ ಗೃಹಮಂತ್ರಿಯ ನೇರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸಲಿದ್ದು ಇದರ ಕಾರ್ಯಕಲಾಪಗಳ ಬಗ್ಗೆ ಸಂಸತ್ತಿನಲ್ಲೂ ಚರ್ಚೆ ನಡೆಯುವಂತಿಲ್ಲ.

ಈಗ ನಡೆಯುತ್ತಿರುವ ಜನಗಣತಿಯ ಮೂಲಕ ಕಲೆಹಾಕುವ ಈ ದೇಶದ 64ಕೋಟಿ ಪ್ರೌಢ ವಯಸ್ಕರ ಎಲ್ಲಾ ಬಯೋಮೆಟ್ರಿಕ್ ಮಾಹಿತಿಗಳೂ ಈ ಗ್ರಿಡ್‌ನಲ್ಲಿ ದಾಖಲಾಗುತ್ತವೆ. ಅಲ್ಲದೆ ಈ ಗ್ರಿಡ್‌ಗೆ ಕಡ್ಡಾಯವಾಗಿ ಇತರ 21 ಮೂಲಗಳಿಂದ ಈ ದೇಶದ ನಾಗರಿಕರ ಎಲ್ಲಾ ವಹಿವಾಟಿನ ಬಗೆಗೂ ಮಾಹಿತಿಗಳನ್ನು ಕಲೆಹಾಕಲಾಗುತ್ತದೆ. ರೈಲು, ವಿಮಾನ ಯಾನ ದಾಖಲೆಗಳು, ಬ್ಯಾಂಕ್ ಅಕೌಂಟುಗಳು, ಕ್ರೆಡಿಟ್ ಕಾರ್ಡು ವ್ಯವಹಾರಗಳು, ಪಾಸ್‌ಪೋರ್ಟ್, ವೀಸಾದಾಖಲೆಗಳು, PANಕಾರ್ಡು ಮಾಹಿತಿ, ಭೂಮಿ ಮತ್ತು ಇತರ ಆಸ್ತಿಪಾಸ್ತಿ ವ್ಯವಹಾರಗಳ ದಾಖಲೆಗಳು, ವಾಹನ ಖರೀದಿ ದಾಖಲೆಗಳು ಇನ್ನಿತ್ಯಾದಿ ನಾಗರೀಕ ಜೀವನದಲ್ಲಿ ನಡೆಯುವ ಎಲ್ಲಾ ವ್ಯವಹಾರದ ಮಾಹಿತಿಗಳನ್ನೂ ಆಯಾ ಕಚೇರಿಗಳು ಕಡ್ಡಾಯವಾಗಿ ಇನ್ನು ಮುಂದೆ NATGRID ಕೊಡಲೇ ಬೇಕಾಗುತ್ತದೆ. ಅಲ್ಲದೆ ಎಲ್ಲಾ ಟೆಲಿಕಾಂ ಮತ್ತು ಇಂಟರ್‌ನೆಟ್ ಸೇವೆಗಳು ಕಡ್ಡಾಯವಾಗಿ ಈ NATGRIDU ಲಿಂಕ್‌ಅಪ್ ಆಗಲೇಬೇಕಾಗುತ್ತದೆ. ಇದಕ್ಕೆಂದೇ ಒಂದೆಡೆ ಯುನೀಕ್ ಕಾರ್ಡ್‌ಗಾಗಿ ತಯಾರಿ ಮಾಡಿಕೊಳ್ಳುತ್ತಿರುವಾಗಲೇ ಭಾರತದ ಸಂಸತ್ತು 2008ರ ಡಿಸೆಂಬರ್‌ನಲ್ಲಿ ಮಾಹಿತಿ ತಂತ್ರಜ್ಞಾನ ಕಾಯಿದೆ–2000ಕ್ಕೆ ಒಂದು ತಿದ್ದುಪಡಿಯನ್ನೂ ತಂದಿತು. ಈ ತಿದ್ದು ಪಡಿಯ ಸೆಕ್ಷನ್ 69ರ ಪ್ರಕಾರ "ಭಾರತದ ಐಕ್ಯತೆ ಮತ್ತು ಸಮಗ್ರತೆಯ ಹಿತಾಸಕ್ತಿಯಿಂದ...ಯಾವುದೇ ಬಗೆಯ ಸಂಭವನೀಯ ಅಪರಾಧಗಳನ್ನು ತಡೆಗಟ್ಟುವ ಉದ್ದೇಶದಿಂದ ಅಥವಾ ಅಂಥ ಪ್ರಕರಣದ ತನಿಖೆಯ ಉದ್ದೇಶದಿಂದ ಯಾವುದೇ ಕೋರ್ಟಿನ ಆದೇಶವಿಲ್ಲದಿದ್ದರೂ ಯಾವುದೇ ಕಂಪ್ಯೂಟರ್ ಮೂಲಗಳ ಮೂಲಕ ನಡೆಯುತ್ತಿರುವ ಮಾಹಿತಿಯ ವಿನಿಮಯವನ್ನು ಗುಪ್ತವಾಗಿ ಪಡೆದು ಕೊಳ್ಳುವ ಮತ್ತು ಅದರ ಉಸ್ತುವಾರಿ ಮಾಡುವ ಅಧಿಕಾರ'ವನ್ನು ಸರ್ಕಾರ ಹೊಂದಿರುತ್ತದೆ".

ಹೀಗೆ ಒಬ್ಬ ನಾಗರೀಕನ ಎಲ್ಲಾ ಖಾಸಗಿ ಮತ್ತು ವ್ಯಾವಹಾರಿಕ ಮಾಹಿತಿಗಳನ್ನು ಕಲೆಹಾಕುವ ಮತ್ತು ನಾಗರೀಕರ ಜೀವನದ ಎಲ್ಲಾ ಆಯಾಮಗಳನ್ನು ಸರ್ಕಾರದ ಕಣ್ಣಳತೆಯಲ್ಲೇ ನಡೆಯುವಂತೆ ಮಾಡುವ ಉದ್ದೇಶದಿಂದ ಈ NATGRIDಅನ್ನು ರಚಿಸಲಾಗಿದೆ. ಇವುಗಳಲ್ಲಿ ಶೇಖರಗೊಂಡ ಮಾಹಿತಿಯನ್ನು ಇಂಟೆಲಿಜೆನ್ಸ್ ಬ್ಯೂರೋ, ರಾ (ರಾಷ್ಟ್ರೀಯ ಬೇಹುಗಾರಿಕೆ ವಿಭಾಗ), ಸಿಬಿಐ, ರಾಷ್ಟ್ರೀಯ ರೆವೆನ್ಯೂ ಬೇಹುಗಾರಿಕಾ ಜಾಲ ಇನ್ನಿತ್ಯಾದಿ 11 ಸರ್ಕಾರಿ ಬೇಹುಗಾರಿಕಾ ವಿಭಾಗಗಳಿಗೆ ಕೊಡಲಾಗುವುದು. ಹೀಗಾಗಿ ಇನ್ನು ಮುಂದೆ ಭಾರತದ ನಾಗರೀಕರಿಗೆ ಖಾಸಗಿ ಜೀವನವೆಂಬುದೇ ಇರುವುದಿಲ್ಲ. ಜನರ ಪ್ರತಿಯೊಂದ ವಹಿವಾಟನ್ನೂ ಮೂರನೇ ಕಣ್ಣೊಂದು ಗಮನಿಸುತ್ತಿರುತ್ತದೆ! ಈಗ ನಡೆಯುತ್ತಿರುವ ಜನಗಣತಿ ಮತ್ತು NPR ಗಾಗಿ ಸಂಗ್ರಹಿಸುತ್ತಿರುವ ಬಯೋಮೆಟ್ರಿಕ್ ಮಾಹಿತಿಗಳು ಮತ್ತು ಅದನ್ನು ಆಧರಿಸಿ ಪ್ರತಿಯೊಬ್ಬರೂ ನಾಳೆ ಕಡ್ಡಾಯವಾಗಿ ಹೊಂದಲೇಬೇಕಿರುವ 16ಸಂಖ್ಯೆಯ ಯುನೀಕ್‌ಐಡೆಂಟಿಟಿ ಕಾರ್ಡುಗಳು ಈ ದೇಶದ ನಾಗರೀಕರನ್ನು ಕಡ್ಡಾಯವಾಗಿ ಈ ಬೇಹುಗಾರಿಕೆಗೆ ಒಳಪಡಿಸುತ್ತದೆ.

ಏಕೆಂದರೆ ಒಮ್ಮೆ ಯುನೀಕ್ ಐಡೆಂಟಿಟಿ ಕಾರ್ಡು ಹಂಚಿಕೆ ಆದ ನಂತರ ಸರ್ಕಾರದಿಂದ ಯಾವುದೇ ಸೌಲಭ್ಯಪಡೆಯಲೂ, ಬ್ಯಾಂಕ್ ಅಕೌಂಟ್ ತೆಗೆಯಲೂ ಅಥವಾ ವಾಹನ ಕೊಳ್ಳಲೂ ಈ 16 ನಂಬರಿನ ಕಾರ್ಡು ಕಡ್ಡಾಯ. ಹಾಗೂ ಬ್ಯಾಂಕು, ವಿಮೆ ಕಚೇರಿ, ವಾಹನ ಕೇಂದ್ರ, ರೈಲು ಮತ್ತು ವಿಮಾನ ನಿಲ್ದಾಣ ಇತ್ಯಾದಿಗಳಲ್ಲಿ ಈ ನಂಬರನ್ನು ಬಳಸಿ ನಾವು ನಡೆಸುವ ಪ್ರತಿಯೊಂದು ವಹಿವಾಟು ಅಲ್ಲಿಯ ಕೇಂದ್ರೀಯ ಕಂಪ್ಯುಟರಿನಲ್ಲಿ ಸಂಗ್ರಹವಾಗುತ್ತದೆ. ಈ ಕಂಪ್ಯೂಟರ್‌ಗಳು ನೇರವಾಗಿ ನ್ಯಾಟ್‌ಗ್ರಿಡ್‌ಗೆ ಲಿಂಕ್ ಅಪ್ ಆಗಿರುತ್ತದೆ. ಹೀಗೆ ಒಂದು ಗುರುತು ಕಾರ್ಡನ್ನು ಕೊಡುವ ಮೂಲಕ ನಮ್ಮ ಇಡೀ ಜೀವನವನ್ನೇ ಸರ್ಕಾರದ ಬೇಹುಗಾರಿಕಾ ಕಣ್ಗಾವಲಿಗೆ ತಂದುಕೊಳ್ಳಲಾಗುತ್ತಿದೆ. ಇದಕ್ಕಾಗಿ ಜನಗಣತಿಯಂಥ ಪ್ರಕ್ರಿಯೆಯನ್ನು ಬಳಸಿಕೊಳ್ಳಲಾಗುತ್ತಿದೆ.

ವಾಸ್ತವವಾಗಿ ಭಾರತೀಯ ಜನಗಣತಿ ಪ್ರಕ್ರಿಯೆ ಭಾರತೀಯ ಸೆನ್ಸಸ್ ಆಕ್ಟ್–1948ರ ಪ್ರಕಾರ ನಡೆಯುತ್ತದೆ. ಅದರ ಸೆಕ್ಷನ್ 15 ಸ್ಪಷ್ಟಪಡಿಸುವಂತೆ ಇಲ್ಲಿ ಜನರು ಬಹಿರಂಗ ಪಡಿಸುವ ಮಾಹಿತಿಗಳು ಗೋಪ್ಯವಾದದ್ದು ಮತ್ತು ಯಾವ ಸಂಸ್ಥೆಗೂ ಕೊನೆಗೆ ನ್ಯಾಯಾಲಯಗಳಿಗೂ ಸಹ ಕೊಡಲಾಗುವುದಿಲ್ಲ. ಜನಗಣತಿಯನ್ನು ನಡೆಸುವುದು

ಒಟ್ಟಾರೆ ದೇಶದ ಜನಸಂಖ್ಯಾ ಬೆಳವಣಿಗೆಯ ಗತಿಯನ್ನು ಗಮನಿಸಲೇ ವಿನಃ ಪ್ರತಿಯೊಬ್ಬ ಪ್ರಜೆಯ ಮೇಲೆ ನಿಗಾ ಇರಿಸಲಲ್ಲ. ಆದರೆ NPR ಗಾಗಿ ಸಂಗ್ರಹಿಸುತ್ತಿರುವ ಮಾಹಿತಿಯನ್ನು 1955ರ ಭಾರತೀಯ ನಾಗರೀಕ ಕಾಯ್ದೆ ನಾಗರೀಕ ನೋಂದಣಿ–ಗುರುತು ಪತ್ರ ಕಾನೂನು–2003ರ ಅನ್ವಯ ಸಂಗ್ರಹಿಸಲಾಗುತ್ತಿದೆ. ಈ NPR ಎಂಬ ಪರಿಕಲ್ಪನೆ ಬಂದದ್ದು ಕಾರ್ಗಿಲ್ ಯುದ್ಧದ ನಂತರದಲ್ಲಿ ವಾಜಪೇಯಿ ಸರ್ಕಾರದಲ್ಲಿ ಬೇಹುಗಾರಿಕಾ ಮುಖ್ಯಸ್ಥನಾಗಿದ್ದ ಕೆ. ಸುಬ್ರಹ್ಮಣ್ಯಂರವರಿಂದ. ನಂತರ 2003 ರಲ್ಲಿ ಅಡ್ವಾನಿ ನೇತೃತ್ವದ ಗೃಹ ಇಲಾಖೆ ವಿಶೇಷವಾಗಿ ಕರಾವಳಿಯಲ್ಲಿ ಬೇಹುಗಾರಿಕೆಯನ್ನು ಗಟ್ಟಿಪಡಿಸಲು ನಿರ್ದಿಷ್ಟ ನಿಯಮಾವಳಿಯನ್ನು ರೂಪಿಸಲಾಯಿತು. 2006ರಲ್ಲಿ ಯುಪಿಎ ಸರ್ಕಾರ ಇದೇ ಹಿನ್ನೆಲೆಯಲ್ಲಿ ನಾಗರೀಕರಿಗೆ ಕಡ್ಡಾಯವಾಗಿ ಗುರುತುಪತ್ರ ನೀಡುವ ಪ್ರಕ್ರಿಯೆಯನ್ನು ನಿಧಾನವಾಗಿ ಪ್ರಾರಂಭಿಸಿತು. ಆದರೆ 26/11ರ ದಾಳಿಯ ನಂತರ ತ್ವರಿತವಾಗಿ ಯುನೀಕ್ ಕಾರ್ಡು ಮತ್ತು NPR ಯೋಜನೆಗಳು ಜಾರಿಯಾಗಲು ಪ್ರಾರಂಭಿಸಿದವು.

ಹೀಗೆ ಒಂದು ಭಯೋತ್ಪಾದನಾ ದಾಳಿಯ ಹಿನ್ನೆಲೆಯಲ್ಲಿ ಭಯೋತ್ಪಾದಕರನ್ನು ತಡೆಗಟ್ಟುವ ಉದ್ದೇಶಕ್ಕೆಂದು ರಚಿತವಾಗಬೇಕಾದ ಕ್ರಮಗಳ ಭಾಗವಾಗಿ ರೂಪುಗೊಂಡ ಈ ಐಡೆಂಟಿಟಿ ಕಾರ್ಡು ಮತ್ತು ಪಾಪ್ಯುಲೇಷನ್ ರಿಜಿಸ್ಟರ್ ಹಾಗೂ ಇಂಟೆಲಿಜೆನ್ಸ್ ಗ್ರಿಡ್‌ಗಳು ದೇಶದ ಎಲ್ಲಾ ಜನರನು ಸಂಭವನೀಯ ಭಯೋತ್ಪಾದಕರೆಂದೇ ಪರಿಗಣಿಸಿ ದೇಶದ ಇಡೀ ಜನತೆಯ ಮೇಲೂ ಬೇಹುಗಾರಿಕೆ ಮಾಡಲು ಹೊರಟಿದೆ.

ಆದರೆ ಇದರಿಂದ ಭಯೋತ್ಪಾದನೆಯನ್ನು ಭಯೋತ್ಪಾದಕರನು ತಡೆಗಟ್ಟಲು ಸಾಧ್ಯವೇ?

ಕೆಲವು ಅಂತರರಾಷ್ಟ್ರೀಯ ಉದಾಹರಣೆಗಳನ್ನು ನೋಡಿದರೆ ಈ ಇಡೀ ಯೋಜನೆ ಎಷ್ಟು ಹಾಸ್ಯಾಸ್ಪದ ಮತ್ತು ಭಯಂಕರವಾಗಿದೆ ಎಂಬುದು ಗೊತ್ತಾಗುತ್ತದೆ. ಏಕೆಂದರೆ ಈ ಬಗೆಯ ಬಯೋಮೆಟ್ರಿಕ್ ಗುರುತಿನ ಚೀಟಿ ಈಗಾಗಲೇ ಯುರೋಪಿನ ಕೆಲವು ದೇಶಗಳಲ್ಲಿ ಚಾಲ್ತಿಯಲ್ಲಿದೆ. ಇಷ್ಟಾದರೂ ಓಕ್ಲಾಹಾಮಾದಲ್ಲಿ ಭಯೋತ್ಪಾದನಾ ದಾಳಿಯನ್ನು ತಡೆಯಲಾಗಲಿಲ್ಲ. ಅದನ್ನು ಮಾಡಿದ ಭಯೋತ್ಪಾದಕ ತಿಮೋತಿಯ ಬಳಿ ಈ ಬಗೆಯ ಹಲವು ಬಯೋಮೆಟ್ರಿಕ್ ಕಾರ್ಡುಗಳು ಇದ್ದವಂತೆ. ಈಬಗೆಯ ನಕಲಿ ಬಯೋಮೆಟ್ರಿಕ್ ಕಾರ್ಡು ತಯಾರಿಸುವ ದಂಧೆಯಲ್ಲಿ ತೊಡಗಿದ್ದ ಒಂದು ದೊಡ್ಡ ರಾಕೆಟ್ಟನ್ನು ಥೈಲಾಂಡಿನಲ್ಲಿ 2006ರಲ್ಲಿ ಸರ್ಕಾರ ಬಯಲುಗೊಳಿಸಿತು. ಅಮೆರಿಕದಲ್ಲಿ 2001 ಸೆಪ್ಟೆಂಬರ್ 11 ರ ದಾಳಿ ಮಾಡಿದವರು ಎಲ್ಲಾ ಗುರುತು ಪತ್ರಗಳನ್ನು ಆರಾಮಾಗಿ ನಿಭಾಯಿಸಿ ವಿಮಾನಗಳನ್ನೇ ಅಪಹರಿಸಿ WTC ಯನ್ನು ಉರುಳಿಸಿದರು! ಹೀಗಾಗಿಯೇ ಯೂರೋಪಿನ ಬಹುಪಾಲು ದೇಶಗಳು ಈ ಗುರುತು ಕಾರ್ಡು ಯೋಜನೆಯನ್ನೇ ಕೈಬಿಟ್ಟಿವೆ. ಇಂಥಾ ಕಾರ್ಡ್ ಪದ್ಧತಿ ಮತ್ತು ಅದನ್ನು ಆಧರಿಸಿ ಜನರ ಖಾಸಗಿ ಬದುಕಿನ ಎಲ್ಲಾ ಮಾಹಿತಿಯನ್ನು ಒಂದು ನ್ಯಾಷನಲ್ ರಿಜಿಸ್ಟ್ರಿಯಲ್ಲಿ ದಾಖಲಿಸುವ ಇಂಗ್ಲೆಂಡ್ ಸರ್ಕಾರದ ಯೋಜನೆಯ ವಿರುದ್ಧ ಇಂಗ್ಲೆಂಡಿನ ಜನತೆ ಬೃಹತ್ ಹೋರಾಟವನ್ನು ನಡೆಸುತ್ತಿದ್ದಾರೆ. ಆದ್ದರಿಂದಲೇ ಅಲ್ಲಿ ಇನ್ನೂ ಈ ಕಾರ್ಡ್ ಯೋಜನೆ ಜಾರಿಗೆ ಬಂದಿಲ್ಲ.

ಅಲ್ಲದೆ ಈ ಯೋಜನೆ ಹೇಗೆ ನಿರಪರಾಧಿಗಳನ್ನು ವಿನಾಕಾರಣ ಶಿಕ್ಷೆ ವಿಧಿಸಿದೆ ಎಂಬುದಕ್ಕೂ ಸಾವಿರಾರು ಉದಾಹರಣೆಗಳಿವೆ. ಸ್ಪೇನ್ ದೇಶದ ಮ್ಯಾಡ್ರಿಡ್‌ನಲ್ಲಿ 2004 ರಲ್ಲಿ ಒಂದು ಬೃಹತ್ ಬಾಂಬ್ ದಾಳಿ ನಡೆಯಿತು. ಅಲ್ಲಿ ಸಿಕ್ಕ ಬಯೋಮೆಟ್ರಿಕ್ ಕಾರ್ಡಿನ ಮಾಹಿತಿಗಳನ್ನು ಆಧರಿಸಿ ಸ್ಪೇನ್ ದೇಶದ ಪೊಲೀಸರು ಒಬ್ಬ ವ್ಯಕ್ತಿಯನ್ನು ತಲಾಶ್ ಮಾಡಲು ಪ್ರಾರಂಭಿಸಿದರು. ಆದರೆ ಆ ವ್ಯಕ್ತಿ ಮತ್ಯಾವುದೋ ಕೇಸಿನಲ್ಲಿ ಕಳೆದ ನಾಲ್ಕು ವರ್ಷಗಳಿಂದ ಅಮೆರಿಕನ್ ಜೈಲಿನಲ್ಲಿದ್ದ. ಇದು ಬಯೋಮೆಟ್ರಿಕ್ ಮಾಹಿತಿ ಗಳ ವಿಶ್ವಾಸಾರ್ಹತೆ. ಅದೇರೀತಿ ಅಮೆರಿಕದಲ್ಲಿ ಕೇವಲ ಬೆರಳಚ್ಚು ಗುರುತನ್ನು ಆಧರಿಸಿ ಭಯೋತ್ಪಾದಕನೆಂದು ಬಂಧಿಸಿದ ನೂರಾರು ಜನರು ಅಮಾಯಕರೆಂದು ಅಮೆರಿಕದ ಕೋರ್ಟುಗಳೆ ಬಿಡುಗಡೆ ಮಾಡಿವೆ. ಹೀಗಾಗಿ ಅಮೆರಿಕ, ಬ್ರಿಟನ್– ಬಹುಪಾಲು ಐರೋಪ್ಯ ಒಕ್ಕೂಟದ ದೇಶಗಳು ಮತ್ತು ಆಸ್ಟ್ರೇಲಿಯಾಗಳಲ್ಲಿ ಈ ಬಗೆಯ ಬಯೋಮೆಟ್ರಿಕ್ ಮಾಹಿತಿಗಳೂ ತಾಂತ್ರಿಕವಾಗಿ ವಿಶ್ವಾಸಾರ್ಹವಾದುದಲ್ಲ ಮತ್ತು ಅದರ ಬಗ್ಗೆ ಜನರಲ್ಲಿಯೂ ಸಕಾರಣವಾದ ಸಂದೇಹಗಳಿವೆ ಎಂಬ ಕಾರಣಗಳಿಂದಾಗಿ ಬಯೋಮೆಟ್ರಿಕ್ ಐಡೆಂಟಿಟಿ ಕಾರ್ಡ್ ಪದ್ಧತಿಯನ್ನೇ ಕೈ ಬಿಡಲಾಗಿದೆ.

ಆದರೂ ಭಾರತದಲ್ಲಿ ಹಠಹಿಡಿದು ಈ ಯೋಜನೆ ಜಾರಿಗೆ ತರುತ್ತಿರುವುದರಲ್ಲಿ ಇನ್ನೂ ಒಂದು ಹುನ್ನಾರವಿದೆ. ಈಗಾಗಲೇ ನೋಡಿದಂತೆ ಈ NPR ಮತ್ತು NATGRID ಗಳಲ್ಲಿ ಈ ದೇಶದ ನಾಗರೀಕರ ನಿತ್ಯಜೀವನದ ಎಲ್ಲಾ ವಿವರಗಳಿರುತ್ತವೆ. ಎಲ್ಲಾ ಬ್ಯಾಂಕು, ವಿಮೆ, ಟೆಲಿಕಾಂ, ವಾಹನ ಮಾರಾಟ, ಪ್ರವಾಸಗಳ ವಿವರವೂ ಅದರಲ್ಲಿ ದಾಖಲಾಗಿರುತ್ತದೆ. ಇದು ಈದೇಶದ ಜನರ ಗ್ರಾಹಕ ಪ್ರವೃತ್ತಿಯ ಬಗೆಗೆ ಉದ್ಯಮಿಗಳಿಗೆ ಬೇಕಾದ ಅಪೂರ್ವ ಮಾಹಿತಿಗಳನ್ನು ಒದಗಿಸುತ್ತದೆ. ಅದಕ್ಕಾಗಿಯೇ ಭಾರತ ಸರ್ಕಾರ 2005ರಲ್ಲಿ Credit Information Companies (Regulation) Act2005 ಕಾಯಿದೆಯನ್ನು ಜಾರಿಗೆ ತಂದಿದೆ. ಇಂಥಾ ಸಾಲ ಮಾಹಿತಿ ಕಂಪನಿಗಳು ಸಾಲಗಾರರ ಬಗ್ಗೆ ಮತ್ತು ಸಾಲಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಅದನ್ನು ಈ ಸಾಲ ನೀಡುವ ದಂಧೆಯಲ್ಲಿ ತೊಡಗಿರುವವರಿಗೆ ಕೊಡುತ್ತವೆ. ಅಂಥಾ ಮಾಹಿತಿಗಳನ್ನು ಸಂಗ್ರಹಿಸಲು ಅವರು ಯುನಿಕ್ ಐಡೆಂಟಿಟಿ ಕಾರ್ಡಿನಲ್ಲಿ ಒದಗಿಸಿರುವ ಸಂಖ್ಯೆಯನ್ನು ಬಳಸಿಕೊಳ್ಳುತ್ತವೆ.

ವಾಸ್ತವವಾಗಿ ಭಾರತೀಯ ಜನಗಣತಿ ಪ್ರಕ್ರಿಯೆ ಭಾರತೀಯ ಸೆನ್ಸಸ್ ಆಕ್ಟ್–1948ರ ಪ್ರಕಾರ ನಡೆಯುತ್ತದೆ. ಅದರ ಸೆಕ್ಷನ್ 15 ಸ್ಪಷ್ಟಪಡಿಸುವಂತೆ ಇಲ್ಲಿ ಜನರು ಬಹಿರಂಗ ಪಡಿಸುವ ಮಾಹಿತಿಗಳು ಗೋಪ್ಯವಾದದ್ದು ಮತ್ತು ಯಾವ ಸಂಸ್ಥೆಗೂ ಕೊನೆಗೆ ನ್ಯಾಯಾಲಯಗಳಿಗೂ ಸಹ ಕೊಡಲಾಗುವುದಿಲ್ಲ. ಜನಗಣತಿಯನ್ನು ನಡೆಸುವುದು ಒಟ್ಟಾರೆ ದೇಶದ ಜನಸಂಖ್ಯಾ ಬೆಳವಣಿಗೆಯ ಗತಿಯನ್ನು ಗಮನಿಸಲೇ ವಿನಃ ಪ್ರತಿಯೊಬ್ಬ ಪ್ರಜೆಯ ಮೇಲೆ ನಿಗಾ ಇರಿಸಲಿಲ್ಲ. ಆದರೆ NPR ಗಾಗಿ ಸಂಗ್ರಹಿಸುತ್ತಿರುವ ಮಾಹಿತಿಯನ್ನು 1955ರ ಭಾರತೀಯ ನಾಗರೀಕ ಕಾಯ್ದೆ ನಾಗರೀಕ ನೋಂದಣಿ ಮತ್ತು ಗುರುತು ಪತ್ರ ಕಾನೂನು–2003ರ ಅನ್ವಯ ಸಂಗ್ರಹಿಸಲಾಗುತ್ತಿದೆ.

ಒಂದು ಕ್ಲಿಕ್ ಮಾಡಿದರೆ ಸಾಕು, ಈ ಸಂಖ್ಯಾದಾರನಾದ ನಾಗರೀಕನ ಖರೀದಿ ಸಾಮರ್ಥ್ಯ, ಬ್ಯಾಂಕ್ ವಹಿವಾಟು, ವಿಮೆ ವಿವರ ಬಳಸುವ ಕಾರು ಇತ್ಯಾದಿಗಳೆಲ್ಲಾ ಹೊರಬೀಳುತ್ತದೆ. ಇದನ್ನೇ ಮಾರುಕಟ್ಟೆ ಭಾಷೆಯಲ್ಲಿ "ಮಾರುಕಟ್ಟೆ ಇಂಟೆ ಲಿಜೆನ್ಸ್" ಎಂದು ಕರೆಯುತ್ತಾರೆ. ಪ್ರತಿಯೊಂದು ಉದ್ಯಮವೂ ತನ್ನ ಗ್ರಾಹಕರ ಅಗತ್ಯಗಳೇನು ಎಂದು ಅರಿತುಕೊಳ್ಳುವುದೇ "ಮಾರುಕಟ್ಟೆ ಇಂಟೆಲಿಜೆನ್ಸ್". ಇದು ವಿವಿಧ ಬಗೆಯ ಸೇವೆ ಮತ್ತು ಸರಕುಗಳನ್ನು ಪೂರೈಸುವ ಉದ್ಯಮಗಳಿಗೆ ತನ್ನ ಗ್ರಾಹಕರ ಬದಲಾಗುತ್ತಿರುವ ಅಗತ್ಯಗಳ ಬಗ್ಗೆ ಮಾಹಿತಿ ಒದಗಿಸಿ ಇದಕ್ಕಾಗಿ ಅವು ವೆಚ್ಚ ಮಾಡಬೇಕಾದ ಹಣವನ್ನು ಉಳಿತಾಯ ಮಾಡುತ್ತದೆ. 11ನೇ ಪಂಚ ವಾರ್ಷಿಕ ಯೋಜನೆಯ ವರದಿಯಲ್ಲಿ ಈ ಯೂನಿಕ್ ಕಾರ್ಡನ್ನು ಈ ರೀತಿಯಲ್ಲಿ ವಾಣಿಜ್ಯ ಬಳಕೆಗೆ ಉಪ ಯೋಗಿಸುವುದರ ಬಗ್ಗೆ ಕೂಲಂಕಶವಾಗಿ ಚರ್ಚಿಸಲಾಗಿದೆ. ಹಾಗೂ ಅಂಥಾ ಸೇವೆಯನ್ನು ಕೊಡುವುದರ ಮೂಲಕ ಈ ಯುನೀಕ್ ಕಾರ್ಡ್ ಪ್ರಾಧಿಕಾರಕ್ಕೆ ವರ್ಷಕ್ಕೆ ಏನಿಲ್ಲವೆಂದರೂ 250–300 ಕೋಟಿ ಲಾಭ ಬರುತ್ತದೆಂದೂ ಅಂದಾಜು ಮಾಡಲಾಗಿದೆ!!

ಸಾರಾಂಶದಲ್ಲಿ ಇದು 2010ರ ಸೆನ್ಸಸ್ ಪ್ರಕ್ರಿಯೆಯ ಹಿಂದಿನ ಉದ್ದೇಶ. ಇದು ಭಾರತದ ನಾಗರೀಕ ಹಾಗೂ ಪ್ರಭುತ್ವಗಳ ನಡುವಿನ ಸಂಬಂಧವನ್ನೇ ಶಾಶ್ವತವಾಗಿ ಬದಲಾಯಿಸುತ್ತಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಪ್ರಭುತ್ವಗಳೆ ನಮ್ಮ ಪ್ರತಿನಿಧಿ ಮತ್ತು ಅದಕ್ಕೇ ಪರಮಾಧಿಕಾರ. ಆದರೆ ದೇಶದ ಒಳಗೆ ಪರಮಾಧಿಕಾರ ಇರಬೇಕಾದದ್ದು ಜನರಿಗೆ. ಇಲ್ಲಿ ಪ್ರಭುತ್ವ ಜನರ ಸೇವಕ. ಆದರೆ ಭಾರತ ಪ್ರಭುತ್ವ ಈ ಸೆನ್ಸಸ್ 2010ಅನ್ನು ಬಳಸಿ ಕೊಂಡು ಜಾರಿಗೆ ತರುತ್ತಿರುವ ಯೂನಿಕ್ ಐಡೆಂಟಿಟಿ ಕಾರ್ಡು, NPR ಮತ್ತು NATGRID ಗಳು ಭಾರತದ ಪ್ರಭುತ್ವಕ್ಕೆ ನಾಗರೀಕರ ಮೇಲೆ ಪರಮಾಧಿಕಾರವನ್ನು ಕೊಡುತ್ತದೆ. ಇದು ಕ್ರಮೇಣ ಸರ್ವಾಧಿಕಾರಕ್ಕೂ ದಾರಿ ಮಾಡಿಕೊಡುತ್ತದೆ. ಇದು ನಾಗರೀಕರನು ಒಂದೋ ಸಂಭವನೀಯ ಭಯೋತ್ಪಾದಕನನ್ನಾಗಿ ಅಥವಾ ಗ್ರಾಹಕನನ್ನಾಗಿ ಮಾತ್ರ ಕಾಣುತ್ತದೆ. ಒಬ್ಬ ಹಕ್ಕುಳ್ಳ, ಪರಮಾಧಿಕಾರ ಉಳ್ಳ ನಾಗರಿಕನನ್ನಾಗಿಯಲ್ಲ. ಇದು ಈ ದೇಶದ ಬಲಹೀನ, ಶೋಷಿತ, ದಮನಿತ ಸಮುದಾಯಗಳ ಬದುಕನ್ನು ಇನ್ನಷ್ಟು ದುರ್ಬಲಗೊಳಿಸುತ್ತದೆ. ಬಲಿಪಶುಗಳನ್ನಾಗಿಸುತ್ತದೆ.

ಆದರೆ ಈ ಅಪಾಯಗಳ ಬಗ್ಗೆ ಜನರಿಗೆ ಮಾಹಿತಿಯೇ ಇಲ್ಲ. ಈಗ ನಡೆಯುತ್ತಿರುವುದು ಕೇವಲ ಮನೆಗಳ ಗಣತಿ. ಅಸಲಿ ವಿವರಗಳನ್ನು 2011ರ ಫೆಬ್ರವರಿಯಲ್ಲಿ ಕಲೆ ಹಾಕಲಾಗುತ್ತದೆ. ಈ ಅವಧಿಯೊಳಗೆ ಜನರು ಎಚ್ಚೆತ್ತುಕೊಂಡು ಜನಗಣತಿಯನ್ನು ಜನರ ಮೇಲೆ ಬೇಹುಗಾರಿಕೆ ಮಾಡಲು ಯೋಜಿಸಿರುವ ಈ NPR ಮತ್ತು NATGRIDಗಳನ್ನು ಕೈಬಿಡಲು ಚಳವಳಿ ರೂಪಿಸಬೇಕಿದೆ. □

ಎದೆ ಹಾಲಿನಲ್ಲಿ ಅದ್ದಿ ಬರೆಯುವುದು

ತೇಜಸ್ವಿ ಕಟ್ಟೀಮನಿ

ಪ್ರೊಟೆಕ್ಟೆಡ್ ಜೋನ್ ನಲ್ಲಿಯೇ ಸ್ತ್ರೀಯ ಮೇಲೆ ಅತ್ಯಾಚರ ಯಾಕೆ ಹೆಚ್ಚಿಗೆ ನಡೆಯುತ್ತಿವೆ? ಹಾಗಾದರೆ ಆಕೆಯ ದೇಹ ಹಾಗೂ ಮನಸ್ಸು ಎರಡೂ ಮೇಲ್ಕಂಡ ತಂದೆ, ಗಂಡ ಮಗನ ಕೈಯಲ್ಲಿ ಕೊಡಾ ಯಾಕೆ ಸುರಕ್ಷಿತವಾಗಿಲ್ಲ? ಈ ಗಂಡಸರನ್ನು ಬಿಡಿ, ತಾಯಿ, ಅತ್ತೆ, ಕೈಯಲ್ಲಿ ಸ್ತ್ರೀ ಸುರಕ್ಷಿತವಾಗಿದ್ದಾಳೆಯೇ? ಇಲ್ಲಿಯೂ ನಮಗೆ ನಕಾರಾತ್ಮಕ ಉತ್ತರ ಸಿಗುತ್ತದೆ. ಗಂಡಸರಂತೆ, ಹೆಂಗಸರ ಕೈಯಲ್ಲಿ ಸ್ತ್ರೀಯ ದೇಹ - ಮನಸ್ಸು ಸುರಕ್ಷಿತವಾಗಿಲ್ಲವೆಂದರೆ, ಈ ಸಮಸ್ಯೆಗೆ ಆಧುನಿಕೋತ್ತರ ತಿಳಿವು ಏನು ಹೇಳುತ್ತದೆ! ಸ್ತ್ರೀಯು ಸ್ತ್ರೀಯಾಗೆ ಬದುಕುವಂತೆ, ಸ್ತ್ರೀಯಾಗೆ ಯೋಚಿಸುವಂತೆ ಮೇಲ್ನೋಟದಲ್ಲಿ ಕಂಡು ಬಂದರೂ, ಅವಳು ಯೋಚಿಸುವುದು ಪುರುಷಸತ್ತಾತ್ಮಕ ವ್ಯವಸ್ಥೆಯ ಸೂಚನೆಯಂತೆ. ಆ ವ್ಯವಸ್ಥೆಯ ನಿರ್ದೇಶನದಂತೆ ಅವಳು ನಡೆಯುತ್ತಾಳೆ. ಕನ್ನಡಿಯಲ್ಲಿ ತನ್ನನ್ನು ತಾನು ನೋಡಿಕೊಳ್ಳುವ ಅವಳ ನೋಟವನ್ನು ಪುರುಷ ವರ್ಚಸ್ಸು ರೂಪಿಸುತ್ತದೆ.

ನಮ್ಮ ಪರಂಪರೆಯಲ್ಲಿ ಸ್ತ್ರೀಗೊಂದು ವಿಶಿಷ್ಟ ಸ್ಥಾನವಿದೆ. ತಾಯಿಯಾಗಿ, ಹೆಂಡತಿಯಾಗಿ ಮತ್ತು ಮಗಳಾಗಿ ಅವಳು ಯಾವಗಲು ಒಂದು ಪ್ರೊಟೆಕ್ಟೆಡ್ ಜೋನಾನಲ್ಲಿ ನಿರುಮ್ಮಳವಾಗಿರುತ್ತಾಳೆ ಅಥವಾ ನಿರುಮ್ಮಳವಾಗಿರುವಂತೆ ನಟಿಸುತ್ತಾಳೆ. ಆಧುನಿಕೋತ್ತರ ತಿಳಿವಿನ ಬೆಳಕಿನಲ್ಲಿ ಭಾರತೀಯ ಸ್ತ್ರೀಯರ 'ಹಾಯಾಗಿರುವ ವ್ಯಕ್ತಿತ್ವ'ವನ್ನು ಪುನರ್ ವಿಮರ್ಶಿಸುವ ಅವಶ್ಯಕತೆಯಿದೆ. ಪ್ರೊಟೆಕ್ಟೆಡ್ ಜೋನ್‌ನಲ್ಲಿಯೇ ಸ್ತ್ರೀಯ ಮೇಲೆ ಅತ್ಯಾಚರ ಯಾಕೆ ಹೆಚ್ಚಿಗೆ ನಡೆಯುತ್ತಿವೆ? ಹಾಗಾದರೆ ಆಕೆಯ ದೇಹ ಹಾಗೂ ಮನಸ್ಸು ಎರಡೂ ಮೇಲ್ಕಂಡ – ತಂದೆ, ಗಂಡ ಮಗನ ಕೈಯಲ್ಲಿ ಕೊಡಾ ಯಾಕೆ ಸುರಕ್ಷಿತವಾಗಿಲ್ಲ? ಈ ಗಂಡಸರನ್ನು ಬಿಡಿ, ತಾಯಿ, ಅತ್ತೆ, ಮಗಳ ಕೈಯಲ್ಲಿ ಸ್ತ್ರೀ ಸುರಕ್ಷಿತವಾಗಿದ್ದಾಳೆಯೇ? ಇಲ್ಲಿಯೂ ನಮಗೆ ನಕಾರಾತ್ಮಕ ಉತ್ತರ ಸಿಗುತ್ತದೆ. ಗಂಡಸರಂತೆ, ಹೆಂಗಸರ ಕೈಯಲ್ಲಿ ಸ್ತ್ರೀಯ –ದೇಹ ಹಾಗು ಮನಸ್ಸು ಸುರಕ್ಷಿತವಾಗಿಲ್ಲವೆಂದರೆ, ಈ ಸಮಸ್ಯೆಗೆ ಆಧು ನಿಕೋತ್ತರ ತಿಳಿವು ಏನು ಹೇಳುತ್ತದೆ! ಸ್ತ್ರೀಯು ಸ್ತ್ರೀಯಾಗೆ ಬದುಕುವಂತೆ, ಸ್ತ್ರೀಯಾಗೆ ಯೋಚಿಸುವಂತೆ ಮೇಲ್ನೋಟದಲ್ಲಿ ಕಂಡುಬಂದರೂ, ಅವಳು ಯೋಚಿಸುವುದು ಪುರುಷಸತ್ತಾತ್ಮಕ ವುವಸ್ಥೆಯ ಸೂಚನೆಯಂತೆ. ಆ ವ್ಯವಸ್ಥೆಯ ನಿದೇಶನದಂತೆ ಅವಳು ನಡೆಯುತ್ತಾಳೆ. ಕನ್ನಡಿಯಲ್ಲಿ ತನ್ನನ್ನು ತಾನು ನೋಡಿಕೊಳ್ಳುವ ಅವಳ ನೋಟವನ್ನು ಪುರುಷ ವರ್ಚಸ್ಸು ರೂಪಿಸುತ್ತದೆ.

ಹೀಗೆ ಪುರುಷನ ಮೇಲರಿಮೆಯನ್ನು ಒಪ್ಪಿಕೊಂಡು, ಸ್ತ್ರೀಯ ಉದಾತ್ತ ಚರಿತ್ರೆಯಿಂದ ಮೋಹಗೂಂಡು ಕೆರೆಗೆ ಹಾರವಾದವರು ಎಷ್ಟೋ! ಪರಂಪರಾಗತ ಸ್ತ್ರೀ ಮೌಲ್ಯಗಳು – ಕೋಮಲತೆ, ವಿನಿಯ, ವಿಧೇಯತೆ, ನಿಗರ್ವ, ಅಸ್ಥಿರತೆ, ಸಮಗ್ರತೆ, ಜಡತೆ, ಸಂಗೋಪನಾಶೀಲತೆ, ಭಾವನಾ ಪ್ರಧಾನತೆ ಮುಂತಾದ ಗುಣಗಳು 'ಸ್ತ್ರೀತ್ವ' ದ ಲಕ್ಷಣಗಳೆಂದು ಶತಮಾನದಿಂದ ಸಾರುತ್ತಾ ಬಂದಿವೆಯೆಂದು ಬಿ.ಎನ್. ಸುಮಿತ್ರಾಬಾಯಿ ಹೇಳುತ್ತಾರೆ. ಹೀಗೆ ಮೇಲೆ ತಿಳಿಸಿದ "ಸ್ತ್ರೀತ್ವ" ದ ಲಕ್ಷಣವೇ "ಸುಸಂಪನ್ನ ಹುಡುಗಿಯ ಉಸ್ಮಾದ" ಕ್ಕೆ ಟಾಟಾ ಹೇಳುವದು. ವೀಣಾ ಶಾಂತೇಶ್ವ ಅವರ 'ಹೇಗೊಂದು ಕತೆ' ಯ ನಾಯಕಿ ಇಂಥ 'ಗುಡ್ ಗರ್ಲಾ ಸಿಂಡ್ರೀಮ್' ಅನ್ನು ಕನ್ನಡದ ಸಂದರ್ಭದಲ್ಲಿ ಮೊದಲ ಬಾರಿ ದಾಟಿದ್ದಾಳೆ. ಪ್ರಜ್ಞಾಪೂರ್ವಕವಾಗಿ ನಡೆಯುವ 'ಈ ದಾಟುವಿಕೆ' ಒಂದು ಐತಿಹಾಸಿಕ ಸತ್ಯವನ್ನು ಅಲ್ಲಗಳೆಯುತ್ತದೆ. ಗಂಡಸಿನ ಶಕ್ತಿಯ ವಿರಾಟ ಸ್ವರೂಪವನ್ನು, ಅವನ ವ್ಯಕ್ತಿತ್ವದ ಸೂಪರ್ ಮ್ಯಾನ್ ಮಿಥಾ ಅನ್ನು ಸುಳ್ಳು ಎಂದು ಜಾಹೀರು ಮಾಡುತ್ತದೆ. ಹೀಗೆ ಆದಾಗ ಸ್ತ್ರೀಗೂ ಗೊತ್ತಿಲ್ಲದಂತೆ ಒಂದು 'ಜೈವಿಕ ಕ್ರಿಯೆ' ನಡೆಯುತ್ತದೆ. ಮಹಿಳೆ, ಸ್ತ್ರೀವಾದದ ಕೇವಲ 'ಕರ್ತೃ' ಮಾತ್ರ ಅಲ್ಲ 'ಶಕ್ತಿ'ಯೂ ಆಗುತ್ತಾಳೆ ಮತ್ತು ಒಬ್ಬ ಮಹಿಳೆಯ ರೂಪದಲ್ಲಿ ಇನ್ನೊಬ್ಬ ಮಹಿಳೆಯಾಗಿ', ಸ್ತ್ರೀ ಚಿಂತನೆಯನ್ನು ಗಳಿಸುವುದು ಅವಳಿಗೊಂದು ಅರ್ಥವಂತಿಕೆಯನ್ನು ತರುತ್ತದೆ ಮತ್ತು ಹಾಗಾದಾಗ ಮಾತ್ರ ಅವಳು "ಕರ್ತೃ" ಆಗುತ್ತಾಳೆ, ಹೀಗೆ "ಕರ್ತೃ"ವಿನ ಸ್ಥಾನದಲ್ಲಿ ನಿಂತಾಗ 'ಇತಿಹಾಸ ಉಲ್ಟಾ' ಆಗುತ್ತದೆ.

ಇಲ್ಲಿಯವರೆಗೆ 'ವಿಷಯ ವಸ್ತುವಾಗುದ್ದ' ಮಹಿಳೆಗೆ ಈಗ 'ಪುರುಷ' ವಿಷಯ ವಸ್ತುವಾಗುತ್ತಾನೆ. ಗಂಡಸು ಮಾಡಿದ್ದರ ಪುನರಾವರ್ತನೆಯಾಗುತ್ತದೆ. ಈಗ 'ಗಂಡಸು' ವಿಶ್ಲೇಷಣೆಯ 'ವಿಷಯ ವಸ್ತು' ವಾಗುತ್ತಾನೆ ಮತ್ತು ಈ 'ವಿಷಯ ವಸ್ತು' ವಿನ ಯೋಚನಾ ವಿಧಾನ ಬದಲಾಗಬೇಕೆಂದು ಮಹಿಳೆ ಒತ್ತಾಯಿಸಿತ್ತಯಾಳೆ, ಹೀಗಾಗಿ 'ಗಂಡಸು' ಹಾಗು ಅವನ ಪ್ರತಿನಿಧಿಸುವ 'ಪಿತ್ರ್ಯ ಪ್ರಧಾನ ವ್ಯವಸ್ಥೆ' ಯನ್ನು ಕಟಕಟೆಯಲ್ಲಿ ನಿಲ್ಲಿಸಲಾಗುತ್ತದೆ. ಯಾರು ಯಾವಾಗಲೂ, 'ಕರ್ತೃ' ವೇ ಆಗಿದ್ದರೋ ಅವರೀಗ 'ಕರ್ಮ' (ಆಬ್ಜೆಕ್ಟ) ವಾಗುತ್ತಾರೆ. ಹೀಗಾಗುವ ಮೂಲಕ ಒಂದು 'ಜೈವಿಕ ಇರುಸುಮುರುಸು' ವಿಕೆಯ ಜನನವಾಗುತ್ತದೆ. 'ಪುರುಷನ' ಸೂಪರ್ ಮ್ಯಾನ್ ಇಮೇಜು ಟೊಳ್ಳು ಎಂದು ಜಗಜ್ಜಾಹೀರಾಗುವುದರೂಂದಿಗೆ, ಸ್ತ್ರೀಯ ವ್ಯಕ್ತಿತ್ವ ಅಖಂಡ ಗಟ್ಟಿಗೊಳ್ಳತೊಡಗುತ್ತದೆ. ವಿಮರ್ಶೆಯ ಇಲ್ಲಿಯವರೆಗಿನ ಶಾಸ್ತ್ರಗಳು 'ಕರ್ತೃ'ವಿನ ರೂಪದಲ್ಲಿ ಗಂಡಸನ್ನು ಗುರುತಿಸುತ್ತಿದ್ದವು ಅವು ಈಗ 'ಕರ್ತೃ'ವಿನ ರೂಪದಲ್ಲಿ 'ಸ್ತ್ರೀ' ಯನ್ನು ಪಡೆದು ನಿರಾಸೆಯಾಗುತ್ತವೆ.

ನಮ್ಮ ಭಾಷೆಯ ಬಗ್ಗೆ ಕೆಲವು ಬಹಳ ಸರಳವಾದ ಸತ್ಯಗಳಿವೆ. ಅವೆಂದರೆ – ನಮಗೆ ಎರಡು ತುಟಿಗಳಿವೆ ಎರಡೂ ಕೂಡುತ್ತವೆ. ಒಂದು ಲಯದಲ್ಲು ಗತೀಶೀಲವಾಗಿರುತ್ತವೆ. ಕಾರಣ ಭಾಷೆಯಾಗುತ್ತದೆ. ಒಂದು ತುಟಿ ಅಲುಗಾಡಿದಾಗ ಇನ್ನೊಂದು ಸುಮ್ಮನಿದ್ದರೆ ಭಾಷೆ ಹುಟ್ಟುವುದಿಲ್ಲ. ಭಾಷೆಯ ಸಾರ ಸಂವಾದವೇ ಹೊರತು ಭಾಷಣವಲ್ಲ. ಎರಡೂ ತುಟಿಗಳ ಅಸ್ತಿತ್ವವನ್ನು ದೃಢಪಡಿಸುವುದೇ ಭಾಷೆ. ಭಾಷೆ ತನ್ನ ಪೂರ್ಣತೆಯಲ್ಲಿ ಯಾವದೇ ಪ್ರಕಾರದ ಒಂಟಿತನವನ್ನು ಸಹಿಸುವುದಿಲ್ಲ(ಡಾ. ದಿಲೀಪಸಿಂಹ). ಅದಕ್ಕಾಗಿಯೇ ಅದು ಯಾವುದೇ ತರಹದ ಅನ್ಯಾಯದ ವಿರುದ್ಧ ತನ್ನ ಸ್ವರವನ್ನು ಹೊರಡಿಸುತ್ತದೆ. ವ್ಯಕ್ತಿಯನ್ನು ನಿಯಂತ್ರಣದಲ್ಲಿಡುವ ಸಾಂಸ್ಕೃತಿಕ ಷಡ್ಯಂತ್ರದ ಅಂಗವಾಗಿ ಭಾಷೆಯನ್ನು ರೂಪಿಸಿದಾಗಲೆಲ್ಲಾ, ಭಾಷೆಯಿಂದಲೇ ಅದನ್ನು ಠುಸ್ ಮಾಡುವ ತಂತ್ರಜ್ಞಾನವನ್ನು ಅದು ಸಿದ್ಧ ಮಾಡಿಕೊಂಡಿರುತ್ತದೆ. ವಾಕ್ಯದ ಎರಡು ಖಂಡಗಳಿರುತ್ತವೆ – ಉದ್ದೇಶ ಮತ್ತು ವಿಧೇಯ. ಅಧಿಕಾರವಿರುವವರ ಕೈಯಲ್ಲಿ ಸಬ್ಜೆಕ್ಟ್ ಪೂಜಿಶನ್ ಇರುತ್ತದೆಂದು ನಾವೆಲ್ಲ ಬಲ್ಲೆವು.

ಕರ್ತೃವೂ ಅವರೇ ಮತ್ತು ವಕ್ತಾರರೂ ಅವರೇ ಆಗಿರುತ್ತಾರೆ. ಉಳಿದವರು ಶ್ರೋತೃಗಳಾಗಿರುತ್ತಾರೆ. ಕೇವಲ

ಮೂಕ ಸಾಕ್ಷಿ! ವಿಧೇಯದ ಸ್ಥಾನದಲ್ಲಿ(ಆಬ್ಜೆಕ್ಟ್ ಪೊಜಿಶನ್) ಸ್ತ್ರೀಯನ್ನು ಇಟ್ಟು ಧೈರ್ಯ ಮತ್ತು ಸಹನೆಯ, ಧರ್ಮದ ಮತ್ತು ಮೌನದ ಮಹಾತ್ಮೆಯನ್ನು ಪುರುಷ ಪ್ರತಿಪಾದಿಸುವುದು ಸಕಾರಣವೇ ಆಗಿದೆ. ಮಾತನಾಡುವವರ ಪ್ರಮುಖ ಗುಣ ಭಾಷಣವಾದರೆ ಕೇಳುಗರ ಪ್ರಮುಖ ಗುಣ ಮೌನ! ಈ ಕುರಿತಂತೆ ಒಂದು ಮೌನ ಸಹಮತಿ ಎಲ್ಲರ ಮನದಲ್ಲಿಯೂ ನಿರ್ಮಾಣವಾದ ಹಾಗಿದೆ. ಸ್ತ್ರಿಯರಲ್ಲಿ ಯಾರು ಮಾತನಾಡುತ್ತಾರೆ? ಅಥವಾ ಸ್ತ್ರೀಯರೆಲ್ಲರೂ ಮಾತನಾಡು ತ್ತಾರೆಯೇ? ದ್ವಿತೀಯ-ತೃತೀಯ ದರ್ಜೆಯ ಸ್ತ್ರೀಯರು ಮಾತನಾಡುತ್ತಾರೆಂಬುದನ್ನು ನಮ್ಮ ಧಾರ್ಮಿಕ ಗ್ರಂಥಗಳು ಒತ್ತಿ ಹೇಳುತ್ತವೆ. ಯಾಕೆಂದರೆ ಇವರಿಗೆ ಮಾತ್ರ ಮಾತ ನಾಡುವ ಅವಶ್ಯಕತೆ ಇರುತ್ತದೆ. - ಇವರ ರೊಮ್ಯಾಂಟಿಕ್, ರಹಸ್ಯಮಯ ಮೌನದ ಆವರಣವೂ ಜನರ ಗಮನವನ್ನು ಸೆಳೆಯುವಲ್ಲಿ ಸಮರ್ಥವಾಗುವುದಿಲ್ಲ. ಇವರಿಗೊಂದು ವಿಶೇಷ ಪ್ರಕಾರದ ಕೊರತೆ, ಒಂದು ವಿಶೇಷ ಪ್ರಕಾರದ ನಿಕೃಷ್ಟತೆ, ಒಂದು ವಿಶೇಷ ಪ್ರಕಾರದ ಅತೃಪ್ತಿ ಇವರನ್ನು ಮಾತನಾಡಲು ಪ್ರೇರೇಪಿಸುತ್ತದೆ. ವೇಶ್ಯೆಯರು, ರಣಚಂಡಿಯರು, ವಿಷಕನ್ಯೆಯರು ಮತ್ತು ದಾಸಿಯರು ಮಾತ್ರ ಮಾತನಾಡುತ್ತಾರೆಂದು ನಮ್ಮ ಮಹಾಕಾವ್ಯಗಳ ಅಂಬೋಣವಾಗಿದೆ. ಹಾಗೆ ನೋಡಿದರೆ ಈ ಅಭಾಗಿನಿಯರಿಗೆ ಮಾತನಾಡದೇ ಹೊಟ್ಟೆ ತುಂಬುವುದಿಲ್ಲ.

ಸ್ತ್ರೀ ವಿರುದ್ಧ ಇಂಥ ಪೂರ್ವಾಗ್ರಹಗಳನ್ನು ಸಮಾಜದಲ್ಲಿ ಕಾಲ ಕಾಲಕ್ಕೆ ಬಿತ್ತುತ್ತಲೇ ಬರಲಾಗಿದೆ ಹಾಗೂ ಅದನ್ನು ಆಗಾಗ್ಗೆ ದೃಢೀಕರಿಸಲಾಗುತ್ತದೆ. ಇಂಥ ಪೂರ್ವಾಗ್ರಹಗಳ ವಿರುದ್ಧ ಸ್ತ್ರೀಭಾಷೆ ತನ್ನನ್ನು ತಾನು ಗಟ್ಟಿಗೊಳಿಸಿಕೊಳ್ಳಬೇಕಾಗಿದೆ. ಇಂಥ ಸಂದಿಗ್ಧ ಸ್ಥಿತಿಯಲ್ಲೂ ಸ್ತ್ರೀ ಬರವಣಿಗೆಯ ಭಾಷೆಯಲ್ಲಿ ಎಂಥ ರಚನಾತ್ಮಕ ರೂಪಗಳು ಅಭಿವ್ಯಕ್ತಗೊಳ್ಳುತ್ತವೆ! ಸ್ತ್ರೀಬರವಣಿಗೆಯಲ್ಲಿ ಶಬ್ದ ಮತ್ತು ವಾಕ್ಯಗಳ ನಡುವೆ ಬಿರುಕು, ಸ್ಖಲನ, ನಿಶ್ಯಬ್ದಗಳ ಅರ್ಥಾತ್ ಪ್ರಾಕ್ ಭಾಷಾ ಸಂವೇದನೆಗಳ ಸಂಕೇತಾತ್ಮಕ, ತರ್ಕಬದ್ಧವಾದ ಸ್ಥಿತಿ ನಿರ್ಮಾಣವಾಗುವುದನ್ನು ನೋಡಿದರೆ ಕಾಲಾಂತರದಿಂದ ನಡೆದು ಬಂದಿರುವ ಸಬ್ಜೆಕ್ಟ್ ಪೊಜಿಶನ್ ಪಲ್ಲಟಿಯಾಗಬಹುದು. ಇವೆಲ್ಲವುಗಳ ಸಮಾಂತರವಾಗಿ ಆಧುನಿಕ ಬರಹ ಗಾರ್ತಿಯರು, ಬಂಜಗೆರೆಯ ಉಲ್ಲಿಬ ಕಮ್ಮ, ಬುರ್ರ ಕಥಾ ಈರಮ್ಮ, ಗಿಡಿಕೆರೆ ರಾಮಕ್ಕ ಮುಗ್ಗೇರಿ ಮುಂತಾದ ಜಾನ ಪದ ಹಾಡುಗಾರರು, ಸ್ತ್ರೀ ಜಾನಪದ ಕಥೆಗಾರರು ಭಾಷೆಯ ಒಂದು ಸಶಕ್ತ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಇವರ ಅಭಿವ್ಯಕ್ತಿಯಲ್ಲಿ ವಿಶೇಷ ಪ್ರಕಾರದ ಗತಿಇದೆ, ಪುಷ್ಟವಾದ, ಜೀವಂತ ಭಾಷೆ ಇದೆ. ಹರಿತವಾದ ದೃಷ್ಟಾಂತಗಳಿಂದ ಇವರು ಥಟ್ಟನೆ ಓದುಗರ ಮನವನ್ನು ತಟ್ಟುತ್ತಾರೆ,

ಕಾವ್ಯದ ಬಗ್ಗೆತಿಳಿದವರೇ
ಹೇಳಿ. ನನಗೆ ಕಾವ್ಯ ಗೊತ್ತಿಲ್ಲ
ತಿಳಿಸಾರು ಗೊತ್ತು.

....

ಕಾವ್ಯದ ಬಗ್ಗೆ ದಪಡ್ದಕ್ಕೆ ತಿಳಿದವರೇ
ಹೇಳಿ. ಗೊತ್ತೇ ತಿಳಿಸಾರು ನಿಮಗೆ?
ಕ್ಷಮಿಸಿ ಗೊತ್ತಿಲ್ಲ ಕಾವ್ಯ ನನಗೆ
(ವೈದೇಹಿ)

ಕವಯಿತ್ರಿ ಇಲ್ಲಿ ದೊಡ್ಡ ದೊಡ್ಡ ಕಾವ್ಯ ಮಿಮಾಂಸಕರನ್ನು ತಿಳಿಸಾರಿನ ಕೆಮಿಸ್ಟ್ರಿ ಬಗ್ಗೆ ವಿಚಾರಿಸಿ ದಂಗು ಬಡಿ

ಪುರುಷನ ಕಾಮ ಸಂವೇದನೆಗಳ ಕೇಂದ್ರ ಒಂದೇ ಒಂದು- ಅದು ಲಿಂಗ. ಆದರೆ ಸ್ತ್ರೀಯ ಕಾಮದ ಸೂಕ್ಷ್ಮ ತಂತುಗಳು ಅವಳ ಸಂಪೂರ್ಣ ಶರೀರದಲ್ಲಿ ಹರಡಿ ಕೊಂಡಿವೆ. 'ಲುಯಸ್‌ಇರಿಗರಿ' ಎಂಬ ಮನಃ ಶಾಸ್ತ್ರಜ್ಞೆಯ ಪ್ರಕಾರ ಕಾಮಸಂವೇದನೆಯ ಕೇಂದ್ರಿಕೃತ ಮತ್ತು ಏಕ ಪಕ್ಷೀಯ ವ್ಯವಸ್ಥೆಯ ಕಾರಣದಿಂದ ಗಂಡಸಿನ ತಿಳುವಳಿ ಕೆಯೂ ಏಕಪಕ್ಷೀಯ ಮತ್ತು ಏಕಕೇಂದ್ರಿಯವಾಗಿರುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಸ್ತ್ರೀಯ ಕಾಮದ ಬಗೆಗಿನ ತಿಳುವಳಿಕೆ ಬಹುಪಕ್ಷೀಯ ಮತ್ತು ಬಹುಕೇಂದ್ರಿಯವಾಗಿರುತ್ತದೆ. ಇರಿಗರಿಯ ಮೇಲೆ ಡೆರಿಡಾನ ಆಳವಾದ ಪ್ರಭಾವವಿತ್ತು. ಇದು ವಾಸ್ತವಿಕ ಸತ್ಯ ಕೂಡಾ. ಆರಂಭಿಕ ಶಬ್ದದಿಂದಲೇ ಲೇಖಕ ಸ್ತ್ರೀಯೋ ಅಥವಾ ಪುರುಷನೋ ಎಂದು ನಮಗೆಲ್ಲಾ ತಂತಾನೆ ಗೊತ್ತಾಗುತ್ತದೆ! ಲೇಖಕನ ಹೆಸರನ್ನು ಪರೀಕ್ಷಿಸುವ ಅಗತ್ಯವೇ ಬೀಳುವುದಿಲ್ಲ. ಸ್ತ್ರೀಯರ ಅನು ಭೂತಿ ಮಂಡಲ, ಅವರ ಜೀವನ ಮೌಲ್ಯ, ಅವರ ಸಂವೇ ದನೆಯ ಮೂಲ ಮಾತ್ರ ವಿಶಿಷ್ಟವಲ್ಲ, ಅವಳ ಶಬ್ದದ ಆಯ್ಕೆ, ಸ್ವರ ಲಹರಿ, ಬಿಂಬ ವಿಧಾನ ಮತ್ತು ಭಾಷಾ ಪ್ರವಾಹ ಎಲ್ಲವೂ ವಿಶೇಷ ಐಡೆಂಟಿಟಿಯನ್ನು ಹೊಂದಿರುತ್ತವೆ.

ಸುತ್ತಾಳೆ!, ತಿಳಿಸಾರು ಎಂದರೆ ಏನೆಂದುಕೊಂಡಿರು, ಎಂದು ಸವಾಲು ಎಸೆಯುತ್ತಾಳೆ. ಅದಲ್ಲೆ ಬೇಕಾದ ಜಲ ತತ್ವ, ಗಂಧತತ್ವ, ಸಾರತತ್ವಗಳ ಮಹತ್ವವನ್ನು ಕವಿಯಿತ್ರಿ ಪ್ರತಿ ಪಾದಿಸುವರೀತಿ ಅತ್ಯಂತ ವಿಶಿಷ್ಟವಾಗಿದೆ. ಸ್ತ್ರೀಗೂ ತನ್ನದೇ ಆದಲೋಕವಿದೆ. ಹಾಗೂ ಆ ಲೋಕದಿಂದ ದಿನವೂ ಸಂತೃಪ್ತರಾಗುವ ಪುರುಷರು ಆಕೆಯ ಈ ಕೆಮಿಸ್ಟ್ರಿಯಿಂದ ಅಪರಿಚಿತರಾಗಿಯೇ ಉಳಿದು ಬಿಡುತ್ತಾರೆ. ಹೀಗೆ ತುಂಬು ಆತ್ಮವಿಶ್ವಾಸದೊಂದಿಗೆ ಸ್ತ್ರೀ ಸೃಜನಶೀಲತೆಯಡೆಗೆ ದಾಪು ಗಾಲು ಹಾಕುತ್ತಿದ್ದಾಳೆ.

ಜಾಕ್ಯೂಸ್ ಡೆರಿಡಾನ ಸಂರಚನೋತ್ತರವಾದ ಮತ್ತು ಫ್ರಾನ್ಸಿನ ಮನೋವಿಜ್ಞಾನಿ ಜ್ಯಾಂಕಾ ಲಾಂಕಾನ ಮನೋ ವಿಶ್ಲೇಷಣೆಯನ್ನು ಆಧಾರವಾಗಿಟ್ಟುಕೊಂಡು ಫ್ರೆಂಚ್ ಭಾಷಾ ವಿಜ್ಞಾನಿಗಳು ಮೊಟ್ಟ ಮೊದಲು ಎತ್ತಿದ ಪ್ರಶ್ನೆಯೆಂದರೆ ಲಿಂಗ ಶೋಷಣೆಯ ಬಹುದೊಡ್ಡ ಅಸ್ತ್ರ ಮತ್ತು ಬಹುದೊಡ್ಡ ಕನ್ನಡಿ ಸ್ವತಃ ಭಾಷೆಯಾಗಿದೆ. ಈ ಭಾಷೆ(ಫೆಲೋಸೆಂಟ್ರಿಕ್) ಸಹ-ಕೇಂದ್ರೀಕೃತವಾಗಿದೆ ಮತ್ತು ಈ ಸಹ - ಕೇಂದ್ರೀಕೃತವಾದದ ಕಾರಣ ಇದನ್ನು ಫ್ರೆಂಚ್ ಸ್ತ್ರೀವಾದಿಗಳು ವಿರೋಧಿಸುತಾರೆ. ಭಾಷೆಯ ಯುದ್ಧವನ್ನು ಅವರು ಭಾಷಾಗತ ಅಸ್ತ್ರಗಳ ಮೂಲಕವೇ ಹೋರಾಡ ಬಯಸುತ್ತಾರೆ. ಶತಮಾನಗಳ ಭಾಷಾ ಚಕ್ರವ್ಯೂಹವನ್ನು ಭೇದಿಸಬೇಕೆನ್ನುತ್ತಾರೆ ಮತ್ತು ಚಕ್ರವ್ಯೂಹ ಭೇದಿಸಲು ಜರೂರಿ ಶರ್ತವೆಂದರೆ ವ್ಯೂಹದ ಸಂರಚನೆಯನ್ನು ತಿಳಿದುಕೊಳ್ಳುವುದು ಎಂದು ಅವರಿಗೆ ಗೊತ್ತು. ಕಾಮ ಸಂವೇದನೆಗಳ ಸೀದಾ ಸಂಬಂಧ ಭಾಷಿಕ ಸಂವೇದನೆಗಳ ಜೊತೆಗಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಪುರುಷನ ಕಾಮ ಸಂವೇದನೆಗಳ ಕೇಂದ್ರ ಒಂದೇ ಒಂದು- ಅದು ಲಿಂಗ. ಆದರೆ ಸ್ತ್ರೀಯ ಕಾಮದ ಸೂಕ್ಷ್ಮ ತಂತುಗಳು ಅವಳ ಸಂಪೂರ್ಣ ಶರೀರದಲ್ಲಿ ಹರಡಿಕೊಂಡಿವೆ. 'ಲುಯಸ್‌ಇರಿಗರಿ' ಎಂಬ ಮನಃ ಶಾಸ್ತ್ರಜ್ಞೆಯ ಪ್ರಕಾರ ಕಾಮಸಂವೇದನೆಯ ಕೇಂದ್ರಿಕೃತ ಮತ್ತು ಏಕ ಪಕ್ಷೀಯ ವ್ಯವಸ್ಥೆಯ ಕಾರಣದಿಂದ ಗಂಡಸಿನ ತಿಳುವಳಿಕೆಯೂ ಏಕಪಕ್ಷೀಯ ಮತ್ತು ಏಕಕೇಂದ್ರಿಯವಾಗಿರುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಸ್ತ್ರೀಯ ಕಾಮದ ಬಗೆಗಿನ ತಿಳುವಳಿಕೆ ಬಹುಪಕ್ಷೀಯ ಮತ್ತು ಬಹುಕೇಂದ್ರಿಯವಾಗಿರುತ್ತದೆ. ಇರಿಗರಿಯ ಮೇಲೆ ಡೆರಿಡಾನ ಆಳವಾದ ಪ್ರಭಾವವಿತ್ತು. ಇದು ವಾಸ್ತವಿಕ ಸತ್ಯ ಕೂಡಾ. ಆರಂಭಿಕ ಶಬ್ದದಿಂದಲೇ ಲೇಖಕ ಸ್ತ್ರೀಯೋ ಅಥವಾ ಪುರುಷನೋ ಎಂದು ನಮಗೆಲ್ಲಾ ತಂತಾನೆ ಗೊತ್ತಾಗುತ್ತದೆ! ಲೇಖಕನ ಹೆಸರನ್ನು ಪರೀಕ್ಷಿಸುವ ಅಗತ್ಯವೇ ಬೀಳುವುದಿಲ್ಲ. ಸ್ತ್ರೀಯರ ಅನುಭೂತಿ ಮಂಡಲ, ಅವರ ಜೀವನ ಮೌಲ್ಯ, ಅವರ ಸಂವೇದನೆಯ ಮೂಲ ಮಾತ್ರ ವಿಶಿಷ್ಟವಲ್ಲ, ಅವಳ ಶಬ್ದದ ಆಯ್ಕೆ, ಸ್ವರ ಲಹರಿ, ಬಿಂಬ ವಿಧಾನ ಮತ್ತು ಭಾಷಾ ಪ್ರವಾಹ ಎಲ್ಲವೂ ವಿಶೇಷ ಐಡೆಂಟಿಟಿಯನ್ನು ಹೊಂದಿರುತ್ತವೆ. ಹಾಂ ಕೆಲವು ಸ್ತ್ರೀಯರು ಪ್ರಯತ್ನ ಪೂರ್ವಕವಾಗಿ ಭಾಷೆಯ ಪರದೆಯ ಹಿಂದೆ ಅವುಗಳನ್ನೆಲ್ಲ ಮುಚ್ಚಿಡಲು ಪ್ರಯತ್ನಿಸಿರಬಹುದು. ಇನ್ನು ಕೆಲವರು ಗಂಡಸಿನ ನುಡಿಗಟ್ಟಿನಲ್ಲಿ ಬರೆಯುವ ಪ್ರಯತ್ನಮಾಡಿದ್ದರೂ ಅವರು ಕಾಮಡಿಯ ಸ್ತರದಲಿಯೇ ಉಳಿದುಬಿಟ್ಟಿದ್ದಾರೆ.

ಇದು ಅಸಹಜ ಕೂಡಾ. ಸ್ತ್ರೀ ತನ್ನದೇ ಆದ ನುಡಿಗಟ್ಟಿನಲ್ಲಿ ಬರೆದಾಗ ಅವಳ ಬರವಣಿಗೆ ಸಹಜವಾಗಿರುತ್ತದೆ. ಕತೆಗಾರ್ತಿ ವೈದೇಹಿ 'ನಾವೇಕೆ ಪುರುಷ ದನಿಯಲ್ಲಿ ಮಾತನಾಡಬೇಕು? ನಾವು ನಮ್ಮ ಕಂಠದಲ್ಲಿ ಹಾಡೋಣ'

ಎಂದು 'ನಮ್ಮ ಲೋಕದ ಗೀತೆ' ಎಂಬ ಪ್ರಬಂಧದಲ್ಲಿ ವಾದಿಸುತ್ತಾರೆ'. ಪುರುಷನ ದನಿ ಕಗ್ಗವಾಗಿರುತ್ತದೆ ಮತ್ತು ಸ್ತ್ರೀ ಕಂಠ ಹಾಡಲು ಸದಾಸಿದ್ಧವಾಗಿರುತ್ತದೆ ಎಂಬುದನ್ನೂ ಮೇಲಿನ ಸ್ತ್ರೀಯ ದೈಹಿಕ ಸಂವೇದನೆಗಳು ಮತ್ತು ಮಾತುಗಳು ಧ್ವನಿಸುತ್ತವೆ. ಸ್ತ್ರೀಯ ದೈಹಿಕ ಸಂವೇದನೆಗಳು ಮತ್ತು ವಿಶಿಷ್ಟ ಅನುಭೂತಿಗಳಾದ ಪ್ರಜನನ ಶಕ್ತಿ, ಋತು ಚಕ್ರ, ಹಾಲೂಡಿಸುವುದು ಮುಂತಾದವುಗಳ ಅಭಿವ್ಯಕ್ತಿಗೆ ವಿಶಿಷ್ಟ ಭಾಷೆಯ ಅವಶ್ಯಕತೆಯಿದೆಯೆಂದು ಭಾಷಾ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಸ್ತ್ರೀ ಲೆಕ್ಕಣಿಕೆಯನ್ನು ಮಸಿಯಲ್ಲಿ ಅಲ್ಲ ಎದೆಹಾಲಿನಲ್ಲಿ ಅದ್ದಿ ಬರೆಯುತ್ತಾಳೆಂದು ನಮಗೆ ಸರಾ ಅಬೂಬಕ್ಕರ್ ಅವರ ಕಥೆ ಕಾದಂಬರಿಗ ಳನ್ನು ಓದಿದಾಗ ಖಾತ್ರಿಯಾಗುತ್ತದೆ. ಇಪ್ಪತ್ತಾರು ವರ್ಷಗಳ ಹಿಂದೆ ಪ್ರಕಟವಾದ ಅವರ 'ಚಂದ್ರಗಿರಿಯ ತೀರದಲ್ಲಿ' ಯ 'ನಾದಿರಾ'ಳ ಮೂಲಕ ಹೆಣ್ಣಿನ ಕಷ್ಟವನ್ನು ಅವರು ತೋಡಿ ಇಟ್ಟಿದ್ದಾರೆ.

'ನಾದಿರಾ'ಳ ಬವಣೆಯ ಮುಂದುವರಿದ ಭಾಗವಾಗಿ 'ವಜ್ರಗಳು' ಕಾದಂಬರಿಯ 'ನಫೀಸಾ' ನಮ್ಮ ಮನವನ್ನು ಕಲಕುತ್ತಾಳೆ. ಹೆಂಗಸಿನ ಕಷ್ಟಕ್ಕೊಂದು ಸೀಮೆಯಿಲ್ಲವೇ ಎಂದು ನಮಗೆ ಅನ್ನಿಸುವುದು, ಅನಂತ ಕಾಲದಿಂದ ಹೆಂಗಸು ಎಲ್ಲವನ್ನೂ ಹೊಟ್ಟೆಯಲ್ಲಿ ಮುಚ್ಚಿಟ್ಟುಕೊಂಡು ಬಂದ ಕಾರಣ ಅವರ ಹೊಟ್ಟೆ ತುಂಬಿ ಹೊರ ಚೆಲ್ಲಿದೆ! ದುಃಖದ ಹೊಟ್ಟೆಯ ಕಟ್ಟೆಯೊಡೆದಾಗ ತಾನೇ 'ಚಂದ್ರಗಿರಿಯ ತೀರದಲ್ಲಿ' ಯ ಹೆಂಗಳೆಯರ ಮಡುಗಟ್ಟಿದ ನಿಟ್ಟುಸಿರು ಹರಿದದ್ದು. ಉಳ್ಳಾಗಡ್ಡಿಯ ಪದರಿನ ಹಾಗೆ ಹೆಂಗಸರ ದುಃಖದ ಪದರು ಬಿಚ್ಚಿಕೊಳ್ಳು ವುದು. 'ಹೌದೇ ನಮ್ಮ ಜೊತೆಗೇ ಇದ್ದವರು ಒಳಗೊಳಗೆ ಇಷ್ಟೊಂದು ದುಃಖ ಅದುಮಿಟ್ಟುಕೊಂಡು ಬದುಕುತ್ತಿದ್ದಾರೆಯೇ' ಎಂದು ನಮಗೆಲ್ಲರಿಗೂ ಅನ್ನಿಸತೊಡಗಿದ್ದು.

ಸ್ತ್ರೀಯರ ಸ್ವಾಭಿಮಾನವನ್ನು ಕೆರಳಿಸುವುದಕ್ಕಾಗಿ ಡೆರಿಡಾ ಒಂದು ಸಲ "ಬೇರೆ ತರ ಐಡಿಂಟಿಟಿ ಬೇಕಾಗಿದ್ದರೆ ಹೆಂಗಸರ ವಿಷಯ ಕುರಿತು ಬರೆಯುವುದನ್ನು ಬಟ್ಟು ಬಿಡಿ, ಆದರೆ ಗಂಡಸರ ಅನುಕರಣೆಯಿಂದ ದೂರವಿರಿ. ವಿಶೇಷ ಐಡೆಂಟಿಟಿಗಾಗಿ ನೀವು ಗಂಡಸಾಗುವ ಹರಕತ್ತಿಲ್ಲ. ಹತ್ತೊಂಭತ್ತನೆಯ ಶತಮಾನದ ಭಾರತದಲ್ಲಿ ಇಂಗ್ಲೀಷ್ ಜ್ಞಾನ ಸಂಪಾದಿಸಲು ಇಂಗ್ಲೀಷರಾಗುವ ಅವಶ್ಯಕತೆ ಬೀಳಲಿಲ್ಲ" ಎಂದು ಹೇಳಿದನು. ಪುರುಷರ ಬರವಣಿಗೆಯ ಶಬ್ಧಗಳ ಮಿತವ್ಯಯತೆ ಮತ್ತು ಜಿಪುಣತನದ ಸಂಬಂಧವು 'ಲಿಬಿಡಿನಲ್ ಇಕೊನೊಮಿ'ಯ ಜೊತೆಗಿರುವುದನ್ನು ನಾವು ಗುರುತಿಸಬಹುದು, ಗಂಡಸರು ಸ್ವಭಾವದಿಂದ ಸಂಗ್ರಹ ಪ್ರವೃತ್ತಿಯವರು, ದಾನಮಾಡುವ, ಹಂಚಿಕೊಂಡು ಉಣ್ಣುವ ಪ್ರವೃತ್ತಿಯವರಲ್ಲ, ಅವನ ಭಾಷೆ ಪೂರ್ಣವಾಗಿ ಸಂಪತ್ತು ಮತ್ತು ಅಧಿಕಾರ ಗ್ರಹಣದ ಭಾಷೆಯಾಗಿರುತ್ತದೆ. ಪಿತೃಸತ್ತಾತ್ಮಕ ವ್ಯವಸ್ಥೆಯಂತೂ ಸ್ತ್ರೀಯನ್ನು ಜೂಜಿಗೆ ಕೂಡಾ ಒಡ್ಡಲು ಯೋಗ್ಯವಾದ ಸಂಪತ್ತಿನ ಭಾಗವೆಂದು ತಿಳಿದಿತ್ತು. ತಂದೆಯಿಂದ ಗಂಡನಿಗೆ ವರ್ಗಾಯಿಸಲ್ಪಡುವ ಜಂಗಮ ಆಸ್ತಿಯೆಂದು ಹೆಂಗಸರನ್ನು ಪರಿಗಣಿಸಲಾಗುತ್ತಿತ್ತು ಮತ್ತು ಅವಳ ಮೇಲೆ ತಂದೆ ಅಥವಾ ಗಂಡನ ಸಂಪೂರ್ಣ ಹಿಡಿತವಿರುತ್ತಿತ್ತು.

ಜಾಕ್ವೆಸ್ ಡೆರಿಡಾನ ಸಂರಚನೋತ್ತರವಾದ ಮತ್ತು ಫ್ರಾನ್ಸಿನ ಮನೋವಿಜ್ಞಾನಿ ಜ್ಯಾಂಕಾ ಲಾಂಕಾನ ಮನೋ ವಿಶ್ಲೇಷಣೆಯನ್ನು ಆಧಾರವಾಗಿಟ್ಟುಕೊಂಡು ಫ್ರೆಂಚ್ ಭಾಷಾ ವಿಜ್ಞಾನಿಗಳು ಮೊಟ್ಟ ಮೊದಲು ಎತ್ತಿದ ಪ್ರಶ್ನೆಯೆಂದರೆ ಲಿಂಗ ಶೋಷಣೆಯ ಬಹುದೊಡ್ಡ ಅಸ್ತ್ರ ಮತ್ತು ಬಹುದೊಡ್ಡ ಕನ್ನಡಿ ಸ್ವತಃ ಭಾಷೆಯಾಗಿದೆ. ಈ ಭಾಷೆ ಸಹ–ಕೇಂದ್ರೀಕೃತವಾಗಿದೆ ಮತ್ತು ಈ ಸಹ – ಕೇಂದ್ರೀಕೃತವಾದದ ಕಾರಣ ಇದನ್ನು ಫ್ರೆಂಚ್ ಸ್ತ್ರೀವಾದಿಗಳು ವಿರೋಧಿಸುತ್ತಾರೆ. ಭಾಷೆಯ ಯುದ್ಧವನ್ನು ಅವರು ಭಾಷಾಗತ ಅಸ್ತ್ರಗಳ ಮೂಲಕವೇ ಹೋರಾಡ ಬಯಸುತ್ತಾರೆ. ಶತಮಾನಗಳ ಭಾಷಾ ಚಕ್ರವ್ಯೂಹವನ್ನು ಭೇದಿಸಬೇಕೆನ್ನುತ್ತಾರೆ ಮತ್ತು ಚಕ್ರವ್ಯೂಹ ಭೇದಿಸಲು ಜರೂರಿ ಶರ್ತೆಂದರೆ ವ್ಯೂಹದ ಸಂರಚನೆಯನ್ನು ತಿಳಿದುಕೊಳ್ಳುವುದು ಎಂದು ಅವರಿಗೆ ಗೊತ್ತು.

ಕೇವಲ ಸ್ತ್ರೀ ಭಾಷೆಯಲ್ಲಿ ವಿಸ್ತಾರ ಮತ್ತು ಬಹು ಆಯಾಮಿ ಅರ್ಥವೈಭವ ಸಾಧ್ಯವೆಂದು ಈ ಚರ್ಚೆಯ ಅರ್ಥವಲ್ಲ. ಮನಸ್ಸು ಮಾಡಿದರೆ ಪುರುಷ ಕೂಡಾ ತನ್ನಲ್ಲಿರುವ ಅಲಿಂಗಿಸಂವೇದನೆಗಳನ್ನು ಪ್ರಚೋದಿಸಿ, ಸ್ತ್ರೀ ಸಂವೇದನೆಗಳನ್ನು ಅರ್ಥಮಾಡಿಕೊಳ್ಳುವ ಹಂತವನ್ನು ತಲುಪಬಹುದು. ಹಾಗಾದಾಗ ಅವನು ಅರ್ಧ ನಾರೀಶ್ವರನಾಗಲು ಸಾಧ್ಯವಾಗುತ್ತದೆ. ಹಾಗೂ ಅವನ ಪಠ್ಯದ ಬಹು ಆಯಾಮಿ, ಬಹು ಕೇಂದ್ರೀಯ ಅಧ್ಯಯನ ಸಾಧ್ಯವಾಗಬಹುದು. ಜಗತ್ತಿನ ಬಹುದೊಡ್ಡ ಲೇಖಕರಿಗೆ ಪರಕಾಯ ಪ್ರವೇಶದ ತಾಕತ್ತಿದೆ. ಕಾಳಿದಾಸನಿಂದ ಹಿಡಿದು ಕುವೆಂಪುವರೆಗೆ ಇದನ್ನು ನಾವು ನೋಡುತ್ತೇವೆ. ಅರ್ಧನಾರೀಶ್ವರನಾಗುವ ಸ್ಥಿತಿಯೇ ಅವರಲ್ಲಿ ಸ್ತ್ರೀ ಸಂವೇದನೆಗಳನ್ನು ಅರ್ಥೈಸುವ ಶಕ್ತಿಯನ್ನು ಹುಟ್ಟುಹಾಕಿತ್ತು. ಹೀಗಾಗಿಯೇ ಇವರ ಸ್ತ್ರೀ ಪಾತ್ರಗಳು ಇಷ್ಟೊಂದು ಪ್ರಾಣತುಂಬಿಕೊಂಡು ಜೀವಂತವಾಗಿವೆ. ಕಾನೂರಿನ ಸುಬ್ಬಮ್ಮ ಇದಕ್ಕೊಂದು ಜೀವಂತ ಉದಾಹರಣೆ. ಲೇಖಕಿಯರ ಜೀವಂತ ಪುರುಷ ಚರಿತ್ರೆಯ ಹಿಂದೆ ಇದೇ ತರ್ಕ ಕಾರ್ಯಮಾಡುತ್ತದೆ. ಮಹಾಶ್ವೇತಾದೇವಿಯ ಪುರುಷ ಪಾತ್ರಗಳ ಜೀವನ ಪ್ರೀತಿಯನ್ನು ನಾವಿಲ್ಲಿ ಗಮನಿಸಬಹುದು.

ಎಪ್ಪತ್ತರ ದಶಕದಲ್ಲಿಯೇ ಸಂರಚನೋತ್ತರವಾದವು ಏಕಲಯ, ಏಕಸೂತ್ರ, ಸ್ವಯಂ ಪ್ರಭು ವ್ಯಕ್ತಿಯೆಂಬ ಹಳೆ ಮೌಲ್ಯಗಳನ್ನು ಅಪಹಾಸ್ಯಗೈದಿತ್ತು, ಏಕಾಧಿತ, ಅನಿರ್ಣಿತ, ಚಲನಶೀಲ ಉಪವ್ಯಕ್ತಿಗಳ ಸಮುಚ್ಚಯದ ರೂಪದಲ್ಲಿ 'ವ್ಯಕ್ತಿ'ಯ ಉಪಸ್ಥಾಪನೆಯು ಭಾಷೆ ಮತ್ತು ಆಸ್ಮಿತೆ, ಆವೇಗ ಮತ್ತು ಪಾಠದ ಮಧ್ಯದಲ್ಲಿ ಹೊಸ ಚರ್ಚೆಯನ್ನು ಆರಂಭಿಸಿದ್ದವು! ಇಂಥದರಲ್ಲಿ ಜ್ಯೂಲಿಯಾ ಕ್ರಿಸ್ತೇವಾ – ಭಾಷೆ ಪ್ರತಿಕ್ಷಣ ಪರಿವರ್ತನೆಗೊಳ್ಳುವ ಪ್ರಕ್ರಿಯೆ ಎಂದು ಹೇಳಿದಳು. ಅರ್ಥವಿನ್ಯಾಸಕ್ಕೆ ಸ್ಥಿರ ಚೌಕಟ್ಟಿನಲ್ಲಿ! ಮಾತೃಸತ್ತಾತ್ಮಕ ಪ್ರಾಕ್ ಇಡಿಪಸ್‌ದ ಸಂವೇದನೆಗಳಲಯ ಮತ್ತು ಪಿತೃಸತ್ತಾತ್ಮಕ ಸಾಮಾಜಿಕ ನಿಯಮ ನಿತ್ಯಗಳ ಮಧ್ಯದ ಅಂತರ್ ಪಠ್ಯಾತ್ಮಕ ಸಂವಾದವೇ ಆದರ್ಶ ಭಾಷೆ! ಥೇರಿಗಾಥದ ಬೌದ್ಧ ಭಿಕ್ಷುಣಿಯರು ಮತ್ತು ಮೀರಾಬಾಯಿ, ಅಕ್ಕಮಹಾದೇವಿ, ಸೂಳೆ ಸಂಕವ್ವೆ, ಗೊಗ್ಗವ್ವೆ ಯಿಂದ ಹಿಡಿದು ಎಚ್.ಎಲ್.ಪುಷ್ಪ ಮತ್ತು ವಿನಯಾ ಸರವರೆಗಿನ ಪ್ರತಿಯೊಬ್ಬ ಪ್ರಮುಖ ಬರಹಗಾರ್ತಿಯರಲ್ಲಿ ಭಾಷೆಯ ವಿಶಿಷ್ಟ ದನಿ ಗಂಗೂಬಾಯಿ ಹಾನಗಲ್‌ರ ಗಾಯಕಿಯ ಹಾಗೆ ಕಿವಿಗೆ ಅಪ್ಪಳಿಸುತ್ತದೆ.

ಹೆಚ್ಚಿನ ಓದಿಗೆ

1. Literary Domesticity and Women writings: Subjectivities
2. Institutionality: Linda Peterson
3. The re- Production of Mothering : Psychonalysis and Sociology of gender - Nancy Chodorow
4. Bahina bai: A Transalation of autobiography and verses by Justin E Abbott, Delhi 1985
5. Desire In Language, Julia Kristeva
6. ಮೈನೇಜರ ಪಾಂಡೇಯ : ಸಾಹಿತ್ಯ ಕೆ ಸಮಾ ಜಶಾಸ್ತ್ರ (ಹಿಂದಿ)
7. Lucy freeman & Herbert S. Strean: Freud & Women, New York : Fredrick Ungar Publishing Co. 1981

ಕನು ಸನ್ಯಾಲ್: ಕ್ರಾಂತಿಕಾರಿಯ ದಾರುಣ ಅಂತ್ಯ

ನಾ ದಿವಾಕರ

ಭಾರತದ ಸಾಮಾಜಿಕ ಮತ್ತು ರಾಜಕೀಯ ಇತಿಹಾಸದಲ್ಲಿ ಮಹ ತ್ತರವಾದ ಬದಲಾವಣೆಗಳಿಗೆ ಕಾರಣವಾದ ನಕ್ಸಲ್ ಚಳುವಳಿಯ ಹರಿ ಕಾರ, ಸಂಘಟನಕಾರ, ಸಂಸ್ಥಾಪಕ ಕಾಮ್ರೇಡ್ ಕನು ಸನ್ಯಾಲ್ ಕೊನೆ ಯುಸಿರೆಳೆದಿದ್ದಾರೆ. ತಮ್ಮ ಕ್ರಾಂತಿಕಾರಿ ಧೋರಣೆಗಳಿಂದ ಕಮ್ಯುನಿಸ್ಟ್ ಚಳುವಳಿಯನ್ನು ಶ್ರಮಜೀವಿಗಳ ಹೋರಾಟದ ಮಾರ್ಗವನ್ನಾಗಿ ಮಾಡುವ ನಿಟ್ಟಿನಲ್ಲಿ ಸಂಸದೀಯ ಕಮ್ಯುನಿಸ್ಟ್ ಪಕ್ಷಗಳಿಂದ ಬೇರ್ಪಟ್ಟು ಹಳ್ಳಿಗಾಡಿನ ರೈತಾಪಿ ಸಮುದಾಯವನ್ನು ಕ್ರಾಂತಿಯ ಮಾರ್ಗದಲ್ಲಿ ಕೊಂಡೊಯ್ಯುವ ದೃಢ ಸಂಕಲ್ಪತೊಟ್ಟಿದ್ದ ಸನ್ಯಾಲ್ ತಮ್ಮ ಕನಸುಗಳು ಕನಸಾಗಿದ್ದಂತೆಯೇ ತ್ಯಜಿಸಿದ್ದಾರೆ. ಕನು ಸನ್ಯಾಲ್ ಓರ್ವ ಕನಸುಗಾರ. ಮಾರ್ಕ್ಸ್‌ವಾದಿ ಸಿದ್ಧಾಂತಕ್ಕನುಗುಣವಾಗಿ ಭಾರತದಲ್ಲೂ ಸಮತಾ ಸಮಾಜವನ್ನು ನಿರ್ಮಿಸಿ ಆದರ್ಶ ರಾಜ್ಯವನ್ನು ಕಟ್ಟುವ ಕನಸು ಕಂಡಿದ್ದ ಕನು ಸನ್ಯಾಲ್ ಯಾವುದೇ ಕನಸುಗಾರ ಊಹಿಸಲೂ ಸಾಧ್ಯವಿಲ್ಲದ ಆತ್ಮಹತ್ಯೆಗೆ ಶರಣಾಗಿರುವುದು ನಿಗೂಢವೇ ಸರಿ. ಭಾರತದ ಕ್ರಾಂತಿಕಾರಿಗಳಿಗೆ ಇಂದಿಗೂ ಮುಖ್ಯ ಪ್ರೇರಣೆಯಾಗಿರುವ ಭಗತ್ ಸಿಂಗ್ ಹುತಾತ್ಮನಾದ ಮಾರ್ಚ್ 23ರಂದೇ ಕನು ಸನ್ಯಾಲ್ ತನ್ನ ಕ್ರಾಂತಿಗೀತೆಯ ಅಂತಿಮ ಚರಣ ಹಾಡಿರುವುದು ಕಾಕತಾಳೀಯವೋ, ಪ್ರಜ್ಞಾಪೂರ್ವಕವೋ ಎಂಬ ಪ್ರಶ್ನೆ ಶಾಶ್ವತವಾಗಿ ಉಳಿಯುವುದಂತೂ ಸತ್ಯ.

ಪಶ್ಚಿಮ ಬಂಗಾಲದ ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಮಧ್ಯಮ ವರ್ಗ ಕುಟುಂಬದಲ್ಲಿ ೧೯೩೨ರಲ್ಲಿಜನಿಸಿದ ಸನ್ಯಾಲ್ ಅವರ ತಂದೆ ಆನಂದ ಗೋವಿಂದ ಸನ್ಯಾಲ್ ಗುಮಾಸ್ತೆಯ ಹುದ್ದೆಯಲ್ಲಿದ್ದವರು. ಜಲ್ಪೈಗುರಿ ಕಾಲೇಜಿನಲ್ಲಿ ತಮ್ಮ ಪೂರ್ಣ ವ್ಯಾಸಂಗವನ್ನೂ ಮುಗಿಸದ ಸನ್ಯಾಲ್ ಸಿಲಿಗುರಿಯ ನ್ಯಾಯಾಲಯದಲ್ಲಿ ನೌಕರಿಗಳಿಸಿದ್ದರು. ವಿದ್ಯಾರ್ಥಿ ದೆಸೆಯಲ್ಲೇ ಕಮ್ಯುನಿಸ್ಟ್ ವಿಚಾರಧಾರೆಯಿಂದ ಆಕರ್ಷಿತರಾಗಿದ್ದ ಕನುಸನ್ಯಾಲ್ ೧೯೪೯ರಲ್ಲಿ ತಮ್ಮ ಹೋರಾಟದ ಜೀವನ ಪ್ರಾರಂಭಿಸಿದ್ದರು. ೧೯೪೮ರಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿದ್ದ ಹಿನ್ನೆಲೆಯಲ್ಲಿ ಕನುಸನ್ಯಾಲ್ ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಬಿಧನ್ ಚಂದ್ರ ರಾಯ್ ವಿರುದ್ಧ ಕಪ್ಪುಬಾವುಟ ಪ್ರದರ್ಶಿಸಿ ಜೈಲುಶಿಕ್ಷೆ ಅನುಭವಿಸಿದ್ದರು.

ಎಡಪಂಥೀಯ ಮಾರ್ಗದಲ್ಲಿ

ಪಶ್ಚಿಮ ಬಂಗಾಲದ ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಮಧ್ಯಮ ವರ್ಗ ಕುಟುಂಬದಲ್ಲಿ 1932ರಲ್ಲಿ ಜನಿಸಿದ ಸನ್ಯಾಲ್ ಅವರ ತಂದೆ ಆನಂದ ಗೋವಿಂದ ಸನ್ಯಾಲ್ ಗುಮಾಸ್ತೆಯ ಹುದ್ದೆಯಲ್ಲಿದ್ದವರು. ಜಲ್ಪೈಗುರಿ ಕಾಲೇಜಿನಲ್ಲಿ ತಮ್ಮ ಪೂರ್ಣ ವ್ಯಾಸಂಗವನ್ನೂ ಮುಗಿಸದ ಸನ್ಯಾಲ್



ಸಿಲಿಗುರಿಯ ನ್ಯಾಯಾಲಯದಲ್ಲಿ ನೌಕರಿ ಗಳಿಸಿದ್ದರು. ವಿದ್ಯಾರ್ಥಿ ದೆಸೆಯಲ್ಲೇ ಕಮ್ಯುನಿಸ್ಟ್ ವಿಚಾರಧಾರೆಯಿಂದ ಆಕರ್ಷಿತರಾಗಿದ್ದ ಕನು ಸನ್ಯಾಲ್ 1949ರಲ್ಲಿ ತಮ್ಮ ಹೋರಾಟದ ಜೀವನ ಪ್ರಾರಂಭಿಸಿದ್ದರು. 1948ರಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷವನ್ನು (ಸಿಪಿಐ) ನಿಷೇಧಿಸಿದ್ದ ಹಿನ್ನೆಲೆಯಲ್ಲಿ, 1949ರಲ್ಲಿ ಕನು ಸನ್ಯಾಲ್ ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಬಿಧನ್ ಚಂದ್ರ ರಾಯ್ ಅವರ ವಿರುದ್ಧ ಕಪ್ಪುಬಾವುಟ ಪ್ರದರ್ಶಿಸಿ ಜೈಲುಶಿಕ್ಷೆ ಅನುಭವಿಸಿದ್ದರು. ಈ ಸಂದರ್ಭದಲ್ಲೇ ಜೈಲಿನಲ್ಲಿದ್ದ ಸಿಪಿಐ ಪಕ್ಷದ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದ ಚಾರು ಮಜುಂದಾರ್ ಸನ್ಯಾಲ್‌ಗೆ ಪರಿಚಿತರಾದರು. 1952ರಲ್ಲಿ ಸಿಪಿಐನ ಪೂರ್ಣಾವಧಿ ಸದಸ್ಯನಾದನಂತರ ಸನ್ಯಾಲ್ 1964 ರಲ್ಲಿ ಪಕ್ಷ ಇಬ್ಭಾಗವಾದಾಗ ಚಾರು ಮಜುಂದಾರ್ ಅವರೊಡನೆ ಸಿಪಿಎಂ ಸೇರಿದ್ದರು.

ಸಿಪಿಎಂ ಪಕ್ಷ ಸ್ಥಾಪನೆಯಾದ ದಿನದಿಂದಲೇ ಅಂತರಿಕ ಭಿನ್ನಾಭಿಪ್ರಾಯಗಳು ತಲೆದೋರಿದ್ದವು. ಪಕ್ಷದ ಕೆಲವು ಸದಸ್ಯರು ಚೀನಾದ ಮಾದರಿಯಲ್ಲಿ ಪಕ್ಷದ ಕಾರ್ಯಕ್ರಮಗಳಲ್ಲಿ ಸಶಸ್ತ್ರ ಹೋರಾಟವನ್ನೂ ಸೇರಿಸಬೇಕೆಂದು ಆಗ್ರಹಿಸಲಾರಂಭಿಸಿದರು. ಪ್ರಾರಂಭದಲ್ಲಿ ಪಕ್ಷದ ನಾಯಕತ್ವ ಈ ಬೇಡಿಕೆಯನ್ನು ಸಂಪೂರ್ಣ ತಿರಸ್ಕರಿಸಿದ್ದರಿಂದ ಚಾರು– ಸನ್ಯಾಲ್ ಈ ತೀವ್ರವಾದಿ ಗುಂಪಿನ ವಕ್ತಾರರಾಗಿ ಮುಂದುವರೆದಿದ್ದರು. ಏತನ್ಮಧ್ಯೆ 1965ರಲ್ಲಿ ಚಾರು ಮಜುಂದಾರ್ ತಮ್ಮ ಎಂಟು ದಸ್ತಾವೇಜುಗಳನ್ನು ಬಿಡುಗಡೆ ಮಾಡಿದ್ದು ಪಕ್ಷದಲ್ಲಿ ಅಂತರಿಕ ಭಿನ್ನಾಭಿಪ್ರಾಯ ತೀವ್ರವಾಗ ತೊಡಗಿತು. ತಮ್ಮ ಈ ಪ್ರಬಂಧಗಳಲ್ಲಿ ಚಾರು ಮಜುಂದಾರ್ ಮುಖ್ಯವಾಗಿ ಪಕ್ಷದಲ್ಲಿನ ಪರಿಷ್ಕರಣವಾದದ ವಿರುದ್ಧ ದನಿ ಎತ್ತಿದ್ದರು. ಚೀನಾದಲ್ಲಿ ಮಾವೋ ಪ್ರತಿಪಾದಿಸಿದ ಪ್ರಭುತ್ವದ ವಿರುದ್ಧ ಸಶಸ್ತ್ರ ಬಂಡಾಯ ಏಳುವ ನೀತಿಯನ್ನು ಅನುಸರಿಸಲು ಚಾರು ಪ್ರತಿಪಾದಿಸಿದ್ದರು. ಆದರೆ 1967ರ ಸಂಯುಕ್ತ ರಂಗ ಸರ್ಕಾರದ ಅವಧಿಯಲ್ಲಿ ಈ ಪ್ರತಿಭಟನಾ ದನಿಯೇ ಸಿಪಿಎಂ ಪಕ್ಷದ ವಿಭಜನೆಗೂ ಕಾರಣವಾಗಿತ್ತು.

ಈ ಸಂದರ್ಭದಲ್ಲಿ ಪಕ್ಷದ ಡಾರ್ಜಿಲಿಂಗ್ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದ ಕನು ಸನ್ಯಾಲ್ ಅಲ್ಲಿನ ಟೀಎಸ್ಟೇಟ್ ಕಾರ್ಮಿಕರು ಮತ್ತು ರೈತಾಪಿ ಸಮುದಾಯಗಳನ್ನು ಸಂಘಟಿಸುತ್ತಿದ್ದರು. ಈ ಪ್ರಾಂತ್ಯದಲ್ಲಿ ಶ್ರಮಜೀವಿಗಳು ಕ್ರಾಂತಿಕಾರಿ ಹೋರಾಟದ ಹೆಜ್ಜೆ ಮುಂದಿಡಲು ಉತ್ಸುಕರಾಗಿದ್ದುದು ಕನು ಸನ್ಯಾಲ್ ಅವರ ರಾಜಕೀಯ ದಿಕ್ಕನ್ನೇ ಬದಲಾಯಿಸಿತ್ತು. ಈ ವೇಳೆಗಾಗಲೇ ಚಾರು ಮಜುಂದಾರ್ ಅವರ ವಾದಗಳಿಂದ ಪ್ರೇರಣೆ ಪಡೆದಿದ್ದ ರೈತಾಪಿ ಸಮುದಾಯ ಗ್ರಾಮೀಣ ಪ್ರದೇಶಗಳಲ್ಲಿ ಭೂಮಾಲೀಕರಿಂದ ಭೂಮಿಯನ್ನು ವಶಪಡಿಸಿಕೊಳ್ಳಲು ಪ್ರಾರಂಭಿಸಿದ್ದರು. ಈ ಹೋರಾಟಕ್ಕೆ ಅಗತ್ಯವಾಗಿದ್ದ ಶಸ್ತ್ರ ಸಂಗ್ರಹಣೆ ಕಾರ್ಯವೂ ಕ್ರಮಬದ್ಧವಾಗಿ ನಡೆಯುತ್ತಿತ್ತು.

ನಕ್ಸಲ್‌ಬಾರಿ ದಂಗೆ

ಸಶಸ್ತ್ರ ಹೋರಾಟದ ಮಾರ್ಗವನ್ನು ಚೀನಾದ ಮಾವೋ ಹಾಕಿಕೊಟ್ಟ ಮಾರ್ಗದರ್ಶನದಲ್ಲೇ ಅನುಸರಿಸುವ ಕನುಸನ್ಯಾಲ್ ಮತ್ತು ಚಾರುಮಜುಂದಾರ್ ಅವರ ಕ್ರಾಂತಿಕಾರಿ ಧೋರಣೆಗೆ 1967ರ ಏಪ್ರಿಲ್‌ನಲ್ಲಿ ಸಂಭವಿಸಿದ ಘಟನೆಗಳು ಪೂರಕವಾಗಿದ್ದವು. ಈಶ್ವರ್ ಟಿರ್ಕೆ ಎಂಬ ಭೂ ಮಾಲಿಕನ ಬಳಿ ಕೃಷಿ ಕೂಲಿ ಮಾಡುತ್ತಿದ್ದ ಭಿಗುಲ್ ಕಿಸಾನ್ ಎಂಬ ಭೂರಹಿತ ರೈತ ಕಾರ್ಮಿಕನನ್ನು ಉಚ್ಚಾಟಿಸಲಾಗಿತ್ತು. ಈ ವಿವಾದದ ಇತ್ಯರ್ಥಕ್ಕಾಗಿ ಕನುಸನ್ಯಾಲ್ ನೇತೃತ್ವದ ಕೃಷಿಕ ಸಭಾ ಸಂಘಟನೆ ಮಧ್ಯ ಪ್ರವೇಶ ಮಾಡಿತ್ತು. ಏತನ್ಮಧ್ಯೆ ರೈತಾಪಿ ಜನರು

ಟರ್ಕೆಯ ಭೂಮಿಗೆ ಮುತ್ತಿಗೆ ಹಾಕಿದ್ದರು. ಬಂಗಾಲದ ಕಾಂಗ್ರೆಸ್ ಸದಸ್ಯನಾಗಿದ್ದ ಟರ್ಕೆ ತನ್ನ ರಾಜಕೀಯ ಪ್ರಾಬಲ್ಯದಿಂದ ಹೋರಾಟ ನಿರತ ರೈತರ ವಿರುದ್ಧ ಪೊಲೀಸ್ ಕಾರ್ಯಾಚರಣೆ ನಡೆಸುವುದರಲ್ಲಿ ಯಶಸ್ವಿಯಾಗಿದ್ದ.

ಪ್ರತಿಭಟನೆಯಲ್ಲಿ ತೊಡಗಿದ್ದ ರೈತ ಸಮುದಾಯ ಮತ್ತು ಪೊಲೀಸರ ನಡುವೆ ನಡೆದ ಸಂಘರ್ಷ ಮೇ 24 1967ರಂದು ನಕ್ಸಲ್‌ಬಾರಿ ಪ್ರಾಂತ್ಯದ ಬೊರೊಮನಿರಾಮ್ ಎಂಬ ಸ್ಥಳದಲ್ಲಿ ಪರಾಕಾಷ್ಠೆ ತಲುಪಿತ್ತು. ರೈತರು ಪ್ರಯೋಗಿಸಿದ ಬಾಣದಿಂದ ಸೋನಂವಾಂಗಡೂ ಎಂಬ ಪೊಲೀಸ್ ಅಧಿಕಾರಿ ಮೃತಪಟ್ಟಿದ್ದ. ಮರುದಿನವೇ ಪೊಲೀಸರ ಪ್ರತೀಕಾರ ಪ್ರಾರಂಭವಾಗಿತ್ತು. ನಕ್ಸಲ್‌ಬಾರಿಯ ಪ್ರಸಾದ್ ಎಂಬ ಸ್ಥಳದಲ್ಲಿ ಸಭೆ ಸೇರಿದ್ದ ಕೃಷಕ್ ಸಭಾದ ಸದಸ್ಯರ ಮೇಲೆ ವಿನಾಕಾರಣ ಗುಂಡಿನ ಮಳೆಗರೆದ ಪೊಲೀಸರು 11 ಜನರ ಹತ್ಯೆ ಮಾಡಿದ್ದರು. ಅವರಲ್ಲಿ ಏಳು ಮಹಿಳೆಯರು, ಎರಡು ಹಸುಳೆಗಳೂ ಸೇರಿದ್ದವು. ಈ ಘಟನೆಯೇ ರೈತರ ದಂಗೆಯ ಕಿಡಿಯಾಗಿ ಹರಡಿತ್ತು. ಸನ್ಯಾಲ್ ನೇತೃತ್ವದ ರೈತ ಸಮುದಾಯ ಎಲ್ಲೆಡೆ ಕಾಳ್ಗಿಚ್ಚಿನಂತೆ ಹರಡಿತ್ತು. 1967ರ ಜೂನ್ 27ರಂದು ನಕ್ಸಲ್‌ಬಾರಿ ಕೃಷಕ್ ಸಂಗ್ರಾಮ್ ಸಹಾಯಕ್ ಸಮಿತಿಯನ್ನು ರಚಿಸಲಾಯಿತು. ಇದೇ ಸಂದರ್ಭದಲ್ಲಿ ಚೀನಾದ ಕಮ್ಯುನಿಸ್ಟ್ ಪತ್ರಿಕೆ ಪೀಪಲ್ಸ್ ಡೈಲಿಯಲ್ಲಿ ನಕ್ಸಲ್‌ಬಾರಿ ರೈತ ದಂಗೆಯನ್ನು ಕುರಿತ ಲೇಖನವೊಂದು ಭಾರತದಲ್ಲಿನ ಕ್ರಾಂತಿಕಾರಿಗಳಿಗೆ ಪ್ರೋತ್ಸಾಹ ನೀಡಿತ್ತು.

ಪೊಲೀಸರ ನಿರಂತರ ದಾಳಿಯ ನಡುವೆಯೂ ರೈತರ ಹೋರಾಟ ದೇಶದ ಇತರ ಭಾಗಗಳಲ್ಲೂ ಹರಡಲಾರಂಭಿಸಿತು. 1967ರ ನವಂಬರ್‌ನಲ್ಲಿ ಕ್ರಾಂತಿಕಾರಿ ಹೋರಾಟವನ್ನು ಸ್ವೀಕರಿಸಿದ ಗುಂಪು ಸಿಪಿಎಂ ಪಕ್ಷದಿಂದ ಬೇರ್ಪಟ್ಟು ಅಖಿಲ ಭಾರತ ಕಮ್ಯುನಿಸ್ಟ್ ಕ್ರಾಂತಿಕಾರಿಗಳ ಸಮನ್ವಯ ಸಮಿತಿಯನ್ನು ರಚಿಸಲಾಯಿತು. ತದನಂತದಲ್ಲಿ ಕನು ಸನ್ಯಾಲ್ ನೇತೃತ್ವದ ಐದು ಮಂದಿಯ ತಂಡವೊಂದು ಚೀನಾಗೆ ಭೇಟಿ ನೀಡಿತ್ತು. 75ದಿನಗಳ ಚೀನಾ ಪ್ರವಾಸದ ಸಂದರ್ಭದಲ್ಲೇ ಈ ತಂಡವು ಮಿಲಿಟರಿ ತರಬೇತಿಯನ್ನೂ ಪಡೆದಿತ್ತೆಂದು ಹೇಳಲಾಗುತ್ತದೆ. ಭಾರತದ ರೈತ ದಂಗೆಯನ್ನು Spring Thunder ಎಂದು ಬಣ್ಣಿಸಿದ ಚೀನಾದ ಕಮ್ಯುನಿಸ್ಟ್ ಪಕ್ಷ ಮತ್ತು ಮಾವೋ ಅವರ ಹೋರಾಟದ ಮಾರ್ಗಗಳು ಭಾರತೀಯ ಕ್ರಾಂತಿಕಾರಿಗಳಿಗೆ ಸೈದ್ಧಾಂತಿಕ ತಳಹದಿಯನ್ನೊದಗಿಸಿತ್ತು.

ಸಿಪಿಐ (ಎಂಎಲ್) ಪಕ್ಷದ ಸ್ಥಾಪನೆ

ಚಾರು ಮಜುಂದಾರ್, ಜಂಗಲ್ ಸಂತಾಲ್ ಅವರಂತೆಯೇ ಕನು ಸನ್ಯಾಲ್ ಸಹ ಭಾರತೀಯ ಕ್ರಾಂತಿ ಮಾರ್ಗದಲ್ಲಿ ರೈತದಂಗೆಯನ್ನೇ ಕೇಂದ್ರ ಬಿಂದು ಎಂದು ಪರಿಗಣಿಸಿದ್ದರು. 1969ರ ಏಪ್ರಿಲ್ 19 ರಿಂದ 22 ರವರೆಗೆ ನಡೆದ ಸಮಿತಿಯ ಸಭೆಯಲ್ಲಿ ಸಿಪಿಐ(ಎಂಎಲ್) ಪಕ್ಷವನ್ನು ಸ್ಥಾಪಿಸಲು ನಿರ್ಣಯ ಕೈಗೊಳ್ಳಲಾಯಿತು. ಏಪ್ರಿಲ್ 22 1969ರಂದು ಪಕ್ಷವನ್ನು ಅಧಿಕೃತವಾಗಿ ಸ್ಥಾಪಿಸಲಾಯಿತು. ಚಾರು ಮಜುಂದಾರ್ ಪಕ್ಷದ ಸೈದ್ಧಾಂತಿಕ ಮುಖವಾಣಿಯಾದರೆ, ಕನು ಸನ್ಯಾಲ್ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು. ವರ್ಗ ಶತ್ರುಗಳ ನಾಶವನ್ನೇ ಪಕ್ಷದ ಪ್ರಮುಖ ಧೋರಣೆಯನ್ನಾಗಿ ಸ್ವೀಕರಿಸುವುದರಲ್ಲಿ ಚಾರು ಮಜುಂದಾರ್ ಅವರ ಪಾತ್ರ ಗಣನೀಯವಾಗಿತ್ತು. ಈ ಹಂತದಲ್ಲಿ ಪೊಲೀಸರ ದಾಳಿ ಹೆಚ್ಚಾಗುತ್ತಿದ್ದಂತೆಯೇ ಪಕ್ಷದಲ್ಲಿನ ಭಿನ್ನಾಭಿಪ್ರಾಯಗಳೂ ತೀವ್ರವಾಗತೊಡಗಿದವು. ಈ ಹಂತದಲ್ಲಿ ಪ.ಬಂಗಾಲದ ಮಾಧ್ಯಮಗಳು ಕನು ಸನ್ಯಾಲನ್ನು ಮಹಾನ್ ಕ್ರಾಂತಿಕಾರಿ ಎಂದು ಬಣ್ಣಿಸತೊಡಗಿದವು.

> **1970ರಲ್ಲಿ ಶ್ರೀಕಾಕುಲಂ ದಂಗೆಯಲ್ಲಿ ಭಾಗವಹಿಸಿದ ಆರೋಪಕ್ಕೆ ಗುರಿಯಾಗಿ ಬಂಧಿತರಾದ ಸನ್ಯಾಲ್ ಏಳು ವರ್ಷಗಳ ಕಾಲ ಜೈಲುವಾಸ ಅನುಭವಿಸಿದ್ದರು. 1977ರಲ್ಲಿ ಪ.ಬಂಗಾಲದಲ್ಲಿ ಅಧಿಕಾರಕ್ಕೆ ಬಂದ ಜ್ಯೋತಿ ಬಸು ನೇತೃತ್ವದ ಎಡ ರಂಗದ ಸರ್ಕಾರ ಸನ್ಯಾಲ್ ಅವರ ಬಿಡುಗಡೆ ಮಾಡುವಲ್ಲಿ ಮಹತ್ತರ ಪಾತ್ರ ವಹಿಸಿತ್ತು.**

ಸನ್ಯಾಲ್ ಅವರ ಸರಳ ಜೀವನ ಶೈಲಿ ಸಾರ್ವಜನಿಕ ವರ್ಚಸ್ಸು ಮತ್ತು ಜನಪ್ರಿಯತೆಯಿಂದ ಅವರನ್ನು ಗಾಂಧಿ, ಜತಿನ್‌ದಾಸ್ ಅವರಿಗೂ ಹೋಲಿಸಲಾಗುತ್ತಿತ್ತು. ಆದರೆ ಸಿಪಿಐ ಎಂಎಲ್ ಪಕ್ಷದ ಕೆಲವು ಧೋರಣೆಗಳನ್ನು ಚೀನಾದ ಕಮ್ಯುನಿಸ್ಟ್ ಪಕ್ಷ ನಿರಾಕರಿಸಿತ್ತೆಂದೂ ಹೇಳಲಾಗುತ್ತದೆ. ಭಾರತದ ನಕ್ಸಲ್ ಚಳುವಳಿಯ ವೈಫಲ್ಯಕ್ಕೆ ಪಕ್ಷವು ಅನುಸರಿಸಿದ ಮಾರ್ಗವೇ ಕಾರಣವೆಂದೂ, ಮಾವೋವಾದ ಅಲ್ಲವೆಂದೂ ಚೀನಾದ ಕಮ್ಯುನಿಸ್ಟ್ ಪಕ್ಷ ಅಧಿಕೃತವಾಗಿ ತಿಳಿಸಿತ್ತೆಂದೂ ಹೇಳಲಾಗುತ್ತದೆ. ಆದರೆ ಇವೆಲ್ಲವೂ ಗೌಪ್ಯತೆಯ ಸೋಗಿನಲ್ಲಿ ಮುಚ್ಚಿ ಹೋಗಿರುವ ವಿಷಯಗಳಾಗಿರುವುದು ಇಂದಿಗೂ ಚರ್ಚಾಸ್ಪದವಾಗಿಯೇ ಇದೆ.

ಚಾರು ಮಜುಂದಾರ್ ಮತ್ತು ಕನು ಸನ್ಯಾಲ್ ಅವರ ಅಭಿಪ್ರಾಯದಲ್ಲಿ ತೆರೈ ರೈತ ದಂಗೆ ಮತ್ತು ನಕ್ಸಲ್‌ಬಾರಿ ಚಳುವಳಿ ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಮನ್ವಂತರದ ಹಾದಿಯಲ್ಲಿ ಕೊಂಡೊಯ್ದು, ಭಾರತೀಯ ಪ್ರಭುತ್ವವನ್ನು ಕಿತ್ತೊಗೆದು ಶ್ರಮಜೀವಿಗಳ ಪ್ರಭುತ್ವವನ್ನು ಸ್ಥಾಪಿಸುವ ಮಹಾನ್ ಕ್ರಾಂತಿಕಾರಿ ಹೋರಾಟವೇ ಆಗಿತ್ತು. ನಕ್ಸಲ್ ಚಳುವಳಿಯನ್ನು ಕೇವಲ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ನಡೆದ ಹೋರಾಟ ಎಂದು ಭಾವಿಸದೆ ಪ್ರಭುತ್ವದ ವಿರುದ್ಧ ಸಶಸ್ತ್ರ ಹೋರಾಟವೆಂದೇ ಪರಿಗಣಿಸಲಾಗಿತ್ತು. ಆದರೆ 1973ರ ತಮ್ಮ ಒಂದು ಪ್ರಬಂಧದಲ್ಲಿ ಕನು ಸನ್ಯಾಲ್ ಚಾರು ಪ್ರತಿಪಾದಿಸಿದ ಧೋರಣೆಗೆ ತಮ್ಮದೇ ಆದ ಆಕ್ಷೇಪಣೆಗಳನ್ನೂ ವ್ಯಕ್ತಪಡಿಸಿದ್ದುಂಟು.

ಹೋರಾಟದ ಹಾದಿಯಲ್ಲಿ

ಸನ್ಯಾಲ್ ಅಭಿಪ್ರಾಯದಲ್ಲಿ ನಕ್ಸಲ್ ಚಳುವಳಿ ಕೃಷಿಕರ ಚಳುವಳಿಯಾಗಿದ್ದು ಸಶಸ್ತ್ರ ಹೋರಾಟದಲ್ಲಿ ಪರ್ಯವಸಾನಗೊಳ್ಳಬೇಕಾದ ಕ್ರಾಂತಿಕಾರಿ ಹೋರಾಟವಾಗಿತ್ತು. ಚಳುವಳಿಯು ಪ್ರಭುತ್ವದ ವಿರುದ್ಧದ ಹೋರಾಟ ಎಂಬ ಚಾರುಮಜುಂದಾರ್ ಧೋರಣೆಯನ್ನು ಸನ್ಯಾಲ್ ವಿರೋಧಿಸಿದ್ದರು. ಈ ಧೋರಣೆಯೇ ನಕ್ಸಲ್ ಚಳುವಳಿಯ ವೈಫಲ್ಯಕ್ಕೆ ಕಾರಣವೆಂದೂ ದೂಷಿಸಿದ್ದರು. ಕನು ಸನ್ಯಾಲ್ ಪ್ರಭುತ್ವದ ವಿರುದ್ಧ ಸಶಸ್ತ್ರ ಕ್ರಾಂತಿಗೆ ವಿಮುಖರಾಗದಿದ್ದರೂ, ನಕ್ಸಲ್ ಚಳುವಳಿಯನ್ನೂ ಈ ನಿಟ್ಟಿನಲ್ಲಿ ಪರಿಗಣಿಸಿರಲಿಲ್ಲ. ಚಾರು ಪ್ರತಿಪಾದಿಸಿದ ವರ್ಗ ಶತ್ರುಗಳ ವ್ಯಕ್ತಿಗತ ಹತ್ಯೆ ಮಾಡುವ ಧೋರಣೆಯನ್ನೂ ಸನ್ಯಾಲ್ ತೀವ್ರವಾಗಿ ಖಂಡಿಸಿದ್ದರು. ಚೀನಾದ ಕಮ್ಯುನಿಸ್ಟ್ ಪಕ್ಷದಿಂದ ಸೈದ್ಧಾಂತಿಕ ಬೆಂಬಲ ಪಡೆಯುತ್ತಿರುವುದನ್ನು ಸಾರ್ವಜನಿಕವಾಗಿಯೇ ಧೈರ್ಯದಿಂದ ಘೋಷಿಸುತ್ತಿದ್ದ ಕನು ಸನ್ಯಾಲ್ ಅವರಿಗೆ ಪಕ್ಷದ ಕ್ರಾಂತಿಕಾರಿ ಹೋರಾಟವೆಂದರೆ ರೈತಾಪಿ ಸಮುದಾಯದ ಹೋರಾಟಗಳ ಮೂಲಕ ಪ್ರಭುತ್ವದ ವಿರುದ್ಧ ಹೋರಾಡಿ, ಅಂತಿಮ ಆಯ್ಕೆಯಾಗಿ ಸಶಸ್ತ್ರ ಹೋರಾಟವನ್ನು ಆಶ್ರಯಿಸುವುದೇ ಆಗಿತ್ತು.

1970ರಲ್ಲಿ ಶ್ರೀಕಾಕುಲಂ ದಂಗೆಯಲ್ಲಿ ಭಾಗವಹಿಸಿದ ಆರೋಪಕ್ಕೆ ಗುರಿಯಾಗಿ ಬಂಧಿತರಾದ ಸನ್ಯಾಲ್ ಏಳು ವರ್ಷಗಳ ಕಾಲ ಜೈಲುವಾಸ ಅನುಭವಿಸಿದ್ದರು. 1977ರಲ್ಲಿ ಪಶ್ಚಿಮ ಬಂಗಾಲದಲ್ಲಿ ಅಧಿಕಾರಕ್ಕೆ ಬಂದ ಜ್ಯೋತಿ ಬಸು ನೇತೃತ್ವದ ಎಡರಂಗದ ಸರ್ಕಾರ ಸನ್ಯಾಲ್ ಅವರ ಬಿಡುಗಡೆ ಮಾಡುವಲ್ಲಿ ಮಹತ್ತರ ಪಾತ್ರ ವಹಿಸಿತ್ತು. ಆದರೆ ತಮ್ಮ ಜೈಲುವಾಸ ಮುಗಿಯುವ ವೇಳೆಗೆ ಕನುಸನ್ಯಾಲ್ ಸಿಪಿಐ(ಎಂಎಲ್) ಪಕ್ಷದ ಸಶಸ್ತ್ರ ಹೋರಾಟದ ಮಾರ್ಗವನ್ನು ಸಂಪೂರ್ಣವಾಗಿ ನಿರಾಕರಿಸಲು ನಿರ್ಧರಿಸಿದ್ದರು. ಪಕ್ಷದ ಅಸ್ತಿತ್ವವನ್ನೇ ಪ್ರಶ್ನಿಸಲಾರಂಭಿಸಿದ ಕನು ಸನ್ಯಾಲ್ ಕ್ರಮೇಣ ಪಕ್ಷದಿಂದ ದೂರಸರಿಯಬೇಕಾಯಿತು. ನಂತರ ಕನು ಸನ್ಯಾಲ್, ಅಶಿಮ್ ಚಟರ್ಜಿ ಮತ್ತು ಅಸಿತ್ ಸಿನ್ಹಾ ಮುಂತಾದವರು ಒಂದಾಗಿ ಕಮ್ಯುನಿಸ್ಟ್ ಕ್ರಾಂತಿಕಾರಿಗಳ ಸಮಿತಿಯ ಸಂಘಟನೆಯನ್ನು (Organisation of Communist Committee of Revolutionaries-Marxist Leninist) ಸ್ಥಾಪಿಸಿದರು. 90ರ ದಶಕದ ಆರಂಭದಲ್ಲಿ ಪ್ರತ್ಯೇಕ ಸಿಪಿಐ(ಎಂಎಲ್) ಪಕ್ಷವನ್ನೂ ಸ್ಥಾಪಿಸಿದರು. ನಂತರ ಈ ಪಕ್ಷದಿಂದಲೂ ದೂರಸರಿದು ಅಜ್ಞಾತವಾಸದಲ್ಲಿದ್ದುದೂ ಹೌದು.

ಆದರೂ ಕನು ಸನ್ಯಾಲ್ ಅವರ ಕ್ರಾಂತಿಕಾರಿ ಧೋರಣೆಯಲ್ಲಿ ಯಾವುದೇ ಬದಲಾವಣೆ ಇರಲಿಲ್ಲ. ಚಾರುಮಜುಂದಾರ್ ಅವರ ನಿಧನದ ನಂತರ ನಕ್ಸಲ್ ಚಳುವಳಿ ಛಿದ್ರವಾಗಿ ಹೋದರೂ ಕನು ಸನ್ಯಾಲ್ ತಮ್ಮ ಹೋರಾಟದ ಮಾರ್ಗವನ್ನು ತ್ಯಜಿಸಲಿಲ್ಲ. ಬದಲಾಗಿ ಸಂಸದೀಯ ಮಾರ್ಗದಲ್ಲೇ ಕ್ರಾಂತಿಕಾರಿ ಹೋರಾಟವನ್ನು ಮುಂದುವರೆಸಲು ನಿರ್ಧರಿಸಿದ್ದರು.

2006ರ ಸಿಂಗೂರ್ ಭೂ ಸ್ವಾಧೀನ ವಿರೋಧಿ ಹೋರಾಟಗಳಲ್ಲಿ ಸನ್ಯಾಲ್ ಪ್ರಮುಖ ಪಾತ್ರವಹಿಸಿದ್ದರು. ಡಾರ್ಜಿಲಿಂಗ್‌ನಲ್ಲಿ ರಾಜಧಾನಿ ಎಕ್ಸ್‌ಪ್ರೆಸ್ ರೈಲು ಮಾರ್ಗಕ್ಕೆ ಅಡ್ಡಿಯಾಗುವುದೆಂದು ಕೆಲವು ಟೀ ತೋಟಗಳನ್ನು ಮುಚ್ಚಲು ಯತ್ನಿಸಿದಾಗ ಅಲ್ಲಿನ ಜನರನ್ನು ಸಂಘಟಿಸಿ ಹೋರಾಡಿದ ಸನ್ಯಾಲ್ ಬಂಧನಕ್ಕೊಳಗಾಗಿದ್ದರು. ತಮ್ಮ ಕೊನೆಯುಸಿರಿರುವವರೆಗೂ ಹೋರಾಟದ ಮಾರ್ಗವನ್ನು ತ್ಯಜಿಸದ ಕನು ಸನ್ಯಾಲ್ ಪ್ರಸ್ತುತ ಸನ್ನಿವೇಶದಲ್ಲಿ ಮಾವೋವಾದಿಗಳ ಹೋರಾಟದ ಮಾರ್ಗವನ್ನು ಉಗ್ರವಾಗಿ ಖಂಡಿಸುತ್ತಿದ್ದರು. ಅಮಾಯಕ ಗ್ರಾಮಸ್ಥರನ್ನು ವಿನಾಕಾರಣ ಕೊಲ್ಲುವ ಮಾವೋವಾದಿಗಳ ಕೃತ್ಯಗಳನ್ನು ಸನ್ಯಾಲ್ ಒಪ್ಪುತ್ತಿರಲಿಲ್ಲ.

ಸರಳತೆ-ಬದ್ಧತೆಗೆ ಮಾದರಿ

ಭಾರತದ ರಾಜಕಾರಣದಲ್ಲಿಯೇ ಆಗಲೀ ವಿವಿಧ ಜನಪರ ಹೋರಾಟಗಳಲ್ಲೇ ಆಗಲೀ ಸರಳ ಜೀವನವನ್ನೇ ತಮ್ಮ ಧ್ಯೇಯವನ್ನಾಗಿ ಸ್ವೀಕರಿಸಿ ಹೋರಾಡಿದವರ ಸಂಖ್ಯೆ ವಿರಳ. ಗಾಂಧೀವಾದಿಗಳೆಂದು ಹೇಳಿಕೊಳ್ಳುತ್ತಲೇ ಐಷಾರಾಮ ಜೀವನ ನಡೆಸುವವರೂ ನಮ್ಮೊಳಗಿದ್ದಾರೆ. ಜನಪರ ಹೋರಾಟಗಳಲ್ಲಿ ತೊಡಗಿದ್ದುಕೊಂಡೂ ವಿಲಾಸಿ ಜೀವನ ಮಾರ್ಗ ಅನುಸರಿಸುವವರೂ ಇದ್ದಾರೆ. ಆದರೆ ಕನು

(23ನೇ ಪುಟಕ್ಕೆ)

ಎನ್.ಕೆ. ಹನುಮಂತಯ್ಯ

ಹೀಗೆ ತೀರಿ ಹೋಗಬೇಕಿತ್ತೇ...

ರಹಮತ್ ತರೀಕೆರೆ

ನಾನು ಒಮ್ಮೆ ತಿಪಟೂರಿಗೆ ಹೋದಾಗ, ಕಂಡ ಹನುಮಂತಯ್ಯನವರ ಮಡದಿ ಶೈಲಜರ ಬಾಡಿದ ಮುಖವೂ ಮತ್ತು ಅವರ ಮಗಳ ಕಂಗೆಟ್ಟ ಮುಖವೂ ನೆನಪಾಗುತ್ತಿದೆ. ಶೈಲಜ ನೇರನಡೆಯ ನೇರ ನುಡಿಯ ಹುಡುಗಿ. ಅವರ ಕಿಚ್ಚಿಲ್ಲದ ಬೇಗೆ ಎಂಬ ಆತ್ಮಕಥನ ಓದಿ ನಾನು ಅವರ ಧೀಮಂತಿಕೆಗೆ ಬೆರಗಾಗಿದ್ದೆ. ಅವರು "ನನಗೆ ನನ್ನ ಆ ಮೊದಲಿನ ಹನುಮಂತಯ್ಯ ಬೇಕು" ಎಂದು ಡಿಮಾಂಡು ಲಂಕೇಶರ 'ಸಂಕ್ರಾಂತಿ' ನಾಟಕ ನೆನಪಾಯಿತು. ಅದರಲ್ಲಿ ದಲಿತನಾದ ರುದ್ರನು ಬಸವಣ್ಣನ ಪ್ರಭಾವಕ್ಕೆ ಸಿಕ್ಕು ಶರಣನಾದ ಬಳಿಕ, ಅವನನ್ನು ಅವನ ದಲಿತತ್ವದ ಜತೆಗೇ ಕೇವಲ ಒಬ್ಬ ಗಂಡೆಂದು ಪರಿಭಾವಿಸಿ ಪ್ರೇಮಿಸಿದ್ದ ಉಷೆ ಹೇಳುವ ಮಾತು ನೆನಪಿಗೆ ಬಂತು. "ನನಗೆ ನನ್ನ ಮೊದಲಿನ ರುದ್ರಬೇಕು. ಈ ಶರಣ ರುದ್ರ ಬೇಡ".

ಕನ್ನಡದ ಹೊಸತಲೆಮಾರಿನಲ್ಲಿ ಬಹಳ ಚೆನ್ನಾಗಿ ಕವಿತೆ ಬರೆಯುತ್ತಿದ್ದ, ಬಹಳ ಆರೋಗ್ಯಕರವಾಗಿ ಆಲೋಚನೆ ಮಾಡುತ್ತಿದ್ದ, ಪ್ರತಿಭಾವಂತ ಕವಿ ಎನ್ಕೆ ಹನುಮಂತಯ್ಯ ತೀರಿಕೊಂಡಿದ್ದಾರೆ. ದು:ಖವಾಗುತ್ತಿರುವುದು ಅವರು ತೀರಿಕೊಂಡಿದ್ದಕ್ಕೆ ಮಾತ್ರವಲ್ಲ, ತೀರಿಕೊಂಡ ವಿಧಾನಕ್ಕೂ. ವಿಷಪ್ರಾಶನ ಮಾಡಿಕೊಂಡು ಅವರು ತಮ್ಮನ್ನು ಕೊಂದು ಕಳೆದುಕೊಂಡಿದ್ದಾರೆ. ಬಾಳಿ ಬದುಕಿದ ಜೀವಗಳು ಸಹಜ ಸಾವನ್ನು ಪಡೆದರೆ, ದುಗುಡದಿಂದ ಗೌರವದಿಂದ ಬೀಳುಕೊಡಬಹುದು. ಆದರೆ ಇನ್ನೂ ಬಾಳಿ ಬದುಕಬೇಕಾದ ಜೀವಗಳು ಸರಿಯಾಗಿ ಒಗೆತನವನ್ನು ಮಾಡದೆ, ದುಡುಕಿ ಅನಾಹುತ ಮಾಡಿಕೊಂಡಾಗ, ತಮ್ಮ ಜತೆಗಿದ್ದವರನ್ನು ಅತಂತ್ರ ಮಾಡಿ ಹೋದಾಗ, ದು:ಖದ ಜತೆ ಕೋಪವೂ ಬರುತ್ತದೆ. ಬಾಳಿನ ಬಗ್ಗೆ ಆಳವಾಗಿ ಕಲಕುವಂತೆ ದಾರ್ಶನಿಕವಾಗಿ ಬರೆದು ನಮ್ಮಂತಹ ಓದುಗರನ್ನು ಸೂಕ್ಷ್ಮಗೊಳಿಸುವ ಲೇಖಕರೇ ಹೀಗೆ ದುಡುಕಿದರಲ್ಲ ಮನಸ್ಸು ಪ್ರಕ್ಷುಬ್ಧವಾಗುತ್ತದೆ. ಎನ್ಕೆ ಹೀಗೆ ಹಲವಾರು ಗೆಳೆಯರನ್ನು ಬೇಸರಿಸಿ, ಆಘಾತದಲ್ಲಿಕ್ಕಿ ತಣ್ಣಗೆ ಮಣ್ಣೊಳಗೆ ಹೋಗಿ ಮಲಗಿದ್ದಾರೆ.

ಹತ್ತು ವರ್ಷದ ಹಿಂದೆ ಕಪ್ಪನೆಯ ಜಾಲಿಮರದ ವಿಗ್ರಹದಂತಿದ್ದ ಈ ಹುಡುಗ, ಎಂಎ ಮುಗಿಸಿಕೊಂಡು, ಪಿಎಚ್.ಡಿ., ಮಾಡಲು ಕನ್ನಡ ವಿವಿಗೆ ಒಮ್ಮೆ ಬಂದರು. 'ಗುರುಗಳೇ ನೀವೇ ಮಾರ್ಗದರ್ಶನ ಮಾಡಬೇಕು' ಎಂದರು. ಜತೆಗೆ ಆತ ಆ ವರ್ಷ ಪರೀಕ್ಷೆಗೆ ಬಂದಿದ್ದ ನೂರಾರು ಜನರಲ್ಲಿ ಮೊದಲ ಸ್ಥಾನ ಪಡೆದಿದ್ದರು. ಇಂತಹ ವಿದ್ಯಾರ್ಥಿಗಳು ಸಿಕ್ಕರೆ ನಾವು ಕಲಿಸುವುದು ಹೆಚ್ಚಿಗೆ ಇರುವುದಿಲ್ಲ. ಕಲಿಯುವುದೇ ಇರುತ್ತದೆ. ಆದರೆ ಯಾಕೋ ಏನೋ, ಹನುಮಂತಯ್ಯ ಅಡ್ಮಿಶನ್ ಮಾಡಿಕೊಳ್ಳಲೇ ಇಲ್ಲ. ಕಾರಣ ಕೂಡ ತಿಳಿಸಲಿಲ್ಲ. ಆಮೇಲೆ ಎಲ್ಲೊ ತಿಪಟೂರಿನಲ್ಲಿ ಕೆಲಸಕ್ಕೆ ಸೇರಿಕೊಂಡ ಸುದ್ದಿ ಬಂತು. ತಮ್ಮ ಸಹಪಾಠಿಯನ್ನು ಪ್ರೇಮಿಸಿ ಮದುವೆಯೂ ಆದ ಸುದ್ದಿ ಬಂತು.

ಒಳ್ಳೆಯ ಕವನಗಳನ್ನು ಬರೆಯುತ್ತ ಖ್ಯಾತರಾದ ಎನ್ಕೆ ಅನೇಕ



ಕಾರ್ಯಕ್ರಮದಲ್ಲಿ ಭೇಟಿಯಾಗುತ್ತಿದ್ದರು. ಅವರ 'ಚಿತ್ರದಬೆನ್ನು' ಕವನ ಸಂಕಲನ ಓದಿದಾಗ, ನಾನು ಅಲ್ಲಿನ ತಲ್ಲಣಗಳಿಗೆ ತತ್ತರಿಸಿಹೋದೆ. ಅಲ್ಲಿನ ಹೊಸತನಕ್ಕೆ ಬೆರಗಾಗಿ ಹೋದೆ. ಬಹಳ ದೊಡ್ಡ ಕವಿಯಾಗಿ ಬೆಳೆಯುವ ಪ್ರತಿಭೆಯಿದು ಎಂದು ಅನಿಸಿ ಸಂತೋಷವಾಗುತ್ತಿತ್ತು. ಅತ್ಯಂತ ಸೂಕ್ಷ್ಮವಾಗಿ ದಿಟ್ಟತನದಿಂದ ಮಾತಾಡುತ್ತಿದ್ದ ಎನ್ಕೆಯದು ಮೂಲತಃ ಹೆಂಗರುಳಾಗಿತ್ತು. ಇಂತಹದೊಂದು ಮನಸ್ಸು, ನಮ್ಮ ಸಮಾಜವನ್ನು ಕಟ್ಟುವಲ್ಲಿ ಒಬ್ಬ ಸೈನಿಕ ಶಕ್ತಿಯಂತೆ ನನಗೆ ತೋರುತ್ತಿತ್ತು.

ಆದರೆ ಕ್ರಮೇಣ ಹನುಮಂತಯ್ಯನವರಲ್ಲಿ ಸ್ವಭಾವ ಮತ್ತು ಜೀವನದಲ್ಲಿ ಒಂದು ಬಗೆಯ ಪರಿವರ್ತನೆ ಕಾಣತೊಡಗಿತು. ಜೀವನದಲ್ಲಿ ರೂಢಿಸಿಕೊಂಡ ಅಶಿಸ್ತಿನಿಂದಲೊ ಸಣ್ಣದನ್ನೂ ಬೃಹದಾಕಾರವಾಗಿ ಪರಿಭಾವಿಸಿ ಒದ್ದಾಡುವ ಅತಿಸೂಕ್ಷ್ಮತೆಯಿಂದಲೊ, ಚಿಕ್ಕಪ್ರಾಯದಲ್ಲೇ ಸಿಕ್ಕ ಕೀರ್ತಿ ಮತ್ತು ಸಾರ್ವಜನಿಕ ಮನ್ನಣೆಯಿಂದಲೊ, ಸಂಸಾರವನ್ನು ಚೊಕ್ಕವಾಗಿ ನಡೆಸಲಾಗದೆ ಮಾಡಿಕೊಂಡ ಎಡವಟ್ಟಿನಿಂದಲೊ ಈ ಪರಿವರ್ತನೆ ಬಂದಿತು. ಅವರ ಕಾವ್ಯದ ಬದ್ಧತೆ ಬದುಕಿನಲ್ಲಿ ಕಾಣಲಿಲ್ಲ. ಪ್ರೀತಿಸಿ ಲಗ್ನವಾದ ಹುಡುಗಿಗೆ ನೋವಾಗುವಂತೆ ಅವರು ಒಂದು ಪ್ರೇಮಪ್ರಕರಣದಲ್ಲಿ ಸಿಲುಕಿಕೊಂಡರು. ಕುಡಿತ ಸಾಲ ಹೆಚ್ಚಾದವು. ಇದರಿಂದ ಅವರಿಗಾಗಿ ತನ್ನ ಜಾತಿಯವರನ್ನೂ ಮನೆಯವರನ್ನೂ ಬಿಟ್ಟು ಧೀಮಂತಿಕೆ ಪ್ರಕಟಿಸಿದ ಹೆಣ್ಣುಮಗಳಿಗೆ ನೋವಾಗತೊಡಗಿತು. ಅವರಿಗೆ ಕರೆದು ಬುದ್ಧಿ ಹೇಳುವಷ್ಟು ನನಗೆ ಸಲುಗೆಯಿರಲಿಲ್ಲ.

ಹನುಮಂತಯ್ಯ ಕೂಡ ಯಾರ ಕೈಗೂ ಸಿಗದೆ ಫೋನಿಗೂ ನಿಲುಕದೆ ತಪ್ಪಿಸಿಕೊಂಡು ತಿರುಗತೊಡಗಿದ್ದರು. ತಿಪಟೂರಿಗೆ ಹೋದಾಗ, ಅವರ ಮಡದಿಯನ್ನು ಕಂಡು ನಾನೂ ನನ್ನ ಮಡದಿ ಕಂಡು, ನೈತಿಕ ಧೈರ್ಯ ಹೇಳಿ, ನಿಮ್ಮ ಜತೆ ನಾವಿದ್ದೇವೆ ಎಂದು ಹೇಳಿದೆವು. ಆದರೆ ಅವರ ಮೂಲಕ ಗಂಡನ ದುರ್ಬಲತೆ ಪಲಾಯನದ ಮಾತುಸೋತನುಡಿಗಟ್ಟು ಕೇಳಿದಾಗ, ಹನುಮಂತಯ್ಯ ಸಾಯುವ ಹಾದಿಯಲ್ಲಿ ಸಾಗುತ್ತಿದ್ದಾರೆ ಅನಿಸಿ ಗಾಬರಿಯಾಯಿತು. ಹನುಮಂತಯ್ಯ ಬೆಳೆಸಿಕೊಂಡ ಹೊಸ ಸಂಬಂಧವನ್ನು ಭಾವನೆಯ ಪರಿಭಾಷೆಯಲ್ಲಿ ಹೇಗೆ ವಿವರಿಸಿದರೂ, ಅದು ತನ್ನ ಸಂಗಾತಿಗೆ ಮಾಡಿದ ದ್ರೋಹವೂ ಆಗಿದ್ದು, ಅನೇಕ ನೈತಿಕ ಬಿಕ್ಕಟ್ಟುಗಳನ್ನು ಹುಟ್ಟು ಹಾಕಿತು.

ಆ ಬಿಕ್ಕಟ್ಟುಗಳಿಂದ ಪಾರಾಗಲು ಅವರು ನಾನು ಮಾಡಿದ್ದೇ ಸರಿ ಎಂಬ ಕೆಟ್ಟ ಧೈರ್ಯ ತಂದುಕೊಂಡು, 'ನನ್ನ ಸುದ್ದಿಗೆ ಯಾರೂ ಬರಬೇಡಿ' ಎಂದು ತನ್ನ ಸುತ್ತ ಒಂದು ವರ್ತುಲ ಬರೆದುಕೊಂಡು ಅದರೊಳಗೆ ಡಿಫೆನ್ಸಿವ್ ಆಗಿ ಉಳಿದರು. ಆದರೆ ತಾನು ಮಾಡಿದ್ದು ಸರಿಯಲ್ಲ ಎಂದು ಅಂತಃಸಾಕ್ಷಿ ಪೀಡಿಸತೊಡಗಿ ಅವರು ಒಳಗೊಳಗೇ ನರಳತೊಡಗಿದರು. ಅವರನ್ನು ಪ್ರೀತಿಸುವ ಎಲ್ಲರಲ್ಲೂ ಅವರ ಬಗ್ಗೆ ತಿರಸ್ಕಾರ ಮೂಡತೊಡಗಿತು. ಗೆಳೆಯರ ಕಠೋರ ಮೌನವು ಜರ್ಝರಿತ ಮಾಡತೊಡಗಿತು. ಮೂಲತಃ ದುರ್ಬಲ ಮತ್ತು ಅತಿಭಾವುಕ ಮನುಷ್ಯನಾದ ಅವರು ಅಳತೊಡಗಿದರು. ಸ್ವಹತ್ಯೆಯತ್ತ ಹೋಗತೊಡಗಿದರು. ಅವರು ಸಾವಿನ ಜತೆ ಹೋರಾಡುತ್ತಿರುವಾಗಲೂ, ಮರಳಿ ಬರಬಹುದು ಎಂದೇ ಆಸೆಯಿಟ್ಟಿದ್ದೆವು. ಆದರೆ ಹನುಮಂತಯ್ಯ ತನ್ನನ್ನು ಪ್ರೀತಿಸಿ ಬಂದ ಜೀವವನ್ನೂ ತನ್ನ ಕುಡಿಯನ್ನೂ ತಾನೇ ಮೇಲೆಬಿದ್ದು ಪ್ರೀತಿಸಿದ ಜೀವವನ್ನೂ ಏಕಕಾಲಕ್ಕೆ ಹೊಲಬುಗೆಡಿಸಿ ಹೊರಟುಬಿಟ್ಟರು.

ಯಾಕೆ ಇಷ್ಟು ಚಂದಾಗಿ ಪದ್ಯ ಬರೆಯುವ ಈ ಹುಡುಗ ಹೀಗೆ ಬಾಳಲು ಬಾರದಂತೆ ಭಗ್ನವಾಗಿ ಹೋದ? ಬರೆಹಕ್ಕಿಂತ ಬದುಕು

ಮುಖ್ಯವೆಂದು ತಿಳಿಯದೇ ಹೋದ? ಲೇಖಕರ ಕಣ್ಮುಂದೆ ಸಾಮಾಜಿಕ ರಾಜಕೀಯವಾದ ಚಳುವಳಿಗಳು ಇಲ್ಲದಿರುವುದೇ ಹೀಗೆ ವೈಯಕ್ತಿಕ ನೋವನ್ನೇ ದೊಡ್ಡದು ಮಾಡಿಕೊಳ್ಳಲು ಕಾರಣವಾಯಿತೇ? ನಮ್ಮ ವೈಯಕ್ತಿಕ ಸಮಸ್ಯೆಗಿಂತ ದೊಡ್ಡ ಸಮಸ್ಯೆಗಳೂ ಒಟ್ಟು ಸಮುದಾಯಕ್ಕೆ ಸಂಬಂಧಿಸಿ ಇವೆ. ಅವಕ್ಕೆ ನಾನು ತೊಡಗಿಸಿಕೊಳ್ಳಬೇಕು ಎಂಬ ನೆದರಿದ್ದರೆ ಹೀಗೆ ಸಾವನ್ನು ಆಹ್ವಾನಿಸಿಕೊಳ್ಳಬೇಕು ಅನಿಸುತ್ತಿತ್ತೇ?

ಅಥವಾ ಹನುಮಂತಯ್ಯನವರ ಒಳಗೇ ನಾಟಕಕಾರ ಸಂಸರಿಗಿದ್ದಂತೆ ನನ್ನನ್ನು ಯಾರೋ ಬೇಟೆಯಾಡುತ್ತಿದ್ದಾರೆ ಅವರಿಂದ ತಪ್ಪಿಸಿಕೊಳ್ಳಬೇಕು ಎಂಬ ಫೋಬಿಯಾ ಇದ್ದು ಅದುವೇ ಸ್ವಹತ್ಯೆಯತ್ತ ಕರೆದುಕೊಂಡು ಹೋಯಿತೇ? ಪಶ್ಚಿಮದ ಸಮಾಜದಲ್ಲಿ ಇದ್ದಂತೆ ನಾವು ಮಾಡಿದ ತಪ್ಪನ್ನು ಪ್ರಾಂಜಲವಾಗಿ ಒಪ್ಪಿಕೊಂಡು ಕ್ಷಮೆ ಕೇಳುವ ಗುಣವು ನಮ್ಮಲ್ಲಿ ಇಲ್ಲದಿರುವುದೇ ಹೀಗೆ ಕೆಟ್ಟ ಹಟಕ್ಕೆ ಕರೆದುಕೊಂಡು ಹೋಗುತ್ತದೆಯೇ? ಅಥವಾ ನಾವು ಹನುಮಂತಯ್ಯನವರನ್ನು ಅರ್ಥಮಾಡಿಕೊಳ್ಳಲು ಆಗಲಿಲ್ಲವೇ? ನಾನು ಒಮ್ಮೆ ತಿಪಟೂರಿಗೆ ಹೋದಾಗ, ಕಂಡ ಹನುಮಂತಯ್ಯನವರ ಮಡದಿ ಶೈಲಜರ ಬಾಡಿದ ಮುಖವೂ ಮತ್ತು ಅವರ ಮಗಳ ಕಂಗೆಟ್ಟ ಮುಖವೂ ನೆನಪಾಗುತ್ತಿದೆ. ಶೈಲಜ ನೇರನಡೆಯ ನೇರನುಡಿಯ ಹುಡುಗಿ. ಅವರ ಕಿಚ್ಚಿಲ್ಲದ ಬೇಗೆ ಎಂಬ ಆತ್ಮಕಥನ ಓದಿ ನಾನು ಅವರ ಧೀಮಂತಿಕೆಗೆ ಬೆರಗಾಗಿದ್ದೆ.

ಅವರು "ನನಗೆ ನನ್ನ ಆ ಮೊದಲಿನ ಹನುಮಂತಯ್ಯ ಬೇಕು" ಎಂದು ಡಿಮಾಂಡು ಲಂಕೇಶರ 'ಸಂಕ್ರಾಂತಿ' ನಾಟಕ ನೆನಪಾಯಿತು. ಅದರಲ್ಲಿ ದಲಿತನಾದ ರುದ್ರನು ಬಸವಣ್ಣನ ಪ್ರಭಾವಕ್ಕೆ ಸಿಕ್ಕು ಶರಣನಾದ ಬಳಿಕ, ಅವನನ್ನು ಅವನ ದಲಿತತ್ವದ ಜತೆಗೇ ಕೇವಲ ಒಬ್ಬ ಗಂಡೆಂದು ಪರಿಭಾವಿಸಿ ಪ್ರೇಮಿಸಿದ್ದ ಉಷೆ ಹೇಳುವ ಮಾತು ನೆನಪಿಗೆ ಬಂತು. "ನನಗೆ ನನ್ನ ಮೊದಲಿನ ರುದ್ರ ಬೇಕು. ಈ ಶರಣ ರುದ್ರ ಬೇಡ". ಆದರೆ ಶೈಲಜ ಅವರಿಗೆ ಮೊದಲಿನ ಪ್ರೇಮಿ ಹನುಮಂತಯ್ಯನೂ ಸಿಗಲಿಲ್ಲ. ಬದಲಾದ ಹನುಮಂತಯ್ಯನೂ ಉಳಿಯಲಿಲ್ಲ. ಅವರು ಕಿಚ್ಚಿಲ್ಲದ ಬೇಗೆಯಲ್ಲಿ ಬೇಯುವ ಸ್ಥಿತಿಯಲ್ಲೇ ಉಳಿದರು. 'ಕಿಚ್ಚಿಲ್ಲದಬೇಗೆ' –ಇದು ಅಕ್ಕ ಮಹಾದೇವಿಯಾಡಿದ ಮಾತು.

ಶೈಲಜ ಅವರ ಹೋರಾಟಕ್ಕೆ ಸರಿಯಾದ ರೂಪಕ. ವ್ಯಂಗ್ಯವೆಂದರೆ ಸ್ವತಃ ಹನುಮಂತಯ್ಯ ಸಹ ತೆರಣಿಯ ಹುಳ ತನ್ನ ನೂಲ ತಾನೇಸುತ್ತಿಸುತ್ತಿ ಸಾವತೆರನಂತೆ ಸಾವಿಗೆ ಸಂದು ಹೋಗಿದ್ದು. ಅವರು ಬದುಕಿದ್ದರೆ, ಹೀಗೆ ಮಾಡಬಹುದೇನೂ ಎಂದು ಝುಂಕಿಸಿ ಕೇಳಬಹುದಿತ್ತು. ಆದರೆ ತನ್ನ ದುಡುಕಿಗೆ ಅಶಿಸ್ತಿಗೆ ವಿಹ್ವಲತೆಗೆ ತನ್ನನ್ನೇ ಬಲಿಗಂಬಕ್ಕೆ ಏರಿಸಿಕೊಂಡವರನ್ನು ಈಗ ಕಟಕಟೆಯಲ್ಲಿ ನಿಲ್ಲಿಸುವುದಾದರೂ ಹೇಗೆ? ಅದನ್ನು ನೈತಿಕವಾಗಿ ಸರಿತಪ್ಪುಗಳ ಪರಿಭಾಷೆಯಲ್ಲಿ ನಿರ್ಧರಿಸುವುದು ಕಷ್ಟವಾಗಿದೆ. ಆದರೆ ಜೀವಬಿಡುವ ಅವರು ಪಟ್ಟಿರುವ ಸಂಕಟ ಮತ್ತು ಬದುಕಿರುವವರಿಗೆ ಕೊಟ್ಟಿರುವ ನೋವು ಎರಡೂ ಕಾಡಿಸುತ್ತಿವೆ. ಆಕ್ರೋಶ ತರಿಸುತ್ತಿವೆ. ಬಹಳ ದೊಡ್ಡ ಲೇಖಕನಾಗಿ ಬೆಳೆದು ನಾಡಿಗೆ ಕೀರ್ತಿ ತರುವ ಒಬ್ಬ ಕವಿ ಇಲ್ಲವಾದನಲ್ಲ ಎಂದಲ್ಲ. ನಮಗೆಲ್ಲ ತನ್ನ ಬಾಳಿನಿಂದಲೂ ಚಿಂತನೆಯಿಂದಲೂ ಪ್ರೇರಿಸುವ ಶಕ್ತಿ ಮತ್ತು ಸಾಧ್ಯತೆಯಿದ್ದ ಒಬ್ಬ ಮನುಷ್ಯ ಸಂಯಮಗೆಟ್ಟು ಉದ್ವಸ್ತನಾದನಲ್ಲಾ ಎಂದು. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಕನು ಸನ್ಯಾಲ್
ಕ್ರಾಂತಿಕಾರಿಯ ದಾರುಣ ಅಂತ್ಯ

(21ನೇ ಪುಟದಿಂದ)

ಸನ್ಯಾಲ್ ತಮ್ಮ ಜೀವನವಿಡೀ ನಕ್ಸಲ್ ಬಾರಿಯ ರೈತಾಪಿ ಜನರ ನಡುವೆಯೇ ಬಾಳಿ ಬದುಕಿದ್ದಾರೆ. ಹತಿಘಿಸ ಎಂಬ ಕುಗ್ರಾಮದಲ್ಲಿ ಶೌಚಾಲಯವೂ ಇಲ್ಲದ ಮಣ್ಣಿನ ಗುಡಿಸಲಲ್ಲೇ ತಮ್ಮ ಇಡೀ ಬಾಳನ್ನು ಸವೆಸಿರುವುದು ಕನು ಸನ್ಯಾಲ್ ಅವರ ಸರಳ ಜೀವನ ಶೈಲಿಗೆ ಸಾಕ್ಷಿ.

ಅನೇಕ ಬಾರಿ ಈ ಗುಡಿಸಲನ್ನು ಆನೆಗಳ ಹಿಂಡು ಧ್ವಂಸ ಮಾಡಿದರೂ ಮತ್ತೆ ಕಟ್ಟಿಕೊಂಡು ಅಲ್ಲಿಯೇ ಬಾಳಿದ್ದೂ ಒಂದು ವೈಶಿಷ್ಟ್ಯ. ತಮ್ಮ ಕೊನೆ ಉಸಿರಿರುವವರೆಗೂ ಬಂಡಾಯದ ದನಿಯಾಗಿಯೇ ಇದ್ದ ಕನು ಸನ್ಯಾಲ್ ಹೋರಾಟವನ್ನೇ ತಮ್ಮ ಜೀವನದ ಧ್ಯೇಯವನ್ನಾಗಿರಿಸಿಕೊಂಡಿದ್ದರು. 2006ರಲ್ಲಿ ಒಮ್ಮೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಡಕಾಯಿತರು ದಾಳಿ ಮಾಡಿದ್ದರು. ಭೋಗಿಯಲ್ಲಿದ್ದ ಸಹಪ್ರಯಾಣಿಕರೆಲ್ಲರೂ ಡಕಾಯಿತರಿಗೆ ಶರಣಾಗಿ ತಮ್ಮ ವಸ್ತುಗಳನ್ನು ಒಪ್ಪಿಸಿದರೂ, ಕನು ಸನ್ಯಾಲ್ ಏಕಾಂಗಿಯಾಗಿ ಸೆಣಸಾಡಿ ಗಾಯಗೊಂಡು ಆಸ್ಪತ್ರೆ ಸೇರಿದ್ದರು.

ತಮ್ಮ ಕೊನೆಯ ದಿನಗಳಲ್ಲಿ 78 ವರ್ಷದ ಕ್ರಾಂತಿಕಾರಿ ಕನು ಸನ್ಯಾಲ್ ವೃದ್ಧಾಪ್ಯದ ಅನೇಕ ತೊಂದರೆಗಳಿಂದ ಬಳಲುತ್ತಿದ್ದರು. ಆದರೆ ಅವರ ಸಂಗಾತಿಗಳು ಎಷ್ಟೇ ಬಲವಂತ ಮಾಡಿದರೂ ಚಿಕಿತ್ಸೆಗಾಗಿ ಕೊಲ್ಕತ್ತಕ್ಕೆ ಬರಲು ಸನ್ಯಾಲ್ ಒಪ್ಪುತ್ತಿರಲಿಲ್ಲ. "ಸನ್ಯಾಲ್ ತಾವು ಕಟ್ಟಿ ಬೆಳೆಸಿದ ಕ್ರಾಂತಿಕಾರಿ ಹೋರಾಟದ ಮೂಲ ಪ್ರೇರಣೆಯಾದ ಶ್ರಮಜೀವಿಗಳನ್ನು ತೊರೆದು ದೂರ ಹೋಗಲು ಎಂದೂ ಇಚ್ಚಿಸಲಿಲ್ಲ. ಯಾವುದೇ ಪ್ರಲೋಭನೆಗಾಗಲೀ ಸವಲತ್ತುಗಳಿಗಾಗಲೀ ರಾಜಿಮಾಡಿಕೊಳ್ಳದೆ ಕೊನೆಯವರೆಗೂ ಕ್ರಾಂತಿಕಾರಿ ಯುವಕರನ್ನು ಸಂಘಟಿಸುತ್ತಲೇ ಇದ್ದ ಸನ್ಯಾಲ್ ನಿಜಕ್ಕೂ ಒಬ್ಬ ಕ್ರಾಂತಿಕಾರಿ ನಾಯಕ" ಎಂದು ಬಣ್ಣಿಸುತ್ತಾರೆ ಅವರ ಸಂಗಾತಿ ರಾಣ. ಖ್ಯಾತ ಲೇಖಕ ಸೈಬಲ್ ಮಿತ್ರ ಸನ್ಯಾಲ್ ಅವರನ "ನೈಜ ವೃತ್ತಿಪರ ಕ್ರಾಂತಿಕಾರಿ" ಎಂದು ಲೆನಿನ್ ಅವರ ಮಾತುಗಳಲ್ಲೇ ಬಣ್ಣಿಸುತ್ತಾರೆ.

ಭಾರತದ ಕ್ರಾಂತಿಕಾರಿ ಹೋರಾಟಗಳಿಗೆ ಸ್ಫೂರ್ತಿಯ ಚಿಲುಮೆಯಾಗಿ ನಾಲ್ಕು ದಶಕಗಳ ಕಾಲ ತಮ್ಮ ಕ್ರಾಂತಿಕಾರಿ ಮಾರ್ಗವನ್ನು ಕ್ರಮಿಸಿದ ಕನು ಸನ್ಯಾಲ್ ಪ್ರಸ್ತುತ ಮಾವೋವಾದಿಗಳ ನಿಲುವನ್ನು ಉಗ್ರವಾಗಿ ಟೀಕಿಸಿದ್ದೇ ಅಲ್ಲದೆ, ತಾವೇ ಕಟ್ಟಿ ಬೆಳೆಸಿದ ನಕ್ಸಲ್ ಚಳುವಳಿಯಿಂದ ದೂರ ಸರಿದಿದ್ದೂ ಹೌದು. ಒಂದು ರೀತಿಯಲ್ಲಿ ಇದು ಕಮ್ಯುನಿಸ್ಟ್ ಚಳುವಳಿಯ ವಿಡಂಬನೆ ಎನಿಸಿದರೂ, ಕನು ಸನ್ಯಾಲ್ ಮತ್ತು ಚಾರುಮಜುಂದಾರ್ ಅವರು ಹಾಕಿಕೊಟ್ಟ ಕ್ರಾಂತಿಯ ಪಥದ ಅಗತ್ಯತೆ ಇಂದಿಗೂ ಪ್ರಸ್ತುತ ಎನಿಸಿರುವುದೇ ಈ ನಾಯಕರ ಮಹತ್ತರ ಕೊಡುಗೆ. ಆದರೂ ಪ್ರಭುತ್ವದ ಯಾವುದೇ ಬೆದರಿಕೆಗಳಿಗೆ ಜಗ್ಗದೆ ಹೋರಾಟದ ಹಾದಿಯಲ್ಲೇ ಸಾಗಿ ಕ್ರಾಂತಿಗೀತೆಯ ಅಂತಿಮ ಚರಣ ಹಾಡಿ ಮುಗಿಸಿದ ಕನು ಸನ್ಯಾಲ್ ಆತ್ಮಹತ್ಯೆಗೆ ಶರಣಾದದ್ದು ಇತಿಹಾಸದಲ್ಲಿ ಪ್ರಶ್ನೆಯಾಗಿಯೇ ಉಳಿಯುತ್ತದೆ. ಕನು ಸನ್ಯಾಲ್ ಸಹ ಭಾರತದ ಕ್ರಾಂತಿಯ ಪಥದಲ್ಲಿ ಪ್ರಶ್ನೆಯಾಗಿಯೇ ಉಳಿಯುತ್ತಾರೆ. □

ದಲಿತರಲ್ಲಿ ಎಡ–ಬಲ ಮೈತ್ರಿ ಪ್ರಾಮಾಣಿಕವಾದದ್ದೇ?

ದಾಸನೂರು ಕೂಸಣ್ಣ

ಹೊಲೆಯ ಸಮಾಜ ಕಳೆದ ನಾಲ್ಕೈದು ದಶಕಗಳ ಸಾಮಾಜಿಕ ಚಳವಳಿಗಳ ತೀವ್ರ ಪ್ರಭಾಗಳಿಂದ ಹೆಚ್ಚಿನ ಮಟ್ಟದಲ್ಲಿ ಶಿಕ್ಷಣವಂತರಾಗಲು ಸಾಧ್ಯವಾಗಿದೆ. ಆದರೆ, ಮಾದಿಗ ಸಮಾಜ ತನ್ನ ಅತೀವ ಪೂರ್ವಾಶ್ರಮದ ಒಣ ನಂಬಿಕೆ ಮತ್ತು ಸಂಪ್ರದಾಯಬದ್ಧ ವೃತ್ತಿ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ಬಂಧಿಸಿಕೊಂಡಿದೆ. ವೃತ್ತಿ ಆಧಾರಿತ ಕಸುಬುಗಳಿಂದ ಅಷ್ಟಿಷ್ಟು ಆಶ್ರಯಗಳು ಸಿಗುತ್ತಿದ್ದ ಕಾರಣ, ಕೃಷಿ ಸಮಾಜ ತಮ್ಮನ್ನು ಭವಿಷ್ಯದಲ್ಲಿಯೂ ಶಾಶ್ವತವಾಗಿ ಸಂರಕ್ಷಿಸುತ್ತದೆಂದು ನಂಬಿತ್ತು. ಆದ್ದರಿಂದ, ಈ ಸಮಾಜ ಕಾಲಮಾನದ ಒತ್ತಡಗಳಿಗೆ ಸ್ಪಂದಿಸದ ಕಾರಣ ಹೆಚ್ಚಿನ ಪ್ರಮಾಣದಲ್ಲಿ ಹೊಲೆಯರಷ್ಟು ಶಿಕ್ಷಣವಂತರಾಗಲಿಲ್ಲ. ಬಹುಶಃ ಇದು ಸಮಾಜದ ಇಂದಿನ ದಾರುಣ ಸಾಮಾಜಿಕ ಸ್ಥಿತಿಗೆ ಮೂಲವಾಗಿದೆ.

ದಿನಾಂಕ: 21.02.2010 ರಂದು ಮಂಡ್ಯದಲ್ಲಿ ಜರುಗಿದ ಛಲವಾದಿ ಮಹಾಸಭಾ ಸಮಾವೇಶದಲ್ಲಿ "ಎಡಗೈ–ಬಲಗೈ" ಅಸ್ಪೃಶ್ಯ ಸಮಾಜಗಳೆರಡೂ ಒಂದಾಗಬೇಕೆಂಬ ಹಳೆಯ ಮಹಾಹಾಡಿಗೆ ವಿನೂತನ ಸ್ವರ ಸೇರಿಸಿ ಸಾಮಾಜಿಕ ಕುತೂಹಲಗಳನ್ನು ಸೃಷ್ಟಿಸಿದ್ದಾರೆ (ವಾರ್ತೆ). ಶ್ರೇಣೀಕೃತ ವರ್ಣವ್ಯವಸ್ಥೆಯಲ್ಲಿ ಬಲಗೈ ಸಮಾಜ ಕೂಡ ಶೋಷಿತತೆಯ ಮಹಾಕೂಪದೊಳಗೆ ಸಿಲುಕಿರುವುದರಿಂದ ಅದರ ಪೊರೆ ಕಳಚಿಕೊಳ್ಳಲು ನಿರಂತರವಾಗಿ ತವಕಿಸುತ್ತಿದೆ. ಇಂತಹ ಸಮಾಜ ಮಾದಿಗರಿಗಿಂತಲೂ ತಾವೇ ಶ್ರೇಷ್ಠ ಸಾಮಾಜಿಕತೆ ಹೊಂದಿದವರೆಂದು ಬಿಂಬಿಸಿಕೊಳ್ಳುತ್ತಾ ಬಂದಿದೆ. ಹಾಗೆಯೇ ಮಾದಿಗ ಮತ್ತು ಇತರ ಎಲ್ಲಾ ಕಳಂಕಿತ ಜಾತಿ – ಪಂಗಡಗಳಲ್ಲೆವೂ ವರ್ಣವ್ಯವಸ್ಥೆಯೊಳಗೆ ತಮ್ಮಷ್ಟಕ್ಕೆ ತಾವೇ ಸರ್ವಶ್ರೇಷ್ಠರೆಂದು ಪರಿಭಾವಿಸಿಕೊಂಡು, ಆ ಮೂಲಕ ಜಾತಿವಾದದ ಅಸ್ತಿತ್ವವನ್ನೇ ನಿರಾಕರಿಸುತ್ತಾ ಬಂದಿವೆ. ಆದರೂ, ಹೊಲೆಯ–ಮಾದಿಗರ ನಡುವೆ ಜಡಗಟ್ಟಿ ನಿಂತಿರುವ ನವ ಬ್ರಾಹ್ಮಣಿಕೆಗಳು ಇವರನ್ನು ವಿಘಟಿತರನ್ನಾಗಿ ಮಾಡಲು ಸಹಕಾರಿ ಆಗಿದೆ. ಆದುದರಿಂದ, ಮೇಲ್ವರ್ಗದವರು ಇವರನ್ನು ಸುಲಭವಾಗಿ ತಮ್ಮ ಮೂಗಿನ ನೇರಕ್ಕೆ ಕುಣಿದಾಡಿಸಲು ಶಕ್ತರಾಗಿದ್ದಾರೆ.

ಹೊಲೆಯ ಸಮಾಜ ಕಳೆದ ನಾಲ್ಕೈದು ದಶಕಗಳ ಸಾಮಾಜಿಕ ಚಳವಳಿಗಳ ತೀವ್ರ ಪ್ರಭಾಗಳಿಂದ ಹೆಚ್ಚಿನ ಮಟ್ಟದಲ್ಲಿ ಶಿಕ್ಷಣವಂತರಾಗಲು ಸಾಧ್ಯವಾಗಿದೆ. ಆದರೆ, ಮಾದಿಗ ಸಮಾಜ ತನ್ನ ಅತೀವ ಪೂರ್ವಾಶ್ರಮದ ಒಣನಂಬಿಕೆ ಮತ್ತು ಸಂಪ್ರದಾಯಬದ್ಧ ವೃತ್ತಿ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ಬಂಧಿಸಿಕೊಂಡಿದೆ. ವೃತ್ತಿ ಆಧಾರಿತ ಕಸುಬುಗಳಿಂದ ಅಷ್ಟಿಷ್ಟು ಆಶ್ರಯಗಳು ಸಿಗುತ್ತಿದ್ದ ಕಾರಣ, ಕೃಷಿ ಸಮಾಜ ತಮ್ಮನ್ನು ಭವಿಷ್ಯದಲ್ಲಿಯೂ ಶಾಶ್ವತವಾಗಿ ಸಂರಕ್ಷಿಸುತ್ತದೆಂದು ನಂಬಿತ್ತು. ಆದ್ದರಿಂದ, ಈ ಸಮಾಜ ಕಾಲಮಾನದ ಒತ್ತಡಗಳಿಗೆ ಸ್ಪಂದಿಸದ ಕಾರಣ ಹೆಚ್ಚಿನ ಪ್ರಮಾಣದಲ್ಲಿ ಹೊಲೆಯರಷ್ಟು ಶಿಕ್ಷಣವಂತರಾಗಲಿಲ್ಲ. ಬಹುಶಃ ಇದು ಈ ಸಮಾಜದ ಇಂದಿನ ದಾರುಣ ಸಾಮಾಜಿಕ ಸ್ಥಿತಿಗೆ ಮೂಲವಾಗಿದೆ. ಇದರ ಕರಿನೆರಳು ಅವರ ಬೆನ್ನ ಹಿಂದೆ ಶಾಶ್ವತವಾಗಿ ಇಂದಿಗೂ ಕಾಡುತ್ತಲೇ ಇದೆ.

1979ರ ಕಾಲಘಟ್ಟದಲ್ಲಿ ಹೊಲೆಯ–ಮಾದಿಗರನ್ನು ರಾಜ್ಯದ ರಾಜಕಾರಣದ ಕಕ್ಷೆಯಿಂದ ಶಾಶ್ವತವಾಗಿ ಹೊರಗೆಡವಲು ಷಡ್ಯಂತ್ರವೊಂದು ನಿರೂಪಿತವಾಗಿತ್ತು. ಇದಕ್ಕಾಗಿ ಮೇಲ್ವರ್ಗದ ರಾಜಕಾರಣಿಗಳು ತಮೊಂದಿಗೆ ಕನಿಷ್ಠ ಸಾಮಾಜಿಕ ಸ್ವಾತಂತ್ರ್ಯ ಹೊಂದಿರುವ ಕೆಲವು ಪರಿಶಿಷ್ಟ ಜಾತಿಗಳೊಂದಿಗೆ ಕದ್ದುಮುಚ್ಚಿ ರಾಜಮರ್ಯಾದೆ ನೀಡಲಾರಂಭಿಸಿದರು. ಮೊದಲು, ಇದರ ಕಬಂಧಬಾಹು ಅಸಂಘಟಿತರಾಗಿದ್ದ ಮಾದಿಗರ ಎಲ್ಲಾ ರಾಜಕೀಯ ಪ್ರಾತಿನಿಧ್ಯಗಳನ್ನು ನುಂಗಿ ಜೀರ್ಣಿಸಿಕೊಳ್ಳಲು ಶಕ್ತವಾಯಿತು. ಆವಾಗ, ಹೊಲೆಯರು (ಛಲವಾದಿಗಳು) ಆಧುನಿಕ ಶಿಕ್ಷಣದಿಂದ ಸಬಲೀಕರಣದ ಹಂತದಲ್ಲಿದ್ದ ಪರಿಣಾಮಗಳಿಂದ ಅವರು ಮೇಲ್ವರ್ಗದವರ ಸಂಚಿನ ರಾಜಕಾರಣಗಳನ್ನು ನಿಯಂತ್ರಿಸಿಕೊಳ್ಳುವಲ್ಲಿ ಸ್ವಲ್ಪ ಮಟ್ಟಿಗೆ ಸಫಲರಾಗಿದ್ದರು. ಮಾದಿಗರಂತು, ಈ ವಿಷವರ್ತುಲದಿಂದ ಹೊರಬರಲು ಇಂದಿಗೂ ಹರಸಾಹಸ ಮಾಡುತ್ತಿದ್ದಾರೆ. ಮೇಲ್ವರ್ಗದ ರಾಜಕಾರಣ, ಹೊಲೆಯರ ರಾಜಕೀಯ ಪ್ರಾಬಲ್ಯಗಳನ್ನು ನಿಯಂತ್ರಿಸಲು ಜಾತಿವಾದಿ ಸರಕುಗಳ ಮೂಲಕ ಇದೊಂದು ಅಪಾಯಕಾರಿ ಮತ್ತು ಆಕ್ರಮಣಕಾರಿ ಸಮುದಾಯವೆಂದು ಪ್ರತಿಬಿಂಬಿಸುತ್ತಾ ಬಂದಿದೆ.

ಮೇಲ್ವರ್ಗದವರ ಅತೃಪ್ತಿಯ ಬೆಂಕಿ ನಿಧಾನವಾಗಿ ಕವಿಯುತ್ತಾ ರಾಜ್ಯಾದ್ಯಂತ ತನ್ನ ಕೆನ್ನಾಲಿಗೆಯನ್ನು ಚಾಚಿದ ಪರಿಣಾಮಗಳಿಂದ

2004 ಮತ್ತು 2008ರ ವಿಧಾನ ಸಭಾ ಚುನಾವಣೆಗಳಲ್ಲಿ ತನ್ನ ಸಾಮರ್ಥ್ಯವನ್ನು ನಿಚ್ಚಳವಾಗಿ ಪ್ರದರ್ಶಿಸುವಲ್ಲಿ ಯಶಸ್ವಿಯಾಯಿತು. 2008ರ ಚುನಾವಣೆಯಲ್ಲಿ ಮಾದಿಗರು 1979ರ ರಾಜಕೀಯ ಸ್ಥಿತಿಗಿಂತ ಕೆಳಗಿಳಿದರು. ತರುವಾಯ ಹೊಲೆಯರು ಜೋಪಾನ ಮಾಡಿಕೊಂಡಿದ್ದ ರಾಜಕೀಯ ಪ್ರಾಬಲ್ಯವನ್ನು ಸವರ್ಣೀಯ ರಾಜಕಾರಣ ನಿಚ್ಚಳವಾಗಿ ಬಗ್ಗು ಬಡಿಯಲು ಶಕ್ತವಾಯಿತು. ಈ ಬೆಳವಣಿಗೆಗಳು ಅವರ ಅಂತರಂಗ ದೊಳಗೆ ಬಿಸಿಕಂಪನಗಳನ್ನು ಸೃಷ್ಟಿಸುವಲ್ಲಿ ಮುಂದಾಯಿತು. ಇದರಿಂದ ತೀವ್ರವಾಗಿ ಆಘಾತಕ್ಕೆ ಒಳಗಾಗಿರುವ ಈ ಸಮುದಾಯದ ರಾಜಕೀಯ ಮುತ್ಸದ್ದಿಗಳು, ಉನ್ನತ ಅಧಿಕಾರಿಗಳು, ವಿದ್ಯಾವಂತರು, ಹಾಗೂ ಇತರೆಲ್ಲರೂ ಮಾದಿಗ ಸಮಾಜ ಸಹ ನಮ್ಮೊಂದಿಗಿದ್ದರೆ ಅಸ್ಪೃಶ್ಯರೆಲ್ಲರೂ ಒಗ್ಗಟ್ಟನ್ನು ಸಾಧಿಸಬಹುದಿತ್ತೆಂದು ನಿಂತಲ್ಲಿ-ಕುಂತಲ್ಲಿ ತಮ್ಮ ನೋವಿನ ಉದ್ಗಾರಗಳನ್ನು ಎಳೆಯ ತೊಡಗಿದ್ದಾರೆ. ಈ ನಿಲುವುಗಳು ಅತ್ಯಂತ ಶ್ಲಾಘನೀಯವಾದವು. ಈ ಅಭಿಮತಗಳಿಗೆ ಇಂಬು ನೀಡಲು ಛಲವಾದಿ ಮಹಾಸಂಸ್ಥಾನ ಮಠದ ಸ್ವಾಮೀಜಿಗಳು ಸಹ ಇಂತಹ ಅಭಿಪ್ರಾಯಗಳನ್ನೆ ಸಾದರಪಡಿಸಿದ್ದಾರೆ.

ಈ ಸಾಮಾಜಿಕ ನಿಲುವುಗಳನ್ನು ಸ್ವಾಗತಿಸುವವರ ಸಂಖ್ಯೆ ಮಾದಿಗ ಸಮಾಜದೊಳಗೇನು ಕಡಿಮೆಯಿಲ್ಲ. ಆದರೂ ಕೆಲವರು ಹೊಲೆಯರೆಂದರೆ ಅಂಜಿ ಮೈಲಿದೂರ ನಿಲ್ಲುತ್ತಾರೆ. ಇಂತಹವರು ಅಭಿಮತಿಸುವುದೇನೆಂದರೆ: "ಮಾದಿಗ ಸಮಾಜ ತನ್ನ ಎಲ್ಲಾ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಜಾಪ್ರಭುತ್ವ ಮಾದರಿಯಲಿ ಒಳ ಮೀಸಲಾತಿ ಹೋರಾಟ ಕೈಗೆತ್ತಿಕೊಂಡಾಗ, ಇದು ಅಸ್ಪೃಶ್ಯರ ಐಕ್ಯತೆಗೆ ಧಕ್ಕೆ ತರುವುದೆಂದು ಬಹಿರಂಗವಾಗಿ ಸಾರಿದರು. ನಮ್ಮ ಸಮಾಜದ ಪ್ರಗತಿಬಗ್ಗೆ ಕಿಂಚಿತ್ತು ಕಾಳಜಿಯಿಲ್ಲ. ಅಂತಹ ಸಮಾಜ ಸಹೋದರತ್ವದ ಸಾಮಾಜಿಕ ಜವಾಬ್ದಾರಿಯನ್ನು ಹೇಗೆ ಹೊರಬಲ್ಲದು"? ಎಂಬ ಗಂಭೀರ ಪ್ರಶ್ನೆಗಳನ್ನು ಬಹಳ ದಶಕಗಳಿಂದಲೂ ಎತ್ತುತ್ತಲೆ ಬಂದಿದ್ದಾರೆ. ಇನ್ನೂ ಕೆಲವರು ಬಹಿರಂಗವಾಗಿಯೇ, "ನಮಗೆ ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗ, ಕುರುಬ ಹಾಗೂ ಇತರರು ಅಪಾಯಕಾರಿಗಳಲ್ಲ. ಹೊಲೆಯರೆ ಹೆಚ್ಚಿನ ಅಪಾಯಕಾರಿಗಳೆಂದು ಈ ಬಗ್ಗೆ ದಾಖಲೆಗಳನ್ನು ತೋರಿಸುತ್ತಾ ಆರೋಪಿಸಿಸ್ತಿದ್ದಾರೆ".

ಮಂಡ್ಯದ ಸಮಾವೇಶದಲ್ಲಿ ಕೇಂದ್ರದ ಮಾಜಿ ಸಚಿವರಾದ ಶ್ರೀ ವಿ. ಶ್ರೀನಿವಾಸಪ್ರಸಾದರು "ಪರಿಶಿಷ್ಟ ಜಾತಿ ಪಟ್ಟಿಯೊಳಗೆ ಪ್ರಸ್ತುತದಲ್ಲಿ ಇರಲು ಯಾರಾರು ಅರ್ಹತೆ ಹೊಂದಿದ್ದಾರೆಂಬ ವೈಜ್ಞಾನಿಕ ತೀರ್ಮಾನಗಳಾಗಬೇಕಿದೆ ಎಂದು ಸಾದರಪಡಿಸಿದ್ದಾರೆ. 1980ರಲ್ಲೇ, ಮಾಜಿ ಮಂತ್ರಿಗಳಾದ ದಿ. ಎನ್. ರಾಚಯ್ಯನವರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಉಗ್ರ ಹೋರಾಟ ಕೈಗೆತ್ತಿಕೊಂಡಿದ್ದರು. ಆದರೆ, ಆವಾಗ ಇತರ ಯಾವುದೇ ಅಸ್ಪೃಶ್ಯ ಸಮಾಜಗಳು ಕುಂಭಕರ್ಣ ನಿದ್ದೆಯಿಂದ ಹೊರಬರಲಿಲ್ಲ; ಈ ವಿಚಾರವನ್ನು ಆಲಿಸುವುದಕ್ಕಾದರೂ ಎಚ್ಚರಗೊಳ್ಳಲಿಲ್ಲ. ಅಂದು ತೋರಿದ ಉದಾಸೀನತನಗಳ ಪರಿಣಾಮಗಳಿಂದ ಹಂತ-ಹಂತವಾಗಿ ಅಸ್ಪೃಶ್ಯರು ಮೂಲೋತ್ಪಾಟನೆ ಆಗ ತೊಡಗಿದ್ದಾರೆ. ಬಹುಶ: ಅಂದೆ ಎಲ್ಲಾ ಮೂಲ ಅಸ್ಪೃಶ್ಯ ಸಮಾಜಗಳೊಳಗೆ ಅವರ ನೈಜ ದನಿಗಳಾಗಿದ್ದರೆ ಇಂದಿನ ಸ್ಥಿತಿಗಳಾವುವು ಎದುರಾಗುತ್ತಿರಲಿಲ್ಲ.

ಐತಿಹಾಸಿಕವಾಗಿ, ಮಾದಿಗರು ಸಹ ಜಾತಿ ವಿಮೋಚನೆ, ಸಾಮಾಜಿಕ ನ್ಯಾಯ ವಿಸ್ತರಣೆ, ಅಧಿಕಾರ ಹಾಗೂ ರಾಷ್ಟ್ರಸಂಪತ್ತಿನ ಹಂಚಿಕೆ ವಿಚಾರಗಳಲ್ಲಿ ಸಮಾನ ಮನಸ್ಕರು. ಪ್ರಸ್ತುತದ ಸನ್ನಿವೇಶಗಳಲ್ಲಿ, ಹೊಸ ಸಾಮಾಜಿಕ ಮನ್ವಂತರ ಆರಂಭಿಸಲು ಹೊಲೆಯ-ಮಾದಿಗರಿಬ್ಬರೂ ಮುನ್ನುಡಿ ಬರೆಯಲಾರಂಭಿಸಬೇಕಿದೆ. ಈ ಸಮುದಾಯಗಳೊಳಗೆ ಮನೆಮಾಡಿಕೊಂಡಿರುವ ಅಪ್ರಬುದ್ಧ ಸಾಮಾಜಿಕ ಅಪನಂಬಿಕೆಗಳು ಆಮೂಲಾಗ್ರವಾಗಿ ಬುಡಮೇಲಾಗಬೇಕಿದೆ. ಇದನ್ನು ಸಾಧಿಸಬೇಕಿದ್ದರೆ, ಮುಕ್ತಮನಸ್ಸಿನಿಂದ ಸಾಂಘಿಕವಾಗಿ ಬಹಿರ್ಮುಖಿ ಮತ್ತು ಅಂತರ್ಮುಖಿ ಆತ್ಮವಿಮರ್ಶೆಗಳನ್ನು ಆರಂಭಿಸಬೇಕು. ಇಂತಹ ಪ್ರಕ್ರಿಯೆಗಳು, ಕೇವಲ ನಗರ ಪ್ರದೇಶಗಳ ವರ್ಣರಂಜಿತ ವೇದಿಕೆಗಳಲ್ಲಿ ವಿಜಯೋತ್ಸವದ ನಾದಗಳನ್ನು ಮೊಳಗಿಸದರೆ ಸಾಲುವುದಿಲ್ಲ. ಇದರ ಬದಲು ಸುಂದರ ಸಾಮಾಜಿಕ ಮಿಲನ ಪರಿಕಲ್ಪನೆಗಳು ಶಾಶ್ವತವಾಗಿ ಅನಾವರಣಗೊಳ್ಳಬೇಕಿದ್ದರೆ, ಪ್ರತಿಯೊಬ್ಬರ ಗುಂಡಿಗೆಗಳೊಳಗೆ ಅನರ್ಥ ರೀತಿಯಲ್ಲಿ ಮಡುಗಟ್ಟಿ ನಿಂತಿರುವ ಅಂತರ ಅಸ್ಪೃಶ್ಯತೆ ಹಾಗೂ ನವಬ್ರಾಹ್ಮಣಿಕೆಯ ಅವತಾರಗಳ ನಿರ್ಮೂಲನೆಗಾಗಿ ಕಾರ್ಯಕ್ರಮಗಳನ್ನು ನಿರೂಪಿಸಬೇಕು. ಹೀಗೆ, ನಿರೂಪಿಸಿದ ಕಾರ್ಯಕ್ರಮಗಳನ್ನು ಪ್ರಾಮಾಣಿಕ ಮನಸ್ಸಿನಿಂದ ಅನುಷ್ಠಾನಗೊಳಿಸಬೇಕಿದೆ. ಆ ಮೂಲಕ ಒಂದು ಪರಿಶುದ್ಧವಾದ ಭರವಸೆಯನ್ನು ಪ್ರತಿ ಹಳ್ಳಿಯ ಮನೆ-ಮನಗಳಲ್ಲಿ ಮೂಡಿಸಬಹುದು. ಈ ಕ್ರಿಯೆ ನಿರಂತರವಾದರೆ, ಇವರಿಬ್ಬರ ಮೈತ್ರೀಕರಣ ಅಸಾಧ್ಯದ ಮಾತಾಗದು.

ಮಂಡ್ಯದ ಸಮಾವೇಶದಲ್ಲಿ ಕೇಂದ್ರದ ಮಾಜಿ ಸಚಿವರಾದ ಶ್ರೀ ವಿ. ಶ್ರೀನಿವಾಸ ಪ್ರಸಾದರು "ಪರಿಶಿಷ್ಟ ಜಾತಿ ಪಟ್ಟಿಯೊಳಗೆ ಪ್ರಸ್ತುತದಲ್ಲಿ ಇರಲು ಯಾರಾರು ಅರ್ಹತೆ ಹೊಂದಿದ್ದಾರೆಂಬ ವೈಜ್ಞಾನಿಕ ತೀರ್ಮಾನಗಳಾಗಬೇಕಿದೆ ಎಂದು ಸಾದರಪಡಿಸಿದ್ದಾರೆ. 1980ರಲ್ಲೇ, ಮಾಜಿ ಮಂತ್ರಿಗಳಾದ ದಿ. ಎನ್. ರಾಚಯ್ಯನವರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಉಗ್ರ ಹೋರಾಟ ಕೈಗೆತ್ತಿ ಕೊಂಡಿದ್ದರು. ಆದರೆ, ಆವಾಗ ಇತರ ಯಾವುದೇ ಅಸ್ಪೃಶ್ಯ ಸಮಾಜಗಳು ಕುಂಭಕರ್ಣ ನಿದ್ದೆಯಿಂದ ಹೊರಬರಲಿಲ್ಲ; ಈ ವಿಚಾರವನ್ನು ಆಲಿಸುವುದಕ್ಕಾದರೂ ಎಚ್ಚರಗೊಳ್ಳಲಿಲ್ಲ. ಅಂದು ತೋರಿದ ಉದಾಸೀನತನಗಳ ಪರಿಣಾಮಗಳಿಂದ ಹಂತ-ಹಂತವಾಗಿ ಅಸ್ಪೃಶ್ಯರು ಮೂಲೋತ್ಪಾಟನೆ ಆಗ ತೊಡಗಿದ್ದಾರೆ. ಬಹುಶ: ಅಂದೆ ಎಲ್ಲಾ ಮೂಲ ಅಸ್ಪೃಶ್ಯ ಸಮಾಜಗಳೊಳಗೆ ಅವರ ನೈಜ ದನಿಗಳಾಗಿದ್ದರೆ ಇಂದಿನ ಸ್ಥಿತಿಗಳಾವುವು ಎದುರಾಗುತ್ತಿರಲಿಲ್ಲ.

ಈ ಮಹತ್ವದ ಸಾಮಾಜಿಕ ಪ್ರಕ್ರಿಯೆಗಳು ಕೆಲವರ ಅಧಿಕಾರ ಗ್ರಹಣಕ್ಕಾಗಿ ಇಲ್ಲವೆ ಅವರ ವೈಯಕ್ತಿಕ ಸಂಪಾದನೆಗಳಿಗೆ ಅಥವಾ ಅನೈತಿಕ ಸಂಪತ್ತಿನ ಸಂರಕ್ಷಣೆಗಳಿಗಾಗಿ ಇಂತಹ ಒಗ್ಗೂಡುವಿಕೆ ದುರುಪಯೋಗವಾದರೆ, ಮೇಲ್ವರ್ಗದ ಜಾತಿವಾದ ರಾಜಕಾರಣ ತನ್ನ ಪಟ್ಟುಗಳನ್ನು ಇನ್ನಷ್ಟು ಬಿಗಿಗೊಳಿಸಿಕೊಳ್ಳುತ್ತಾ ಹೋಗುತ್ತದೆ. ಆದುದರಿಂದ, ಇವರಿಬ್ಬರೊಳಗಿರುವ ಚಿಲ್ಲರೆ ಮಾನಸಿಕ ಸ್ಥಿತಿಗತಿಗಳು ಅಳಿದು; ವಿಶಾಲ ದೃಷ್ಟಿಕೋನದ ಸಾಮಾಜಿಕ ಅಭಿಮತಗಳು ಮೈತ್ರೀಕರಣಕ್ಕೆ ನೆರವಾಗಬೇಕಿದೆ. ಈ ನಿಟ್ಟಿನಲ್ಲಿ, "ಒಂದು ಸಮುದಾಯದ ನೋವಿಗೆ ಮತ್ತೊಂದು ಸಮುದಾಯ ಮರುಗುವ-ಕರಗುವ ಮನೋಧರ್ಮಗಳನ್ನು ಧಾರಣ ಮಾಡಿಕೊಳ್ಳಬೇಕಿದೆ. ಕೇವಲ ತಾತ್ಕಾಲಿಕ ಪ್ರಲೋಭನೆಗಳಿಗಾಗಿ "ಹೊಲೆಯ-ಮಾದಿಗರಿಬ್ಬರೂ ಒಂದಾದರೆ, ಅದು ಬೆಟ್ಟಕ್ಕೆ ಕಟ್ಟಿಗೆ ಸಾಗಿಸಿದ ಪ್ರಕ್ರಿಯೆಗಳಂತಾಗುತ್ತದೆ". ಇದರ ಬದಲು "ಅಣ್ಣ ಬಸವಣ್ಣನವರು ಶರಣ ಶಿನಾಗಮಯ್ಯನವರನ್ನು ಸತ್ಕರಿಸಿದ ಮಹಾತಪ್ಪಿಗಾಗಿ ಅರಮನೆಯೊಳಗೆ ಜಾತಿವಾದಿಗಳೆಲ್ಲರೂ ಎಷ್ಟೇ ಕಿರುಕುಳ ನೀಡಿದರೂ ತಮ್ಮ ಶರಣ ನಿಷ್ಠೆ ಮಾತ್ರ ಬದಲಿಸಲಿಲ್ಲ. ಇಂತಹ ಮಾನಸಿಕ ಸ್ಥಿತಿಗಳು ಇವರೊಳಗೆ ಮನೆಮಾಡಿಕೊಂಡಾಗ ಮೈತ್ರೀಕರಣ ಸಹಜ ಸಾಮಾಜಿಕ ಪ್ರಕ್ರಿಯೆಗಳಾಗುತ್ತವೆ". □

ಬ್ರಾಹ್ಮಣವಾದಿಗಳ ದೃಷ್ಟಿಯಲ್ಲಿ ಬುದ್ಧ: ಮುಂದುವರಿದ ವಿಶ್ಲೇಷಣೆ!

ಸಿ. ಎಚ್ . ರಾಜಶೇಖರ್

ಕನ್ನಡದ ವಿಚಾರವಂತ ಓದುಗರಿಗೆ ತೆಲುಗಿನ ಪ್ರಖ್ಯಾತ ಲೇಖಕರಾದ ಶ್ರೀ ಅನ್ನಪರೆಡ್ಡಿ ವೆಂಕಟೇಶ್ವರ ರೆಡ್ಡಿಯವರನ್ನು "ಸಂವಾದ" ದ ಮೂಲಕ ಪರಿಚಯಿಸಿದ ಹಿರಿಯ ಲೇಖಕರಾದ ಶ್ರೀ ಹರಿಹರ ಪ್ರಿಯ ಅವರಿಗೆ ಈ ಮೂಲಕ ಕೃತಜ್ಞತೆಯನ್ನು ಸಲ್ಲಿಸಲು ಬಯಸುತ್ತೇನೆ. ಅದೇ ಸಮಯದಲ್ಲಿ ಇಂಥಹ ಅಮೂಲ್ಯ ಬರಹ ವನ್ನು ಆಯ್ದು ಪ್ರಕಟಿಸಿದ ಸಂಪಾದಕರಾದ ಶ್ರೀ ಇಂದೂಧರ ಹೊನ್ನಾಪುರ ಅವರನ್ನು ಶ್ಲಾಘಿಸುತ್ತೇನೆ .

ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಯಾವ ವೈದಿಕ ಧರ್ಮದ ಬ್ರಾಹ್ಮಣವಾದಿಗಳು ಬುದ್ಧನನ್ನು ಈ ದೇಶದಿಂದಲೇ ಗಡೀ ಪಾರು ಮಾಡಿದ್ದರೋ, ಅದೇ ಸಂತತಿಯ ಆಧುನಿಕ ಬ್ರಾಹಣವಾದಿ ಗಳು ಅದರಲ್ಲಿಯೂ ಮೇದಾವಿಗಳು, ಪಂಡಿತರು ಮಹಾತ್ಮರು ಅನ್ನಿ ಸಿಕೊಂಡವರು ಮತ್ತೆ ಅದೇ ಇತಿಹಾಸದ ಪುನರಾವರ್ತನೆಯನ್ನು ಮಾಡಿದ್ದಾರೆ. ಈಗಲೂ ಕೂಡ ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ. ಇದು ಮೇಲು ನೋಟಕ್ಕೆ ಆಕಸ್ಮಿಕವೆಂಬಂತೆ ಅಥವಾ ತಮ್ಮ ಪಾಂಡಿತ್ಯದ ವೈಯಕ್ತಿಕ ಅಭಿವ್ಯಕ್ತಿ ಎಂಬಂತೆ ಕಂಡು ಬಂದರೂ ಕೂಡ ಇದರ ಒಳಗೆ ಒಂದು ವ್ಯವಸ್ಥಿತ ಒಳ ಸಂಚಿದೆ. ಗುಪ್ತಗಾಮಿನಿ ಯಾದ ಒಳ ಸುಳಿವುಗಳು ಮತ್ತು ಒಳ ಪದರುಗಳಿವೆ. ಒಳ ಕಾರ್ಯ ಸೂಚಿ ಇದೆ.

ಇದನ್ನು ಈ ನಾಡಿನ ಪ್ರಜ್ಞಾವಂತರು ಅದರಲ್ಲಿಯೂ ದಲಿತರು, ಹಿಂದುಳಿದ ವರ್ಗದವರು ಮತ್ತು ಶೂದ್ರರಲ್ಲಿ ಸವರ್ಣಿಯರು ಮತ್ತು ಅಲ್ಪ ಸಂಖ್ಯಾತರು ಸಕಾಲದಲ್ಲಿ ಅರ್ಥ ಮಾಡಿಕೊಳ್ಳಬೇಕಾದ ತುರ್ತಿದೆ. ಇಲ್ಲವೆಂದರೆ ಮೊದಲಿಗಿಂತಲೂ ಭೀಕರ ಪರಿಸ್ಥಿತಿಯನ್ನು ಅನುಭವಿಸಬೇಕಾಗುತ್ತದೆ.

ವೈದಿಕ ಧರ್ಮದ ಮತ ಸಂಸ್ಥಾಪಕರಾದ ಶಂಕರಾಚಾರ್ಯರು, ರಾಮಾನುಜಚಾರ್ಯರು ಮತ್ತು ಮದ್ವಾಚಾರ್ಯರು – ನಂತರದ ಉದ್ದಾಮ ಪಂಡಿತರು ಅನ್ನಿಸಿಕೊಂಡವರು ವೈದಿಕ ಧರ್ಮದ ರೂಪಾಂತರವಾದ ಹಿಂದೂಧರ್ಮದಲ್ಲಿ ಎಲ್ಲವೂ ಸರಿ ಇದೆ. ಸಮಗ್ರ ಉದಾತ ಗುಣವಿದೆ ಎಂದು ಜಗಜಾಹೀರ ಮಾಡಲು ತಿಣುಕಾಡಿದರೂ ಏಕೆ ಜಂಬೂದ್ವೀಪದ ಮೂಲ ನಿವಾಸಿಗಳು ಒಪ್ಪಿಕೊಳ್ಳಲಿಲ್ಲ? ಇವರು ಹೇಳುವುದು ಸತ್ಯವೇ ಆಗಿದ್ದರೆ ವೈದಿಕ ಧರ್ಮದ ವಿರುದ್ಧ ಏಕೆ ಚಾರ್ವಾಕರು, ಜೈನರು ಮತು ಬೌದ್ಧರು ಸಿಡಿದೆದ್ದರು? ಅವರುಗಳು ಮತ್ತೆ ಸತ್ಯಾನ್ವೇಷಣೆಗೆ ತೊಡಗುವ ಅಗತ್ಯ ವೇನಿತ್ತು? ಇದು ಏನನ್ನು ಬಹಿರಂಗಗೊಳಿಸುತ್ತದೆ? ಈ ಬ್ರಾಹ್ಮಣವಾದಿ ಗಳ ಮಾತಿನಲ್ಲಿ ಮತ್ತು ಕೃತಿಯಲ್ಲಿ ಯಾವುದೇ ಸತ್ಯವಿಲ್ಲ ಎಂಬು ದನ್ನು ತಾನೆ!

ಇಲ್ಲಿ ನಾವು ಬಹಳ ಮುಖ್ಯವಾಗಿ ಗಮನಿಸಬೇಕಾದ ಕಟುಸತ್ಯ ವೊಂದಿದೆ. ವೈದಿಕ ಧರ್ಮದ ಬಗ್ಗೆ ಈ ತ್ರಿಮತಸ್ಥ ಸ್ಥಾಪಕರಲ್ಲಿಯೇ ಒಮ್ಮತವಿಲ್ಲದಿರುವುದು. ಒಂದು ಪಕ್ಷ ಒಮ್ಮತವಿತ್ತು ಎನ್ನುವು ದಾದರೆ ದ್ವೇತ, ಅದ್ವೇತ ಮತ್ತು ವಿಶಿಷ್ಟಾದ್ವೇತ ಎಂಬ ಮೂರು ಕವ ಲುಗಲು ಏಕೆ ಹುಟ್ಟಿಕೊಂಡವು? ಅವು ಒಂದಕ್ಕೂ ಮತ್ತೊಂದಕ್ಕೂ ಪರಸ್ಪರ ಭಿನ್ನ, ತದ್ವಿರುದ್ಧ ಮತ್ತು ದ್ವಂದ್ವದಿಂದ ಏಕೆ ಕೂಡಿದ್ದವು? ಏಕೆ ಆ ತ್ರಿಮತಸ್ಥರು ತಮ್ಮದೇ ಆದ ಪ್ರತ್ಯೇಕ ಮಠಗಳನ್ನು ಸ್ಥಾಪಿಸಿ ಕೊಂಡು ಇಂದಿಗೂ ಪೋಷಿಸಿಕೊಂಡು ಬರುತ್ತಿದ್ದಾರೆ? ವೈದಿಕ ಧರ್ಮದ ಲ್ಲಿಯೇ ಏಕೆ ಒಳಧರ್ಮವನ್ನು, ಒಳಪಂಗಡವನ್ನು ಮಾಡಿಕೊಂಡಿದ್ದಾರೆ? ತಮ್ಮದೆ ಆದ ಒಳ ಮತ, ಜಾತಿಗಳನ್ನು ನಿರಂತರವಾಗಿ ಕಾಯ್ದಿಟ್ಟುಕೊಂಡಿದ್ದಾರೆ ಏಕೆ? ಆ ಮೂರೂ ಮತ ಗಳಲ್ಲಿ ಏಕೆ ಸಮಾನಾಂತರವಾದ ತತ್ವ ಸಿದ್ಧಾಂತಗ ಳಿಲ್ಲ?

ಒಬ್ಬರು "ಹರಿ" ಶ್ರೇಷ್ಠನೆಂದರೆ ಮತ್ತೊಬ್ಬರು ಏಕೆ "ಹರನೇ" ಶ್ರೇಷ್ಠ ಎಂದು ಪ್ರತಿವಾದಿಸುತ್ತಾರೆ? ಅವರುಗಳು ತಮ್ಮ ವಾದವನ್ನು ಪುಷ್ಟಿಕರಿಸಲು ರಚಿಸಿದ ಪುರಾಣ, ಪುಣ್ಯಕಥೆ, ದಂತಕಥೆ ಮತ್ತು ಕಟ್ಟು ಕಥೆಗಳೆಲ್ಲ ಏಕೆ ಹರಿಹರರ ಸುತ್ತಲೇ ಗಿರುಕಿ ಹೊಡೆಯುತ್ತದೆ? ಹರನಿಗೆ ಒಲಿದವರು ಮತ್ತು ಹರಿಗೆ ಒಲಿದವರು ಅವರವರ ದೈವವನ್ನೇ ಏಕೆ ಅಂತಿಮ ಸತ್ಯ ಉಳಿದದ್ದು ಅಸತ್ಯವೆಂದು ಸಾರಿ ಸಾರಿ ಹೇಳುತ್ತಾರೆ? ವೈದಿಕ ಧರ್ಮದ ತಿರುಳನ್ನೆಲ್ಲ ಸೋಸಿದರೂ ಅಲ್ಲಿ ಹರಿಹರರ ಕಾಳಗ ವನ್ನು ಬಿಟ್ಟರೆ ಮೌಲಿಕವಾದುದ್ದಾಗಲೀ ಅಥವಾ ಜ್ಞಾನ ಹಾಗೂ ವಿಜ್ಞಾನದಿಂದ ಕೂಡಿದ ತತ್ವ ಸಿದ್ಧಾಂತವಾಗಲಿ ಏಕೆ ಎಲ್ಲಿಯೂ ಕಾಣ ಸಿಗುವುದಿಲ್ಲ? ತಾವು ಪ್ರತಿಪಾದಿಸುವ ಉದಾರತೆ ತ್ರಿಮತಸ್ಥ ವೈದಿಕರಲ್ಲಿ ಇದ್ದದ್ದೇ ಸತ್ಯವಾದರೆ ಒಂದು ನಾಮ ವನ್ನು ಹಾಕಿಕೊಳ್ಳಬೇಕೋ, ಎರಡು ನಾಮವನ್ನು ಹಾಕಿಕೊಳ್ಳಬೇಕೋ ಅಥವಾ ಮೂರು ನಾಮ ವನ್ನು ಹಾಕಿಕೊಳ್ಳಬೇಕೋ ಎಂದು ಏಕೆ ಸರ್ವೋಚ್ಚ ನ್ಯಾಯಾಲಯದ ಕಟಕಟೆಯನ್ನು ಹತ್ತ ಬೇಕಾಗಿತ್ತು? ಅದ್ವೇತಿಗಳಾದ ಸ್ವಾಮಿ ವಿವೇಕಾ

ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಯಾವ ವೈದಿಕ ಧರ್ಮದ ಬ್ರಾಹ್ಮಣವಾದಿಗಳು ಬುದ್ಧನನ್ನು ಈ ದೇಶದಿಂದಲೇ ಗಡೀ ಪಾರು ಮಾಡಿದ್ದರೋ, ಅದೇ ಸಂತತಿಯ ಆಧುನಿಕ ಬ್ರಾಹಣವಾದಿ ಗಳು ಅದರಲ್ಲಿಯೂ ಮೇದಾವಿಗಳು, ಪಂಡಿತರು ಮಹಾತ್ಮರು ಅನ್ನಿಸಿಕೊಂಡವರು ಮತ್ತೆ ಅದೇ ಇತಿಹಾಸದ ಪುನರಾವರ್ತನೆಯನ್ನು ಮಾಡಿದ್ದಾರೆ. ಈಗಲೂ ಕೂಡ ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ. ಇದು ಮೇಲು ನೋಟಕ್ಕೆ ಆಕಸ್ಮಿಕವೆಂಬಂತೆ- ತಮ್ಮ ಪಾಂಡಿತ್ಯದ ವೈಯಕ್ತಿಕ ಅಭಿವ್ಯಕ್ತಿ ಎಂಬಂತೆ ಕಂಡು ಬಂದರೂ ಕೂಡ ಇದರ ಒಳಗೆ ಒಂದು ವ್ಯವಸ್ಥಿತ ಒಳ ಸಂಚಿದೆ. ಗುಪ್ತಗಾಮಿನಿಯಾದ ಒಳಸುಳಿವುಗಳು-ಒಳ ಪದರುಗಳಿವೆ. ಒಳ ಕಾರ್ಯ ಸೂಚಿ ಇದನ್ನು ಈ ನಾಡಿನ ಪ್ರಜ್ಞಾವಂತರು ಅದರಲ್ಲಿಯೂ ದಲಿತರು, ಹಿಂದುಳಿದ ವರ್ಗದವರು-ಶೂದ್ರರಲ್ಲಿ ಸವರ್ಣಿಯರು ಮತ್ತು ಅಲ್ಪ ಸಂಖ್ಯಾತರು ಸಕಾಲದಲ್ಲಿ ಅರ್ಥ ಮಾಡಿಕೊಳ್ಳಬೇಕಾದ ತುರ್ತಿದೆ.

ನಂದರು, ಡಾ॥ ಎಸ್. ರಾಧಾಕೃಷ್ಣನ್, ಪಾಂಡುರಂಗ ವಾಮನ ಕಾಣೆ ಮತ್ತು ಆನಂದಕುಮಾರ ಸ್ವಾಮಿ ಮುಂತಾದವರು ಏಕೆ ತಮ್ಮ ಮತದ ಪರವಾಗಿಯೇ ವಕಾಲತ್ತನ್ನು ವಹಿಸಿಕೊಂಡರು? ಹಾಗೆಯೆ ಇತರ ಪಂಥದ ಪಂಡಿತರು ತಮ್ಮ ಮತವನ್ನೆ ಏಕೆ ಎತ್ತಿ ಹಿಡಿದರು? ಆದರೂ ಇವರೆಲ್ಲರಲಿಯೂ ಒಂದು ಸಮಾನಾಂತರ ಗುಣವಿದೆ. ಅದೇಂದರೆ ಮೊದಲು ತಾವು ಬೆಳೆಯುವ ತನಕ ಬುದ್ಧನನ್ನು ಹೊಗಳಿ ನಂತರ ತೆಗಳುವ ಸಮಯ ಸಾಧಕತೆ. ಈ ಬಗೆಯ ಹಿಬ್ಬಂದಿತನ ಏನನ್ನು ಸೂಚಿಸುತ್ತದೆ?

ಇದರ ಒಳ ಮರ್ಮವೇಂದರೆ ತಮ್ಮ ತತ್ವ ಸಿದ್ಧಾಂತವೆ ನಿಜವಾದ ಹಿಂದೂ ಧರ್ಮವೆಂದು. ಆ ಹಿಂದೂ ಧರ್ಮದ ಮತ್ತೊಂದು ಶಾಖೆಯೆ ಬೌದ್ಧ ಧರ್ಮವೆಂದು ಸಾರುವುದೇ ಇವರ ಮುಖ್ಯ ಉದ್ದೇಶ ಮತ್ತು ಗುರಿಯಾಗಿತ್ತು!

ಹೋಗಲೀ ಈ ಮನುವಾದಿಗಳು ಸಾರುವಂತೆ "ಹಿಂದೂ" ಎಂಬುವ ಒಂದು ಪ್ರತ್ಯೇಕ ಧರ್ಮ ಇದಿಯೇ? ಇದ್ದದ್ದೇ ಆದರೆ ಆ ಧರ್ಮದ ಸಂಸ್ಥಾಪಕರು ಯಾರು? ಆ ಧರ್ಮವು ಅಂಗೀಕರಿಸಿದ "ಧರ್ಮಗ್ರಂಥ" ಯಾವುದು? ಅದು ಯಾವ ಕಾಲಮಾನದಲ್ಲಿ ಉದಯಿಸಿತು? ಅದನ್ನು ಅನುಸರಿಸಿ ಆಚರಿಸುತ್ತಿದ್ದ ಜನಾಂಗ ಯಾವುದಿತ್ತು? ಈ ಮೂಲಭೂತ ಪ್ರಶ್ನೆಗಳಿಗೆ ಬ್ರಾಹಣವಾದಿಗಳು ಹೀಗೆ ಉತ್ತರಿಸಬಹುದು. ನಮ್ಮ ಶಂಕರಚಾರ್ಯರು, ರಾಮಾನುಜಚಾರ್ಯರು ಮತ್ತು ಮಧ್ವಾಚಾರ್ಯರೇ ಇದರ ಸಂಸ್ಥಾಪಕರೆಂದು! ಹಾಗಾದರೆ ವೈದಿಕ ಧರ್ಮದ ಸಂಸ್ಥಾಪಕರು ಯಾರು? ಭಗವದ್ಗೀತೆ ನಮ್ಮ ಧರ್ಮಗ್ರಂಥ ಎನ್ನಬಹುದು. ಹಾಗಾದರೆ ವೈದಿಕ ಧರ್ಮದ ಧರ್ಮಗ್ರಂಥ ಯಾವುದು? ಹಿಂದೂ ಧರ್ಮದ ಉದಯದ ಕಾಲಮಾನ ಯಾವುದು ಎಂಬ ಮರುಪ್ರಶ್ನೆಗೆ ಅವರು ಆದಿ ಇಲ್ಲ-ಅಂತ್ಯವಿಲ್ಲ ಎಂದು ಉತ್ತರಿಸಬಹುದು.

ಹಾಗಾದರೆ ಸಿಂಧೂ ನಾಗರೀಕತೆಯನ್ನು ಸ್ಪಷ್ಟವಾಗಿ ಉಚ್ಚರಿಸಲು ಸಾಧ್ಯವಾಗದೆ "ಹಿಂದೂ ನಾಗರೀಕತೆ" ಎಂದು ಕರೆದವರು ಯಾರು? ಕ್ರಿ.ಶ. ಒಂಬತ್ತನೆ ಶತಮಾನದ ನಂತರ ಜಂಬೂದ್ವೀಪದ ಮೇಲೆ ದಾಳಿ ಮಾಡಿದ ಮುಸ್ಲಿಂರು "ಹಿಂದೂಸ್ಥಾನ" ವೆಂದು ಕರೆದದ್ದು ಯಾವ ದೇಶಕ್ಕೆ? ಅದರ ಮುಂದಿನ ಬೆಳವಣಿಗೆ ಮತ್ತು ಪರಿಣಾಮ ಏನಾಯಿತು? ಕ್ರಿ.ಶ.ಹದಿನೆಂಟನೆಯ ಶತಮಾನದಲ್ಲಿ ಆಧುನಿಕ ಭಾರತವನ್ನು ಆಕ್ರಮಿಸಿದ ಬ್ರಿಟಿಷರು ಯಾವ ದೇಶಕ್ಕೆ "ಇಂಡಿಯಾ" ಎಂದು ಮರು ನಾಮಕರಣ ಮಾಡಿದರು? ಈ ಮುಸ್ಲಿಂರು, ಬ್ರೀಟಿಷರು ಮತ್ತು ಇತರೆ ದಾಳಿಕೋರರ ಹಿಂದೆ ಬೆನ್ನೆಲುಬಾಗಿ ನಿಂತವರು ಯಾರು? ಏಕೆ ನಿಂತರು? ಆ ಪರಕೀಯರಿಂದ ಪಡೆಯಬಹುದಾದ ಸಂಪೂರ್ಣ ಸವಲತ್ತನ್ನು ಅನುಭವಿಸಿದ ಫಲಾನುಭವಿಗಳು ಯಾರು? ಅದರ ಮುಂದಿನ ಬೆಳವಣಿಗೆ ಏನಾಯಿತು? ದೇಶದ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ವೈದಿಕ ಧರ್ಮದ ಮಠಗಳನ್ನು ಅಯಕಟ್ಟಿನ ಸ್ಥಳದಲ್ಲಿ ಕಟ್ಟಿ ಕುಳಿತವರು ಯಾರು? ಬೌದ್ಧ ರಾಜರುಗಳ ವಿರುದ್ಧ ಪರಕೀಯರನ್ನು ಆಹ್ವಾನಿಸಿ ಕರೆತಂದವರು ಯಾರು? ಸೋಮೇಶ್ವರನಾಥ ಮುಂತಾದ ದೇವಾಲಯದಲ್ಲಿ ಅಡಗಿಸಿಟ್ಟ ಸಂಪತ್ತನ್ನು ದಾಳಿಕೋರರಿಗೆ ತೋರಿಸಿದವರು ಯಾರು? ಯಾವುದೇ ಪರಕೀಯರು ಬಂದಾಗಲೂ ತಮ್ಮ ಶತ್ರುಗಳ ಮೇಲೆ ಸೇಡು ತೀರಿಸಿಕೊಂಡವರು ಯಾರು? ಇವರ್‍ಯಾಕೆ ನೇರವಾಗಿ ಹೋರಾಡಲಿಲ್ಲ? ತಮ್ಮ ಬೇಳೆಯನ್ನು ಬೈಯಿಸಿಕೊಳ್ಳಲು ಇತರರರನ್ನು ಬಳಸಿಕೊಂಡರು?

ಕ್ರಿ.ಶ. ಒಂಬತ್ತನೆಶತಮಾ ನದ ನಂತರ ಜಂಬೂದ್ವೀಪದ ಮೇಲೆ ದಾಳಿ ಮಾಡಿದ ಮುಸ್ಲಿಂರು "ಹಿಂದೂಸ್ಥಾನ" ವೆಂದು ಕರೆದದ್ದು ಯಾವ ದೇಶಕ್ಕೆ? ಮುಂದಿನ ಬೆಳವಣಿಗೆ ಮತ್ತು ಪರಿಣಾಮ ಏನಾಯಿತು? ಕ್ರಿ.ಶ.ಹದಿನೆಂಟನೆಯ ಶತಮಾನದಲ್ಲಿ ಆಧುನಿಕ ಭಾರತವನ್ನು ಆಕ್ರಮಿಸಿದ ಬ್ರಿಟಿಷರು ಯಾವ ದೇಶಕ್ಕೆ ಇಂಡಿಯ ಎಂದು ಮರು ನಾಮಕರಣ ಮಾಡಿದರು? ಈ ಮುಸ್ಲಿಂರು, ಬ್ರೀಟಿಷರು ಮತ್ತು ಇತರೆ ದಾಳಿಕೋರರ ಹಿಂದೆ ಬೆನ್ನೆಲುಬಾಗಿ ನಿಂತವರು ಯಾರು? ಏಕೆ ನಿಂತರು? ಆ ಪರಕೀಯರಿಂದ ಪಡೆಯಬಹುದಾದ ಸಂಪೂರ್ಣ ಸವಲತ್ತನ್ನು ಅನುಭವಿಸಿದ ಫಲಾನುಭವಿಗಳು ಯಾರು? ಅದರ ಮುಂದಿನ ಬೆಳವಣಿಗೆ ಏನಾಯಿತು? ದೇಶದ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ವೈದಿಕ ಧರ್ಮದ ಮಠಗಳನ್ನು ಅಯಕಟ್ಟಿನ ಸ್ಥಳದಲ್ಲಿ ಕಟ್ಟಿ ಕುಳಿತವರು ಯಾರು? ಬೌದ್ಧ ರಾಜರುಗಳ ವಿರುದ್ಧ ಪರಕೀಯರನ್ನು ಆಹ್ವಾನಿಸಿ ಕರೆತಂದವರು ಯಾರು? ಸೋಮೇಶ್ವರನಾಥ ಮುಂತಾದ ದೇವಾಲಯದಲ್ಲಿ ಅಡಗಿಸಿಟ್ಟ ಸಂಪತ್ತನ್ನು ದಾಳಿಕೋರರಿಗೆ ತೋರಿಸಿದವರು ಯಾರು?

ಇವರು ವಾದಿಸುವ ಪ್ರಕಾರ ಈ ಜಂಬೂದ್ವೀಪ ಅಥವಾ ಅಖಂಡ ಭಾರತಕ್ಕೆ ಇತಿಹಾಸವೇ ಇರಲಿಲ್ಲವೆ? ತನ್ನದೇ ಆದ ನಾಗರೀಕತೆ, ಸಂಸ್ಕೃತಿ ಮತ್ತು ಧರ್ಮವೇ ಇರಲಿಲ್ಲವೆ? ಎಲ್ಲವೂ ಇತ್ತು. ಅದಕ್ಕೆ ಸಾಕ್ಷಿಯೆಂದರೆ ಅರಪ್ಪ ಮತ್ತು ಮಹೆಂಜೋದಾರೋ ನಾಗರೀಕತೆಯೇ ಆಗಿದೆ. ಅದನ್ನು ಸಿಂಧೂ ನಾಗರೀಕತೆ ಎಂದು ಕರೆಯುತ್ತಿದ್ದರು. ಸಿಂಧೂ ಕಣಿವೆಯ ಬಯಲಿನಲ್ಲಿ ಈ ದೇಶದ ಮೂಲ ನಿವಾಸಿಗಳಾದ ದ್ರಾವಿಡರು ಮತ್ತು ನಾಗರು ಮುಂತಾದ ಜನಾಂಗವು ನೆಲೆ ನಿಂತಿತ್ತು. ಕೃಷಿ, ಪಶುಪಾಲನೆ ಮತ್ತು ವ್ಯಾಪಾರದಲ್ಲಿ ತೊಡಗಿತ್ತು. ಅಲ್ಲಿ ತಮ್ಮದೇ ಆದ ಶ್ರಮಣ ಧರ್ಮವಿದ್ದ ಬಗ್ಗೆ ದಾಖಲೆಗಳಿವೆ.

ಹಾಗಾದರೆ ಇಷ್ಟೆಲ್ಲ ಸುದೀರ್ಘ ಇತಿಹಾಸದ ನಡುವೆಯ ಈ "ಹಿಂದೂ ಧರ್ಮ" ಎಲ್ಲಿಂದ ಉದಯಿಸಿತು? ಕ್ರಿ.ಶ. ಒಂಬತ್ತನೆಯ ಶತಮಾನದ ತನಕ ಜೀವಂತ ಇದ್ದ ವೈದಿಕ ಧರ್ಮವು ಹೇಗೆ ಮಾಯವಾಯಿತೇ? ಯಾರು ಈ ಧರ್ಮವನ್ನು ಕದ್ದು ಬಿಟ್ಟರು? ಇಲ್ಲವೇ ಮತಾಂತರ ಮಾಡಿಸಿ ಬಿಟ್ಟರೇ? ಒಂದು ಪ್ರಾಚೀನ ಧರ್ಮ ತನ್ನ ಅಸ್ಥಿತ್ವವನ್ನೇ ಕಳೆದುಕೊಂಡು ನಾಮಾವಶೇಷವಾಗಿ ಬಿಟ್ಟಿತೇ?

ಇದ್ಯಾವುದೂ ವಾಸ್ತವ ಸತ್ಯವಲ್ಲ. ಕ್ರಿ.ಪೂ.3000 ವರ್ಷಗಳ ಹಿಂದೆ ಮಧ್ಯಪ್ರಾಚ್ಯದಿಂದ ವಲಸೆ ಬಂದ ಅಲ್ಪ ಸಂಖ್ಯಾತರಾದ ಆರ್ಯ ವೈದಿಕ ಧರ್ಮಿಯರು ದೇಶದ ಬಹು ಸಂಖ್ಯಾತ ಮೂಲನಿವಾಸಿಗಳ ಧರ್ಮವನ್ನು ಸಾರಾಸಗಟಾಗಿ "ಹಿಂದೂ" ಎಂಬ ಹೆಸರಿನಲ್ಲಿ ಮತಾಂತರಗೊಳಿಸಿದ್ದೇ ಕಟ್ಟು ಸತ್ಯವಾಗಿದೆ. ಈ ಕಾರಣಕ್ಕಾಗಿಯೇ ಹಿಂದೂ ಎಂಬ ಪ್ರತ್ಯೇಕ ಧರ್ಮ ಇದಿಯೆ ಎಂದು ಪ್ರಜ್ಞಾವಂತರು ಮತ್ತು ಇತಿಹಾಸಕಾರರು ಪ್ರಶ್ನಿಸಿದ್ದು ಮತ್ತು ಈಗಲೂ ಪ್ರಶ್ನಿಸುತ್ತಿರುವುದು.

ವಾಸ್ತವವಾಗಿ ಹಿಂದೂ ಎಂಬುದು ಒಂದು ಒಕ್ಕೂಟ ವ್ಯವಸ್ಥೆ. ಹಿಂದೂ ಎಂಬುದು ಒಂದು ನಾಗರೀಕತೆ. ಹಿಂದೂ ಎಂಬುದು ಒಂದು ಸಂಸ್ಕೃತಿ. ಹಿಂದೂ ಎಂಬುದು ಒಂದು ಪದಸೂಚಿ! ಹಿಂದೂ ಎಂಬುದು ನಾನಾ ಜಾತಿ, ಮತ, ಧರ್ಮ, ಭಾಷೆಗಳ ಸಂಗಮ. ಏಕತೆಯಲ್ಲಿ ವಿವಿಧತೆಯನ್ನು ಧ್ವನಿಸುವ ಉದ್ದಾತ ಮೌಲ್ಯ. ಕಣ್ಣೆದುರಿನ ಸತ್ಯ ಇಷ್ಟು ನಿಚ್ಚಳವಿದ್ದರೂ ಈ ಮಣ್ಣಿನ ಮಕ್ಕಳ ಮೂಲ ಧರ್ಮವಾದ ಬೌದ್ಧ ಧರ್ಮವನ್ನು ಜೀರ್ಣಿಸಿಕೊಂಡು ತಮ್ಮ ವೈದಿಕ ಧರ್ಮವನ್ನು ಬಲವಂತವಾಗಿ ಹೇರುವ ಮೂಲಕ ಅಮಾನುಷ ಕೃತ್ಯವನ್ನು ಎಸಗಿದ್ದಾರೆ. ಇದಕ್ಕಿಂತ ನೈತಿಕ ಮತ್ತು ಬೌದ್ಧಿಕ ಶೋಷಣೆ ಮತ್ತೊಂದಿಲ್ಲ. ಆದರೆ ಇದೇ ಈ ಬ್ರಾಹ್ಮಣವಾದಿಗಳು ಹಿಂದೂ ಧರ್ಮದ ಮರೆಯಲ್ಲಿ ತಮ್ಮ ಮೂಲ ಧರ್ಮವಾದ ವೈದಿಕ ಧರ್ಮವನ್ನು ಹೇಗಿತ್ತೋ ಹಾಗೆಯೇ ಕಾಯ್ದಿರಿಸಿ ಕೊಂಡಿದ್ದಾರೆ.

ಮತಾಂತರದ ಬಗ್ಗೆ ಕಿರುಚಾಡುತ್ತಾ ದೊಡ್ಡ ದೊಡ್ಡ ಪದಪುಂಜಗಳನ್ನು ಬಳಸುವ ಸಂಘಪರಿವಾರದ ಬ್ರಾಹ್ಮಣವಾದಿಗಳ ನಿಜಸ್ವರೂಪ ಇದಾಗಿದೆ. ಇದು ನಶಿಸಿ ಹೋಗುತ್ತಿದ್ದ ಒಂದು ಅಲ್ಪ ಸಂಖ್ಯಾತ ಧರ್ಮವನ್ನು ಬಹುಸಂಖ್ಯಾತರ ಮೇಲೆ ಅಮಾನುಷವಾಗಿ ಹೇರಿದ ರುದ್ರ ನಾಟಕದ ಪರಿ. ಭವಿಷ್ಯ ಜಗತಿನ ಇತಿಹಾಸದಲ್ಲಿಯೇ ಈ ತೆರನಾದ ದಾಳಿ ಮತ್ತೊಂದಿಲ್ಲವೆಂದು ಕಾಣುತ್ತದೆ!

ಇನ್ನೂ ಈ ಬ್ರಾಹ್ಮಣವಾದಿಗಳು ಬೌದ್ಧ ಧರ್ಮವು ಹಿಂದೂ ಧರ್ಮದ ಒಂದು ಉಪಧರ್ಮ ಎಂದು ಸಾರುತ್ತಾರೆ. ಬುದ್ಧನು ಹೇಳಿರುವುದೆಲ್ಲವೂ ನಮ್ಮ ಪ್ರಾಚೀನ ಹಿಂದೂ ಧರ್ಮದಲ್ಲಿ ಇದೆ. ಬುದ್ಧನು ಹಿಂದೂ ಧರ್ಮದ ತತ್ವ ಸಿದ್ದಾಂತವನ್ನು ಬಿಟ್ಟು ಹೊಸದಾಗಿ ಏನನ್ನು ಹೇಳಿಲ್ಲ ಎಂದು ಹೇಳುತ್ತಾರೆ. ಹಾಗಾದರೆ ಇದೆಷ್ಟು ಸತ್ಯ ಎಂಬುದನ್ನು ಪರಿಶೀಲಿಸೋಣ .

ಮನುವಾದಿಗಳು ಅವರ ಇತಿಹಾಸದ ಉದ್ದಕ್ಕೂ ಎಂದಿಗೂ ಸಾಮಾಜಿಕ ನ್ಯಾಯದ ಪರವಾಗಿ ನಿಂತವರಲ್ಲ. ಅವರ ನಿಲುವುಗಳೆಲ್ಲ ಜೀವ ವಿರೋಧಿಯಾಗಿತ್ತೇ ಹೊರೆತು ಜೀವ ಪರವಾಗಿರಲಿಲ್ಲ. ಈ ಕಾರಣಕ್ಕಾಯೇ ಬುದ್ಧನು ಅವರ ವೇದ, ಸ್ಮೃತಿ, ಸಂಹೀತೆಗಳು, ಅರಣ್ಯಕಗಳು ಮುಂತಾದ ಧರ್ಮಗ್ರಂಥಗಳನ್ನು ತಿರಸ್ಕರಿಸಿದ್ದು. ಸಮಾನತೆ, ಸೋದರತೆ, ಭ್ರಾತೃತ್ವ, ಸಂಹಿಷ್ಣುತೆ, ಉದಾರತೆ, ಸಮಗ್ರ ದೃಷ್ಟಿಕೋನ, ವಿವೇಕ, ವಿವೇಚನೆ, ಪರಿಶೀಲನೆ, ಜ್ಞಾನ ವಿಜ್ಞಾನದ ಬೆಳಕಿನಲ್ಲಿ ಇಹವನ್ನಾಗಲೀ ಪರವನ್ನಾಗಲೀ ನೋಡಿದ್ದರೇ? ಖಂಡಿತಾ ಇಲ್ಲ!

ಹಾಗಾದರೆ ಅವರ ಧರ್ಮವು ಏನನ್ನು ಎತ್ತಿ ಹಿಡಿಯುತ್ತದೆ? ಏನನ್ನು ಮೌಲ್ಯವೆಂದು ಪ್ರತಿಪಾದಿಸುತ್ತದೆ? ಆತ್ಮ, ಪರಮಾತ್ಮ, ಯಸಾಗ, ಯಜ್ಞ, ಹೋಮ, ಹವನ, ಪ್ರಾಣಿ ಬಲಿ, ಹಿಂಸೆ, ಅಸಮಾನತೆ, ಜಾತಿ, ವರ್ಗ, ವರ್ಣ,

ಆಶ್ರಮ ಪದ್ಧತಿ, ನಂಬಿಕೆ, ಭಕ್ತಿ, ದಾನಕ್ಕೆ ಬ್ರಾಹ್ಮಣರು ಮಾತ್ರ ಯೋಗ್ಯರು, ಬ್ರಾಹಣರು ಬ್ರಹ್ಮನ ಬಾಯಿಂದ ಜನಿಸಿದವನು. ಹಾಗಾಗಿ ಅವನು ಧರೆಯಲ್ಲಿ ಶ್ರೇಷ್ಠನು. ಮಿಕ್ಕ ಮೂರು ವರ್ಗದವರಾದ ಕ್ಷತ್ರೀಯ, ವೈಶ್ಯ-ಶೂದ್ರರು ಬ್ರಾಹಣರ ಸೇವೆಗೆ ಯೋಗ್ಯರು. ಅಂತ್ಯಜರಿಗೆ ಧರ್ಮವಿಲ್ಲ. ಅವರು ಧರ್ಮದಿಂದ ಬಹಿಷ್ಕೃತರು, ಶೂದ್ರರು ಮತ್ತು ಅಂತ್ಯಜರಿಗೆ ವಿದ್ಯೆಯ ಹಕ್ಕಿಲ್ಲ, ಅದಕ್ಕೂ ಮೀರಿ ಅವರು ವಿದ್ಯೆಯನ್ನು ಪಡೆದರೆ ಅವರ ದೇಹವನ್ನು ಸೀಳಬೇಕು. ಆಕಸ್ಮಿಕವಾಗಿ ಕಿವಿಯಲ್ಲಿ ಕೇಳಿದ್ದೇ ಆದರೆ ಅವರ ಕಿವಿಗೆ ಕಾದ ಸೀಸವನ್ನು ಸುರಿಯಬೇಕು, ಅದಕ್ಕೂ ಮುಂದುವರೆದು ಅವರ ಧರ್ಮದಲ್ಲಿ ನಾಲ್ಕೂ ವರ್ಗದ ಸ್ತ್ರೀಯರಿಗೆ ಧರ್ಮದ ಮತ್ತು ವಿದ್ಯೆಯ ನಿರಾಕರಣೆ.

ಇದರೊಂದಿಗೆ ಪವಾಡ, ಅತೀಂದ್ರಿಯವಾದ, ಅಮಾನುಷತೆ, ಮಾಯಾ, ಮಂತ್ರ, ತಂತ್ರ, ಕುತಂತ್ರ, ಕುಟಿಲತೆ, ಅಜ್ಞಾನ, ಸ್ವಾರ್ಥ, ಸುಳ್ಳು, ಮೋಸ, ಪರಾವಲಂಬನೆ, ಪರಕೀಯತೆ, ಸಮಯಸಾಧಕತೆ, ದ್ವಂದ್ವ, ತರ್ಕಹೀನತೆ, ದೇವರು, ಸ್ವರ್ಗ, ನರಕ, ಶಾಶ್ವತತೆ, ಆದಿ ಅಂತ್ಯ ಇಲ್ಲದಿರುವಿಕೆ. ಶೂನ್ಯದಿಂದ ಸೃಷ್ಠಿ, ಬ್ರಹ್ಮ, ಮಹೇಶ್ವರ, ವಿಷ್ಣು, ಇಂದ್ರ ಮುಂತಾದ ಕೋಟ್ಯಾಂತರ ದೇವರ ಅವತಾರಗಳು ಹೀಗೆ ಮುಂದುವರೆಯುತ್ತದೆ ಅವರ ತತ್ವ ಸಿದ್ಧಾಂತ.

ಇನ್ನೂ ಬುದ್ಧನು ಏನನ್ನು ಸ್ವೀಕರಿಸಿದ? ಏನನ್ನು ತಿರಸ್ಕರಿಸಿದ? ಏನನ್ನು ಅಂಗೀಕರಿಸಿದ? ಆತನ ಧರ್ಮವು ಯಾವ ತತ್ವ ಸಿದ್ಧಾಂತದ ಮೇಲೆ ನಿಂತಿದೆ ಎಂಬುದನ್ನು ನೋಡೋಣ. ಬುದ್ಧನು ತನ್ನ ಧರ್ಮವನ್ನು ಸಾಮಾಜಿಕ ನ್ಯಾಯದ ನೆಲೆಗಟ್ಟಿನ ಮೇಲೆ ಸ್ಥಾಪಿಸಿದ. ಸಮಾನತೆ, ವಿದ್ಯೆ, ಸೋದರತೆ, ಭ್ರಾತೃತ್ವ, ಪ್ರೀತಿ, ಕರುಣೆ, ಅನುಕಂಪ, ಧರ್ಮ ಸಂಹಿಷ್ಣತೆ ಮತ್ತು ಮೈತ್ರಿಯನ್ನು ಪ್ರದಾನವಾಗಿ ಪುರಸ್ಕರಿಸಿದ. ಆತ ಅಜ್ಞಾನ, ಮೌಢ್ಯ, ಅಸಮಾನತೆ, ಕುರುಡು ನಂಬಿಕೆಯನ್ನು ಅಲ್ಲಗಳೆದ. ಅವನ ಕಾಲದಲ್ಲಿ ಲಭ್ಯವಿದ್ದ ವೈದಿಕ ಧರ್ಮಗ್ರಂಥಗಳನ್ನು ತಿರಸ್ಕರಿಸುತ್ತಾ ಅವುಗಳು ಜೀವವಿರೋಧಿ ದೋರಣೆಗಳಿಂದ ಕೂಡಿವೆ ಎಂದ. ಅವನ ಧರ್ಮದಲ್ಲಿ ಮಾನವ ಮತ್ತು ಸಮಗ್ರ ಜೀವರಾಶಿಗಳಿಗೆ ಮಾತ್ರ ಆದ್ಯತೆ.

ಧರ್ಮವೆಂದರೆ ಪ್ರಕೃತಿ ಎಂಬ ಕ್ರಾಂತಿಕಾರಕ ವ್ಯಾಖ್ಯಾನ ನೀಡಿದ. ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿಯೇ ಆತ ಮೊಟ್ಟ ಮೊದಲ ಭಾರಿಗೆ ತನ್ನ ಧರ್ಮವನ್ನು ಕಾರ್ಯ ಕಾರಣ ಸಂಬಂಧಗಳನ್ನು ಒಳಗೊಂಡ ಜ್ಞಾನ ವಿಜ್ಞಾನದ ತಳಹದಿಯ ಮೇಲೆ ಸ್ಥಾಪಿಸಿದ. ಆದಿ ಇಲ್ಲ ಮತ್ತು ಅಂತ್ಯವಿಲ್ಲ ಎಂಬ ವಾದವನ್ನು ಹಾಗೂ ಶೂನ್ಯದಿಂದ ಯಾವುದೇ ಸೃಷ್ಠಿಯು ಸಾಧ್ಯವಿಲ್ಲ ಎಂಬುದನ್ನು ಉಪದೇಶಿಸಿದ. ವಿಕಾಸವಾದವಮ್ನು ಪುರಸ್ಕರಿಸಿದ. ಆತ್ಮ ಮತ್ತು ಪರಮಾತ್ಮನನ್ನು ತಿರಸ್ಕರಿಸಿದ. ಬದಲಿಗೆ ಮನಸ್ಸನ್ನು ಪುರಸ್ಕರಿಸಿದ. ಶೀಲ, ಪ್ರಜ್ಞೆ ಮತ್ತು ಏಕಾಗ್ರತೆಗೆ ಒತ್ತು ಕೊಟ್ಟ. ಲೋಕವು ದುಃಖ, ಅಶಾಶ್ವತ ಮತ್ತು ಅನಾತ್ಮ ದಿಂದ ಕೂಡಿದೆ ಎಂಬ ಮೂರು ಪರಮ ಸತ್ಯವನ್ನು ಬೋಧಿಸಿದ. ದುಃಖ, ದುಃಖಕ್ಕೆ ಕಾರಣ, ದುಃಖ ನಿವಾರಣೆಗೆ ಕ್ರಮ ಮತ್ತು ದುಃಖ ನಿವಾರಣೆಗೆ ಮಾರ್ಗ ಎಂಬ ನಾಲ್ಕು ಆರ್ಯ ಸತ್ಯಗಳನ್ನು ಎತ್ತಿ ಹಿಡಿದ. ಅಷ್ಟಾಂಗ ಮಾರ್ಗವನ್ನು ಬೋಧಿಸಿದ. ಪಂಚಶೀಲಗಳನ್ನು, ದಶಪಾರಮಿಗಳನ್ನು ಮತ್ತು ಅವುಗಳ ಮಹತ್ವವನ್ನು ತಿಳಿಯ ಹೇಳಿದ.

ವೈಜ್ಞಾನಿಕ ಮತ್ತು ವೈಚಾರಿಕ ತಳಹದಿಯಿಂದ ಕೂಡಿದ ಅವಲಂಬನಾ ಸೂತ್ರವನ್ನು ಬೋಧಿಸುತ್ತಾ; ಇಲ್ಲಿ ಒಂದು ಮತ್ತೊಂದಕ್ಕೆ ಸಂಬಂಧವಿದೆ. ಇಲ್ಲಿ ಯಾವುದು ಬಿಡಿಬಿಡಿಯಲ್ಲ ಎಲ್ಲವೂ ಎಲ್ಲವನ್ನು ಹಿಂಬಾಲಿಸುತ್ತದೆ ಎಂದು ಸಾರಿದ. ನಿನ್ನ ಕರ್ಮವೇ ನಿನ್ನ ಬಂಧು ಮಿತ್ರನೆಂದ. ನಿನ್ನನ್ನು ಇಲ್ಲಿ ಯಾರು ಕೈಹಿಡಿದು ಉದ್ದರಿಸುವವರಿಲ್ಲ "ಇಲ್ಲಿ ನಿನಗೆ ನೀನೇ" ಎಂಬ ಕಟ್ಟು ಸತ್ಯವನ್ನು ಬಲವಾಗಿ ಪ್ರತಿಪಾದಿಸಿದ. ನಮ್ಮಗಳ ಅಜ್ಞಾನ ಮತ್ತು ಬಯಕೆಗಳೆ ನಮ್ಮ ಹುಟ್ಟು ಹಾಗೂ ಪುರ್ನಜನ್ಮಕ್ಕೆ ಮೂಲ ಹೇತುವೆಂದ. ಹುಟ್ಟಿದ ಪ್ರತಿ ವ್ಯಕ್ತಿ, ವಸ್ತುವು ನಾಶ ಹೊಂದುತ್ತದೆ. ಬದುಕಿನಲ್ಲಿ ಎಲ್ಲಕ್ಕೂ ಮುಖ್ಯವಾದದ್ದು ಶೀಲವೆಂದು ಗಾಢವಾಗಿ ಪ್ರತಿಪಾದಿಸಿದ.

ಬುದ್ಧನ ತ್ರಿಪಿಟಕದ ಒಟ್ಟು ಸಾರವನ್ನು ಹೀಗೆ ಹೇಳಬಹುದು;

"ಕೇಡನ್ನು ಮಾಡದಿರು. ಒಳಿತನ್ನೇ ಮಾಡು. ಮನಸ್ಸನ್ನು ಸಂಸ್ಕರಿಸಿಕೋ, ಇದೇ ಬುದ್ಧನ ಶಾಸನವಾಗಿದೆ "ಮುಂದುವರಿದ ಬುದ್ಧನು ತನ್ನನ್ನು ಕುರಿತು ಹೀಗೆ ಹೇಳಿದ" ನನ್ನನ್ನೂ ಕೂಡ ನಂಬದಿರಿ. ನಾನು ಹೇಳಿದ್ದನ್ನು ಪರಿಪರಿಯಾಗಿ ಪರೀಕ್ಷಿಸಿ ಸತ್ಯವೆಂದು ಕಂಡು ಬಂದರೆ ಮಾತ್ರ ನಂಬಿ. ಇಲ್ಲವೆಂದ ನನ್ನನ್ನೂ ತಿರಸ್ಕರಿಸಿ ಎಂದ. ಇದು ಅವನ ಸ್ವಾತಂತ್ರ್ಯ ಪ್ರಿಯತೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದೃಢಿಕರಿಸುತ್ತದೆ.

ಬುದ್ಧನು ತನ್ನ ಧರ್ಮದ ಬಗ್ಗೆ ಮಾತನಾಡುತ್ತಾ; ನಾನು ಬೋಧಿಸಿದ್ದು ಒಂದು ನಿರ್ಧಿಷ್ಟ ಮತಕ್ಕೆ ಸಂಬಂಧಿಸಿದ ಬೋಧನೆಯಲ್ಲ. ನಾನು ಸತ್ಯವನ್ನು ಬೋಧಿಸಿದ್ದೇ ಆದರೆ ಅದು ಚಿರಕಾಲ ಉಳಿಯುತ್ತದೆ. ಇಲ್ಲವೆಂದರೆ ಅದು ನಶಿಸುತ್ತದೆ. ಏಕೆಂದರೆ; "ಧರ್ಮ ಕೂಡ ತನಗೆ ತಾನೇ! "ಎನ್ನುವ ಮೂಲಕ ಧರ್ಮಾತೀತ ಧೋರಣೆಯನ್ನು ವ್ಯಕ್ತಪಡಿಸುತ್ತಾನೆ. ಆತ ತನ್ನ ಧರ್ಮದಲ್ಲಿ ಯಾವುದೇ ಪ್ರತ್ಯೇಕ ಸ್ಥಾನವನ್ನು ಬಯಸಲಿಲ್ಲ. ಕೇವಲ ಒಬ್ಬ ಭಿಕ್ಷವಂತೆ ಸರಳವಾಗಿ ಜೀವಿಸಿದ. ತನಗಾಗಿ ಯಾವುದೇ ಕೇಂದ್ರ ಸ್ಥಾನವನ್ನು ನಿರ್ಮಿಸಿಕೊಳ್ಳಲುವ ವಿಷಯ ಬಂದಾಗ ನಯವಾಗಿ ನಿರಾಕರಿಸಿದ.

ಹಾಗಾದರೆ ಈಗ ಹೇಳಿ ವೈದಿಕ ಧರ್ಮಗ್ರಂಥಗಳಲ್ಲಿ ಎಲ್ಲಿಯಾದರೂ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಉದಾರತೆ, ಸಮಾನತೆ, ಸೋದರತೆ, ನಿಸ್ವಾರ್ಥ, ಧರ್ಮ ಸಂಹಿಷ್ಣತೆ, ಶೀಲ, ಪ್ರಜ್ಞೆ, ಜ್ಞಾನ ಮತ್ತು ವಿಜ್ಞಾನದಿಂದ ಕೂಡಿದ ವೈಜ್ಞಾನಿಕತೆ ಹಾಗೂ ವೈಚಾರಿಕತೆ, ಸಾಮಾಜಿಕ ನ್ಯಾಯ ಮತ್ತು ಮೈತ್ರಿಯನ್ನು ಕಂಡಿರುವಿರಾ?

ಮೇಲ್ಕಂಡ ಇದ್ಯಾವ ಉದಾತ ಗುಣ ಮೌಲ್ಯಗಳು ಇಲ್ಲವೆಂದ ಮೇಲೆ ಬುದ್ಧ ಹೇಗೆ ವೈದಿಕ ಧರ್ಮ ಗ್ರಂಥಗಳಿಂದ ತನ್ನ ತತ್ವ ಸಿದ್ಧಾಂತಗಳನ್ನು ಕದಿಯಲು, ಎರವಲು ಪಡೆಯಲು ಅಥವಾ ಅಳವಡಿಸಿಕೊಳ್ಳಲು ಸಾಧ್ಯವಾಯಿತು? ಬೌದ್ಧ ಧರ್ಮವು ಹೇಗೆ ವೈದಿಕ ಧರ್ಮದ ರೂಪಾಂತರವಾದ ಹಿಂದೂ ಧರ್ಮದ ಒಂದು ಉಪಶಾಖೆಯಾದಿತು? ಬ್ರಾಹ್ಮಣವಾದಿಗಳು ಕುತರ್ಕ ಮಾಡುವಂತೆ ಬುದ್ಧನ ತತ್ವ ಸಿದ್ಧಾಂತಗಳು ಹೇಗೆ ಹಿಂದೂ ಧರ್ಮದ ಸಾರ ಸಂಗ್ರಹವಾಗುತ್ತದೆ?

ಈಗ ಇತಿಹಾಸದ ಒಂದು ಹಿನ್ನೋಟದತ್ತ ಸ್ವಲ್ಪ ನಮ್ಮ ದೃಷ್ಠಿಯನ್ನು ಹರಿಸೋಣ ;

ಅಶೋಕನು ತನ್ನ ಆಳ್ವಿಕೆಯಲ್ಲಿ ತಮ್ಮ ಇಬ್ಬರು ಮಕ್ಕಳಾದ ಮಹೇಂದ್ರ ಮತ್ತು ಸಂಘಮಿತ್ರರನ್ನು ಧರ್ಮಕ್ಕೆ ದಾನ ಮಾಡಿದ್ದ. ಅವರುಗಳು ಲಂಕೆಗೆ ಹೋಗಿ ಅಲ್ಲಿ

ಧರ್ಮವೆಂದರೆ ಪ್ರಕೃತಿ ಎಂಬ ಕ್ರಾಂತಿ ಕಾರಕ ವ್ಯಾಖ್ಯಾನ ನೀಡಿದ. ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿಯೇ ಆತ ಮೊಟ್ಟ ಮೊದಲ ಬಾರಿಗೆ ತನ್ನ ಧರ್ಮವನ್ನು ಕಾರ್ಯ ಕಾರಣ ಸಂಬಂಧಗಳನ್ನು ಒಳಗೊಂಡ ಜ್ಞಾನ ವಿಜ್ಞಾನದ ತಳಹದಿಯ ಮೇಲೆ ಸ್ಥಾಪಿಸಿದ. ಆದಿ ಇಲ್ಲ ಅಂತ್ಯವಿಲ್ಲ ಎಂಬವಾದವನ್ನು ಹಾಗೂ ಶೂನ್ಯದಿಂದ ಯಾವುದೇ ಸೃಷ್ಠಿಯು ಸಾಧ್ಯವಿಲ್ಲ ಎಂಬುದನ್ನು ಉಪದೇಶಿಸಿದ. ವಿಕಾಸವಾದವನ್ನು ಪುರಸ್ಕರಿಸಿದ. ಆತ್ಮ ಮತ್ತು ಪರಮಾತ್ಮನನ್ನು ತಿರಸ್ಕರಿಸಿದ. ಬದಲಿಗೆ ಮನಸ್ಸನ್ನು ಪುರಸ್ಕರಿಸಿದ. ಶೀಲ ಪ್ರಜ್ಞೆ ಮತ್ತು ಏಕಾಗ್ರತೆಗೆ ಒತ್ತು ಕೊಟ್ಟ. ಲೋಕವು ದುಃಖ, ಅಶಾಶ್ವತ ಮತ್ತು ಅನಾತ್ಮ ದಿಂದ ಕೂಡಿದೆ ಎಂಬ ಮೂರು ಪರಮ ಸತ್ಯವನ್ನು ಬೋಧಿಸಿದ. ದುಃಖ, ದುಃಖಕ್ಕೆ ಕಾರಣ, ದುಃಖ ನಿವಾರಣೆಗೆ ಕ್ರಮ ಮತ್ತು ದುಃಖ ನಿವಾರಣೆಗೆ ಮಾರ್ಗ ಎಂಬ ನಾಲ್ಕು ಆರ್ಯ ಸತ್ಯಗಳನ್ನು ಎತ್ತಿ ಹಿಡಿದ.

ಜಾರುತ್ತದೆ!

ನೆಳ ಜೋರಾಗಿ ತಿರುವಬಾರದು
ಹನಿ ಹನಿ ತೊಟ್ಟಿಕ್ಕುತ್ತದೆ.
ಮಿಣಿ, ಹಗ್ಗ ಮಿತಿ ಮೀರಿ
ಹುರಿಮಾಡಬಾರದು
ಪಟ್ಟನೆ ಹರಿಯುತ್ತವೆ.
ಮನಕ್ಕೆ ಮಿತಿ ಮೀರಿ
ಕಟ್ಟೆ ವಿಧಿಸಬಾರದು
ಮೆಲ್ಲನೆ ಜಾರುತ್ತದೆ!

○ ಅಲ್ಲಮ ಪ್ರಭು ಬೆಟ್ಟದೂರು

ಸಿಂಹಳಿ ಭಾಷೆಯಲ್ಲಿ ಕಾಪಾಡಿ ಇಟ್ಟ ಮೂಲ ಬೌದ್ಧ ತ್ರಿಪಿಟಿಕ ಸಾಹಿತ್ಯವನ್ನು ಅಖಂಡವಾಗಿ ಅಧ್ಯಯ ಮಾಡಿದರು. ಬಳಿಕ ಯಾವ ವೈದಿಕರಿಂದ ಬೌದ್ಧ ಸಾಹಿತ್ಯ ಗಡೀ ಪಾರಾಗಿತ್ತೋ ಆ ಅಮೂಲ್ಯ ಸಾಹಿತ್ಯನ್ನು ಮತ್ತೆ ಅಧಿಕೃತವಾಗಿ ಭಾರತಕ್ಕೆ ತಂದರು. ಅಂದಿನ ಜನಸಾಮಾನ್ಯರ ಭಾಷೆಯಾದ ಪಾಲಿ ಭಾಷೆಗೆ ಅನುವಾದ ಮಾಡಿಸಿದರು. ಭಾರತದ ಮೂಲೆ ಮೂಲೆಗಳಲ್ಲಿಯೂ ಮತ್ತು ಏಷ್ಯಾ ಖಂಡದಲ್ಲಿಯೂ ಅಯಾ ದೇಶ ಭಾಷೆಯಲ್ಲಿ ಪ್ರಚಾರ ಮಾಡಿದರು. ಅಖಂಡ ತ್ರಿಪಿಟಿಕ ಸಾಹಿತ್ಯವನ್ನು ಅಶೋಕನು ಶೀಲಾ ಶಾಸನದಲ್ಲಿ ಕೆತ್ತಿಸಿದನು. ದೇಶದ ಉದ್ದಗಲಕ್ಕೂ ಎಂಬತ್ತು ನಾಲ್ಕು ಸಾವಿರ ವಿಹಾರಗಳನ್ನು ಮತ್ತು ಸ್ತೂಪಗಳನ್ನು ಕಟ್ಟಿಸಿದನು. ಬುದ್ಧರು ನೆಡೆದಾಡಿದ ಪುಣ್ಯ ಕ್ಷೇತ್ರಗಳಿಗೆ ಭೇಟಿ ಕೊಟ್ಟನು. ನಲವತ್ತು ವರ್ಷಗಳು ಶಸ್ತ್ರ ತ್ಯಾಗ ಮಾಡಿ ಬುದ್ಧನ ತತ್ವ ಸಿದ್ಧಾಂತದ ಆಧಾರದಲ್ಲಿ ಅಹಿಂಸೆಯಿಂದ ರಾಜ್ಯಭಾರ ಮಾಡಿದ. ಇದು ಜಗತ್ತಿನ ಇತಿಹಾಸದಲ್ಲಿಯೇ ಅಮರವಾದ ಅಧ್ಯಾಯವಾಗಿದೆ. ಆ ದಿನಗಳಲ್ಲಿ ಈ ವೈದಿಕ ಬ್ರಾಹ್ಮಣವಾದಿಗಳು ತಮ್ಮ ಅಧಿಕಾರ – ಸುಖ ಜೀವನವನ್ನು ಕಳೆದುಕೊಂಡು ಮೂಲೆ ಗುಂಪಾಗಿದ್ದರು.

ಅಶೋಕನ ಮರಣಾ ನಂತರ ಇವರ ಅರಾಜಕತೆ, ಒಳಸಂಚು, ದಂಗೆಯು ಮುಗಿಲು ಮುಟ್ಟಿತ್ತು. ಅದೇ ಸಮಯಕ್ಕೆ ಸರಿಯಾಗಿ ಅಶೋಕನ ಮೊಮ್ಮಗನಾದ ಬೃಹದತ್ತನು ದುರ್ಬಲ ರಾಜನಾಗಿದ್ದನು. ಅವನ ಬಳಿ ಮಂತ್ರಿಯಾಗಿದ್ದವನು ಪುಷ್ಯಮಿತ್ರನೆಂಬ ಶೃಂಗ ಪಂಗಡದ ಬ್ರಾಹ್ಮಣ. ಇದೇ ಸರಿಯಾದ ಸಮಯವೆಂದು ಅರಿತ ಬ್ರಾಹ್ಮಣವಾದಿಗಳು ಪುಷ್ಯಮಿತ್ರನನ್ನು ಬಳಸಿಕೊಂಡು ಬೃಹದತ್ತನಿಗೆ ಹೆಣ್ಣು ಮತ್ತು ಹೆಂಡದ ದಾಸ್ಯನನ್ನಾಗಿ ಮಾಡಿದರು. ಕೊನೆಗೊಮ್ಮೆ ಆತನನ್ನು ಕಗ್ಗೊಲೆ ಮಾಡಿ ಮೌರ್ಯ ಸಾಮ್ರಾಜ್ಯವನ್ನು ನಿರ್ನಾಮ ಮಾಡಿದರು. ಮತ್ತೆ ಬ್ರಾಹ್ಮಣ ಸಾಮ್ರಾಜ್ಯವನ್ನು ಮರು ಸ್ಥಾಪನೆ ಮಾಡಿದರು .

ಈ ಶುಂಗ ಬ್ರಾಹ್ಮಣ ಕುಲಕ್ಕೆ ಸೇರಿದ ರಾಜನಾದ ಪುಷ್ಯಮಿತ್ರನು ತನ್ನ ಆಳ್ವಿಕೆಯಲ್ಲಿ ಮಾಡಿದ ಮೊದಲ ಘೋಷಣೆ ಎಂದರೆ, ಬೌದ್ಧ ಭಿಕ್ಷುಗಳ ಮತ್ತು ಬೌದ್ಧರ ತಲೆಯನ್ನು ಕತ್ತರಿಸಿ ತಂದವರಿಗೆ ಒಂದು ಸಾವಿರ ಚಿನ್ನದ ನಾಣ್ಯವನ್ನು ಬಹುಮಾನವಾಗಿ ನೀಡುವುದಾಗಿ ರಾಜ್ಯಾದಂತ ಡಂಗೂರವನ್ನು ಸಾರಿಸುತ್ತಾನೆ. ಹಾಗೆ ಕಡಿದು ತಂದ ಬೌದ್ಧರ ಸಹಸ್ರಾರು ತಲೆಗಳನ್ನು ಬೋಧಿ ವೃಕ್ಷದ ಕಟ್ಟೆಗೆ ತೆಂಗಿನ ಕಾಯಿಯಂತೆ ಹೊಡೆಸಿದ. ಅದರಿಂದ ಹೊರ ಹೊಮ್ಮುತ್ತಿದ್ದ ರಕ್ತವನ್ನು ತಿಲಕದಂತೆ ಹಣೆಗೆ ಇಟ್ಟುಕೊಳ್ಳುತ್ತಿದ್ದರು. ಹೀಗೆ ವಿಜಯೋತ್ಸವವನ್ನು ಆಚರಿಸುತ್ತಿದ್ದ ಅವರು ಇದನ್ನು ಧರ್ಮ ಯುದ್ಧ ಎಂದು ಬಣಿಸಿದರು.

ಭವಿಷ್ಯ ಹಿಟ್ಲರ್, ಮುಸಲೋನಿ ಮುಂತಾದ ಆಧುನಿಕ ಜನಾಂಗೀಯ ಕೊಲೆಪಾತಕರಿಗಿಂತ ಕಡು ಭೀಕರ ಬೌದ್ಧರ ನರಮೇಧ ನೆಡೆಯುತ್ತದೆ. ಈ ಮಾರಣ ಹೋಮವನ್ನು ಶಂಕರಾಚಾರ್ಯರು ಮುಂದುವರೆಸಿ ಬೌದ್ಧ ಧರ್ಮವನ್ನೇ ನಿರ್ನಾಮ ಮಾಡುತ್ತಾರೆ. ಇದರ ಜೊತೆಗೆ ಅಮೂಲ್ಯವಾದ ಬೌದ್ಧ ಸಾಹಿತ್ಯವನ್ನು ಸುಟ್ಟು ಹಾಕುತ್ತಾರೆ ಮತ್ತು ಭೂಗತ ಮಾಡುತ್ತಾರೆ. ಬೌದ್ಧರ ವಿಹಾರಗಳನ್ನು, ಸ್ತೂಪಗಳನ್ನು ಮತ್ತು ಬುದ್ಧನ ವಿಗ್ರಹಗಳನ್ನು ನೆಲಸಮ ಮಾಡುತ್ತಾರೆ. ಬೌದ್ಧ ವಿಹಾರಗಳನ್ನು ಅತಿಕ್ರಮಿಸಿ ವೈದಿಕ ಹಿಂದೂ ದೇವಾಲಯಗಳನ್ನಾಗಿ ಪರಿವರ್ತಿಸಿ ಕೊಂಡು ಅಂದಿನಿಂದ ಇಂದಿನ ತನಕ ದಕ್ಷಿಣೆ ಕಾಸನ್ನು ಭಕ್ತರಿಂದ ಎತ್ತುವ ನಿರಂತರ ಕಾಯಕವನ್ನು

ಭವಿಷ್ಯ ಹಿಟ್ಲರ್, ಮುಸಲೋನಿ ಮುಂತಾದ ಆಧುನಿಕ ಜನಾಂಗೀಯ ಕೊಲೆಪಾತಕರಿಗಿಂತ ಕಡು ಭೀಕರ ಬೌದ್ಧರ ನರಮೇಧ ನೆಡೆಯುತ್ತದೆ. ಈ ಮಾರಣ ಹೋಮವನ್ನು ಶಂಕರಾಚಾರ್ಯರು ಮುಂದುವರೆಸಿ ಬೌದ್ಧ ಧರ್ಮವನ್ನೇ ನಿರ್ನಾಮ ಮಾಡುತ್ತಾರೆ. ಇದರ ಜೊತೆಗೆ ಅಮೂಲ್ಯವಾದ ಬೌದ್ಧ ಸಾಹಿತ್ಯವನ್ನು ಸುಟ್ಟು ಹಾಕುತ್ತಾರೆ ಮತ್ತು ಭೂಗತ ಮಾಡುತ್ತಾರೆ. ಬೌದ್ಧರ ವಿಹಾರಗಳನ್ನು, ಸ್ತೂಪಗಳನ್ನು ಮತ್ತು ಬುದ್ಧನ ವಿಗ್ರಹಗಳನ್ನು ನೆಲಸಮ ಮಾಡುತ್ತಾರೆ. ಬೌದ್ಧ ವಿಹಾರಗಳನ್ನು ಅತಿಕ್ರಮಿಸಿ ವೈದಿಕ ಹಿಂದೂ ದೇವಾಲಯಗಳನ್ನಾಗಿ ಪರಿವರ್ತಿಸಿ ಕೊಂಡು ಅಂದಿನಿಂದ ಇಂದಿನ ತನಕ ದಕ್ಷಿಣೆ ಕಾಸನ್ನು ಭಕ್ತರಿಂದ ಎತ್ತುವ ನಿರಂತರ ಕಾಯಕವನ್ನು ಇದೇ ಬ್ರಾಹ್ಮಣ ವಾದಿಗಳು ಮಾಡುತ್ತಿದ್ದಾರೆ.

ಇದೇ ಬ್ರಾಹ್ಮಣವಾದಿಗಳು ಮಾಡುತ್ತಿದ್ದಾರೆ. ಅಯೋಧ್ಯಯ ಮಸೀದಿಯನ್ನು ರಾಮ ಮಂದಿರವೆಂದು ಈ ಸಂಘ ಪರಿವಾರದ ಜನರು ನೆಲಸಮ ಮಾಡಿದರಲ್ಲ, ಅದು ಅವರು ವಾದಿಸುವಂತೆ ರಾಮ ಮಂದಿರವಲ್ಲ. ಅದು ಬೌದ್ಧ ವಿಹಾರವಾಗಿತ್ತು. ಮುಸ್ಲಿಂರ ಆಳ್ವಿಕೆಯಲ್ಲಿ ಹಿಂದೂ ರಾಜರಿಂದ ಆ ಮಂದಿರವನ್ನು ಆಕ್ರಮಿಕೊಂಡಿದ್ದರಷ್ಟೇ .

ಇನ್ನೂ ಇದೇ ಸಂಘ ಪರಿವಾರದವರು ಬುರುಡೆ ಬಿಡುವಂತೆ ಕಾಶಿ, ಮಥುರಾ, ರಾಮೇಶ್ವರ ಮುಂತಾದ ಕಡೆ ಮುಸ್ಲಿಂರು ದೇವಾಲಯಗಳನ್ನು ಆಕ್ರಮಿಸಿಕೊಂಡು ಮಸೀದಿಗಳನ್ನು ಮಾಡಿಕೊಂಡಿದ್ದಾರೆ. ಅದನ್ನು ನಾವು ಬಿಡುವುದಿಲ್ಲ ಎಂದು ಬೊಬ್ಬೆ ಹಿಡುತ್ತಿರುವರಲ್ಲ ಅದರ ನಿಜಕಥೆಯೂ ಮೇಲಿನದರ ಪಡಿಯಚ್ಚೆ ಆಗಿದೆ. ಬುದ್ಧನ ಕಾಲದಲ್ಲಿ ವೈದಿಕರು ದೇವಾಲಯವನ್ನು ನಿರ್ಮಿಸುವ ಪದ್ಧತಿಯನ್ನು ಹೊಂದಿರಲಿಲ್ಲ. ಇವರದು ಏನಿದ್ದರೂ ಗೆದ್ದಲು ನಿರ್ಮಿಸಿದ್ದ ಹುತ್ತವನ್ನು ಹಾವು ಆಕ್ರಮಿಸುವಂತೆ ಇವರು ವಕ್ಕರಸಿಕೊಳ್ಳುತ್ತಾರೆ.

ಈಗ ಅರ್ಥವಾಯಿತೇ ಹನುಮಂತನಿಂದ ಲಂಕೆಯನ್ನು ಏಕೆ ದಹನ ಮಾಡಿಸಿದರು ಎಂದು! ತಾವು ಮಹಾನ್ ಹೋರಾಟ ಮಾಡಿ ನಿರ್ನಾಮ ಮಾಡಿದೆವೆಂದು ಭ್ರಮಿಸಿದ್ದ ಬುದ್ಧನ ಸಾಹಿತ್ಯ ಮತ್ತೆ ಭಾರತವನ್ನು ಪ್ರವೇಶಿದ್ದಕ್ಕಾಗಿ.

ಇಲ್ಲಿನ ಬಹುಮುಖ್ಯ ವಿಷಯವೆಂದರೆ ವೈದಿಕರು ಪ್ರತಿಪದಿಸುವಂತೆ ಬೌದ್ಧ ಧರ್ಮದ ಸಾರವು ಹಿಂದೂ ಧರ್ಮದ ಸಾರವೆಂದು ಹೇಳುವುದರಲ್ಲಿ ಯಾವುದೇ ಸತ್ಯವು ಇಲ್ಲದೆ ಹೋದರೂ ಕೂಡ, ಈ ವೈದಿಕ ರಾಜರು ಮತ್ತು ಧರ್ಮ ಗುರುಗಳು ಎನ್ನಿಸಿಕೊಂಡವರು ಬೌದ್ಧ ಧರ್ಮವನ್ನು ಏಕೆ ನಿರ್ನಾಮ ಮಾಡಿದರು? ಬೌದ್ಧರನ್ನೇಕೆ ಕಗ್ಗೊಲೆ ಮಾಡಿದರು? ಬೌದ್ಧ ಸಾಹಿತ್ಯವನ್ನು ಏಕೆ ಸುಟ್ಟು ಹಾಕಿದರು ಮತ್ತು ಭೂಗತ ಮಾಡಿದರು? ಅಂತಿಮವಾಗಿ ಬೌದ್ಧ ಧರ್ಮವನ್ನು ಏಕೆ ಈ ದೇಶದಿಂದಲೇ ಗಡೀಪಾರು ಮಾಡಿದರು ?

ಏಕೆಂದರೆ; ಬುದ್ಧನ ಉದಯದ ಮತ್ತು ಅಶೋಕನ ಆಳ್ವಿಕೆಯಲ್ಲಿ ವೈದಿಕರ ಅನ್ಯಾಯ, ಮೋಸ, ಕುತಂತ್ರ, ಮೌಢ್ಯ, ಅಸಮಾನತೆ, ಸ್ವಾರ್ಥ, ಪರಾವಲಂಬಿತನ ಮುಂತಾದ ಕುಟಿಲತೆ ಬಯಲಾಯಿತು. ಈ ದೇಶದ ಮೂಲ ನಿವಾಸಿಗಳು ವೈದಿಕರನ್ನು ತಿರಸ್ಕರಿಸಿದರು. ಇದರ ಪ್ರತಿಫಲವಾಗಿ ಅವರ ಯಜ್ಞ, ಯಾಗ, ಹೋಮ, ಹವನ, ಪೂಜೆ, ಪುನಸ್ಕಾರ, ತಿಥಿ, ಮತಿ, ಜ್ಯೋತಿಷ್ಯ, ಪವಾಡ, ಅತಿಮಾನುಷ ವಾಮವಿದ್ಯೆಗಳೆಲ್ಲ ಬುದ್ಧನ ಸರಳ ಸತ್ಯದ ಎದುರು ಬೆತ್ತಲಾಯಿತು. ಇದರ ಪರಿಣಾಮವಾಗಿ ಅವರಿಗೆ ನಿರಾಯಾಸವಾಗಿ ಬರುತ್ತಿದ್ದ ಹಣ ಕಾಸು ಧವಸ ಧಾನ್ಯ, ಹಣ್ಣು, ತರಕಾರಿ, ತುಪ್ಪ ತೈಲ, ಧನ ಕನಕಗಳಿಂದ ಕೂಡಿದ ದಾನ, ದಕ್ಷಿಣೆ ಮುಂತಾದ ಸಂಪತ್ತು ನಿಂತು ಹೋಯಿತು. ಅವರಿಗೆ ಒಂದು ಹೊತ್ತಿನ ಅನ್ನಕ್ಕೂ ತತ್ವಾರ ಒದಗಿ ಬಂತು. ಆಗ ವೈದಿಕರು ಇಷ್ಟಕ್ಕೆಲ್ಲ ಬುದ್ಧನೇ ಕಾರಣ ಎಂದು ಅರಿತು ಅವನ ಧರ್ಮವನ್ನು ಈ ದೇಶದಿಂದಲೇ ಗಡೀಪಾರು ಮಾಡಿದರು!

ಈ ಬಗೆಯ ದೌರ್ಜನ್ಯದ ಹಿಂದೆ ಯಾವುದೇ ತಾತ್ವಿಕ ಕಾರಣವಿರಲಿಲ್ಲ. ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ನಿಂತಂತಹ ಶ್ರೇಷ್ಠತೆ ಇರಲಿಲ್ಲ. ಉನ್ನತ ಮಾನವೀಯ ಧ್ಯೆಯಗಳನ್ನು ಎತ್ತಿ ಹಿಡಿದಂತಹ ಘನತೆ ಕೂಡ ಇರಲಿಲ್ಲ. ಬುದ್ಧನು ಕಂಡುಕೊಳ್ಳಲಾಗದ ಸತ್ಯವನ್ನು ಇವರು ಏನಾದರು ಕಂಡುಕೊಂಡಿದ್ದರೆ? ಅದೂ ಕೂಡ ಇಲ್ಲ. ಬ್ರಾಹ್ಮಣ ಋಷಿ ಮುನಿಗಳು, ಅವರು ಸೃಷ್ಟಿಸಿದ ದೇವಾನು ದೇವತೆಗಳು ಅಥವಾ ಪುಷ್ಯಮಿತ್ರ, ಮನು, ಶಂಕರಾಚಾರ್ಯ ಮುಂತಾದವರು ಬುದ್ಧನಂತೆ ಜ್ಞಾನೋದಯಗೊಂಡ ಸಮ್ಮಾಸಂಬುದ್ಧರಾಗಿದ್ದರೆ? ಅವರುಗಳು ಎಂದಾದರು ಶೀಲದ ನೆಲೆಗಟ್ಟಿನ ಮೇಲೆ ನಿಂತಿದ್ದರೆ? ಪ್ರಜ್ಞೆ ಮತ್ತು ಸಮಾಧಿಯಲ್ಲಿ ಬುದ್ಧರಿಗೆ ಸರಿಸಾಟಿಯಾಗಿದ್ದರೆ? ಯಾವುದೂ ಇಲ್ಲ. ಹಾಗಾದರೆ ವಿನಾಃಕಾರಣ ಯಾವ ಕಾರಣಕ್ಕಾಗಿ ಬ್ರಾಹ್ಮಣವಾದಿಗಳು ಬೌದ್ಧ ಧರ್ಮವನ್ನು

ಗಡೀಪಾರು ಮಾಡಿದರು?

ವಾಸ್ತವ ಸಂಗತಿ ಎಂದರೆ, ಯಜ್ಞ ಯಾಗ ಹೋಮ ಹವನಗಳ ಸುತ್ತಲೇ ಅವರ ಅಸ್ಥಿತ್ವ ಅಡಗಿತ್ತು. ಅದೇ ಅವರ ಬದುಕು, ಉಸಿರು ಮತ್ತು ಜೀವನೋಪಾಯವಾಗಿತ್ತು. ಮತ್ತೆ ಅವರು ತಮ್ಮ ಹಿಂದಿನ ಕರ್ಮಕಾಂಡವನ್ನು ಜಾರಿಗೆ ತರಬೇಕಾಗಿದ್ದರೆ ಅವರಿಗೆ ರಾಜಕೀಯ ಪ್ರಭುತ್ವ ಜರೂರು ಮತ್ತು ಅತ್ಯಗತ್ಯವಾಗಿತ್ತು. ಇಲ್ಲದಿದ್ದರೆ ಜನರು ಅವರಿಗೆ ಮಾನ್ಯತೆ ಕೊಡುತ್ತಿರಲಿಲ್ಲ. ಪುರಸ್ಕರಿಸುತ್ತಿರಲಿಲ್ಲ. ಜನರು ಮತ್ತೆ ಅವರನ್ನು ಸ್ವೀಕರಿಸಬೇಕು ಎಂದರೆ ವೇದ ಕಾಲದಲ್ಲಿ ತಾವು ಯಾವ ರೀತಿಯಲ್ಲಿ ಜನರನ್ನು ಮೌಢ್ಯದಲ್ಲಿ ಮತ್ತು ಕಗ್ಗತ್ತಲಲ್ಲಿ ಇರಿಸಿದ್ದರೋ ಅದನ್ನು ಮತ್ತೆ ಶತಾಯಗತಾಯ ಜಾರಿಗೆ ತರಬೇಕಾಗಿತ್ತು. ಹಾಗಾಗಿ ಅಧಿಕಾರದ ಚುಕ್ಕಾಣಿಯನ್ನು ಹಿಡಿಯಲೇ ಬೇಕಾಗಿತ್ತು.

ಹೀಗೆ ಅವರು ಬುದ್ಧ-ಅಶೋಕನ ನಂತರ ತಮ್ಮ ಉಳಿವಿಗಾಗಿ. ಸ್ವಾರ್ಥ ಸಾಧನೆಗಾಗಿ. ಕೇವಲ ಸದ ಕ್ಷಿಣೆಯ ಕಾಸಿಗಾಗಿ. ಹೊಟ್ಟೆ ಪಾಡಿಗಾಗಿ. ಜನಾಂಗೀಯ ದ್ವೇಷಕ್ಕಾಗಿ ಬುದ್ಧನ ಸರಳ ಸತ್ಯಗಳನ್ನು ಮತ್ತು ಅಶೋಕನ ಜನಪರ ಮೌಲ್ಯಗಳನ್ನು ನಾಶ ಮಾಡಿದರೇ ಹೊರತು ಯಾವುದೆ ಸರ್ವ ಜನರ ಕಲ್ಯಾಣಕ್ಕಾಗಿ ಅಥವಾ ಸಾಮಾಜಿಕ ನ್ಯಾಯಕ್ಕಾಗಿ ಬೌದ್ಧ ಧರ್ಮ-ಬೌದ್ಧ ರಾಜರನ್ನು ನಿರ್ನಾಮ ಮಾಡಲಿಲ್ಲ. ಇದು ಬ್ರಾಹ್ಮಣವಾದಿಗಳ ಅಸಲಿ ಇತಿಹಾಸ!

ಮೌಲ್ಯಗಳು ಅವರಿಗೆ ಬೇಕಾಗಿರಲಿಲ್ಲ. ಕೇವಲ ಪರಾವಲಂಬಿತನ, ಸಮಯ ಸಾಧಕತೆ, ಮೌಢ್ಯ, ಅಜ್ಞಾನ, ಕುಟಿಲತೆ, ಅಸಮಾನತೆ ಮುಂತಾದ ಅನಿಷ್ಟಗಳೇ ಅವರ ಧರ್ಮದ ತಳಹದಿಯಾಗಿದೆ. ಅಧಿಕಾರ ದಾಹ, ಸಂಪತ್ತಿನ ದಾಹ, ಭೂದಾಹ - ರಾಜ್ಯದಾಹ ಹಾಗೂ ಜನಾಂಗೀಯ ಸುಖ-ಹಿತವೇ ಅವರ ಧರ್ಮದ ಮೂಲ ತತ್ವಸಿದ್ಧಾಂತ ವಾಗಿದೆ. ಉಳಿದದ್ದೆಲ್ಲ ಬರೀ ಬುರುಡೆ ಪುರಾಣವಾಗಿದೆ.

ಇಷ್ಟಾದರೂ ಬ್ರಾಹ್ಮಣವಾದಿಗಳಾದ ಸಂಘ ಪರಿವಾರಿಗಳು ಮಾತೆತ್ತಿದ್ದರೆ ನಮ್ಮ ಶೂದ್ರರ ಮುಂದೆ ನಮ್ಮದು ಪ್ರಾಚೀನ ಪರಂಪರೆ, ದಿವ್ಯವಾಗಿದೆ ಭವ್ಯವಾಗಿದೆ ಇಲ್ಲಿ ವಜ್ರ ವೈಡೂರ್ಯದ ಹೊಳೆಯೇ ಹರಿದಿದೆ. ನಮ್ಮ ಧರ್ಮ ಸನಾತನಿಯವಾದದ್ದು. ಸೂರ್ಯ ಚಂದ್ರರು ಮತ್ತು ಭೂಗ್ರಹವೇ ಅಸ್ಥಿತ್ವದಲ್ಲಿ ಇಲ್ಲದೆ ಇದ್ದಂತಹ ಕಾಲದಲ್ಲಿಯೂ ರಾರಾಜಿಸುತ್ತಿತ್ತು. ಹಾಗಾಗಿ ನಮ್ಮ ಧರ್ಮಕ್ಕೆ ಆದಿ ಇಲ್ಲ ಮತ್ತು ಅಂತ್ಯವಿಲ್ಲ ಎಂಬ ಅಸಂಬದ್ಧವನ್ನು ನುಡಿಯುತ್ತಾರೆ. ತಮ್ಮ ಮೂಗಿನ ನೇರಕ್ಕೆ ಇತಿಹಾಸವನ್ನು ಮತ್ತು ಸತ್ಯವನ್ನು ತಿರುಚಿ ಬರೆದಿದ್ದಾರೆ. ಈಗಲೂ ಆ ಪ್ರವೃತಿಯನ್ನು ಮುಂದುವರೆಸುತ್ತಿದ್ದಾರೆ .

ಅವರು ಮತ್ತೊಂದು ಪ್ರಖರ ವಾದವಿದೆ. ನಮ್ಮ ಸಂಸ್ಕೃತ ಸಾಹಿತ್ಯ ಅದ್ಭುತವಾದದ್ದು ಅಖಂಡವಾ ದದ್ದು ಸಂವೃದ್ಧವಾದದ್ದು ಎಂಬುದೆ ಆಗಿದೆ. ಈ ಬಗ್ಗೆ ಜಗತ್ತಿನ ಅನೇಕ ಇತಿಹಾಸಕಾರರು ಹೀಗೆ ತಮ್ಮ ವಾದವನ್ನು ಮಂಡಿಸುತ್ತಾರೆ; "ಬುದ್ಧನ ನಂತರದ ವೈದಿಕ ಸಾಹಿತ್ಯವು ಬುದ್ಧನ ಸಾಹಿತ್ಯಕ್ಕೆ ಪ್ರತಿ ಸಾಹಿತ್ಯವನ್ನು ರಚಿಸಿದ್ದೇ ಆಗಿದೆ" ಎನ್ನುತ್ತಾರೆ. ನಾಲ್ಕನೆಯ ವೇದ, ಬಹುತೇಕ ಉಪನಿಷತ್ತುಗಳು, ಮಹಾಭಾರತ, ರಾಮಾಯಣ, ಭಗವದ್ಗೀತೆ, ಸ್ಮೃತಿಗಳು, ಪುರಾಣ ಪುಣ್ಯ ಕಥೆಗಳು, ಮನು ಪುರಾಣದ ಪರಿಷ್ಕಾರ, ಭಾಗವತ, ಬೃಹತ್ಕಥೆ, ಪಂಚತಂತ್ರ ಮತ್ತು ಅಸಂಖ್ಯಾತ ಸಂಖ್ಯೆಯಲ್ಲಿ ಬಂದ ವ್ಯಾಖ್ಯಾನ ಕೃತಿಗಳೂ ಕೂಡ ಬುದ್ಧನ ನಂತರ ಬಂದಂತಹ ಕೃತಿಗಳಾಗಿವೆ ಎಂಬುದನ್ನು ಸಾಕ್ಷಿ ಆಧಾರದ ಸಮೇತ ವಿಷಯವನ್ನು ಮಂಡಿಸಿದ್ದಾರೆ. ತಮ್ಮ ವಾದವನ್ನು ಖಚಿತ ಪಡಿಸಲು ಕಾಲಮಾನದ ಸಹಿತ ಉದಾಹರಿಸಿದ್ದಾರೆ. ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆಯ ಕಾಲಮಾನವನ್ನು ಕ್ರಿ.ಶ. ಎರಡನೆಯ ಶತಮಾನದಿಂದ ಏಳನೆಯ ಶತಮಾನದ ಅಂತರದ ರಚನೆ ಎಂದು ಖಚಿತ ಪಡಿಸಿದ್ದಾರೆ.

ಇದಕ್ಕೆ ಇತಿಹಾಸಕಾರರು ಕೊಡುವ ಸಮರ್ಥನೆ ಎಂದರೆ, ಬುದ್ಧನ ಕಾಲಮಾನದಲ್ಲಿ ಅಥವಾ ಕ್ರಿ.ಶ. ಎರಡನೆಯ ಶತಮಾನದ ತನಕ ಎಲ್ಲಿಯೂ ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆಯ ಉದಾಹರಣೆಯಾಗಲೀ, ಉಪಮೆ, ರೂಪಕ, ರೂಪಾಂತರ, ದೃಷ್ಟಾಂತ ಅಥವಾ ಯಾವುದೇ ವ್ಯಾಖ್ಯಾನವಾಗಲೀ ಕಂಡು ಬರುವುದಿಲ್ಲ. ಬದಲಿಗೆ ಬುದ್ಧನ ಜಾತಕ ಕಥೆಗಳು ಮತ್ತು ತ್ರಿಪಿಟಿಕ ಸಾಹಿತ್ಯದಲ್ಲಿ ಕಂಡು ಬರುವ ಹೆಸರುಗಳು, ಪ್ರಸಂಗಗಳು, ಪಾತ್ರಗಳು, ಸನ್ನಿವೇಶಗಳ ತಿರುಗು ಮುರುಗುಗಳು ಹಾಗೂ ಉನ್ನತ ಮೌಲ್ಯಗಳು ಬುದ್ಧನ ನಂತರದ ಸಂಸ್ಕೃತ ಸಾಹಿತ್ಯದಲ್ಲಿ ಹೇರಳವಾಗಿ ಕಂಡು ಬರುತ್ತದೆ ಎನ್ನುವ ಅವರು ಮುಂದುವರಿದು;

ವೈದಿಕರು ತಮ್ಮ ಉಳುಕನ್ನು ಮುಚ್ಚಿಕೊಳ್ಳುವ ಉದ್ದೇಶದಿಂದ ಮತ್ತು ನಾವು ಉನ್ನತ ಧ್ಯೆಯವನ್ನು ಪ್ರತಿಪಾದಿಸುವ ಮಹಾತ್ಮರು ಎಂಬುದನ್ನು ಅನಿವಾರ್ಯ ವಾಗಿ ಸಾಬೀತು ಮಾಡಿಕೊಳ್ಳುವ ತುರ್ತು ಇತ್ತು. ಆದುದರಿಂದ ಬುದ್ಧನ ಸಾಹಿತ್ಯದಿಂದ ಎಲ್ಲವನ್ನೂ ಕದ್ದರು ಮತ್ತು ತಿರುಚಿದರೇ ವಿನಃ ವೈದಿಕರಿಂದ ಬೌದ್ಧರು ಕದ್ದಿಯುವ ಯಾವುದೇ ಉನ್ನತ ಮೌಲ್ಯಗಳಿರಲಿಲ್ಲ ಎಂಬುದನ್ನು ಸ್ಪಷ್ಟ ಪಡಿಸಿದ್ದಾರೆ. ಅದರಲಿಯೂ ಮೇಲ್ಕಂಡ ಮಹಾಕಾವ್ಯಗಳಲ್ಲಿ ಮತ್ತು ಅವರ ಪುರಾಣ ಪುಣ್ಯ ಕಥೆಗಳಲ್ಲಿ ಈ ಎಲ್ಲಾ ಅಂಶಗಳು ನಿರ್ಧಿಷ್ಟವಾಗಿ ಎದ್ದು ಕಾಣುತ್ತದೆ ಎನ್ನುತ್ತಾರೆ; ಸರ್. ರೇಸ್ ಡೇವಿಡ್, ಮ್ಯಾಕ್ ಮುಲ್ಲರ್, ಹರ್ಮನ್ ರೇಸ್, ಜರಾಲ್ಡ್ ಡ್ಯೂರಲ್, ಬಟ್ರಾಂಡ್ ರಸಲ್, ಐನೆಸ್ಟೇನ್, ಟಾಲ್‌ಸ್ಟಾಯ್, ನಮ್ಮವರೇ ಆದ ರವೀಂದ್ರನಾಥ ಠಾಕೂರ್, ಇದೇ ಸ್ವಾಮಿ ವಿವೇಕಾನಂದರು, ಪಂಡಿತ್ ಜವಹರಲಾಲ್ ನೆಹರು, ರಾಹುಲ್ ಸಾಂಕೃತ್ ಮುಂತಾದವರು ತಮ್ಮ ಅಸಂಖ್ಯಾತ ಕೃತಿಗಳಲ್ಲಿ ಈ ವಾದವನ್ನು ಮಂಡಿಸಿದ್ದಾರೆ.

ಶತಮಾನಗಳಲ್ಲಿ ಬುದ್ಧನಿಂದಾಗಿ ಪರೋಕ್ಷ ಬಲವನ್ನು ಪಡೆದ ಬ್ರಾಹ್ಮಣವಾದಿಗಳು ದೇಶವಾಸಿಗಳ ಮೇಲೆ ಹೊಸ ಉತ್ಸಾಹದಿಂದ ಸಾಂಸ್ಕೃತಿಕ ದಾಳಿಗೆ ಮುಂದಾಗಲು ಇದು ಬಹುಮುಖ್ಯ ಕಾರಣವಾಯಿತು! ಇವರು ಸತ್ಯದ ಮೇಲೆ ಇಷ್ಟೆಲ್ಲ ಅತ್ಯಾಚಾರ ಮಾಡಿದರೂ ಕೂಡ ಬೌದ್ಧ ಧರ್ಮವನ್ನು ಸಂಪೂರ್ಣವಾಗಿ ಕೊಲ್ಲಲು ಇವರಿಂದ ಸಾಧ್ಯವಾಗಲಿಲ್ಲ ಏಕೆ? ಬುದ್ಧನೇ ಹೇಳುವಂತೆ ಸತ್ಯಕ್ಕೆ ಎಂದಿಗೂ ಸಾವಿಲ್ಲ ಎಂಬ ನುಡಿಯು ಇದರಿಂದ ಸಾಬೀದಂತಾಯಿತು.

ನಂತರದ ಶತಮಾನಗಳಲ್ಲಿ ಬುದ್ಧನಿಂದಾಗಿ ಪರೋಕ್ಷ ಬಲವನ್ನು ಪಡೆದ ಬ್ರಾಹ್ಮಣವಾದಿಗಳು ದೇಶವಾಸಿಗಳ ಮೇಲೆ ಹೊಸ ಉತ್ಸಾಹದಿಂದ ಸಾಂಸ್ಕೃತಿಕ ದಾಳಿಗೆ ಮತ್ತು ದಂಗೆಗೆ ಮುಂದಾಗಲು ಇದು ಬಹು ಮುಖ್ಯ ಕಾರಣವಾಯಿತು!

ಇವರು ಸತ್ಯದ ಮೇಲೆ ಇಷ್ಟೆಲ್ಲ ಅತ್ಯಾಚಾರ ಮಾಡಿದರೂ ಕೂಡ ಬೌದ್ಧ ಧರ್ಮವನ್ನು ಸಂಪೂರ್ಣವಾಗಿ ಕೊಲ್ಲಲು ಇವರಿಂದ ಸಾಧ್ಯವಾಗಲಿಲ್ಲ ಏಕೆ? ಬುದ್ಧನೇ ಹೇಳುವಂತೆ ಸತ್ಯಕ್ಕೆ ಎಂದಿಗೂ ಸಾವಿಲ್ಲ ಎಂಬ ನುಡಿಯು ಇದರಿಂದ ಸಾಬೀತಾದಂತಾಯಿತು. ಏಷ್ಯಾ ಖಂಡದಲ್ಲಿ ಮತ್ತು ಜಗತ್ತಿನ ನಾನಾ ಮುಂದುವರಿದ ದೇಶಗಳಲ್ಲಿ ಇಂದು ಬುದ್ಧನ ತತ್ವ ಸಿದ್ಧಾಂತವನ್ನು ಒಪ್ಪಿಕೊಂಡು ಅನುಸರಿಸುತ್ತಿದ್ದಾರೆ. ಜಗತ್ತಿನಲ್ಲಿ ಬೌದ್ಧ ಧರ್ಮವು ಇಂದು ಮೂರನೆಯ ಅತಿ ದೊಡ್ಡ ಧರ್ಮವಾಗಿ ಹೊರಹೊಮ್ಮಿದೆ. ಈ ದೇಶದ ಬಹು ಸಂಖ್ಯಾತರ ಮೂಲ ಧರ್ಮವು ಬೌದ್ಧ ಧರ್ಮವಾಗಿದೆ. ಈ ದೇಶದ ಸಂವಿಧಾನವು ಬುದ್ಧನ ಸಮಾನತೆ, ಸೋದರತೆ, ಭ್ರಾತೃತ್ವ, ಧರ್ಮಸಹಿಷ್ಣತೆ, ಅಹಿಂಸೆ, ಮೈತ್ರಿ ಮತ್ತು ಜಾತ್ಯಾತೀತ ತೆಯ ಮೌಲ್ಯದ ಆಧಾರದ ಮೇಲೆ ರೂಪುಗೊಂಡಂತಹ ಪ್ರಜಾಪ್ರಭುತ್ವದ ವ್ಯವಸ್ಥೆಯಾಗಿದೆ.

ಸ್ವತಂತ್ರ ಭಾರತದ ಧ್ವಜವು ಕೇಸರಿ ಹಸಿರು ಬಿಳಿ ವರ್ಣದ ನಡುವೆ ಅಶೋಕನ ಧರ್ಮಚಕ್ರವನ್ನು ಒಳಗೊಂಡಿದೆ. ಆ ಧರ್ಮಚಕ್ರದ ಒಳಗಿರುವ ಇಪ್ಪತ್ತ ನಾಲ್ಕು ಅರಗಳು ಬುದ್ಧನು ಬೋಧಿಸಿದ ಹುಟ್ಟು ಸಾವಿಗೆ ಮೂಲವಾದ ಕಾರ್ಯ ಕಾರಣ ಸಂಬಂಧದಿಂದ ಕೂಡಿದ ಅವಲಂಬನಾ (ಪಟಿಚ್ಚಸಮುಪಾದ) ಸೂತ್ರವನ್ನು ಪ್ರತಿಬಿಂಬಿಸುತ್ತದೆ. ಅಂದರೆ ಈ ದೇಶದ ರಾಷ್ಟ್ರೀಯ ಧರ್ಮವು ಬೌದ್ಧ ಧರ್ಮವಾಗಿದೆ. ಈ ಮಹತ್ವದ ಹೆಮ್ಮೆಯ ಸಂಗತಿ ಯನ್ನು ಬಹು ಸಂಖ್ಯಾತರು ಮತ್ತು ಪ್ರಜ್ಞಾವಂತ ನಾಗರೀಕರೆಲ್ಲರೂ ಅರ್ಥಮಾಡಿಕೊಳ್ಳಬೇಕು. ಅದೇ ಸಂದರ್ಭದಲ್ಲಿ ಅಶೋಕನ ಕಾಲಾನಂತರದಲ್ಲಿ ಉದಯಿಸಿದ ಡಾ॥ ಅಂಬೇಡ್ಕರ್ ಅವರ ಶ್ರಮ, ತ್ಯಾಗ, ಹೋರಾಟ, ಸಂವಿಧಾನ ರಚನೆಯ ಸಂದರ್ಭದಲ್ಲಿ ಅವರು ವಹಿಸಿದ ಪಾತ್ರವನ್ನು ನೆನೆದು ಅವರಿಗೆ ದೇಶವಾಸಿಗಳು ಕೃತಜ್ಞತೆಯನ್ನು ಅರ್ಪಿಸಬೇಕು. ಈ ಬ್ರಾಹ್ಮಣವಾದಿಗಳ ನಿರಂತರ ಹೋರಾಟ ವಿರುವುದು ಈ ಬೌದ್ಧ ಧ್ವಜವನ್ನು ಕೆಳಗಿಳಿಸಿ ತಮ್ಮ ಕೇಸರಿ ಬಣ್ಣದ ಭಗವತ್ ಧ್ವಜವನ್ನು ದೆಹಲಿಯ ಕೆಂಪುಕೋಟೆಯ ಮೇಲೆ ಹಾರಿಸುವುದೇ ಇವರ ಹಿಡನ್ ಅಜೆಂಡದ ಮುಖ್ಯ ಕಾರ್ಯ ಸೂಚಿಯಾಗಿದೆ!

ಇಂತಹ ಕಟ್ಟು ಸತ್ಯಗಳನ್ನು ಬಹು ಸಂಖ್ಯಾತರಿಂದ ಮರೆಮಾಚಿದ ಸಂಘ ಪರಿವಾರಿಗಳು ಮನುವನ್ನು, ಶಂಕರಚಾರ್ಯರನ್ನು, ಸ್ವಾಮಿ ವಿವೇಕಾ ನಂದರನ್ನು, ಸರ್ವಾಕರ್ ಮುಂತಾದವರನ್ನು ವೈದಿಕ ಹಿಂದೂ ಧರ್ಮದಮತ ಪ್ರಚಾರಕರನ್ನಾಗಿ ಅಂಗೀಕರಿಸಿದೆ. ಸತ್ಯವನ್ನು ಸಾಯಿಸಲು ನಿರಂತರ ಹೋರಾಡುವ ಮತ್ತು ಇತಿಹಾಸವನ್ನು ತಿರುಚುವ ಕಲೆಯಲ್ಲಿ ನಿಷ್ಟಾವಂತರಾದ ಬ್ರಾಹ್ಮಣವಾದಿಗಳು ತಮ್ಮ ಒಳ ಕಾರ್ಯ ಸೂಚಿಯಲ್ಲಿ ಬಹಳ ಮುಂದುವರೆದಿದ್ದಾರೆ. ನಾಗರೀಕತೆ, ಸಂಸ್ಕೃತಿ, ಕಲೆ, ಸಂಗೀತ, ನೃತ್ಯ, ಜಾನಪದ, ಪುರಾಣ, ಪುಣ್ಯಕಥೆ, ದಂತಕಥೆ, ಕಟ್ಟುಕಥೆಗಳ ಮೂಲಕ ತಮ್ಮ ಧರ್ಮವನ್ನು ಜನಮಾನಸದಲ್ಲಿ ಬೇರೂರುವಂತೆ ಪ್ರಚಾರ ಮಾಡಿದ್ದಾರೆ. ಬದಲಾದ ಎಲ್ಲ

ಕಾಲಕ್ಕೂ ಅಯಾ ಕಾಲದ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸಮರ್ಪಕವಾಗಿ ತಮ್ಮ ಧರ್ಮದ ಪ್ರಚಾರಕ್ಕೆ ಬಳಸಿಕೊಂಡು ಸಾಗುತ್ತಿದ್ದಾರೆ. ಇಂದಿನ ಆಧುನಿಕ ಸಾಹಿತ್ಯ, ಸಂಗೀತ, ಸಿನಿಮಾ, ನಾಟಕ, ರೇಡಿಯೋ, ದೂರದರ್ಶನ ಮತ್ತು ವಾರ್ತಾ ಪತ್ರಿಕೆಗಳನ್ನು ಅದೆಷ್ಟು ನಯವಾಗಿ, ವಿನಯವಾಗಿ ಕೂದಲಲ್ಲಿ ಕುತ್ತಿಗೆ ಕುಯ್ಯುವಂತೆ ಬಳಸಿಕೊಂಡಿದ್ದಾರೆ ಎಂದರೆ ಅದನ್ನು ವರ್ಣಿಸಲು ಬೃಹತ್ ಗ್ರಂಥವನ್ನೇ ರಚಿಸಬೇಕಾಗುತ್ತದೆ .

ಈ ಬಗೆಯ ತಮ್ಮ ಒಳಮರ್ಮವನ್ನು ಸಾಧಿಸಲು ದಲಿತರು, ಹಿಂದುಳಿದವರು, ಸವರ್ಣೀಯರನ್ನು ಅದ್ಯಾವ ಪರಿಯಲ್ಲಿ ಬಳಸಿಕೊಂಡಿದ್ದಾರೆ ಎಂದರೆ. ಈ ಮಣ್ಣಿನ ನಾಗರೀಕತೆ ಮತ್ತು ಸಂಸ್ಕೃತಿಯನ್ನು ನಾಶ ಮಾಡಬೇಕೆಂದರೆ ಬಹುಸಂಖ್ಯಾತರನ್ನು ಮೊದಲು ನಾಶ ಮಾಡಬೇಕು ಎಂಬುದನ್ನು ಸ್ಪಷ್ಟವಾಗಿ ಅರಿತಿದ್ದಾರೆ. ಹಾಗಾಗಿ ಅವರನ್ನು ಬಳಸಿಕೊಳ್ಳುತ್ತಾರೆ. ಅವರ ಹೆಗಲ ಮೇಲೆ ಇವರ ಬಂಧೂಕವನ್ನು ಇಟ್ಟು ಕುದುರೆಯನ್ನು ಒತ್ತುತ್ತಾರೆ.

ತನ್ನ ಮಣ್ಣಿನ ಸಂಸ್ಕೃತಿಯನ್ನೇ ನಾಶ ಮಾಡುವ ಅವಿವೇಕಿ ಶೂದ್ರರಿಗೆ ಸನ್ಮಾನವನ್ನು ಮಾಡುತ್ತಾರೆ. ಬಿರುದು ಬಾಹುಲಿಯನ್ನು ನೀಡುತ್ತಾರೆ. ಬಹುಮಾನಗಳನ್ನು ಘೋಷಿಸುತ್ತಾರೆ. ಆದರೆ ಆ ಶೂದ್ರ ಕೊಂದದ್ದು ಯಾರನ್ನು? ನಾಶಗೊಳಿಸಿದ್ದು ಯಾರ ಧರ್ಮವನ್ನು? ಉರುಳಿಸಿದ್ದು ಯಾರ ಸಂಸ್ಕೃತಿಯನ್ನು? ಅವನು ಸಂಹರಿಸಿದ್ದು ಈ ಮಣ್ಣಿನ ಮೂಲ ಸೆಲೆಯನ್ನು. ಉದಾಹರಣೆ ಎಂದರೆ; ನರೇಂದ್ರ ಮೋದಿ, ಎಡಯೂರಪ್ಪ, ಈಶ್ವರಪ್ಪ, ಸಿ.ಟಿ. ರವಿ, ಜನಾರ್ದನರೆಡ್ಡಿ ಮುಂತಾದ ಇತಿಹಾಸ ಹೀನರನ್ನು ಬಳಸಿಕೊಳ್ಳುತ್ತಾರೆ. ಅವರಿಗೆ ತಾವು ಯಾರು? ತಾವು ಏನು? ನಾವೇನು ಮಾಡುತ್ತಿದ್ದೇವೆ? ಇದರ ದೂರದ ಪರಿಣಾಮ ಯಾರ ಮೇಲೆ ಬೀರುತ್ತದೆ? ಯಾವುದು ಸತ್ಯ? ಯಾವುದು ಮಿಥ್ಯಾ? ಯಾರು ನಮ್ಮ ನಿಜವಾದ ಮಿತ್ರರು? ಯಾರು ನಮ್ಮ ನಿಜವಾದ ಶತ್ರುಗಳು ಎಂಬ ಬಗ್ಗೆ ಇವರಿಗೆ ಪರಿಜ್ಞಾನವಿಲ್ಲ. ಕಾರಣವೆಂದರೆ ಈ ಅವಿವೇಕಿಗಳಿಗೆ ಇತಿಹಾಸದ ಪ್ರಜ್ಞೆ ಇಲ್ಲದೆ ಇರುವುದೇ ಆಗಿದೆ. ಜೊತೆಗೆ ಹಣದ ದಾಹ, ಜಾತೀಯ ದಾಹ, ಅಧಿಕಾರದ ದಾಹ, ಜೂಜು ಮೋಜಿನ ದಾಹ, ಭೂಮಿಯ ದಾಹ, ಹೆಣ್ಣು ಮತ್ತು ಹೆಂಡದ ದಾಹಕ್ಕೆ ಬಹು ಸಂಖ್ಯಾತರ ಸುಂದರ ಬದುಕನ್ನೇ ಬರಡು ಮಾಡಿ ಬಿಡುತ್ತಿದ್ದಾರೆ.

ಈ ಶೂದ್ರರಿಗೆ ಅಧಿಕಾರ ಮತ್ತು ರಾಜಕೀಯ ಪದವಿಗಳನ್ನು ದಯಪಾಲಿಸುವವರು ಯಾರು? ಇದೇ ಬ್ರಾಹ್ಮಣವಾದಿಗಳು. ಆದರೆ ಮಾತ್ರ ಇದೇ ಬ್ರಾಹ್ಮಣವಾದಿಗಳು ಮಾರುವೇಷದಲ್ಲಿ ಎಡ ಪಂಥದಲ್ಲಿಯೂ, ಬಲ ಪಂಥದಲ್ಲಿಯೂ ಇರುತ್ತಾರೆ. ಅವರು ಸಾಧುಗಳಾಗಿಯು ಮತ್ತು ಉಗ್ರಗಾಮಿಗಳಾಗಿಯು ಇರುತ್ತಾರೆ. ಆಚಾರವಂತರಾಗಿಯು, ವಿಚಾರವಂತರಾಗಿಯು, ಬುದ್ಧಿಜೀವಿಗಳು ಎಂಬ ಸೋಗಿನಲ್ಲಿಯೂ ಇರುತ್ತಾರೆ. ಇವರು ಎಲ್ಲಿಯೇ ಇದ್ದರೂ, ಎಂಥೆ ಇದ್ದರು, ಎಂದೆಂದಿಗೂ ಬ್ರಾಹ್ಮಣವಾದಿಗಳಾಗಿ ಇರುತ್ತಾರೆ. ಅಂತರ್ಯಾದಲ್ಲಿ ಮನುವಾದಿಗಳಾಗಿರುತ್ತಾರೆ. ಇವರ ಬಹು ಮುಖ್ಯ ಕಾಯಕವೆಂದರೆ ಕುರಿಗಳಂತಿರುವ ಬಹು ಸಂಖ್ಯಾತರ ಹೆಗಲ ಮೇಲೆ ಕೋವಿಯನ್ನು ಇಡುವುದು ಮತ್ತು ಅವರನ್ನು ತಮ್ಮ ತಾಳಕ್ಕೆ ತಕ್ಕಂತೆ ಬಳಸಿಕೊಳ್ಳುವುದು ಹಾಗೂ ಅವರನ್ನು ಹಿಂದೂ ಧರ್ಮವೆಂಬ ಅಸಲಿ ವೈದಿಕ ಧರ್ಮದ ಬಲಿಪೀಠಕ್ಕೆ ನೇತು ಹಾಕುವುದು, ಜೊತೆಗೆ ಜತನದಿಂದ ಅವರನ್ನು

ಆಧುನಿಕ ಸ್ವತಂತ್ರ ಭಾರತದಲ್ಲಿ ಈ ಸತ್ಯ ಮತ್ತು ಅವಮಾನವನ್ನು ಯಾರ್‍ಯಾರು ಅರಿತರೋ ಅವರೆಲ್ಲ ಮುಸ್ಲಿಂ ಮತು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದರು. ಈ ವೈದಿಕ ಹಿಂದೂ ಗುಲಾಮಗಿರಿಯಿಂದ ಪಾರಾದರು.

ಇನ್ನೂ ಡಾ॥ ಅಂಬೇಡ್ಕರ್ ಅವರು ಅನುಸರಿಸಿದ ಮಾರ್ಗದಿಂದ ಎಚ್ಚೆತ್ತ ವಿದ್ಯಾವಂತ ದಲಿತರು ಮತ್ತು ಹಿಂದುಳಿದ ವರ್ಗಗಳ ಪ್ರಜ್ಞಾ ವಂತರು ದೇಶದಾದ್ಯಂತ ತಮ್ಮ ಮೂಲ ಧರ್ಮವಾದ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿ ದಾಸ್ಯದಿಂದ ಬಿಡುಗಡೆ ಹೊಂದುತ್ತಿದ್ದಾರೆ. ಈ ವಾಸ್ತವ ಸತ್ಯವನ್ನು ಅರಿತ ಬ್ರಾಹ್ಮಣವಾದಿಗಳು ಮತಾಂತರ ವಿರೋಧಿ ಮಸೂದೆಯನ್ನು ತರಲು ಶತಾಯಗತಾಯ ಹೋರಾಡುತ್ತಿದ್ದಾರೆ. ಅವರಿಗೆ ವೈಯಕ್ತಿಕ ಸ್ವಾತಂತ್ರ್ಯ, ಜಾತ್ಯಾತೀತತೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲ.

ಕಾಯುವುದು, ಕಟ್ಟುವುದೇ ಕಸುಬಾಗಿದೆ.

ಆಧುನಿಕ ಸ್ವತಂತ್ರ ಭಾರತದಲ್ಲಿ ಈ ಸತ್ಯ ಮತ್ತು ಅವಮಾನವನ್ನು ಯಾರ್‍ಯಾರು ಅರಿತರೋ ಅವರೆಲ್ಲ ಮುಸ್ಲಿಂ ಮತು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದರು. ಈ ವೈದಿಕ ಹಿಂದೂ ಗುಲಾಮಗಿರಿಯಿಂದ ಪಾರಾದರು. ಇನ್ನೂ ಡಾ॥ ಅಂಬೇಡ್ಕರ್ ಅವರು ಅನು ಸರಿಸಿದ ಮಾರ್ಗದಿಂದ ಎಚ್ಚೆತ್ತ ವಿದ್ಯಾವಂತ ದಲಿತರು ಮತ್ತು ಹಿಂದುಳಿದ ವರ್ಗಗಳ ಪ್ರಜ್ಞಾವಂತರು ದೇಶದಾದ್ಯಂತ ತಮ್ಮ ಮೂಲ ಧರ್ಮವಾದ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿ ದಾಸ್ಯದಿಂದ ಬಿಡುಗಡೆ ಹೊಂದುತ್ತಿದ್ದಾರೆ. ಈ ವಾಸ್ತವ ಸತ್ಯವನ್ನು ಅರಿತ ಬ್ರಾಹ್ಮಣವಾದಿಗಳು ಮತಾಂತರ ವಿರೋಧಿ ಮಸೂದೆಯನ್ನು ತರಲು ಶತಾಯಗತಾಯ ಹೋರಾಡುತ್ತಿದ್ದಾರೆ. ಅವರಿಗೆ ವೈಯಕ್ತಿಕ ಸ್ವಾತಂತ್ರ್ಯ, ಜಾತ್ಯಾತೀತತೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲ. ಏಕೆಂದರೆ, ಅವರು ಕುಳಿತ ದೋಣಿಯೇ ತೂತುಬಿದ್ದಿದೆ. ಇನ್ನೂ ಅವರನ್ನು ಅನುಸರಿಸಿದವರ ಪಾಡೇನು?

ಒಂದು ಕಾಲದಲ್ಲಿ ಅವರ ಕಾರ್ಯ ಕ್ಷೇತ್ರವು ಕನ್ಯಾಕುಮಾರಿಯಿಂದ ಕಾಶ್ಮೀರದ ತನಕವಿತ್ತು. ಇಂದು ಜಗತ್ತಿನಾದ್ಯಂತ ಅವರ ಸಂಪರ್ಕ, ಸಂಬಂಧ ಹಾಗೂ ನೌಕರಿಯು ಹರಡಿದೆ. ಅದಕ್ಕೆ ಮೂಲ ಕಾರಣ ಬ್ರಾಹ್ಮಣವಾದಿಗಳು ಮೀಸಲಾತಿಯಿಂದ ವಂಚಿತರಾದದ್ದೇ ಆಗಿದೆ. ಯಾವ ಬ್ರಾಹಣವಾದಿಗಳು ಸಾವಿರಾರು ವರ್ಷಗಳು ಏಕಪಕ್ಷಿಯವಾಗಿ ಕೆನೆ ಪದರನ್ನು ತಿನ್ನುತ್ತಾ ಕುಳಿತಿದ್ದರೋ ಅವರಿಗೆ ಸಾಮಾಜಿಕ ನ್ಯಾಯದ ಅಡಿಯಲ್ಲಿ ಮೀಸಲಾತಿಯ ಸೌಲಭ್ಯವು ಎಂದು ರದ್ದಾಯಿತೋ, ಅಂದಿನಿಂದ ಅವರ ಅರಾಜಕತೆ ಮತ್ತು ದಂಗೆ ಮುಗಿಲು ಮುಟ್ಟಿದೆ.

ನಂತರದ ಬೆಳವಣಿಗೆ ಎಂದರೆ ಇಂದು ಯಾರನ್ನು ಸವರ್ಣೀಯರೆಂದು ಗುರುತಿಸಲಾಗುತ್ತದೋ ಅದೇ ಒಕ್ಕಲಿಗರು ಮತ್ತು ಲಿಂಗಾಯಿತರು ಮೈಸೂರು ಮಹಾರಾಜರ ಆಡಳಿತಾವಧಿಯಲ್ಲಿ ನಾವುಗಳು ಹಿಂದುಳಿದ ವರ್ಗವೆಂದು ವಾದಿಸಿ ಮಿಲ್ಲರ್ ಆಯೋಗದಿಂದ ಮಿಸ ಲಾತಿಯ ಸೌಲಭ್ಯವನ್ನು ಸುಮಾರು ಒಂದು ಶತಮಾನ ಕಾಲದ ತನಕ ಪಡೆದರು. ಆ ಮೂಲಕ ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯ ಮತ್ತು ಸಾಮಾಜಿಕವಾಗಿ ಅಭಿ ವೃದ್ದಿ ಹೊಂದಿದರು. ಕೆನೆ ಪದರ ಅಂತಕ್ಕೆ ಬಂದಾಗ ಸಹಜವಾಗಿ ಮೀಸಲಾತಿಯು ರದ್ದಾಯಿತು. ನಂತ್ತರದ ಕೆಳ ಅಂತದ ವರ್ಗಕ್ಕೆ ತಾವು ಪಡೆದ ಸೌವಲತ್ತು ಅವರು ಪಡೆಯಲು ಮುಂದಾದ ತಕ್ಷಣ ಬ್ರಾಹ್ಮಣವಾದಿಗಳ ನೀತಿಯನ್ನೇ ಇವರೂ ಕೂಡ ಅನುಸರಿಸಿದರು. ಅದರೆ ಅದೇ ಸಂದರ್ಭದಲ್ಲಿ ತಮ್ಮ ಶೂದ್ರ ಸಮೂದಾಯದ ಇತರೆ ಸಹೋದರರೂ ನಾವು ಪಡೆದ ಸವಲತ್ತನ್ನು ಪಡೆದು ಮುಂದೆ ಬರಲಿ ಎಂಬ ವಿಶಾಲ ಹೃದಯವಂತಿಕೆಯನ್ನು ಪ್ರದರ್ಶಿಸಲಿಲ್ಲ. ಸರ್ವರ ಏಳಿಗೆಯಲ್ಲಿ ಸಮಾನತೆ ಮತ್ತು ಸಂವೃದ್ಧಿ ಅಡಗಿದೆ ಎಂಬುದನ್ನು ಅರಿಯಲಿಲ್ಲ.

ಬದಲಿಗೆ ಬ್ರಾಹ್ಮಣವಾದಿಗಳನ್ನು ಅನುಸರಿಸಿದರು. ಅಷ್ಟು ಸಾಲದೆಂಬಂತೆ ಮತ್ತೆ ಅವರ ಗುಲಾಮರಾದರು. ಇದರ ಕೆಟ್ಟ ಪರಿಣಾಮವೆಂದರೆ ಬ್ರಾಹ್ಮಣವಾದಿಗಳಿಗೆ ಇನ್ನಿಲ್ಲದ ತೋಳ್ಬಲ ದಕ್ಕಿದಂತಾಯಿತು.

ಅದರ ಮತ್ತೊಂದು ಮುಖವೇ ಖಾಸಗೀಕರಣ, ಉದಾರೀಕರಣ-ಜಾಗತೀಕರಣ! ಇದರ ಸದುಪಯೋಗವನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡ ಬ್ರಾಹ್ಮಣವಾದಿಗಳು ಬಹುರಾಷ್ಟ್ರೀಯ ಕಂಪನಿಗಳನ್ನು ತಂದರು. ಅದರ ಉನ್ನತ ಹುದ್ದೆಗಳನ್ನು ಬಲವಾಗಿ ತಮ್ಮ ಕಪಿಮುಷ್ಠಿಯಲ್ಲಿ ಹಿಡಿದುಕೊಂಡರು. ಅಲ್ಲಿ ಅಪ್ಪಿತಪ್ಪಿ ಅವಕಾಶ ಪಡೆದ ದಲಿತರು, ಹಿಂದುಳಿದ ವರ್ಗದವರು-ಅಲ್ಪಸಂಖ್ಯಾತರನ್ನು ಇನ್ನಿಲ್ಲದಂತೆ ಶೋಷಿಸುತ್ತಿದ್ದಾರೆ. ಇದೇ ಶೋಷಿತ ವರ್ಗದವರು ಒಂದಾಗಿ ಖಾಸಗೀಕರಣದಲ್ಲಿಯೂ ಮೀಸಲಾತಿಯನ್ನು ಕೊಡಿ ಎಂದು ಕೇಳುತ್ತಿದ್ದಾರೆ.

ಹೀಗೆ ಇತಿಹಾಸದ ಉದ್ದಕ್ಕೂ ಅನುಕೂಲ ಮತ್ತು ಪ್ರತಿಕೂಲ ಕಾಲಮಾನದಲ್ಲಿಯೂ ಬ್ರಾಹ್ಮಣವಾದಿಗಳು ನಿರಂತರವಾಗಿ ಕೆನೆ ಪದರವನ್ನು ತಿನ್ನುತ್ತಲೇ ಸಾಗಿದ್ದಾರೆ. ಇದು ಏನನ್ನು ಪ್ರತಿಪಾದಿಸುತ್ತದೆ ಎಂದರೆ ಈ ಬ್ರಾಹ್ಮಣವಾದಿಗಳು ಎಲ್ಲೆಲ್ಲಿ ತಮ್ಮ ಕಪಿಮುಷ್ಠಿಯನ್ನು ಚಾಚುತ್ತಾರೋ ಅಲ್ಲೆಲ್ಲ ಶೋಷಿತ ವರ್ಗದವರು ಮತ್ತೂ ಶೋಷಣೆಗೆ ಒಳಗಾಗುತ್ತಾರೆ ಎಂಬುದನ್ನು ದೃಢವಾಗಿ ಸಾರಿ ಹೇಳುತ್ತದೆ. ಇದು ಇಂದು ನೆನ್ನೆಯ ಶಾಪವಲ್ಲ. ಬುದ್ಧನ ಕಾಲದಿಂದಲೂ ಈ ಕ್ಷಣದ ತನಕವೂ ಬಹುಜನರ ಪಾಲಿಗೆ ಸತ್ಯವಾಗಿದೆ.

ಈ ಕಟ್ಟು ಸತ್ಯಗಳನ್ನು ಅರಿತ ಫಲವಾಗಿಯೇ ಅಯಾ ಕಾಲದ ಮಹಾತ್ಮರಾದ ಬುದ್ಧ, ಬಸವಣ್ಣ, ಗಾಂಧೀಜಿ, ಅಂಬೇಡ್ಕರ್, ಲೋಹಿಯಾ ಮುಂತಾದವರು ಈ ಬ್ರಾಹ್ಮಣವಾದಿಗಳಲ್ಲಿ ವಿನಂತಿಸಿಕೊಂಡದ್ದು ಒಂದೇ ಒಂದು ಅಂಶವನ್ನು ಮಾತ್ರ ಅದೆಂದರೆ; ನೀವುಗಳು ಪರಿವರ್ತರಾಗಿ ಎಂಬುದಷ್ಟೇ! ಆದರೆ ಅವರು ಎಂದಾದರೂ ಪರಿವರ್ತರಾದರೇ ...?! □

ಕಥೆ

○ ಡಾ. ಎಚ್. ಟಿ. ಪೋತೆ

ಚಮ್ಮಾವುಗೆ



ವಿಶಾಲವಾದ ಹಳೆಮನೆ, ಬೆಳಗಿನ ಹೊತ್ತು ಚಲುವಜ್ಜ ಪಡಸಾಲಿ ಕಟ್ಟಿಯ ಮ್ಯಾಲ ಕುಂತು ಬಂದೂಕಿನ ಲಳಿಯನ್ನು ತಿಕ್ಕಿ ತಿಕ್ಕಿ ಹಸನುಗೊಳಿಸುತ್ತಿದ್ದ. ಬಂದೂಕು ಕೆಂಪು ಮೋತಿಯವರ ಕಾಲದ್ದು. ಆಸ್ತಿವಂತನಾಗಿದ್ದ ಚಲುವಜ್ಜ ಅದನ್ನು ಕಾಯ್ದುಕೊಳ್ಳಲು, ಜೀವ ಉಳಿಸಿಕೊಳ್ಳಲು ಜಿಲ್ಲಾ ಕಲೆಕ್ಟರರಿಂದ ಪಡೆದಿದ್ದ. ಅದರಿಂದಾಗಿ ಊರಲ್ಲಿ, ಬಂಧು ಬಳಗದಲ್ಲಿ ಚಲುವಜ್ಜನ ಗೌರವ ಹೆಚ್ಚಿತ್ತು. ಮನೆಯಲ್ಲಿ ವಿಶೇಷ ಪೂಜೆ, ಹಬ್ಬ ಹರಿದಿನ ಅದರಲ್ಲೂ ದೀಪಾವಳಿ, ಮಹಾನವಮಿ ಹಬ್ಬಗಳಂದು ಚಲುವಜ್ಜನ ಕೈಯಿಂದ ತಿಕ್ಕಿಸಿಕೊಂಡು ಫಳ ಫಳ ಹೊಳೆಯುತ್ತಿತ್ತು, ಪೂಜೆಗೂ ಪಾತ್ರವಾಗುತ್ತಿತ್ತು. ಈ ದಿನ ಅದು ಈ ಮೊದಲೆಂದೂ ಹೊಳೆಯದಷ್ಟು ಹೊಳಿತಿತ್ತು. ಚಲುವಜ್ಜನ ಮುಖದಲ್ಲಿ ಆ ಹೊಳೆವ ಮಿಂಚನ್ನೇ ನಾಚಿಸುವಂಥ ಉತ್ಸಾಹವಿತ್ತು. ಹುರುಪಿಗೇನು ಕಮ್ಮಿ ಇರಲಿಲ್ಲ. ಅದೇ ವ್ಯಾಳ್ಯಾಕ ಅಡುಗೆ ಮನೆಯಿಂದ ಹೊರಬಂದ ಅಂಬಜ್ಜಿ "ಹೊತ್ತ ಮುಣಗುದ್ರ ಭಜನಿ ಹಚ್ಚಬೇಕು, ಹಿರ್ಯಾರ ಹಬ್ಬಂದ್ರ ಸುಮ್ನೆ ಆಗ್ತದೇನ? ನೀ ಹೀಂಗ ಬಂದೂಕ ಲಳಿ ತಿಕ್ಕೋತ ಕುಂತ್ರ ಹೆಂಗ?" ಎಂದು ಸಿಡುಕಿದಳು. ಮಾತಿನ ಹೊಲಬ ಅರಿತ ಚಲುವಜ್ಜ, "ಏ ರಾಜು ಬಾ ಇಲ್ಲಿ" ಎಂದು ಆಳಮಗನ್ನ ಕರೆದ. ಆಳಮಗ ಬೇರೆಯವನೇನಾಗಿರಲಿಲ್ಲ. ಚಲುವಜ್ಜನ ತಂಗಿ ಮಗ ಓಡಿ ಬಂದು ಬಹಳ ಸಲುಗೆಯಿಂದ ನಿಂತುಕೊಂಡು "ಏನು ಮಾವಾ" ಎಂದ. "ನೋಡು ಮಾದಜ್ಜನ ಮನಿಗಿ ಹೋಗಿ ಮನೇಲಿ ರಾತ್ರಿ ಭಜನಿ ಇಟಗೊಂಡೈತಿ, ಅಕ್ಕ ಪಕ್ಕದ ಊರ ಮ್ಯಾಳಗಳು ಬರ್ತಾವ. ನೀನೂ ಮ್ಯಾಳ ತಗೊಂಡು ಬರಬೇಕಂತ ಹೇಳು. ಹೋಗು ಅವಸ್ರವಸ್ರ ಹೋಗಿ ಬಂದ ಬಿಡು" ಎಂದ. "ಐತ ಮಾವ್" ಎಂದು ರಾಜು ಭರ ಭರನೆ ಕೈ ಬೀಸುತ್ತಾ ಹೊಂಟ. ಚಲುವಜ್ಜ ಬಂದೂಕನ್ನು ಪಡಸಲಗ್ಯಾನ ಗುಟಕ್ಕ ಸಿಗಿಸತ್ತಿದ್ದ, ಅದ ವೇಳ್ಯಾಕ ಅಲ್ಲಿಗಿ ಬಂದ ಅಂಬಜ್ಜಿ "ಅಲ್ಲ! ಮಾದಪಣ್ಣ ನಿನ್ನ ವಾರಗ್ಯಾಂವ ಅದಾನ, ನೀನ ಹೋಗಿ ಕರ್ದರ ಏನಾಗತ್ತಿತ್ತು" ಅಂದಳು. "ಅಂವ ನನ್ನ ಮಾತ ಮೀರಾಂಗಿಲ್ಲೇಳು. ರಾಜಾ ಹೋಗಿ ಕರಿತಾನ. ಬರ್ತಾನೇಳು" ಎನ್ನುತ್ತಾ ಚಲುವಜ್ಜ ಹೆಂಡತಿಯ ಮುಖ ನೋಡಿದ, ಅಂಬಜ್ಜಿ "ಇದೇ ಐತು" ಎಂದು ಗೊಣಗಿಕೊಳ್ಳುತ್ತ ಕೆಲಸದಲ್ಲಿ ಮುಣುಗಿದಳು.

ಚಲುವಜ್ಜ, ಮಾದಜ್ಜ ಅಂದರ ಹೊಂಗೇನ ಹಳ್ಳಿಯ ಎರಡೂ ಕೇರಿಯ ಕಣ್ಣಗಳಿದ್ದಾಂಗಿದ್ರು, ಮಾದಜ್ಜನದು ಮ್ಯಾಲಿನಕೇರಿ, ಚಲುವಜ್ಜನದು ಕೆಳಗಿನ ಕೇರಿ. ಚಲುವಜ್ಜನ ಕೇರ್ಯಾಗ ನಾಲ್ಕಾರೆ ಮನಿಗಳು, ಮಾದಜ್ಜನ ಕೇರಿ ಅಂದ್ರ ಒಂದರ್ಧ ಊರಿದ್ದಾಂಗಿತ್ತು. ಇಬ್ರು ಬಾಲ್ಯದ ಗೆಳ್ಯಾರು, ಚಲುವಜ್ಜನ ತಂದೆ ಬಹಳ ಕಕ್ಕಲಾತಿಯಂವ, ಇದ್ದೊಂದೀಟು ಜಮೀನನಲ್ಲೇ ಭಾವಿ ಹೊಡೆದು ನೀರ ಮಾಡಿದ್ದ. ಆಟು ಈಟು ಹಸರ ಬೆಳಿ ಕಾಣುವಂಗ ಮಾಡಿ ಕೈಲಾಸ ಸೇರಿದ್ದ. ಚಲುವಜ್ಜ ಅದನ್ನು ಇನ್ನೊಂದೀಟು ಹೆಚ್ಚಿಸಿದ್ದ. ಆದರ ಮಾದಜ್ಜನ ತಂದಿ ಏನು ಮಾಡಿರಲಿಲ್ಲ. ತಾತ ಮುತ್ತಾತರಿಂದ ಬಳುವಳಿಯಾಗಿ ಬಂದಿದ್ದ ಚಪ್ಲಿ ಹೊಲಿವ ಉದ್ದೇಗ ನಂಬಿಕೊಂಡು ಮಾದಜ್ಜ ಜೀವ್ನ ಸಾಗಿಸ್ತಿದ್ದ. ಮಾದಜ್ಜನ ಹೊಟ್ಟೇಲೆ ಒಬ್ಬಳೆ ಹೆಣ್ಣು ಮಗಳು, ಗಂಡು ಮಕ್ಕಳಿರಲಿಲ್ಲ. ಮದುವಿ ಆದ ಹೊಸದರಲ್ಲಿ ಒಂದು ಗಂಡು ಮಗುವಿಗೆ ಜನ್ಮ ನೀಡಿ, ಗಂಡಾ ಹೆಣ್ತಿ ಇಬ್ರು ಕೆಲಸಕ್ಕೆ ಹೋದಾಗ ಅಕಾಲಿಕ ಗಾರಿನ ಮಳಿಗಿ ಸಿಕ್ಕು ಸಿಡ್ಲ ಬಡದು ಸತ್ತಿದ್ರು. ಅದರ ನೋವಿನಲ್ಲೆ ಮಾದಜ್ಜ ಕುಡ್ಯಾದ ಹೆಚ್ಚ ಮಾಡಿದ್ದ. ಇದರಿಂದ ಮನಿ

ಪರಿಸ್ಥಿತಿ ಛಂದಿರಲಿಲ್ಲ, ಆದರೂ ಮೊಮ್ಮಗನ ವಿದ್ಯಾಭ್ಯಾಸದ ಕನಸ ಕಂಡಿದ್ದ. ಚಲುವಜ್ಜ ತಂದೆಗೆ ಒಬ್ಬನೇ ಮಗನಾಗಿದ್ದರೂ, ಹೊಟ್ಟೀಲೆ ಹುಟ್ಟಿದ ಎಲ್ಲ ಮಕ್ಕಳು, ಆಟು ಇಟು ಓದಿದ್ರು, ಒಬ್ಬಂತೂ ಭಾಳ ಓದಿ ಹೊರಗಿನ ದೇಶಕ್ಕ ಹೋಗಿದ್ದ. ಇನ್ನೇನ ಆತ ಈಟರಲ್ಲೇ ಬರೋದರಲ್ಲಿದ್ದ. ದಕ್ಕಂತ ಮನ್ಯಾಗ ಹಿರ್ಯಾರ ಹಬ್ಬ ಇಟಗೊಂಡಿದ್ದ.

ಬೀಗರು, ಅಣತಮ್ರು ಬಂದಿದ್ರು, ಕಟಗಿ ಒಡಿಯೋರು, ಬ್ಯಾಟಿ ಮಾಡೋರು, ಹ್ವಾಳೆ ಆಗಿ ಕೆಲಸಾ ಮಾಡಾಕ ಹತ್ತಿದ್ರು, ಚಲುವಜ್ಜ ಆ ಸಂಭ್ರಮ ಸವಿತಾ ಕೂತಿದ್ದ. ಮುಖದಲ್ಲಿ ಏನೋ ಸಾಧಿಸಿದ ಕಳೆ ಎದ್ದು ಕಾಣುತ್ತಿತ್ತು. "ಹೊಲ ಮನಿಯ ಪರವಾ ಇಡಲಾರದೆ ಸಾಲ ಸೂಲ ಮಾಡಿ ಮಗನ್ ಓದಿಸಿ ಕೀರ್ತಿ ಏಳ ಸಮುದ್ರ ದಾಟಿ ಹೋಗುವಂಗ ಮಾಡ್ಯಾನ ನೋಡ್ರಪಾ" ಎಂದು ಬಂದವರಲ್ಲಿ ಅನೇಕರು ಮಾತಾಡತಿದ್ರು, ಚಲುವಜ್ಜ ಅದನ್ನು ಕೇಳಿಯೂ ಕೇಳಿಸಿಕೊಳ್ದಂಗ ಎಲ್ಲಾನೂ ನಿಭಾಯಿಸ್ತಾ ಮನಸ್ಸಿನಾಗೇ ಬೀಗ್ತಾ ಕುಂತಿದ್ದ. ಮನೆತುಂಬಾ ನಗು ಓಡಾಡಿಕೊಂಡಿತ್ತು. ಅಂಬಜ್ಜಿ ಹಿರಿ ಮಗನಿಗಿ ಕರದು "ಕೇರ್ಯಾಗಿನವರಿಗೆಲ್ಲ ಹೇಳ್ಯಾರಿಲ್ಲ ನೋಡೆಪಾ, ಖೇರಬಾಕಾಕಾ, ಚಂದ್ರಶ್ಯಾ, ಈರಪ್ಪಗೋಳು, ತಳಕೇರಿ ಮ್ಯಾಗಿನಕೇರಿಯವರು" ಅನ್ನುವಾಗ ಸಣ್ಣಮಗ ಬಂದು "ಈಗ ಹೇಳಿಬಂದಿನೇಳವ್ವ" ಎಂದು ಜೋರಾಗಿ ಹೇಳಿದ. ಸಣ್ಣ ಮಗನ ಮಾತಿನಲ್ಲಿ ಸಿಡುಕುತನ ಇದ್ದದ್ದು ಕಂಡು "ಹೇಳಿದ್ರ ಆಯ್ತು ಬಿಡತ್ತ" ಎಂದು ಅಂಬಜ್ಜಿ ಸಿಡಿಮಿಡಿಗೊಂಡು ಅಡಿಗಿ ಮನಿಕಡೆ ನಡದಳು. ಚಲುವಜ್ಜ ಮಗನ ವರಸೆ ನೋಡಿ ಕಣ್ಣು ಕಿಸಿದ. ಮಗ ಮಾರಿ ಸಣ್ಣ ಮಾಡಕೊಂಡು ಹೊಂಟ.

ಇತ್ತ ಮಾದಜ್ಜ ತನ್ನ ಮನೆಯ ಮೂಲೆಯಲ್ಲಿ ಕುಂತುಗೊಂಡು ನಿತ್ಯದ ಕಾಯಕದ ಸಾಮಾನುಗಳನ್ನು ಸಜ್ಜುಗೊಳಿಸ್ತಿದ್ದ. ಇನ್ನೇನು ಒಂದೀಟು ಕೂಳು ಹೊಟ್ಟಿಗಿ ಹಾಕ್ಕೊಂಡು ಹೋಗಬೇಕು ಅನ್ನುವಷ್ಟರಲ್ಲಿ ಚಲುವಜ್ಜನ ಆಳು ರಾಜು "ಮಾದಜ್ಜ! ಮಾದಜ್ಜ! ನಾಯಿ ಹಿಡಿರಿ ಕಡದಗಿಡದೀತು" ಎಂದು ಗಾಬರಿಯಿಂದ ಒದರಿದ್ದು ಕೇಳಿಸ್ತು "ಯಾರದು ನೋಡೋ ತಮಾ! ನಾಯಿ ಬೊಗಳಾಕಹತ್ಯೆತಿ ಹಿಡಿಯೋ" ಎಂದು ಮೊಮ್ಮಗನಿಗೆ ಮಾದಜ್ಜ ಕೂಗಿ ಹೇಳಿದ. ಮಾತು ಕೇಳಿ ಓಡಿ ಬಂದ ಹುಡುಗ "ಹಳಿ ಹಳಿ" ಎಂದು ಬೆದರಿಸಿ ನಾಯಿ ಹಿಡಿದ. "ಮಾದಜ್ಜ! ಪಾರನ ಸಾಲಿ ಇಲ್ಲೇನು? ಯಾವಾಗ ಬಂದಾನ" ಎಂದು ರಾಜು ಅಂಗಳದಾಗ ಬರಕೋತ ಕೇಳಿದ. "ಸೂಟಿ ಐತಿ ಅದಕ ಬಂದಾನ' ಅಂತ ಹೇಳ್ತಾ "ಕುಂದ್ರಪ್ಪ ಕುಂದ್ರು, ನಿನ್ನ ಮಾಲಕ ಏನ ಸುದ್ದಿ ಹೇಳಿ ಕಳಸ್ಯಾನ" ಅನ್ನೊಷ್ಟರೊಳಗ ಯಾರೋ ಒಳಗೆ ಕೆಮ್ಮಿದಂಗ ಕೇಳಿಸ್ತು. "ಮಾದಜ್ಜ ಅಜ್ಜಿ ಎಲ್ಲಿ? ಗಂಡಸ್ರು, ಕೆಮ್ಮಿದಂಗ ಕೇಳಿಸ್ತದ' ಎಂದ. "ಅದಪಾ ನಿಮ್ಮಜ್ಜಿ ಸ್ವಾದರಳ್ಯಾ ಬಂದಾನ" ಅನ್ನುವಷ್ಟರಲ್ಲಿ "ಭಾಳ ಚಂದಾತೇಳು", ಎಂದು ರಾಜು ಹೇಳ್ದಾಗ "ಯಾಕಪ್ಪಾ" ಎಂದು ಆಶ್ಚರ್ಯದಿಂದ ಮಾದಜ್ಜ ಕೇಳ್ದ. "ಮನ್ಯಾಗ ಹಿರ್ಯಾರ ಹಬ್ಬ ಇಟ್ಟಗೊಂಡಾರ, ಬೇನೂರ, ಚೌಡ್ಯಾಳ ಭಜನಾ ಮ್ಯಾಳ ಬರ್ತಾವ, ಅದಕ ನೀನು ಭಜನಿ ಮ್ಯಾಳ ತಗೊಂಡು ಬರಬೇಕಂತ ಮಾಮಾ ಹೇಳ್ಯಾನ" ರಾಜುನ ಮಾತು ಕೇಳಿದ ಮ್ಯಾಲ "ಮಾದಜ್ಜ ಅಂವ ದೊಡ್ಡಾಂವ ಆಗ್ಯಾನ, ಮಗಾ ಹೊರಗಿನ ದೇಶಕ್ಕ ಹೋಗ್ಯಾನ ಅವನ ಕರ್ಯಾಕ ಬಂದ್ರ ಸಣ್ಣಾಂವ ಆಗತಾನ ಅದಕ್ಕ ನಿನಗ ಕಳಿಶ್ಯಾನೇನಪ್ಪ" ಎಂದು ಸಿಟ್ಟು ಮಾಡಿದ. ಒಳಗಿಂದ ಹೊರಬಂದ ಗಂಗಜ್ಜಿ "ಅಯ್ಯ ನಿಂದ ಇದ ಆತು, ಒಕ್ಕಲುತನ ಮಾಡಕೋ ಅಂತ ಎತ್ತ ಕೊಟ್ರ ನೀ ಕಟಕರಗಿ ಮಾರಿದಾಂವ, ನೋಡು! ಚಲುವಣ್ಣ ನಿನ್ನ ವಾರಗ್ಯಾಂವ್ನ ಹೆಂಗ ಸಂಸಾರ ಮಾಡ್ಯಾನ, ನೀ ಹ್ಯಾಂಗ ಮಾಡೀದಿ" ಎಂದು ಸ್ವಾಟಿ ತಿರುವಿದಳು.

ಚಲುವಜ್ಜ ಮಾದಜ್ಜ ಇಬ್ರು ಬಾಲ್ಯದ ಗೆಳ್ಯಾರಾಗಿದ್ರೂ ಇತ್ತಿತ್ತಲಾಗಿ ಊರಾಗಿನ ಸಣ್ಣಪುಟ್ಟ ಜಾತಿ ರಾಜಕೀಯ ಕಾರಣಕ್ಕಾಗಿ, ಆ ಜಾತಿ ಈ ಜಾತಿ ಅಂತ ಬಿರಕ ಬಿಟ್ಟು ಮಾದಜ್ಜ ಚಲುವಜ್ಜನ ಗೆಳೆತನಕ ಒಂದೀಟು ಮಸಕ ಕವಿದಂಗಾಗಿತ್ತು. "ಎಟ್ಟೇ ಆದ್ರೂ ನೀವು ನೀವು ವಾರಿಗೆವ್ರು, ಬಿಡಾಕ ಹೆಂಗ ಬರ್ತದ, ರಾಜು ನೀ ಹೋಗೆಪ್ಪ ಬರ್ತಾರಂತ ಹೇಳು" ಎಂದು ಗಂಗಜ್ಜಿ ಒಂದೇ ಮಾತಿನಲ್ಲಿ ಗಂಡನ್ನ ಸಮಾಧಾನ ಪಡಿಸಿ ರಾಜುಗ ಸಾಗ ಹಾಕಲು ನೋಡಿದಳು. ರಾಜು ಎದ್ದು ಹೋಗುವಾಗ "ಏ ತಮ್ಮಾ ಒಂದೀಟು ಚಹ ಮಾಡಿವಿ. ಕುಡದು ಹೋಗೋ ನನ್ನ ಬುದ್ದಿಗೀಟು ಮಣ್ಣ ಹಾಕ್ಲಿ ಮನಿಗಿ ಬಂದವನಿಗಿ ಹಂಗ ಕಳಸಾಕತ್ತೀವಿ" ಎಂದು ತನ್ನ ಮರುವಿಗೆ ತಾನೇ ಬೈಕೊಂಡ್ಳು. "ಇಲ್ಲ ಗಂಗಜ್ಜಿ ಮನ್ಯಾಗ ದಗದಾ ಭಾಳ ಐತಿ" ಎಂದು ರಾಜು ಹೇಳಿದ್ರು ಗಂಗಜ್ಜಿ ಕೇಳಲಿಲ್ಲ. ಮಾದಜ್ಜ, ಗಂಗಜ್ಜಿ ಇಬ್ರು ಭಾಳ ಜೋರಿ ಮಾಡಿದ್ದಕ್ಕ ಹೊಳ್ಳಿ ಬಂದು ಅವರೊಂದಿಗೆ ಚಹ ಕುಡಿದು ಎದ್ದ ನಡದ. "ಏ ತಮಾ ನಾಯಿ ಹಿಡದಿ ಇಲ್ಲಪಾ! ಮತ್ತ ಮೈ ಮ್ಯಾಲ ಬಂದಗಿಂದೀತು" ಎಂದು ಹೇಳಿ ಹೊಂಟ. ಹಂಗ ನಾಯಿ ಬೊಗಳ್ತಾ ಇತ್ತು ಅದಕ್ಕ ಬೆದರಸ್ತಾ ಮಾದಜ್ಜ ಕೆಲಸಕ್ಕೆ ಹೊಂಟ ನಿಂತ. "ಹೋಗದ ಹೋಗ್ತಿ ಜಲ್ದಿ ಬಾ ! ಕುಡದ ಅಲ್ಲೇ ಎಲ್ಲರೇ ಬಿದ್ದಗಿದ್ದಿ, ಮಾನುಳ್ಳವರು ಕಾರಣಕ್ಕ ಹೇಳ್ಯಾರ, ಕಷ್ಟ ನಷ್ಟಕ್ಕಂತ ಬರ್ತಾರ" ಎಂದು ಗಂಗಜ್ಜಿ ಗಂಡಗ ಹೇಳಿದಳು, "ಆಯಿತಾಯಿತು ಬರ್ತೀನೇಳು" ಎಂದು

"ಏನ ಅತ್ತಿ ನಿಮ್ಮದು ಈ ಜಗಳಾ ಹೀಂಗ ಐತೆಲ್ಲ" ಎಂದು ಸ್ವಾದರಳಿಯ ಗಂಗಜ್ಜಿಗೆ ಕೇಳಿದ. ಅದೇನ ಕೇಳ್ತಿಯಪಾ ನಮ್ಮ ಈ ಜಗಳ ಸಾವುತನಕಾ ಇರೋದೆ, ಇದು ನಮ್ಮ ಜನ್ಮಕ ಹ್ಯಾಂಗ ಬಿಡ್ತದ" ಎಂದು ಖಿನ್ನಳಾಗಿ "ಅಯ್ಯ ಒಲಿಮ್ಯಾಲ ಬ್ಯಾಳಿ ಇಟ್ಟೇನಿ ಹೊತ್ತಿರ ಬೇಕಪ್ಪ" ಎಂದು ಅವಸರದಿಂದ ಅಡುಗೆ ಮನೆಕಡೆ ಧಾವಿಸಿದಳು. ಹೋಗ್ತಾ ಹೋಗ್ತಾ ಮೊಮ್ಮಗನ್ನ ಕರದು "ಏ ಪಾರಾ ನೀನು ನಿಮ್ಮ ಕಾಕಾ ಸೇರಿ ಹೊಲಕ್ಕ ಹೋಗಿ ಎಮ್ಮಿಗಿ ಒಂದೀಟು ಮೇವ ತಗೊಂಡ ಬರ್ರೆಪ" ಎಂದು ಹೇಳಿದಳು. "ಹೂಂ" ಎಂದು ಕಣಕಿ ಕಟ್ಟಕೊಂಡು ಬರಲಾಕ ಹಗ್ಗ ಬೇಕಂತ ಮೊಮ್ಮಗ ಹಗ್ಗ ಹುಡುಕ್ಲಿಕ್ ಹತ್ತಿದ. ಸಿಗದಿದ್ದಕ್ಕ "ಅಜ್ಜ ಇಲ್ಲಿ ಹಳಗಿನ ಹಗ್ಗ ಇತ್ತಲ್ಲ, ಅದೆಲ್ಲದ ನೀ ನೋಡಿಯೇನ?" ಎಂದಾಗ "ಅಲ್ಲೇ ಛಪ್ಪರ ಮ್ಯಾಲಾದೇನ ನೋಡು", ಅನ್ನುವಷ್ಟರಲ್ಲಿ, "ಸಿಕ್ತು" ಎಂದು ಹೇಳಿ ತಗೊಂಡು ಹೊಂಟಿದ್ರು "ಬಣವ್ಯಾಗ ಹುಳಾ ಹುಬುಟಿ ಇರತಾವ ಜರಾ ಹುಶಾರಿಯಿಂದ ತಗೊಂಡು ಬರ್ರಿ" ಎಂದು ಹೇಳಿದಳು ಗಂಗಜ್ಜಿ.

ಗೋಣ ಹಾಕ್ತಾ ಹೊಂಟ ಹೋದ.

"ಏನ ಅತ್ತಿ ನಿಮ್ಮದು ಈ ಜಗಳಾ ಹೀಂಗ ಐತೆಲ್ಲ" ಎಂದು ಸ್ವಾದರಳಿಯ ಗಂಗಜ್ಜಿಗೆ ಕೇಳಿದ. ಅದೇನ ಕೇಳ್ತಿಯಪಾ ನಮ್ಮ ಈ ಜಗಳ ಸಾವುತನಕಾ ಇರೋದೆ, ಇದು ನಮ್ಮ ಜನ್ಮಕ ಹ್ಯಾಂಗ ಬಿಡ್ತದ" ಎಂದು ಖಿನ್ನಳಾಗಿ "ಅಯ್ಯ ಒಲಿಮ್ಯಾಲ ಬ್ಯಾಳಿ ಇಟ್ಟೇನಿ ಹೊತ್ತಿರ ಬೇಕಪ್ಪ" ಎಂದು ಅವಸರದಿಂದ ಅಡುಗೆ ಮನೆಕಡೆ ಧಾವಿಸಿದಳು. ಹೋಗ್ತಾ ಹೋಗ್ತಾ ಮೊಮ್ಮಗನ್ನ ಕರದು "ಏ ಪಾರಾ ನೀನು ನಿಮ್ಮ ಕಾಕಾ ಸೇರಿ ಹೊಲಕ್ಕ ಹೋಗಿ ಎಮ್ಮಿಗಿ ಒಂದೀಟು ಮೇವ ತಗೊಂಡ ಬರ್ರೆಪ" ಎಂದು ಹೇಳಿದಳು. "ಹೂಂ" ಎಂದು ಕಣಕಿ ಕಟ್ಟಕೊಂಡು ಬರಲಾಕ ಹಗ್ಗ ಬೇಕಂತ ಮೊಮ್ಮಗ ಹಗ್ಗ ಹುಡುಕ್ಲಿಕ್ ಹತ್ತಿದ. ಸಿಗದಿದ್ದಕ್ಕ "ಅಜ್ಜ ಇಲ್ಲಿ ಹಳಗಿನ ಹಗ್ಗ ಇತ್ತಲ್ಲ, ಅದೆಲ್ಲದ ನೀ ನೋಡಿಯೇನ?" ಎಂದಾಗ "ಅಲ್ಲೇ ಛಪ್ಪರ ಮ್ಯಾಲಾದೇನ ನೋಡು", ಅನ್ನುವಷ್ಟರಲ್ಲಿ, "ಸಿಕ್ತು" ಎಂದು ಹೇಳಿ ತಗೊಂಡು ಹೊಂಟಿದ್ರು "ಬಣವ್ಯಾಗ ಹುಳಾ ಹುಬುಟಿ ಇರತಾವ ಜರಾ ಹುಶಾರಿಯಿಂದ ತಗೊಂಡು ಬರ್ರಿ" ಎಂದು ಹೇಳಿದಳು ಗಂಗಜ್ಜಿ. "ಐತೇಳು" ಎಂದು ಹೇಳಿ ಮುಂದೆ ಸಾಗಿದರ.

ಊರ ದಾಟಿ ಹೊಲದ ದಾರಿ ಹಿಡಿದು ಮಾತ ಹೇಳಕೋತ ಹೊಂಟಿದ್ರು "ಎನಪ್ಪ ನೀ ಏಟನೆತಿ ಓದಾಕತ್ತಿ ತಮಾ" ಎಂದಾಗ "ಎಂಟನೆತ್ತಿ ಕಾಕಾ" "ಅಂದ್ರ ಮ್ಯಾಟ್ರಿಕ್ ಆಗಬೇಕಾದ್ರ ಇನಾ ಏಟ ವರ್ಷ ಬೇಕಪ್ಪಾ !" "ಇನ್ನಾ ಎರಡು ವರ್ಷ". "ಅಂದ್ರ, ಅದೇ ತಮಾ ಚಲುವಜ್ಜನ ಮಗಾ ಏನ ಓದ್ಯಾನ!" ಅಂದಾಗ ಏನ ಕಾಕಾ ನೀ ಹಿಂಗ ಕೇಳಾಕತ್ತಿ, ನಮ್ಮ ಸುತ್ತ ಮುತ್ತ ಹಳ್ಳ್ಯಾಗ್ಯಾಕ ಜಿಲ್ಲಾದಾಗ ಯಾರು ಓದಿಲ್ಲ. ಪುಸ್ತಕಾನು ಬರದಾರ ಕಾಕಾ! ದೊಡ್ಡ ಸಾಹೇಬ್ರ ಅದಾರ. ನಿನಗ ಗೊತ್ತಿಲೇನ, ಅವರೀಗ ಹೊರಗಿನ ದೇಶಕ್ಕ ಹೋಗ್ಯಾರ ಫಾರೆನ್! ಫಾರೆನ್!", "ಫಾರೆನ್! ಅಂದ್ರೇನಪ" "ಏಳ ಸಮುದ್ರ ದಾಟಿ ದೂರದ ದೇಶಕ್ಕ ಹೋಗ್ಯಾರ, ಅವ್ರು ಇನ್ನೇನ ಬರವ್ರ ಅದಾರ. ಅದಕ್ಕ ಚಲುವಜ್ಜ ಹಿರ್ಯಾರ ಮಣ್ಯಾ ಅಂತ ಹಬ್ಬದೂಟ ಹಾಕಾಕತ್ಯಾನ. ಭಜನಿ ಹೇಳ್ಯಾರ! ಇವತ್ತ ನಾವೂ ಭಜನಿ ಕೇಳಾಕ ಹೋಗಾನು ಕಾಕಾ" ಎಂದ. "ಹೌದಪ್ಪ ನಾನೂ ಬರ್ತಿನಿ ನಿಮ್ಮಜ್ಜನ ಹಾಡ ಕೇಳಬೇಕಪಾ" ಅಂದಾಗ, "ನಮ್ಮ ತಾತಾ ಏನ ಹಾಡತಾನ ಕಾಕಾ, ಚಲುವಜ್ಜ ಹಾಡತಾನ ಕೇಳಬೇಕ. ಚಲುವಜ್ಜ ಮಾತಾಡದ್ರ ಮುತ್ತ ಉದರದಂಗ. ಅವನ ಹಾಡ ಕೇಳ್ದರ ಕೋಗಿಲೆ ನಾಚಬೇಕು, ಅಟ್ಟ ಅಲ್ಲ ಅವನ ಹಾಡ ಕೇಳಿದ್ರ ಕುದುರಿ ಕುಣಿತೈತಿ ಹಂಗ ಹಾಡತಾನ" ಹೌದಾ! ಎಂದು ಆಶ್ಚರ್ಯದಿಂದ ಮೂಗಿನ ಮ್ಯಾಗ ಬೆರಳ ಇಟಗೊಂಡ. "ತಮಾ ನೀನು ಚಲುವಜ್ಜನ ಮಗನಂಗಾಗಬೇಕಾದರ ಏಟ ವರ್ಷ ಓದ ಬೇಕು" ಅಂದಾಗ "ಏನ ಕಾಕಾ! ನನ್ನ್ಯಾರ ಓದಸ್ತಾರ ತಾಯಿ ತಂದಿ ಇಲ್ಲದ ಮಗಾ ನಾನು ಅಜ್ಜ ದುಡದದ್ದು ಹೊಟ್ಟಿಗಿ ಸಾಲಾಂಗಿಲ್ಲ ಎಂದು ಮೊಮ್ಮಗ ಹೇಳಿದ. "ಏನ ತಮಾ ನಿನ್ಯಾಕ ಹಿಂಗ ಹೇಳ್ತಿ ನಾ

ಅಳ್ಯಾ, ಮೊಮ್ಮಗ ಕಣಕಿ ತರಲಾಕ ಇಬ್ರು ಹ್ವಾದವರು ಇನ್ನು ಬರಲಿಲ್ಲ ಅವ್ರು ಬಂದ ಮ್ಯಾಲ ಉಂಡ್ರಾತು ಅಂತ್ಹೇಳಿ ಗಂಗಜ್ಜಿ ಅಡಗಿ ಮಾಡಕೊಂಡು ದನಗೋಳ ಹೆಂಡಿಕಸ ಮಾಡಿ, ಮೈಮ್ಯಾಲ ಒಂದೀಟು ನೀರ ಹಾಕ್ಕೊಂಡು ಊಟ ಮಾಡ್ದೆ ಸ್ವಾದರಳ್ಯಾ ಮತ್ತು ಮೊಮ್ಮಗ ಇಬ್ರು ಬರೋದನ್ನೇ ನೋಡ್ತಾ ಕಾದು ಕುಳ್ತಿದ್ಳು. ಕಣಕಿ ಹೊರಿ ಹೊತಗೊಂಡು ಮನಿ ಅಂಗಳದಾಗ ಬರೋದ ನೋಡಿ ಬಂದ್ರೇಳು ಎಂದು ಮನಸ್ಸಿಗಿ ಸಮಾಧಾನ ಮಾಡಕೊಂಡು "ಮೇವ ಹಾಕಿ ಕೈ ಕಾಲ ಮುಖ ತೊಳಕೊಂಡು ಬರ್ರೆಪ ಉಣ್ಣಾಕ" ಎಂದು ಕರದ್ಳು. ಇಬ್ರು ಉಂಡ್ರು, "ನೀನು ಉಣ್ಣಜಿ" ಎಂದು ಮೊಮ್ಮಗ ಹೇಳಿದ. ಬಿಸಲ ಭಾಳ ಐತಿ ಒಂದೀಟು ಗಿಡದ ನೆಳ್ಳಿಗಿ ಅಡ್ಡಾಗರಿ. ಸಂಜಿಕ ಚಲುವಣ್ಣನ ಹೊಲಕ್ ಹೋಗಾಕತ್ತಿರಿ" ಎಂದಾಗ "ಆಯ್ತಜ್ಜಿ" ಎಂದು ನೆಳ್ಳಿಗೆ ಹೋಗಿ ಕಾಲ ಚಾಚಿದರು.

ಇದ್ದಿನೆಲ್ಲೋ ನನ್ನೆಲ್ಲ ಆಸ್ತಿ ಹೋದ್ರ ಚಿಂತಿ ಇಲ್ಲ. ನನಗರೆ ಯಾರದಾರ ಹೇಳು, ನೀನೂ ಚಲುವಜ್ಜನ ಮಗನಂಗಾಗಬೇಕು". "ಕಾಕಾ ನಿನ್ನಂಗ ಚಲುವಜ್ಜನೂ ಹೇಳ್ಯಾನ, ನಿನಗ ನನ್ನ ಮಗನಿಗಿ ಹೇಳಿ ಓದಲಾಕ ಅನುಕೂಲ ಮಾಡಿಸ್ತಿನಂದಾನ". ನೀ ಚಿಂತಿ ಮಾಡ ಬ್ಯಾಡ ತಮಾ ಏಟ ಓದತಿ ಓದು ನಾ ನಿನ್ನ ಬೆನ್ನೀಗಿರ್ತಿನಿ, ಅಂತ್ಹೇಳ್ಯಾನ ಕಾಕಾ! ಹಂಗ ಮಾತ ಹೇಳಕೋತ ನಿಂತ್ರ ಹೊತ್ತ ಹೋಗಿದ್ದ ತಿಳ್ಯಾಂಗಿಲ್ಲ ನಡಿ ಕಾಕಾ ಅಜ್ಜಿ ಹಾದಿ ನೋಡ್ತಿರತಾಳ, ಈ ಕಣಕಿ ಹೊರಿ ನನ್ನ ತಲಿಮ್ಯಾಲ ಹೊರ್ಸು" ಎಂದು ಹುಡುಗ ಹೇಳಿದ. "ಏ ತಮಾ ನೀ ಸಾಲಿ ಬರ್‍ಯಾಂವ ಕಣಕಿ ಹೊರದೇನಪ್ಪ ನಮ್ಮಂಥವರು ಹೊರತೀವಿ ಬಿಡು. ನಾ ಹೊತಗೋತಿನಿ ಹಿಡಿ ಎತ್ತು ಎತ್ತು ಹೌದು ಭಪ್ಪರೆ ಬಾಹದ್ದೂರ" ಎಂದು ತಲಿ ಮ್ಯಾಲ ಹೊತಗೊಂಡು ಮಾತಾಡಕೋತ ಹಾದಿಹಿಡದ್ರು.

ಅಳ್ಯಾ, ಮೊಮ್ಮಗ ಕಣಕಿ ತರಲಾಕ ಇಬ್ರು ಹ್ವಾದವರು ಇನ್ನು ಬರಲಿಲ್ಲ ಅವ್ರು ಬಂದ ಮ್ಯಾಲ ಉಂಡ್ರಾತು ಅಂತ್ಹೇಳಿ ಗಂಗಜ್ಜಿ ಅಡಗಿ ಮಾಡಕೊಂಡು ದನಗೋಳ ಹೆಂಡಿಕಸ ಮಾಡಿ, ಮೈಮ್ಯಾಲ ಒಂದೀಟು ನೀರ ಹಾಕ್ಕೊಂಡು ಊಟ ಮಾಡ್ದೆ ಸ್ವಾದರಳ್ಯಾ ಮತ್ತು ಮೊಮ್ಮಗ ಇಬ್ರು ಬರೋದನ್ನೇ ನೋಡ್ತಾ ಕಾದು ಕುಳ್ತಿದ್ಳು. ಕಣಕಿ ಹೊರಿ ಹೊತಗೊಂಡು ಮನಿ ಅಂಗಳದಾಗ ಬರೋದ ನೋಡಿ ಬಂದ್ರೇಳು ಎಂದು ಮನಸ್ಸಿಗಿ ಸಮಾಧಾನ ಮಾಡಕೊಂಡು "ಮೇವ ಹಾಕಿ ಕೈ ಕಾಲ ಮುಖ ತೊಳಕೊಂಡು ಬರ್ರೆಪ ಉಣ್ಣಾಕ" ಎಂದು ಕರದ್ಳು. ಇಬ್ರು ಉಂಡ್ರು, "ನೀನು ಉಣ್ಣಜಿ" ಎಂದು ಮೊಮ್ಮಗ ಹೇಳಿದ. ಬಿಸಲ ಭಾಳ ಐತಿ ಒಂದೀಟು ಗಿಡದ ನೆಳ್ಳಿಗಿ ಅಡ್ಡಾಗರಿ. ಸಂಜಿಕ ಚಲುವಣ್ಣನ ಹೊಲಕ್ ಹೋಗಾಕತ್ತಿರಿ" ಎಂದಾಗ "ಆಯ್ತಜ್ಜಿ" ಎಂದು ನೆಳ್ಳಿಗೆ ಹೋಗಿ ಕಾಲ ಚಾಚಿದರು. "ಚಲುವಜ್ಜ ಮತ್ತ ನಿಮ್ಮ ಮುತ್ಯಾ ಇಬ್ರು ಪದ ಹೇಳಲಿಕ್ಕ ನಿಂತ್ರಂದ್ರ ಬೆಳಗಾಗೋದೆ ಗೊತ್ತಾಗಂಗಿಲ್ಲ" ಅನ್ನುವ ಅಜ್ಜಿ ಮಾತ ನೆನಪಿಸಿಕೊಂಡು ಮಲಗಿ ನಿದ್ದಿಮಾಡಿ ಎದ್ದು ನೋಡಿದ್ರ ಹೊತ್ತ ಹೊಳ್ಳಿತ್ತು. "ಕಾಕಾ ಹೊತ್ತ ಹೊಳ್ಳ್ಯಾದ ಏಳು ತಡಾ ಆಗತೈತಿ ಎಂದು ಮೊಮ್ಮಗ ಎಬ್ಬಿಸಿದ'. 'ಐತಪಾ ನಡಿ ಮನಿಗಿ ಹೋಗಿ ಗಂಗಜ್ಜಿಗಿ ಹೇಳಿ ಹೋಗಾನು ನಡಿ ನಡಿ" ಎಂದು ಅವಸರ ಮಾಡಿನಡೆದರು.

ಚಲುವಜ್ಜನ ಅಂಗಳ ತುಂಬ ಜನರು ತುಂಬಿದ್ರು, ಮನೆ, ಅಂಗಳ ಮಾವಿನ ತೋರಣ, ತೆಂಗಿನ ಗರಿಯಿಂದ ಸಿಂಗಾರಗೊಂಡಿತ್ತು. ಅಂಗಳದಾಗ ಓಡ್ಯಾಡೋರಿಗೆ ಮಾವಿನ ತಳಿರು ತೋರಣಗಳು ಮುಖಕ್ಕ ತೆಲಿಗಿ ಬಡದು ಸ್ವಾಗತಿಸುತ್ತಿದ್ದವು. ಈ ಸಂಭ್ರಮಾಚರಣೆಯಲ್ಲಿ ಚಲುವಜ್ಜ ಯಾರಿಗೇನು ಕಡಿಮಿ ಬೀಳಬಾರ್ದು ಎಂದು ನಿಗಾ ವಹಿಸಿದ್ದ. ಅಜ್ಜ ಹಿಂಡ ಮಂದ್ಯಾಗ ಕುಂತಿದ್ದ. ನಾವು ಬಂದುದ್ದ ನೋಡಿ ಅಂಬಜ್ಜಿ ಒಳಗ ಕರದು ನನಗ ಕಾಕಾಗ ಊಣ್ಣಾಕ್ಕಿಟ್ಟಳು. ಉಂಡು ಸಬಾದಾಗ ಬಂದು ಕುಂತೇವು. ಭಜನಿ ಇನ್ನಾ ಸುರು ಆಗಿರಲಿಲ್ಲ. ಅಲ್ಲಲ್ಲಿ ಗುಂಪು ಗುಂಪಾಗಿ ಜನ ಕುಂತಿದ್ರು ಕೆಲವರು ಚಲುವಜ್ಜನ ಮಗನ ಬಗ್ಗೆ ಮಾತಾಡಕೊತಿದ್ರು. ಅದ ವೇಳ್ಯಾಕ ಚಲುವಜ್ಜ ಬಂದೂಕ ಹೆಗಲಿಗೆ ಹಾಕೊಂಡು ಹೊರಗ ಬಂದ. ಗುಂಡು ಹಾರಿಸಿ ಹಿರ್‍ಯಾರಿಗೆ ಗೌರವ ಸಲ್ಲಿಸುವುದು ಆ ಮನೆತನದ ವಾಡಿಕೆ. ಆ ರೀತಿ ತನ್ನ ಖುಷಿ ವ್ಯಕ್ತಪಡಿಸುವ ಪರಿಪಾಠ ಚಲುವಜ್ಜ ಹಿಂದಿನಿಂದಲೂ ಮಾಡಕೊಂಡು ಬಂದಿದ್ದ. ಎರಡು ಗುಂಡು ಹಾರಿಸಿ ಗೌರವಸಲ್ಲಿಸಿದಾದ ಮ್ಯಾಲ ಮಕ್ಕಳು ಮರಿ ಸೇರಿ ಪೂಜೆ ಸಲ್ಲಿಸಿದ್ರು. ಪೂಜೆ ಮಾಡಿದ ಮ್ಯಾಲ ಊಟ, ಊಟ ಮುಗಿದ ಮ್ಯಾಲ ಭಜನಿ, ಇದು ಪ್ರತಿ ವರ್ಷದ ಪದ್ಧತಿಯಂತೆ ನಡಿಯೋದು. ಬಂದೂಕ ಸದ್ದ ಕೇಳಿಕೊಂಡು ಗೂಡ್ನಲಿದ್ದ ಪಕ್ಷಿಗಳು ಎಚ್ಚರಗೊಂಡು ಚಲುವಜ್ಜನ ಮನೆಯಲ್ಲಿ ಏನೋ ಐತಿ ಎಂದು ಹಾರಿ ಹೋಗ್ದೆ ನಿದ್ದೆನೂ ಮಾಡದೆ ಸಂಭ್ರಮದಿಂದ ಪದ ಕೇಳಾಕ ತಯ್ಯಾರಾಗಿ ಕುಂತ್ವು, ಪಂಕ್ತಿವಾರ ಊಟ ಮುಗಿದ ಮೇಲೆ ಬೇರೆ ಬೇರೆ ಮ್ಯಾಳದವರು ಒಂದೊಂದು ಹಾಡ ಹಾಡಿದ್ರು, "ಚಲುವಜ್ಜ, ಮಾದಜ್ಜ ಇಬ್ಬರೂ ಒಂದು ಪದ ಹೇಳಬೇಕು" ಎಂದು ನೆರೆದವರು ಜೋರಮಾಡಿದ್ರು, "ಅಯ್ತಪಾ ಹಾಡ್ತೀವಿ ನಮಗೂ ವಯಸ್ಸಾತು ನಾವ ಏಟಂತ ಹಾಡೋದು" ಎಂದು ಹೇಳ್ತಾ ಒಂದು ಪದ ಹಾಡಿದರ, ಸುತ್ತ ಮುತ್ತ ಹೊಲದಾಗಿನೋರು, ಮಲಗಿದೋರು ಎದ್ದು ಬಂದು ಕೂತರು. ಅಡವಿ ಗಿಡಾದನ ಪ್ರಾಣಿ ಪಕ್ಷಿಗಳು ಆನಂದದಿಂದ ಆಲಿಸಿದವು.

ಎರಡನೇ ಹಾಡು ಹಾಡಬೇಕಾದರ, ಮಾದಜ್ಜ ಒಂದೀಟು ತೋಂಡಿದ್ದ ಹಿಂಗಾಗಿ ಅರ್ಧಾಕ ನಿದ್ದಿ ಹೋದ. ಚಲುವಜ್ಜ ಪದ ಮುಂದುವರಿಸಿದ. ಚಲುವಜ್ಜನ ಪದ ಕೇಳಕ್ಕಂದೇ ಮೋಡದ ಮುಸುಕಿಂದ ಚಂದ್ರ ಹೊರ ಬಂದಾನೇನು ಅನ್ನುವಂಗ ಹಾಲ ಚೆಲ್ಲಿದ ಬೆಳದಿಂಗಳು ಬಿದ್ದಿತು. ಕುಂತು ಕೇಳವ್ರಿಗೂ ಹಾಡವ್ವರಿಗೂ ಹಿತ ನೀಡಿತು. ಮೋಡಗಳು ಚಂದ್ರನಿಗೆ ಅಡ್ಡ ಬರದೆ ಸಹಕರಿಸಿದ್ವು, ಧಾವಂತದಲ್ಲಿರುವವರು ಕೂಡಾ ಒಂದೀಟು ನಿಂತ ಹಾಡ ಕೇಳಬೇಕು ಅನಿಸ್ತಿತ್ತು. ಗೆಳತನದ ಹಾಡೊಂದು ಹಾಡಿ ನಡುವ ಸೊಗಸಾದ ಒಂದು ಉಪ ಕಥೆ ಹೇಳಿದ. ಬಂದವರೆಲ್ಲರೂ ಚಲುವಜ್ಜನ ಹಾಡು, ಕಥಿ ಕೇಳಿ ಕೊಂಡಾಡಿದ್ರು, ಬೆಳಗಾತು, ಮಂಗಳಾರುತಿ ಮಾಡಿದ್ರು, ದೂರದ ಊರವರು ಹೊರಟನಿಂತ್ರು ಮ್ಯಾಳಿನವರಿಗೆ ಖುಷಿ ಕೊಟ್ಟು ಕಳಿಸಿದ್ರು, ಕೆಲವರು ಮನಿಕಡಿ ಹೋಗಬೇಕು ಅಂದ್ರು, ಮಾದಜ್ಜ ನಿದ್ದೆಯಿಂದ ಎದ್ದು ಮುಖ ತೊಕ್ಕೊಂಡು ಅಂಬಜ್ಜಿ ಮತ್ತು ಚಲುವಜ್ಜನಿಗೆ ಹೇಳಿ ಹೊಂಟನಿಂತ. ಜೊತೆಗೆ ಮೊಮ್ಮಗ ಅಳ್ಯಾ ಇಬ್ರು ಇದ್ರು, "ಮಾದಪಣ್ಣ ನಿಂದ್ರು ಜರ" ಅಂತ್ಹೇಳಿ ಒಳಗ ಹೋದ ಅಂಬಜ್ಜಿ ಹುಗ್ಗಿ ತುಂಬಿದ ಗಡಗಿ ತಂದು ಮೊಮ್ಮಗನ ತಲಿಮ್ಯಾಲ ಹೊರಸಿದಳು. ಹೊತ್ತಗೊಂಡು ಹುಡುಗ ಮುಂದ ಮುಂದ ನಡೆದ.

"ತಮಗೊಳ್ಯಾ ಇಂದು ಯಾಕ ಹಿಂಗ ಆಗಿದೇವು, ನಾ ಯಾಕ ಹೊಲ ಮನಿ ಮಾರಿ ಮಗ್ನಿಗೆ ಓದ್ಸದೆ, ಯಾಕಂದ್ರ ಜಾತಿ ಭಾಳ ಕೆಟ್ಟದ್ದು ನಮ್ಮ ನಮ್ಮಲ್ಲೇ ಆ ಕೇರಿ ಈ ಕೇರಿ ಅಂತ ಜಗಳಾ ಮಾಡಿಕೊಂಡು ಸುಮ್ ಸುಮ್ನ ಮಾರಿ ಖರ್‍ಗ ಮಾಡಕೊಂಡಿವಿ. ಹಾಳ ರಾಜಕೀಯ, ಈ ಸಮಾಜ ನಮ್ಮನ್ನು ಮುಂದ ಹೋಗಲಾಕ ಬಿಡಾಂಗಿಲ್ಲ. ಶಿಕ್ಷಣ ಕಲಿಯೋದ್ರಿಂದ ನಮ್ಮ ಮಕ್ಕಳು ಮುಂದ ಬರ್ತಾವ. ಅದರಿಂದ ಅರಿವು ಬರ್ತಾದ. ಅಣ್ಣ ತಮ್ಮರಂಗಿದ್ದ ನಮ್ಮನ್ನು ಮನಿ ಬ್ಯಾರಿ ಮಾಡಿದ್ದಲ್ದೆ, ಓಣಿ ಬ್ಯಾರಿ ಕೇರಿ ಬ್ಯಾರಿ ಮಾಡಿ ಮ್ಯಾಲಿನವರು ನಮ್ಮನ್ನು ಸುಖವಾಗಿ ಇರ್ಲಾಕ ಬಿಡಾಂಗಿಲ್ಲ, ಬಿಟ್ಟಿಲ್ಲ. ನಮ್ಮ ನಡುವ ಏನ ಒಡಕ ಹುಟ್ಟಿಶ್ಯಾರಲ್ಲ ಇದು ಇವತ್ತಿಂದೇನು? ಯಾವ ಕಾಲಕ್ಕೋ ಪುರಾಣ ಕಾಲದಿಂದ್ಲೂ ನಡಕೊಂಡು ಬಂದದ. ಅದ್ನೆಲ್ಲ ನಂಬಲಾರ್ದೆ ಕೂಡಿ ಬಾಳಬೇಕಾಗ್ಯಾದ ಅಂತ ಚಲುವಜ್ಜ ಹೇಳಿದ ಮಾತುಗಳನ್ನು ನೆನಪಿಸಿಕೊಳ್ಳತ್ತ ಮಾದಜ್ಜನ ಮೊಮ್ಮಗ, ಅಳಿಯ ಮನಿ ಸೇರಿದ್ರು, ಗಂಗಜ್ಜಿ ಮೊಮ್ಮಗನ ತಲಿಮ್ಯಾಲಿನ ಗಡಗಿ ಇಳಸಕೊಂಡು, "ಅಂಬಕ್ಕ ಕೊಟ್ಟಳೇನು" "ಹೌದಜ್ಜಿ" ಎಂದು ಮೊಮ್ಮಗ ಉತ್ತರಿಸಿದ.

"ಎಟ್ಟೇ ಆದ್ರು ನಿಮ್ಮದು ಅವರದು ಹಳಿ ಗೆಳತನ ನೋಡು, ನಡುವ ಯಾರ್‍ಯಾರೋ ಜಗಳ ಹಚ್ಚಿದ್ರು ಅಂಬಜ್ಜಿ ಮನಿಗಿ ಅಡಗಿಕೊಡೋದು ಮರತಿಲ್ಲ ಅತ್ತಿ" ಎಂದು ಅಳ್ಯಾ ಹೇಳಿದ. ಮಾತಿಗಿ ಹೌದೆಂದು ಹೇಳುತ್ತ ಇಲ್ಲಪ್ಪ ಅಂಬಕ್ಕ ಭಾಳ ಒಳ್ಳೆಯವಳಪ್ಪ ಎನ್ನುತ್ತ ಲವಲವಿಕೆಯಿಂದ ಮಾತಾಡಿ ನಡಿರಿ, ನಡಿರಿ, ನೀರಿನ ಗೊಡ್ಲಿಗಿ ಉರಿ ಹಚ್ಚೀನಿ ನೀರ ಕಾದಾವಿಲ್ಲ ನೋಡ್ರಿ! ನೋಡಿ ಮೈ ತೊಕ್ಕೊರಿ ನಿಮ್ಮ ಮುತ್ಯಾ ಎಲ್ಲಿಗಿ ಹೋದ ಎಂದು ಗಂಗಜ್ಜಿ ಕೇಳಿದ್ಳು, "ಹಳ್ಳಕ್ಕ ಹೋಗ್ಯಾನು, ತಂಬಿಗಿ ತಗೊಂಡು" ಅಂತ ಮೊಮ್ಮಗ ಹೇಳಿದ, ಇಡೀ ದಿನ ನಿದ್ದೆಯಲ್ಲಿ ಕಳದ್ರು, ರಾತ್ರಿ ಉಂಡು ಹಾಸಿಗಿ ಹಾಸಿದ್ರು ಗಂಗಜ್ಜಿ ಇನ್ನೇನು ಮಲಗಬೇಕು ಅಂತಿದ್ಳು ಅಷ್ಟೊತ್ತಿಗಿ "ಅಜ್ಜಾ! ಅಜ್ಜಾ!" ಎಂದು ಮೊಮ್ಮಗ ಕೂಗಿದ, "ಏನೋ ಅದು ಅಜ್ಜ ಅಜ್ಜ ಅಂತಿಯಲ್ಲ" "ಏನಿಲ್ಲ ಅಜ್ಜ ಚಲುವಜ್ಜ ರಾತ್ರಿ ಭಜನಾದಾಗ ಒಂದು ಕಥಿ ಹೇಳ್ಯಾನ ಅದು ನಿನಗ ಹೇಳ್ಲೇನ ಅಜ್ಜ ನನಗ ಅದರ ಅರ್ಥಾ ಆಗಿಲ್ಲ ಎಂದು ಮೊಮ್ಮಗ ಕೇಳಿದ". "ನೋಡು ನನಗ ನಿದ್ದಿ ಬಂದೈತಿ ನಿಮ್ಮಜ್ಜಗ ಹೇಳು" ಎಂದಾಗ ಮೊಮ್ಮಗ "ಅಜ್ಜಾ! ಅಜ್ಜಾ"! ಎಂದು ಜೋರಾಗಿ ಕೂಗಿದರು ಉತ್ತರ ಬರ್ಲಿಲ್ಲ. ಆಗ "ಚಲುವಜ್ಜ ರೊಕ್ಕಾ ಕೊಟ್ಟಿದ್ದ ಅದರಿಂದ ಕುಡುದು ಮಲಗ್ಯಾನ ಕಾಣಸ್ತದ" "ಹೌದಾ ಇದರದು ಇದೇ ಆತು ಏನು ಹೇಳ್ತಿ ಹೇಳು ಕೇಳತೀನಿ" ಎಂದಳು.

"ಪುರಾಣ ಕಾಲದಾಗ ಒಬ್ಬ ಡೋಂಬಿ ರಾಜ ಇದ್ನಂತ. ಆತ ದೊಡ್ಡ ಶ್ರೀಮಂತ", "ರಾಜ ಅಂದ್ರ ಸಾವುಕಾರ ಇರ್ತಾನೇಳು ಹೇಳು ಮುಂದಕ;" ಅಂದಾಗ ನಲ್ವತ ಹಳ್ಳಿಗಿ ಮಾಲಕ ಇದ್ನಂತ. ಕೂರಿಗಿಗಟ್ಲೆ ಹೊಲಗೋಳು, ಅರಮನ್ಯಾಗ ಒಂದು ಭಾರಿ ಗೂಳಿ ಇತ್ತಂತ. ಅಲ್ದೆ ಎಂಟೆತ್ತಿನ ಒಕ್ಕಲುತನ, ಬಿತ್ತಲಕ ಹೋಗಬೇಕಾದರ, ಅರಮನ್ಯಾಗ ಏನೇ ಒಳ್ಳೆ ಕೆಲಸ ಮಾಡಬೇಕಾದ್ರ ಗೂಳಿ ಪೂಜೆ ತಪ್ಪದೆ ನಡೀತಿತ್ತಂತ. ಹಿಂಗ ರಾಜಾನ ಕಾರಾಭಾರ ಸಾಗಿತ್ತಂತ, ವಯಸ್ಸಾದ್ದರಿಂದ ಡೋಂಬಿ ರಾಜಾ ತೀರಿಹೋದ ಮ್ಯಾಲ ಯುವರಾಜ ಗದ್ಗಿ ಏರಿದನಂತ, ಕಾಲ ಉರುಳಿತು. ತಂದೆಯಂತೆ ರಾಜ್ಯ ಭಾರ ಯುವರಾಜ ನಡೆಸಿಕೊಂಡು ಪತ್ತಹಳ್ಳಿದಾಗೆಲ್ಲಾ ಅಸ್ಥಾನದಲ್ಲೆಲ್ಲಾ ಹೆಸರ ಮಾಡಿದ. ಸುತ್ತೂರಲೆಲ್ಲ ಇವರದೇ ಸುದ್ದಿಯಂತ ಹೀಂಗ ಅವರ ಭೋಗ ಭಾಗ್ಯ ಮುಂಧವರದಿತ್ತು. ಒಂದು ದಿನಾ "ಮಾತಂಗ ವಂಶದಾಂವ ಒಬ್ಬ ಕೆಲಸಾ ಹುಡುಕ್ಕೊಂಡು ಅರಮನೆ ಪಕ್ಕದ ಕೂಗಳತೆ ದೂರದಲ್ಲಿ ಮರದ ಕೆಳಗೆ ಬಿಡಾರ ಹೂಡಿ ಚಪ್ಲಿ ಹೊಲ್ಯೋ ಕೆಲ್ಸ ಮಾಡ್ತಾ ಜೀವ್ನ ಸಾಗಸಲಿಕ್ಕ ಹತ್ತಿದ್ದ. ಅವನಿಗೊಬ್ಬಳು ಮಗಳಿದ್ಳು, ಆಕಿ ರೂಪವತಿ, ನೋಡ್ಲಕ್ ಚಲುವ ಚೆಲೋ ಮುದ್ದೆ ಆಗಿದ್ಳು, ದಿನಾ ಅರಮನೆ ಎದುರಿಗಿ ಹಾದು ನೀರ ತರಾಕ, ಒಗ್ಯಾಣ ಒಗಿಯಾಕ ಕಟಗಿ ಕುಳ್ಳ ತರ್ಲಾಕ ಹೋಗತ್ತಿದ್ಳು, ಡೋಂಬಿ ರಾಜ ಆಕಿ ಹೋಗಾದು ಬರಾದು ನೋಡಿ, ಮನ ಸೋತಿದ್ನಂತ. ಯಾರ ಇಕಿ ಇಟೊಂದು ಛಂದ ಅದಾಳ ಅಂದಕೊಂಡು ಅವಳನ್ನ ಪಡಿದೇ ತೀರಬೇಕು ಅಂತ್ಹೇಳಿ ಸೇವಕರಿಗೆ ಹಚ್ಚಿ ಕರಸ್ದ. ನಿನ್ನ ಹೆಸರೇನು! ನಿನ್ನ ಮ್ಯಾಲ ಮನಸ್ಸಾಗ್ಯೆತಿ. ನಿನ್ನ ವಿಚಾರ ಏನದ ಅಂತ ಕೇಳಿದ.

ಆಗ ಆ ಸುಂದರಿ ಏನೂ ಹೇಳ್ದೆ ಕೇಳ್ದೆ ಮೌನಾಗಿ ಮನಿಗಿ ಹೊಳ್ಳಿ ಬಂದಿದ್ಳು. ರಾಜನ ಕಾಟ ತಾಳಲಾರ್ದೆ, ಒಂದು ದಿನ ಮಾತಂಗ ಸುಂದರಿ "ಅಪಾ" ಮುತಾ! ಮತಾ! ನಾ ದಿನಾ ಹಳ್ಳಕ್ ನೀರಿಗಿ, ಕಟಗಿ ಕುಳ್ಳಿಗಿ ಹೋದಾಗ ರಾಜಾನ್ನ ಕಿರಿ ಕಿರಿ ಭಾಳ ಆಗ್ಯೆತಿ, "ಏನ ಕಿರಿಕಿರಿ" "ಏನಿಲ್ಲ ನನ್ನ ಮ್ಯಾಲ ಮನಸಾಗ್ಯೆತಿ ಅಂತ ಪೀಡ್ಸಾಕತ್ಯಾನ" "ಅದಕ್ಕ" ನೀ ಏನ್ ಹೇಳಿದಿ" "ನಮ್ಮಪ್ಪಗ ಕೇಳಿ ಹೇಳ್ತಿನಿ" ಅಂದೀನಿ, ಭಾಳ ಛಲೋ ಕೆಲ್ಸಾ ಮಾಡಿದಿ, ನಿನಗ ಇನ್ನೊಂದ ಸಾರಿ ಕರ್ದ ಕೇಳಿದ್ರ ನಾ ಕೇಳಿದ್ ಕೊಡತಿ ಏನ್ ಎಂದು ಕೇಳಿ ಬಾ ಎಂದು ಹೇಳಿದಾಗ "ಐತಪಾ" ಎಂದು ಮಲಗಿದಳು. ಮರುದಿನ ಮಾತಂಗ ಸುಂದರಿ ಯಥಾ ಪ್ರಕಾರ ನೀರಿಗಾಗಿ ಹಳ್ಳಕ್ ಹೊಂಟಿದ್ಳು, ಡೋಂಬಿ ರಾಜಾ ಮತ್ತ ಕರೆದು ಕೇಳಿದ. ಆಗ ಆ ಸುಂದರಿ "ನಾನು ಕೇಳಿದ್ ಕೋಡೋದಾದ್ರ ನಾ ನಿಮ್ಮವಳಾಗ್ತಿನಿ ಅಂದ್ಳು," ನೀ ಏನ್ ಕೇಳ್ತಿ ಕೇಳ್ ಅದನ್ನ ಕೊಡಾಕ ನಾ ಸಿದ್ದಿದ್ದೀನಿ. ಅದು ನಿನಗ ಏನ್ ಬೇಕ್ ಅನ್ನೋದು ವಿಚಾರ ಮಾಡಿ ನಿಮ್ಮಪ್ಪಗ ಕೇಳಿ ಹೇಳು ಎಂದು ಹೊಂಟ ಹೋದ. ಮಗಳು ನೀರ ತುಂಬಕೊಂಡು ಬರೋದನ್ನ ಅಪ್ಪ ಕಾಯ್ತಾ ಕುಂತಿದ್ದ. "ಏನು ಆತು ನೀ ಏನ್ ಕೇಳ್ದಿ". ರಾಜಾ ಅದಕ್ಕೆನೆಂದ ಎಂದು ಬಿಟ್ಟೂ ಬಿಡದೆ ಕೇಳಾಕ ಹತ್ತಿದ ಆಗ ಆಕಿ "ಏನಿಲ್ಲಪಾ ನೀ ಕೇಳಿದ್ ಕೊಡತೀನಿ. ನಿಮ್ಮಪ್ಪಗ ಕೇಳಕೊಂಡ ಬಾ ಅಂದಾನ".

"ಹಾಂಗಿದ್ರ ಮಗಳ! ನೀ ಏನೂ ಕೇಳಬ್ಯಾಡ ರಾಜ ಕುಂಡ್ರೋ ಗದ್ದಗಿ ಐತೆಲ್ಲ ಅದರ ಮ್ಯಾಲ ಹಾಕಿದ ಎತ್ತಿನ ತೊಗಲ ಕೊಡು ಅಂತ ಕೇಳಮ್ಮ" ಅಂದಾಗ ಹಂಗ ಮಾಡತಿನೇಳಪಾ ಎಂದು ತಲೆ ಹಾಕಿದಳು.

ರಾತ್ರಿ ಮಲಗೊ ಹೊತ್ತಿಗಿ "ಮಗಳು ಮಾತಂಗ ಸುಂದರಿ" ಅಪಾ! ಅಪಾ! ನಮಗೀಟ ಬಡತನ ಐತಿ ಕೂಲಿ ಮಾಡಿದ್ರೂ ಹೊಟ್ಟಿ ತುಂಬಲಾಕತ್ತಿಲ್ಲ ಅದಕ್ಕ ಬೆಳ್ಳಿ ಬಂಗಾರ ಸಂಪತ್ತು ಏನರೇ ಕೇಳಾದ ಬಿಟ್ಟು ಎತ್ತಿನ ತೊಗಲ ಕೇಳಿದಲ್ಲಪ ಯಾಕ? ಅವಾ ನಿನಗ ತಿಳ್ಯಾಂಗಿಲ್ಲೇಳು, ಸುಮ್ನ

ಆಗ ಆ ಸುಂದರಿ ಏನೂ ಹೇಳ್ದೆ ಕೇಳ್ದೆ ಮೌನಾಗಿ ಮನಿಗಿ ಹೊಳ್ಳಿ ಬಂದಿದ್ಳು. ರಾಜನ ಕಾಟ ತಾಳಲಾರ್ದೆ, ಒಂದು ದಿನ ಮಾತಂಗ ಸುಂದರಿ "ಅಪಾ" ಮುತಾ! ಮತಾ! ನಾ ದಿನಾ ಹಳ್ಳಕ್ ನೀರಿಗಿ, ಕಟಗಿ ಕುಳ್ಳಿಗಿ ಹೋದಾಗ ರಾಜಾನ್ನ ಕಿರಿ ಕಿರಿ ಭಾಳ ಆಗ್ಯೆತಿ, "ಏನ ಕಿರಿಕಿರಿ" "ಏನಿಲ್ಲ ನನ್ನ ಮ್ಯಾಲ ಮನಸಾಗ್ಯೆತಿ ಅಂತ ಪೀಡ್ಸಾಕತ್ಯಾನ" "ಅದಕ್ಕ" ನೀ ಏನ್ ಹೇಳಿದಿ" "ನಮ್ಮಪ್ಪಗ ಕೇಳಿ ಹೇಳ್ತಿನಿ" ಅಂದೀನಿ, ಭಾಳ ಛಲೋ ಕೆಲ್ಸಾ ಮಾಡಿದಿ, ನಿನಗ ಇನ್ನೊಂದ ಸಾರಿ ಕರ್ದ ಕೇಳಿದ್ರ ನಾ ಕೇಳಿದ್ ಕೊಡತಿ ಏನ್ ಎಂದು ಕೇಳಿ ಬಾ ಎಂದು ಹೇಳಿದಾಗ "ಐತಪಾ" ಎಂದು ಮಲಗಿದಳು. ಮರುದಿನ ಮಾತಂಗ ಸುಂದರಿ ಯಥಾ ಪ್ರಕಾರ ನೀರಿಗಾಗಿ ಹಳ್ಳಕ್ ಹೊಂಟಿದ್ಳು, ಡೋಂಬಿ ರಾಜಾ ಮತ್ತ ಕರೆದು ಕೇಳಿದ.

ಮಲಗು ಎಂದ. "ಅಲ್ಲಪಾ ಏನರ ಐತಿ ಹೇಳು" ಎಂದು ಹಟ ಹಿಡಿದಳು. ಆಗ ಅವರಪ್ಪ "ನಾನ್ ಭಾಳ ಸಣ್ಣಾಂವ ಇದ್ದೆ, ಸಣ್ಣಾಂವ ಅಂದ್ರ ನಾಲ್ಕೈದು ವರ್ಷದಾಂವ ಇರಬೇಕು, ಡೋಂಬಿರಾಜ ಅಂದ್ರ ಈ ರಾಜನ ಅಪ್ಪ ತನ್ನ ಅರಮನೆಯ ಗೂಳಿ ಮೆರವಣಿಗೆ ಮಾಡ್ಲಾಕತ್ತಿದ್ದ. ಬಾಜಾ ಬಜೆಂತ್ರಿ ಹಚ್ಚಿ ಊರಾಗ ಮೆರವಣಿಗಿ ನಡದಿತ್ತು, ಅಪ್ಪ ಗೂಳಿ ಮುಂದ ಹಲಗಿ ಭಾರಸತ್ತಿದ್ದ, ಗದ್ದಲದಾಗ ಗೂಳಿ ಬೆದರಿ ಜಿಗದು ನಮ್ಮಪ್ಪನ ಕಾಲ ಮ್ಯಾಲ ಜೋರಾಗಿ ತುಳಿದಿದ್ದಕ್ಕ ಅಪ್ಪನ ಕಾಲ ಮುರಿತು, ಆಗ ಸಿಟ್ಟಿಗೇರಿದ ಅಪ್ಪ "ಏ ಗೂಳಿ ನೀ ನನ್ನ ಕಾಲ ಮುರಿದಿಯಲ್ಲ, ನಿನ್ನ ಎದ್ಯಾಗ ನಾ ಉಳಿ ಹೊಡಿಲಿಲ್ಲಂದ್ರ ಮಾತಂಗ ವಂಶದವನೇ ಅಲ್ಲ ನೆನಪಿಟಗೋ ಎಂದು ಪ್ರತಿಜ್ಞ ಮಾಡಿದ್ದ". ಆಗ ಗೂಳಿ "ನಿನ್ನಿಂದ ಸಾಧ್ಯವಿಲ್ಲ ನಿನ್ನ ಕೈಯಲ್ಲಿ ನಾನು ಸಾಯೋದ. ಅದು ಸಾಧ್ಯವಿಲ್ಲದ ಮಾತು.

ಅದು ನಿನ್ನ ಕನಸು, ನಿನ್ನ ಕೈಯಾಗ ನನ್ನ ತೊಗಲಿನ ಸಣ್ಣ ಚೂರು ಸಿಗಾಂಗಿಲ್ಲ" ಎಂದು ಆ ಗೂಳಿ ಪ್ರತಿಜ್ಞೆ ಮಾಡಿತು. ಕಾಲ ಹಾಗೆ ಉರಳಿತು, ನೋವಿನಿಂದ ಅಪ್ಪ ಏಳಲ್ಲೇ ಇಲ್ಲ ಹಾಸಗಿ ಹಿಡದಾಂವ ಏಕಾಏಕಿ ಜೇರಾದ, ಸಾಯುಮುಂದ ನನ್ನ ಕರದು. "ಎತ್ತಿನ ಎದ್ಯಾಗ ಉಳಿ ಹೊಡಬೇಕು ಅಂತ, ನಾ ಗೂಳಿಗುಡಾ ವಾದ ಮಾಡಿನಿ ನೀ ಅದನ್ನ ಮರಿಲಾರ್ದೆ ನನ್ನಿಂದ ಆಗಲಾರದ್ದು ನೀ ಮಾಡಬೇಕು, ಮಾಡ್ಲಿಲ್ಲಂದ್ರ ನಾ ಸೋಲ ಕಂಡಂಗಾಗ್ತದ. ಅದಕ್ಕ ನೀ ಅದನ್ನ ಮಾಡ್ತೀನಿ ಅಂತ ಮಾತಕೊಡು" ಎಂದು ನನ್ನ ಕಡಿಯಿಂದ ವಚನ ತಗೊಂಡಾನ. ಅಪ್ಪ ಸತ್ತಮ್ಯಾಲ ನಮ್ಮವ್ವ ಇದ್ದ ಹೊಲಮನಿ ಮಾರಕೊಂಡ ನನ್ನ ಕರಕೊಂಡು ಬ್ಯಾರೇ ಊರಿಗೆ ಹೋದ್ಳು, ಅಲ್ಲಿ ಅವ್ವನೂ ತೀರಿಹೋದ್ಳು, ಮುಂದ ನಿಮ್ಮವ್ವನು ನನ್ನ ಸಾಥ ಕೊಡಲಿಲ್ಲ. ಗ ಇಲ್ಲಿಗಿ ಬಂದ್ವಿ, ನಾವ್ಯಾರು ಅನ್ನೋದು ಡೋಂಬಿರಾಜನಿಗಿ ಗೊತ್ತಿಲ್ಲ. ಅಪ್ಪನ ಜಿದ್ದ್ ಗೆಲ್ಲಸಬೇಕಾಗ್ಯಾದ ಅದಕ್ಕಾಗೇ ತೊಗಲ ಕೇಳಿನಿ, ತಿಳಿತಲ್ಲ". ಎಂದು ಹೇಳಿದ "ಐತೆಪ್ಪ! ನಾಳಿಗಿ ಹೋಗಿ ಕೇಳಿ ಇಸಕೊಂಡು ಬರ್ರಿನಿ" ಎಂದು ಹೇಳಿ ಮಲಗಿದಳು.

ಹೊತ್ತ ಹೊಂಟಿತು ರಾಜಾ ಆತುರದಲ್ಲಿದ್ದ ಯಾವಾಗ ಮಾತಂಗ ಸುಂದರಿಯನ್ನು ಕಾಣಬೇಕು. ಅವಳನ್ನು ಪಡಿಬೇಕು ಅಂತ ಕಾಯಿತ್ತಿದ್ದ. ಮಾತಂಗ ಸುಂದರಿ ರಾಜಾನ ಅರಮನಿಗೆ ಬಂದ್ಳು, ರಾಜಾ ಆಕಿಗಾಗೇ ಕಾಯ್ದು ಕುಂತಿದ್ದ, "ಬಾ ಸುಂದರಿ ನಿಮ್ಮಪ್ಪ ಏನ್ ಕೇಳ್ಯಾನ ನೀ ಏನ್ ಕೇಳಬೇಕಂತಿ ಕೇಳು" ಎಂದು ಒಂದೇ ಉಸಿರಿನಲ್ಲಿ ಹೇಳಿದ. ಆಗ ಆ ಸುಂದರಿ "ರಾಜಕುಮಾರ ನಾನು ನಿನ್ನವಳಾಗಬೇಕು ಅಂದ್ರ ನೀ ಕುಂತಿರುವ ರಾಜ ಗದ್ದುಗೆ ಮ್ಯಾಲ ಐತಲ್ಲ ಆ ಗೂಳೆತ್ತಿನ ತೊಗಲು ಕೊಡಬೇಕು", ಎಂದಾಗ ರಾಜಾ ಯಾವುದು ವಿಚಾರ ಮಾಡ್ದೆ ಹಿಂದು ಮುಂದು ನೋಡ್ದೆ ಒಪ್ಪಿಕೊಂಡ. ಡೋಂಬಿ ರಾಜನ ತಂದೆ ಸಾಯುವಾಗ, ಯುವರಾಜಾಗ ಕರದು "ಜೀವಮಾನಪೂರ್ತಿ ನಿನ್ನ ಸಂಪತ್ತು ಹಂಗ ಉಳಿಬೇಕಂದ್ರ, ಸದಾ ನೀ ಹೊಲದ ಒಡೆಯನಾಗಿರಬೇಕಂದ್ರ, ನಿನ್ನ ಗದ್ದುಗಿ ಮ್ಯಾಲಿರುವ ಗೂಳೆತ್ತಿನ ಚರ್ಮ ಮಾತಂಗ ವಂಶದವರಿಗೆ ಮಾತ್ರ ಕೊಡಬ್ಯಾಡ ಅಂದಿದ್ದಕ್ಕ. ಯಾಕ ಅದರ ಗುಟ್ಟೇನು? ಎಂದು ಯುವರಾಜ ಕೇಳಿದ. ಅದು ನಮ್ಮ ಸಂಪತ್ತಿನ ಸಂಕೇತ "ಗೂಳೆತ್ತು ಸಾಯುವಾಗ ನನ್ನನ್ನು ಕರದು ಹಿಂಗ ಹೇಳ್ಯಾದ. "ನೀನು ನಿನ್ನ ವಂಶದವರು ಸದಾ ಶ್ರೀಮಂತನಾಗಿರಬೇಕು ಭೂಮಿ ಒಡೆಯರಾಗಿರಬೇಕಂದ್ರ ನಾ ಸತ್ತ ಮ್ಯಾಲ ನನ್ನ ತೊಗಲ ಮಾತಂಗ ವಂಶದವರಿಗಿ ಕೊಡಬಾರ್ದು. ಕೊಟ್ಟಿಂದ್ರ ನೀ ದರಿದ್ರನಾಗತಿ ಸಂಪತ್ತೆಲ್ಲ ಕಳಕೊಂಡು ಬಡವನಾಗತಿ ಎಂದು ಹೇಳಿ ಭಾಷೆ ತಗೊಂಡಾದ.

ಅನ್ನುವ ಮಾತು ಮಗನಿಗೆ ಹೇಳಿದ್ದ, ಆದ್ರ ಅಪ್ಪನ ಆ ಮಾತ ಮಣಕಾಳ ಮಾಡಿದ ಯುವರಾಜ ಕಾಮದ ಗುಂಗಿನಲ್ಲಿ ಭಯ ನಾಚಿಕೆ ಎರಡೂ ಬಿಟ್ಟು ತೊಗಲು ಕೊಟ್ಟಬಿಟ್ಟ. ಗೂಳೆತ್ತಿನ ತೊಗಲು ತಗೊಂಡು ಹೋಗಿ ಅಪ್ಪಗ ಕೊಟ್ಟು ಹೊಳ್ಳಿ ಹೋಗಿ ಅರಮನೆ ಹೊಸ್ತಿಲ ಮೆಟ್ಟೇರಿರಲಿಲ್ಲ. ಇತ್ತ ಸುಂದರಿಯ ತಂದೆ ಉಳಿಯನ್ನು ಹರಿತಗೊಳಿಸಿ ಗೂಳೆತ್ತಿನ ತೊಗಲು ತನ್ನ ಕೈಗೆ ಬಂದ ಕೂಡ್ಲೇ ವಿಕಾರ ರೂಪದ ಭಾವನೆಯಿಂದ ನನ್ನ ತಂದೆ ಪ್ರತಿಜ್ಞೆಗೆ ಇಂದ ಮೋಕ್ಷಸಿಕ್ಕಿತು ಎಂದು ಗೂಳೆತ್ತಿನ ತೊಗಲು ಹಾಸಿದ್ದೆ ತಡ ಮೊಳಕಾಲ ಮಂಡಿಯೂರಿ ರೌದ್ರಾವತಾರ ತಾಳಿದಂತವನಾಗಿ ಮನಸ್ಸಿನಲ್ಲಿ ಸೇಡಿನ ಕಿಚ್ಚನ್ನು ಹೊತ್ತಿಸಿಕೊಂಡು ಹರಿತವಾದ ಉಳಿಯಿಂದ ಎದೆಯ ನಡುಭಾಗದಾಗ ಜೋರಾಗಿ ಇರಿದ. ಇರಿತದಿಂದ ನಿರ್ಜೀವವಾಗಿದ್ದ ಆ ತೊಗಲು ಅಂಭಾ! ಅಂಭಾ! ಎಂದು ನೋವಿನಿಂದ ಒದರಿತು, ತೊಗಲಿನಿಂದ ರಕ್ತ ಚಿಮ್ಮಿತು, ಅದರ ಈ ಆಕ್ರಂದನಕ್ಕೆ ರಾಜನ ಅರಮನೆ ಮೂಲೆ ಬಿರಕು ಬಿಟ್ಟಿತು. ಗದ್ದುಗೆ ನೆಲಕ್ಕುರಿಳಿತ್ತು.

ಡೋಂಬಿರಾಜ ಮಾತಿಗೆ ತಪ್ಪಿ ನಡೆದಿದ್ದಾನೆ. ನನ್ನನ್ನು ಯಾರಿಗೆ ಒಪ್ಪಿಸಬಾರದು ಎಂದು ವಚನ ಪಡೆದಿದ್ದನೋ, ಅವರಿಗೇ ಒಪ್ಪಿದಾನೆ, ನನ್ನ ಮಾತಿಗೆ ತಪ್ಪಿ ನಡೆದಿದ್ದಕ್ಕಾಗಿ ನಿನ್ನ ಸಿರಿ ಸಂಪತ್ತು ಹಾಳಾಗಲಿ, ನಿನ್ನಲ್ಲಿರುವ ಭೂಮಿ ಬೇರೆಯವರ ಪಾಲಾಗಲಿ ಎಂದು ಗೂಳಿ ಶ್ಯಾಪ ನೀಡಿತಂತೆ. ಅದಕ್ಕಾಗಿ ಕೆಳಗಿನ ಕೇರಿಯವರು ಹೊಲ ಮನಿ ಕಳಕೊಂಡು

ಅದು ನಿನ್ನ ಕನಸು, ನಿನ್ನ ಕೈಯಾಗ ನನ್ನ ತೊಗಲಿನ ಸಣ್ಣ ಚೂರು ಸಿಗಾಂಗಿಲ್ಲ" ಎಂದು ಆ ಗೂಳಿ ಪ್ರತಿಜ್ಞೆ ಮಾಡಿತು. ಕಾಲ ಹಾಗೆ ಉರಳಿತು, ನೋವಿನಿಂದ ಅಪ್ಪ ಏಳಲ್ಲೇ ಇಲ್ಲ ಹಾಸಗಿ ಹಿಡದಾಂವ ಏಕಾಏಕಿ ಜೇರಾದ, ಸಾಯುಮುಂದ ನನ್ನ ಕರದು. "ಎತ್ತಿನ ಎದ್ಯಾಗ ಉಳಿ ಹೊಡಬೇಕು ಅಂತ, ನಾ ಗೂಳಿಗುಡಾ ವಾದ ಮಾಡಿನಿ ನೀ ಅದನ್ನ ಮರಿಲಾರ್ದೆ ನನ್ನಿಂದ ಆಗಲಾರದ್ದು ನೀ ಮಾಡಬೇಕು, ಮಾಡ್ಲಿಲ್ಲಂದ್ರ ನಾ ಸೋಲ ಕಂಡಂಗಾಗ್ತದ. ಅದಕ್ಕ ನೀ ಅದನ್ನ ಮಾಡ್ತೀನಿ ಅಂತ ಮಾತಕೊಡು" ಎಂದು ನನ್ನ ಕಡಿಯಿಂದ ವಚನ ತಗೊಂಡಾನ.

ಕೂಲಿ ಮಾಡುವಂಗ ಆಗ್ಯಾದಂತ, ಹಿಂಗ ಚಲುವಜ್ಜ ಹೇಳ್ಯಾನ, ನೋಡ ಅಜ್ಜ" ಅಂದಾಗ. "ಹೌದಪ್ಪ ಅನಾದಿ ಕಾಲದಿಂದಲೂ ಈ ವೈರತ್ವ ಮ್ಯಾಲಿನಕೇರಿ ನಮ್ಮ ಕೇರಿ ನಡುವ ನಡಕೊಂಡ ಬಂದದ. ಆದರ ಅವು ಈಗ ನಮಗ ಅನ್ನಾ ಹಾಕಂಗಿಲ್ಲ, ತಮಾ ಅದಕ್ಕ ಅವೆಲ್ಲ ನೀ ತೆಲ್ಯಾಗ ಹಾಕ್ಕೊಬ್ಯಾಡ. ನಾ! ನೀ! ಅಂದೇ ನಮ್ಮ ಸಣ್ಣ ಸಣ್ಣ ಜಾತಿಯವರು ಹಾಳಾಗ್ಯಾರ, ಇವೆಲ್ಲ ಬ್ಯಾರೆಯವರು ಸುಳ್ಳು ಹೇಳಿ ಇವ ದೊಡ್ಡುಮಾಡಿ ನಮಗ ಜಗಳಾ ಹಚ್ಚಿ ಮೋಜಾ ನೋಡ್ಲಾಕ ಹತ್ಯಾರ, ಅವ್ವೆಲ್ಲ ತೆಲ್ಯಾಗ ಹಾಕೋಬ್ಯಾಡ ಮಲಕೊ ಎಂದು ಗಂಗಜ್ಜಿ ಮೊಮ್ಮಗನಿಗೆ ಬುದ್ಧಿವಾದ ಹೇಳಿದಳು.

ಅಜ್ಜಿಯ ಬುದ್ದಿವಾದ ಕೇಳಿದ ಮೊಮ್ಮಗ ಹೌದಲ್ಲ ನಾವೆಲ್ಲ ಜಾಂಭವ ಸಂಘ, ಅಂಥಾಇಂಥ ಸಂಘ ಅಂತ್ಹೇಳಿ ಸುಮ್ಮ ಸುಮ್ಮನೆ ಹಾಳಾಗಾಕ ಹತ್ತಿವೆಲ್ಲಾ, ಮೊದಲ ಚಲುವಜ್ಜ, ಮಾದಜ್ಜ ಅಂದ್ರ ದೇಹ ಎರಡು ಜೀವ ಒಂದಿದ್ದಾಂಗ ಇದ್ರು, ಇವತ್ತ ನೋಡದ್ರ ನಾವೇ ಬೇರೆ ಅವ್ರೇ ಬೇರೆ ಆಗಿದೇವು, ಊರವರು ಅವರಿಗೂ ಮುಟ್ಸಕೊಳ್ಳಾಂಗಿಲ್ಲ, ನಮಗೂ ಮುಟ್ಸಕೊಳ್ಳಾಂಗಿಲ್ಲ. ಮ್ಯಾಲಿನವರ ಕಣ್ಣಾಗ ನಾವು ಅಸ್ಪೃಶ್ಯರೇ ಅವು ಅಸ್ಪೃಶ್ಯರೇ ಎಂದು ವಿಚಾರ ಮಾಡ್ತಾ ಮಾಡ್ತಾ ನಿದ್ರಾದೇವಿ ತೆಕ್ಕೆಗೆ ಜಾರಿದ. "ಅನಾದಿ ಕಾಲದಿಂದಲೂ ಬೇರೆಯವರ ಮಾತ ಕೇಳಿ ಹಾಳಾಗಿದ್ದಲ್ದೆ, ಅವ್ರ ಆಳಾಗಿ ದುಡದು ದುಡುದು ಸಾಕಾಗ್ಯಾದ, ನಮಗೂ ಸ್ವತಂತ್ರವಾದ ಬದುಕುದ, ನಾವು ಇತರರಂತೆ ಬಾಳಬೇಕಾಗ್ಯಾದ ಅದಕ್ಕ ನೀವೆಲ್ಲ ಈ ಜಾತಿ ರಾಜಕೀಯ ತೆಲ್ಯಾಗ ಹಾಕ್ಕೊಂಡು ಎಡ ಹೆಚ್ಚು ಬಲ ಕಮ್ಮಿ! ಅಂತ ಹೊಡದಾಡೋದ್ರಿಂದ ಏನೂ ಸಾಧಿಸ್ಲಿಕ್ ಆಗಾಂಗಿಲ್ಲ. ಅದಕ್ಕಾಗಿ ನಾವು ಏನೂ ಇಲ್ದೆ ಹಾಳಾಗಿವಿ ಕುಲಕ್ ಕೋಡ್ಲಿಕಾಂವ ಮೂಲ ಅಂದಂಗಾಗಿ ನಮ್ಮೌರನ್ನ ನಾವೇ ಹಾಳ ಮಾಡಾಕತ್ತೇವಿ. ಅದನ್ನೆಲ್ಲ ನಾವು ಬಿಡಬೇಕು ನಮ್ಮನ್ನ ನಾವು ಅರ್ಥಾಮಾಡಕೋಬೇಕು. ಬಡವರಾಗಿ ಹುಟ್ಟೋದು ಹುಟ್ಟೇವಿ, ಸಾಯುವಾಗ ಬಡವರಾಗಿ ಸಾಯಬಾರ್ದು. ಗುಲಾಮರಾಗಿ ಹುಟ್ಟಿ ಗುಲಾಮರಾಗಿ ಸಾಯುವುದಂತೂ ಅಪರಾಧ. ಅದಕ್ಕ ಎಲ್ಲರ ಮಕ್ಕಳೂ ನನ್ನಂಗ ಓದಿ ಸನ್ಮಾನಕ್ ಪಾತ್ರರಾಗಬೇಕು ಎಂದು ಮಾದಜ್ಜನ ಮೊಮ್ಮಗ ಭಾಷಣ ಮುಗಿಸಿ ವೇದಿಕೆ ಮ್ಯಾಲಿಂದ ಇಳಿತಿದ್ದ" ಅದು ಅವನಿಗಿ ಕನಸು ಅಂತ ಗೊತ್ತಿಲ್ಲ, ನಿದ್ದಿಗಣ್ಣಾಗ ಇಳದಂಗಾಗಿ ಮಲಗಿದ್ದಾಂವ ಕಟ್ಟಿ ಮ್ಯಾಲಿಂದ ದಪ್ಪಂತ ಬಿದ್ದ. ಬಿದ್ದು ಕೌದಿ ಚಿಂದಿಯೊಳಗಿಂದ ಗಡಿಬಿಡಿಲೆದ್ದು ಕೂತ, ಮೊಮ್ಮಗ ದಪ್ಪಂತ ಬಿದ್ದ ಸದ್ದು ಕೇಳಿ ಏನೋ ಬಿದ್ದೆಲ್ಲ ಸಪನ ಬಿದ್ದಿತೇನೋ? ಎಂದಳು.

'ಹೌದಜ್ಜ ನಾ ದೊಡ್ಡ ಸಾಹೇಬ ಆಗಿದ್ದೆ. ಅದೊಂದು ದೊಡ್ಡ ಸಭೆ ಸಾವಿರಾರು ಜನರು ನೆರದಂಗಾಗಿ ನಾ ಭಾಷಣ ಮಾಡದಂಗಾಗಿತ್ತು, ನನಗೆ ಸನ್ಮಾನ ಮಾಡಿತಿದ್ರು ಅದು ನೀನು ಅಜ್ಜ ನೋಡಿ, ಚಪ್ಪಾಳೆ ತಟ್ಟತಿದ್ರಿ, ಅದು ಹಬ್ಬ ಇದ್ದಾಂಗಿತ್ತು. ನೀ ಹೇಳಿದ ಮಾತ ನಾ ಹೇಳಿದಂಗಾಗಿತ್ತು ನೋಡಜ್ಜ' ಎಂದ. ಅದಕ ಅಪಾ! ನೀ ಓದಿ ದೊಡ್ಡ ಸಾಹೇಬ ಆಗು. ಅದ ನಿನ್ನ ಬಾಳಿಗಿ ಬೆಳಕ ನೀಡತೈತಿ. ಇದೆಲ್ಲ ಇದ್ದೇ ಇರ್ತದ. ಇಂದಲ್ಲ ನಾಳೆ ಕಡಮಿ ಆಗ್ತದ.

ಈ ಓಣ್ಯಾನ ಜಂಜಾಟ ಬಿಟ್ಟು ಬಿಡು. ತಮ್ಮಾ! ನಾಳಿಗಿ ನೀ ಹೊಂಟ ಬಿಡು' ಎಂದು ಗಂಗಜ್ಜಿ ಎದ್ದು "ಕೋಳಿಕೂಗು ಹೊತ್ತಾಗೈತಿ ನಾ ನಿನಗ ರೊಟ್ಟಿ ಕಟ್ಟೊ ತಯಾರಿ ಮಾಡ್ತಿನಿ. ನೀ ಇನ್ನೊಂದಿಟು ನಿದ್ದಿ ಮಾಡು, ನಾ ಎಬ್ಬಸ್ತಿನಿ" ಎಂದು ಕಾಯಕದಲ್ಲಿ ತಲ್ಲೀನಳಾದಳು. □

ಸ್ಪರ್ಶ



ನಿನ್ನ ಸ್ಪರ್ಶ
ಕೊಟ್ಟ ಅಪೂರ್ವ
ಮೋಡಿಯಿದು
ವಿದ್ಯುದ್ದಾಲಿಂಗನ!
ಬುದ್ಧಿ–ಭಾವಗಳ ಸಂಗಮ
ಸಾಹಿತ್ಯವೆಂಬುದು ದಿಟ್ಟ

ಧ್ವನಿ ನೀಡಲಾರೆ
ಪದಗಳಲಿ ಹಿಡಿಸಿಡಲಾರೆ
ಆದರೆ ಈ ಮಹಾಭಾವ
ಒಳಗೆ ಆಗುತ್ತಿರುವ ಅನುಭಾವ

ಒಳಗಿಂದೊಳಗೆ
ನಾನು ಹೋಗಲು ಕಾರಣವಾದ
ನಿನ್ನ ಸ್ಪರ್ಶವೆಂಬ ಆನಂದಕೆ
ತಲೆ ಬಾಗುವೆ

ದೇಹದ ಮೂಲದಿಂದಲೇ
ಆತ್ಮಾನುಸಂಧಾನವಾದ
ಈ ಪೂರ್ಣಘಳಿಗೆಗೆ
ಅರ್ಪಿಸಿಕೊಳ್ಳುವೆ.

○ ಜ್ಯೋತಿ ಗುರುಪ್ರಸಾದ್

"ಲೋಹಿಯವೋತ್ತರ ನವ - ಸೋಶಿಯಲಿಸಂ": ನಿರ್ಮಿತಿ, ವಾಸ್ತವತೆ ಹಾಗೂ ಪ್ರೊ.ನಂಜುಂಡ ಸ್ವಾಮಿ

ಕಾಲಮಾನ-೬

ಡಾ. ಮುಜಾಫ್ಫರ್ ಅಸ್ಸಾದಿ



ಇಂದಿರಾ ಗಾಂಧಿಯನ್ನು "ಗೂಂಗೀ ಗುಡಿಯಾ" ಎಂದು ಕರೆದ ಲೋಹಿಯಾ ಕುರಿತು ಕರ್ನಾಟಕ ಸಂದರ್ಭದಲ್ಲಿ ಚರ್ಚಿಸುವಾಗ ಕೆಲವು ಮುಖ್ಯವಾದ ಪ್ರಶ್ನೆಯನ್ನು ಕೇಳಲೇಬೇಕು: ಲೋಹಿಯಾ ಕರ್ನಾಟಕದ ಸಂದರ್ಭದಲ್ಲಿ ಎಷ್ಟು ಪ್ರಸ್ತುತ? ಕರ್ನಾಟದಲ್ಲಿ ಸೋಶಿಯಲಿಷ್ಟರ ಪರಂಪರೆ ಇದೆಯೇ? ಇದ್ದರೆ ಅದು ಪಡೆದು ಕೊಂಡಿರುವ ರೂಪಗಳೇನು?

ವಾಸ್ತವವಾಗಿ ಲೋಹಿಯಾರನ್ನು ಇತಿಹಾಸದಲ್ಲಿ ನೋಡುವ ಪರಿಯೇ ಬೇರೆ. ನೈಜವಾಗಿ ನೋಡುವುದಾದರೆ ಭಾರತದ ರಾಜಕೀಯ ಸಾಂಪ್ರದಾಯದಲ್ಲಿ ಲೋಹಿಯರಿಗೆ ನೀಡಬೇಕಾದ ಸ್ಥಾನಮಾನವನ್ನು ನೀಡಲಿಲ್ಲವೆಂದೇ ಹೇಳಬೇಕು. ಅವರನ್ನು ಹತ್ತಿರದಿಂದ ನೋಡಿರುವವರು ಅಥವಾ ಬಲ್ಲವರು ಒಂದೋ ಅವರನ್ನು ಗಾಂಧಿಯ ಶಿಷ್ಯನೆಂದೂ, ಇಲ್ಲವೇ ನೆಹರೂರವರ ಕಟುಟೀಕಾಕಾರರೆಂದು ಚಿತ್ರಿಸುತ್ತಾರೆ. ಆದರೆ ಲೋಹಿಯಾ ತಮ್ಮನ್ನು ತಾವು ನವದೂತ ಗಾಂಧಿವಾದಿ – ಕೆಳಜಾತಿಯ ಗಾಂಧಿ ಎಂದು ಕೆಲವೊಮ್ಮೆ ಕರೆದದ್ದು ಇದೆ. ಅವರು ಆಂಗ್ಲೋ-ಸಾಕ್ಸನ್ ಪರಂಪರೆಗೆ ಸೇರಿದರೂ, ಅದಕ್ಕೆ ಜೋತು ಬೀಳಲಿಲ್ಲ, ಹೊರತು ಅದರ ಟೀಕಾಕಾರದರು, ಅದರ ವಿಮರ್ಶ ಕರಾದರು, ಇದು ಅವರ ವೈಶಿಷ್ಟ

ಲೋಹಿಯಾರ ಚಿಂತನೆ ಮೂಲತವಾಗಿ ದೇಶಿಯ ಹಾಗೂ ಹೊಸತನದಿಂದ ಕೂಡಿತ್ತು ಅವರು ಎತ್ತಿಕೊಂಡ ವಿಷಯಗಳನ್ನು ಗಮನಿಸಿದರೆ ಹೊಸತನವನ್ನು ನೋಡಬಹುದು – ಅದು ಕೈಗಾರೀಕರಣದ ವಿಷಯವಾಗಿರಬಹುದು, ಆಧುನಿಕತೆಯ ಪ್ರಶ್ನೆಯಾಗಿರಬಹುದು ಅಥವಾ ದೇಶಿಯ ಭಾಷೆಯ ವಿಷಯವಾಗಿರಬಹುದು. ಅವರು ಎತ್ತಿಕೊಂಡ ಕೆಲವು ವಿಷಯಗಳಂತೂ ಭವಿಷ್ಯ ಭಾರತದದಲ್ಲಿ ವಿಭಿನ್ನ ಹೋರಾಟಗಳ ಭಾಗವಾಗುತ್ತಾ ಹೋಗಿರುವುದನ್ನು ನಾವು ಮರೆಯಬಾರದು.

ಲೋಹಿಯಾ ಸೋಶಿಯಲಿಸಂ ಅನ್ನು ತಾತ್ವಿಕವಾಗಿ ಗಟ್ಟಿಗೊಳಿಸಿದ ಕೀರ್ತಿ ಕರ್ನಾಟಕದ ಎಲ್ಲಾ ಸೋಶಿಯಲಿಸ್ಟರಿಗೆ ಸಲ್ಲುವುದಿಲ್ಲ. ಕರ್ನಾಟಕದಲ್ಲಿ ಲೋಹಿಯಾ ಸೋಶಿಯಲಿಸ್ಟರ ಪರಂಪರೆ ಇದೆ ಎಂದಾಕ್ಷಣ ನೆನಪಾಗುವುದು ಯು.ಆರ್ ಅನಂತ ಮೂರ್ತಿ, ಲಂಕೇಶ್, ದೇವನೂರು ಮಹಾದೇವ ಒಂದೆಡೆಯಾದರೆ, ಗೋಪಾಲ್ ಗೌಡ, ಬಂಗಾರಪ್ಪ, ರಾಮಕೃಷ್ಣ ಹೆಗ್ಡೆ, ಜೆ.ಎಚ್. ಪಟೇಲ್ ಇತ್ಯಾದಿ ಇನ್ನೊಂದೆಡೆ. ಇವರಲ್ಲಿ ಒಂದು ಸಾಮಾನ್ಯವಾದ ನ್ಯೂನತೆ ಇದೆ. ಇವರ‍್ಯಾರು ತಮ್ಮ ವಿವಿಧ ಲೇಖನಗಳಲ್ಲಾಗಲಿ, ತಮ್ಮ ವಿವಿಧ ರಾಜಕೀಯ ಪ್ರಯೋಗಗಳಲ್ಲಾಗಲಿ ಲೋಹಿಯಾ ಸೋಶಿಯಲಿಸಂ ಅಥವಾ ಲೋಹಿಯೋತ್ತರ ಸೋಶಿಯಲಿಸಂ ಅನ್ನು ನೇರವಾಗಿ, ಮುಖಾಮುಖಿಯಾಗಿ ಚರ್ಚಿಸಲಿಲ್ಲ. ಇವತ್ತು ಸೋಶಿಲಿಸ್ಟರ ಅಜೆಂಡಾ ಸೋಶಿಯಲಿಸ್ಟರ ಬಳಿ ಇಲ್ಲ. ಅದನ್ನು ದೇಶದ ವಿವಿಧ ಪಕ್ಷಗಳು ಕದ್ದುಕೊಂಡಿವೆ ಅಥವಾ ತಮ್ಮದಾಗಸಿವೆ. ಕಾಂಗ್ರೆಸ್ ಒಂದು ಕಾಲದಲ್ಲಿ ಸೋಶಿಯಲಿಸ್ಟರ ಕನಸನ್ನೆ ಕಸಿಯುವಲ್ಲಿ ಸಫಲವಾಯಿತು. ಇದು ವಾಸ್ತವವಾಗಿ ಸೋಶಿಯಲಿಸ್ಟರ ತಳಹದಿಯನ್ನೇ ಬುಡಮೇಲು ಅಲ್ಲದೇ ನಾಶಮಾಡುವಷ್ಟು ಬೆಳೆಯಿತು. 1960ರ ದಶಕದಲ್ಲಿ ಕಾಂಗ್ರೆಸ್ ಉಪಯೋಗಿಸಿದ "ಗರೀಬಿ ಹಟಾವೊ" ಸ್ಲೋಗನ್‌ನಲ್ಲಿ ಹಾಗೂ ಜಾರಿಗೆ ತಂದ ಭೂಮಸೂದೆಯ ಕಾಯಿದೆ ಹಿಂದೆ ಈ ಸೋಶಿಯಲಿಸ್ಟರ ಅಜೆಂಡಾಗಳಿದ್ದವು. ಭೂ ಮಸೂದೆ ಕೆಲವು ಕಡೆ ಸಫಲವಾಯಿತು. ಎಲ್ಲೆಲ್ಲಾ ಭೂಮಸೂದೆ ಸಫಲವಾಯಿತೋ ಅಲ್ಲೆಲ್ಲಾ ಸೋಶಿಯಲಿಸ್ಟರು ತಮ್ಮ ನೆಲೆಗಳನ್ನು ಕಳೆದುಕೊಂಡದ್ದು ವಾಸ್ತವ. ಯಾಕೆಂದರೆ ಈ "ಉಳುವವನಿಗಾಗಿ ಭೂಮಿ" ಸೋಶಯಲಿಸ್ಟರ ಕೈಯಲ್ಲಿದ್ದ ಕೊನೆಯ ರಾಜಕೀಯ ಅಸ್ತ್ರವಾಗಿತ್ತು. ಅದನ್ನು ಕಾಂಗ್ರೆಸಿಗರು ತಮ್ಮ ಅಸ್ತ್ರವಾಗಿಸಿದ್ದೇ ಸೋಶಿಯಲಿಸ್ಟರಿಗೆ ಮಾರಕವಾಯಿತು.

ಕರ್ನಾಟಕದಲ್ಲಿ ರಾಮಕೃಷ್ಣರ ಕಾಲಾವಧಿಯಲ್ಲಿ ಲೋಹಿಯಾ ಸೋಶಿಯಲಿಸಂ ಕನಸಿಗೆ ಒಂದು ರಾಜಕೀಯ ಮೂರ್ತತೆ ತರುವ ಯತ್ನ ಮಾಡಲಾಯಿತು. ಈ ಸಂದರ್ಭದದಲ್ಲಿ "ನೀರ್ ಸಾಬಿ"ಎಂದೇ ಕರೆಯಲ್ಪಡುವ ನಜೀರ್ ಸಾಬ್ ರನ್ನು ಮರೆಯಬಾರದು. ಜನತಾ ಪಕ್ಷ 1983ರಲ್ಲಿ ಅಳವಡಿಸಿದ ಗ್ರಾಮೀಣ ವಿಕೇಂದ್ರೀಕರಣ ಲೋಹಿಯಾ ಸೋಶಿಯಲಿಸಂನ ಒಂದು ಭಾಗ. 1951ರ ಕಾಗೋಡು ಸತ್ಯಾಗ್ರಹ ಲೋಹಿಯಾ ಸೋಶಿಯಲಿಸ್ಟರ ಕೊನೆಯ ರೈತ ಹೋರಾಟ. ಲೋಹಿಯಾ ಸೋಶಿಯಲಿಸಂ ಇದರೊಂದಿಗೆ ಮುಕ್ತಾಯ ಅಥವಾ ಕೊನೆಗೊಂಡಿತ್ತು ಎಂದರ್ಥವಲ್ಲ. ಅದು ಹೊಸ ರೂಪವನ್ನುಪಡೆದದ್ದು 1980ರ ದಶಕದ ರೈತ ಹೋರಾಟದ ಸಂದರ್ಭದಲ್ಲಿ.

ವಾಸ್ತವವಾಗಿ 1980ರ ದಶಕ ಕರ್ನಾಟಕಕ್ಕೆ ಬಹಳ ಮುಖ್ಯವೆನ್ನಬಹುದು. ಕರ್ನಾಟಕ ರೈತ ಹೋರಾಟ ಅಂದಿನ ಸಂದರ್ಭದಲ್ಲಿ ಎರಡು ವಿಷಯಗಳನ್ನು ಬಹಳ ಮುಖ್ಯವಾಗಿ ಎತ್ತಿಕೊಂಡಿತ್ತು. ಈ ಸಂದರ್ಭದಲ್ಲಿ ರೈತ ಚಳುವಳಿಗೆ ಲೋಹಿಯಾವಾದ ತಾತ್ವಿಕ ತಳಹದಿಯನ್ನು ಹಾಗೂ ಪ್ರಾಯೋಗಿಕತೆಯ ಅಂಶವನ್ನು ನೀಡಿದನ್ನು ಗುರುತಿಸಬೇಕು. ಅಲ್ಲದೇ ಕೆಲವೊಮ್ಮೆ ಲೋಹಿಯಾ ತಮ್ಮ ರಾಜಕೀಯದಲ್ಲಿ ಉಪ ಯೋಗಿಸಿದ ವಿಶ್ಲೇಷಣೆಯ ತಂತ್ರವನ್ನೂ ಉಪಯೋಗಿಸುವ ಯತ್ನ ಮಾಡಿದ್ದನ್ನು ರೈತ ಹೋರಾಟದಲ್ಲಿ ನಾವು ಗಮನಿಸಬೇಕು. ಇದಕ್ಕೆ ಲೋಹಿಯಾರವರ ಭಾರತದ ಬಡ್ಜೆಟ್ ಕುರಿತಾದ ವಿಶ್ಲೇಷಣೆ ಅಥವಾ ರುಪಾಯಿ 25,000 ಲೇಖನ ಉತ್ತವು ಉಧಾಹರಣೆ.ರೈತ ಹೋರಾಟ ತನ್ನ ಆರಂಭದ ದಿನಗಳಲ್ಲಿ ಕರ್ನಾಟಕದ ಬಡ್ಜೆಟ್ ಹೇಗೆ ರೈತ ವಿರೋಧಿ, ಗ್ರಾಮೀಣ ಪ್ರದೇಶ ವಿರೋಧಿ, ಕೃಷಿ ವಿರೋಧಿ, ಕೈಗಾರಿಕ ಪರ, ನಗರ ಪರ ಇತ್ಯಾದಿಗಳನ್ನು ವಿಶ್ಲೇಷಿಸುತ್ತಾ ಹೋಯಿತು. ಇಂತಹ ವಿಶ್ಲೇಷಣೆಗೆ ಲೋಹಿಯಾ ತತ್ವದ ಛಾಯೆ ಇದ್ದದ್ದು ಸ್ಪಷ್ಟ. ಆದರೆ ಇಂತಹ ವಿಶ್ಲೇಷಣೆ ಮುಂದೆ ನಮಗೆ ಸಿಗುವುದಿಲ್ಲ. ಇದು ದುರಂತವೂ ಹೌದು. ಮತದಾರರ ವೇದಿಕೆ ಮತ್ತೊಂದು ಪ್ರಯೋಗ. ಅದೊಂದು ವಿಶಿಷ್ಟ ಪ್ರಯೋಗವೂ ಹೌದು.

ಈ ಮತದಾರರ ವೇದಿಕೆಯನ್ನು 1980ರ ದಶಕದಲ್ಲಿ ರೈತ ಚಳುವಳಿ ಪ್ರಯೋಗಿಕವಾಗಿ ಅಳವಡಿಸಲು ಯತ್ನಿಸಿದಾಗ ಅದಕ್ಕಿದ್ದ ಸವಾಲೆಂದರೆ: ಚುನಾವಣೆಯಲ್ಲಿ ಪಕ್ಷ ರಾಜಕಾರಣವನ್ನು ತಿರಸ್ಕರಿಸಿ ಪಕ್ಷಾತೀತ ಪರ್ಯಾಯ ರಾಜಕಾರಣವನ್ನು ಕಟ್ಟಲು ಸಾಧ್ಯವೆ? ಎಂಬುದಾಗಿತ್ತು. ಮತ

ಕರ್ನಾಟಕದಲ್ಲಿ ರಾಮಕೃಷ್ಣರ ಕಾಲಾವದಿಯಲ್ಲಿ ಲೋಹಿಯಾ ಸೋಶಿಯಲಿಸಂ ಕನಸಿಗೆ ಒಂದು ರಾಜಕೀಯ ಮೂರ್ತತೆ ತರುವ ಯತ್ನ ಮಾಡಲಾಯಿತು. ಈ ಸಂದರ್ಭದದಲ್ಲಿ "ನೀರ್ ಸಾಬಿ"ಎಂದೇ ಕರೆಯಲ್ಪಡುವ ನಜೀರ್ ಸಾಬ್ ರನ್ನು ಮರೆಯಬಾರದು. ಜನತಾ ಪಕ್ಷ ೧೯೮೩ರಲ್ಲಿ ಅಳವಡಿಸಿದ ಗ್ರಾಮೀಣ ವಿಕೇಂದ್ರೀಕರಣ ಲೋಹಿಯಾ ಸೋಶಿಯಲಿಸಂನ ಒಂದು ಭಾಗ. ೧೯೫೧ರ ಕಾಗೋಡು ಸತ್ಯಾಗ್ರಹ ಲೋಹಿಯಾ ಸೋಶಿಯಲಿಸ್ಟರ ಕೊನೆಯ ರೈತ ಹೋರಾಟ. ಲೋಹಿಯಾ ಸೋಶಿಯಲಿಸಂ ಇದರೊಂದಿಗೆ ಮುಕ್ತಾಯ ಅಥವಾ ಕೊನೆಗೊಂಡಿತ್ತು ಎಂದರ್ಥವಲ್ಲ. ಅದು ಹೊಸ ರೂಪವನ್ನುಪಡೆದದ್ದು ೧೯೮೦ರ ದಶಕದ ರೈತ ಹೋರಾಟದ ಸಂದರ್ಭದಲ್ಲಿ. ವಾಸ್ತವವಾಗಿ ೧೯೮೦ರ ದಶಕ ಕರ್ನಾಟಕಕ್ಕೆ ಬಹಳ ಮುಖ್ಯವೆನ್ನಬಹುದು.

ದಾರರ ವೇದಿಕೆ ಅಭ್ಯರ್ಥಿಯಾಗ ಬೇಕಾದರೆ ಕೆಲವು ನಿಯಮಾವಳಿಗಳಿದ್ದವು: "ಯಾವುದೇ ರಾಜಕೀಯ ಪಕ್ಷದ ಸೋಂಕೂ ಇಲ್ಲದ, ಜಾತೀಯತೆಯ ಸೋಂಕಿಲ್ಲದ, ಯಾವುದೇ ಭೂಮಿಯನ್ನು ಅಕ್ರಮಣವಾಗಿ ಆಕ್ರಮಿಸದ, ಯಾವುದೇ ಗೇಣಿದಾರರನ್ನು ಒಕ್ಕಲೆಬ್ಬಿಸದ, ಸಾರ್ವಜನಿಕ ಹಣವನ್ನು ದುರುಪಯೋಗ ಮಾಡದಿರದ" ವ್ಯಕ್ತಿಯಾಗಿರ ಬೇಕು. ಮತದಾರರ ವೇದಿಕೆ ಪ್ರಯೋಗ ಸಫಲವಾಗಿಲಿಲ್ಲದ ವಿಚಾರ ಇಲ್ಲಿ ಉಲ್ಲೇಖಿಸಿದರೂ, ಅದರ ಪ್ರಯೋಗದ ಹಿಂದೆ ಲೋಹಿಯಾ ಛಾಯೆ ಸ್ಪಷ್ಟ ಎಂದು ಹೇಳಬಹುದು.

ಇದೇ ರೀತಿಯ ಪ್ರಯೋಗ ಅಂತರ ಜಾತಿ ಹಾಗೂ ವರದಕ್ಷಿಣೆ ರಹಿತ ಮದುವೆಯಲ್ಲಿ, ಗ್ರಾಮ ಸ್ವರಾಜ್ಯದ ಸ್ಥಾಪನೆಯಲ್ಲೂ ಕಂಡು ಬರುತ್ತದೆ. ವಾಸ್ತವವಾಗಿ ರೈತ ಹೋರಾಟ ಎತ್ತಿಕೊಂಡ ಎರಡು ವಿಚಾರಗಳನ್ನು ಲೋಹಿಯಾವಾದದ ದೃಷ್ಟಿಕೋನದಿಂದ ನೋಡುವುದಾದರೆ ಅವು ಕೂಡ ಹೊಸತಾಗಿರಲಿಲ್ಲ.ಅವುಗಳೆಂದರೆ: ರೈತರ ಸಾಲ ಮನ್ನಾ ಹಾಗೂ ತುಲನಾತ್ಮಕ ಬೆಲೆಗಳು. ರೈತರ ಸಾಲ ಮನ್ನಾ ವಾದವನ್ನು ಮುಂದಿಡುವಾಗ ರೈತ ಹೋರಾಟ ಒಂದು ಪ್ರಮುಖವಾದ ವಾದವನ್ನು ಮುಂದಿಡುತ್ತದೆ. ಅದೇನೆಂದರೆ ರೈತರ ಸಾಲವೆನ್ನುವುದು ವ್ಯವಸ್ಥೆಯ ಕೃತಕ ಸೃಷ್ಟಿ- ಬೆಳೆಗಳಿಗೆ ತುಲನಾತ್ಮಕ ಬೆಲೆಗಳನ್ನು ನೀಡದ ಕಾರಣ ರೈತರು ಸಾಲಗಾರರಾಗಿ ಪರಿವರ್ತಿತವಾಗಿದ್ದಾರೆ.ಆದಕಾರಣ ಅವರು ನಿಜವಾದ ಸಾಲಗಾರರಲ್ಲ. ಸರಕಾರವೇ ಸಾಲಗಾರ. ವಾಸ್ತವವಾಗಿ ಸಾಲ ಮನ್ನಾದ ಚರ್ಚೆಯ ತಳಹದಿ ಇರುವುದು 1936ರ ಕಿಸಾನ್ ಸಭಾದ ಸ್ಥಾಪನೆಯಲ್ಲಿ. ಇದೇ ರೀತಿ ತುಲನಾತ್ಮಕ ಬೆಲೆಗಳ ತಳಹದಿ ಇರುವುದು 1950ರ ದಶಕದಲ್ಲಿ ಲೋಹಿಯಾ ಸ್ಥಾಪಿಸಿದ ಹಿಂದ್ ಕಿಸಾನ್ ಪಂಚಾಯತ್‌ನಲ್ಲಿ ಇಲ್ಲಿರುವ ವಿಸ್ಮೃತಿಯನ್ನು ಕಡೆಗಣಿಸಬಾರದು.

ಈ ವಿಸ್ಮೃತಿ ಇರುವುದು ಒಂದು ಬಹು ಮುಖ್ಯ ಲೋಪದಲ್ಲಿ. ಪ್ರೊ.ನಂಜುಂಡ ಸ್ವಾಮಿಯವರ ಕೊಡುಗೆಯನ್ನು ಗುರುತಿಸದೇ ಇರುವ ಲೋಪ ಇಲ್ಲಿ ಬಹು ಮುಖ್ಯವಾಗಿ ಕಾಡುತ್ತದೆ. ರೈತ ಚಳುವಳಿಗೆ ಲೋಹಿಯಾವಾದದ ಬೇರುಗಳನ್ನು ಅಳವಡಿಸಿದವರು ನಂಜುಂಡ ಸ್ವಾಮಿ. ರೈತ ಚಳುವಳಿಯಲ್ಲಿ ಗಾಂಧಿವಾದಿಗಳು, ನವ - ಗಾಂಧಿವಾದಿಗಳು ಇದ್ದರೂ ಲೋಹಿಯಾ ವಾದ ಅತ್ಯಂತ ಪ್ರಮುಖವಾಗಿತ್ತು ಹಾಗೂ ಪ್ರಭಲವಾಗಿತ್ತು ಎಂದರೆ ತಪ್ಪಾಗಲಾರದು. ವಾಸ್ತವವಾಗಿ ನಂಜುಂಡ ಸ್ವಾಮಿ ವರುಷ ಕಳೆದಂತೆಲ್ಲಾ ರೈತ ಚಳುವಳಿ ಮುಖಾಂತರ ಲೋಹಿಯಾವಾದಕ್ಕೆ ಹೊಸತನವನ್ನು ನೀಡುತ್ತಾ ತನ್ನದೇ ಆದ ಸೋಶಿಯಲಿಸಂ ನಿರ್ಮಿಸಲು ಯತ್ನಿಸಿದರೇ? ಎಂಬ ಗುಮಾನಿ ಬರುತ್ತದೆ. ಅದನ್ನು "ಲೋಹಿಯವೋತ್ತರ ನವ-ಸೋಶಿಯಲಿಸಂ", ಅಥವಾ "ರ್‍ಯಾಡಿಕಲ್ ಲೋಹಿಯಾ ಸೋಶಿಯಲಿಸಂ" ಎನ್ನಬಹುದೆ? ಇಲ್ಲವೇ "ನಂಜುಂಡ ಸ್ವಾಮಿ ಸೋಶಿಯಲಿಸಂ" ಎಂದು ಕರೆಯಬಹುದೆ? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಅಷ್ಟು ಸುಲಭವಲ್ಲ.

ನಂಜುಂಡ ಸ್ವಾಮಿ "ಸೋಶಿಯಲಿಸಂ" ಎಂದು ಕರೆಯಬೇಕಾದರೆ ಪ್ರೊ॥ ಸ್ವಾಮಿ ಪ್ರತಿಪಾದಿಸಿದ ಸೋಶಿಯಲಿಸಂ ಲೋಹಿಯಾವಾದದಿಂದ ಸಂಪೂರ್ಣವಾಗಿ ವಿಭಿನ್ನವೂ, ಹೊಸತನದಿಂದ ಕೂಡಿದ್ದವೂ ಆಗಿರಬೇಕಾದ್ದು ಅನಿವಾರ್ಯ. ವಾಸ್ತವವಾಗಿ ರೈತ ಚಳುವಳಿ ಬೆಳೆದಂತೆಲ್ಲಾ ಹಾಗೂ ವಿಸ್ತಾರವಾದಂತೆಲ್ಲಾ ನಂಜುಂಡ ಸ್ವಾಮಿ ಹೊಸ ಹೊಸ ಚಿಂತನೆಗಳನ್ನೂ, ಹೊಸ ಹೊಸ ನೋಟಗಳನ್ನೂ, ಹೊಸ ಹೊಸ ದೃಷ್ಟಿಕೋನಗಳನ್ನು,ಹೊಸ ಹೊಸ ವಾದಗಳನ್ನೂ ರೈತ ಹೋರಾಟಕ್ಕೆ ನೀಡಿದರು. ಅದರಲ್ಲಿ ಕೆಲವು ತಾತ್ವಿಕ ಚಿಂತನೆಗಳೂ ಸೇರಿದ್ದವು. ಅದು ಲೋಹಿಯಾ ಚಿಂತನೆಗೆ ಹೊಸ ಆಯಾಮ ನೀಡಿತ್ತು ಎಂದರೂ ತಪ್ಪಾಗಲಾರದು.. ಲೋಹಿಯಾ ವಾದಕ್ಕೆ ಹೊಸತನ ತರಲು ಕಾರಣವಿದ್ದವು. ಲೋಹಿಯಾವೋತ್ತರ ಕಾಲಾವಧಿಯಲ್ಲಿ ನಡೆದ ಅವಿಷ್ಕಾರಗಳು, ಚಿಂತನೆಗಳು ಸಾಂಪ್ರದಾಯಿಕ ಲೋಹಿಯಾವಾದಕ್ಕೆ ಹೊಸತನ ನೀಡುವ ತಾಕತ್ತು ಅದರಲ್ಲಿತ್ತು.



ನಂಜುಂಡ ಸ್ವಾಮಿ "ಸೋಶಿಯಲಿಸಂ" ಎಂದು ಕರೆಯಬೇಕಾದರೆ ಪ್ರೋ ಸ್ವಾಮಿ ಪ್ರತಿಪಾದಿಸಿದ ಸೋಶಿಯಲಿಸಂ ಲೋಹಿಯಾವಾದದಿಂದ ಸಂಪೂರ್ಣವಾಗಿ ವಿಭಿನ್ನವೂ, ಹೊಸತನದಿಂದ ಕೂಡಿದ್ದವೂ ಆಗಿರಬೇಕಾದ್ದು ಅನಿಸಸವಾರ್ಯ. ವಾಸ್ತವವಾಗಿ ರೈತ ಚಳುವಳಿ ಬೆಳೆದಂತೆಲ್ಲಾ ಹಾಗೂ ವಿಸ್ತಾರವಾದಂತೆಲ್ಲಾ ನಂಜುಂಡ ಸ್ವಾಮಿ ಹೊಸ ಹೊಸ ಚಿಂತನೆಗಳನ್ನೂ, ಹೊಸ ಹೊಸ ನೋಟಗಳನ್ನೂ, ಹೊಸ ಹೊಸ ದೃಷ್ಟಿಕೋನಗಳನ್ನು,ಹೊಸ ಹೊಸ ವಾದಗಳನ್ನೂ ರೈತ ಹೋರಾಟಕ್ಕೆ ನೀಡಿದರು. ಅದರಲ್ಲಿ ಕೆಲವು ತಾತ್ವಿಕ ಚಿಂತನೆಗಳೂ ಸೇರಿದ್ದವು. ಅದು ಲೋಹಿಯಾ ಚಿಂತನೆಗೆ ಹೊಸ ಆಯಾಮ ನೀಡಿತ್ತು ಎಂದರೂ ತಪ್ಪಾಗಲಾರದು.. ಲೋಹಿಯಾ ವಾದಕ್ಕೆ ಹೊಸತನ ತರಲು ಕಾರಣವಿದ್ದವು. ಲೋಹಿಯಾವೋತ್ತರ ಕಾಲಾವಧಿಯಲ್ಲಿ ನಡೆದ ಅವಿಷ್ಕಾರಗಳು, ಚಿಂತನೆಗಳು ಸಾಂಪ್ರದಾಯಿಕ ಲೋಹಿಯಾವಾದಕ್ಕೆ ಹೊಸತನ ನೀಡುವ ತಾಕತ್ತು ಅದರಲ್ಲಿತ್ತು.

ಅಲ್ಲದೇ ಲೋಹಿಯಾರಿಗೆ ಸಿಗದೇ ಇದ್ದಂತಹ ಕೆಲವು ಆಯಾಮಗಳು ಲೋಹಿಯಾವೋತ್ತರ ಚಿಂತನೆಗಳಲ್ಲಿದ್ದವು. ಬಹಳ ಮುಖ್ಯವಾಗಿ ಲೋಹಿಯಾ ಸೂಕ್ಷ್ಮವಾಗಿ ಗಮನಿಸಿ ಬಿಟ್ಟಂತಹ ಕೆಲವು ವಿಚಾರಗಳು ಮುಂದೆ ಹೊಸ ರೂಪವನ್ನೇ ಪಡೆದು ಹೊಸ ಚಿಂತನೆಗಳಾಗಿ ಮಾರ್ಪಾಡಾಗಿತ್ತು. ಇದರಲ್ಲಿ ಸಾಮ್ರಾಜ್ಯಶಾಹಿಯ ಕುರಿತಾದ ಚಿಂತನೆ ಮುಖ್ಯ. ಲೋಹಿಯಾ ಪ್ರಕಾರ ಬಂಡವಾಳ ಶಾಹಿಯ ಪ್ರಥಮಹಂತದಲ್ಲಿ ಸಾಮ್ರಾಜ್ಯಶಾಹಿ ಉದ್ಭವಿಸುತ್ತದೆಯಲ್ಲದೇ ಅದರೊಂದಿಗೆ ಜತೆಜತೆಯಾಗಿ ಬೆಳೆಯುತ್ತಾ ಹೋಗುತ್ತದೆ. ಇದು ಮೂಲ ಮಾರ್ಕ್ಸ್ ವಾದದಿಂದ, ಅದರಲ್ಲೂ ಲೆನಿನ್ ವಾದದಿಂದ ವಿಭಿನ್ನ. ಲೆನಿನ್ ತನ್ನ "ಇಪಿರಿಲಿಸಂ: ದಿ ಹೈಹೆಸ್ಟ್ ಸ್ಟೇಜ್ ಆಫ್ ಕ್ಯಾಪಿಟಲಿಸಂ"ನಲ್ಲಿ ಸಾಮ್ರಾಜ್ಯಶಾಯಿಯ ಬೆಳವಣಿಗೆಯನ್ನು ಸ್ವಲ್ಪ ವಿಭಿನ್ನವಾಗಿ ಗುರುತಿಸುತ್ತಾನೆ. ಅವನ ಪ್ರಕಾರ ಬಂಡವಾಳಶಾಹಿಯ ಉನ್ನತ ಬೆಳವಣಿಗೆಯೇ ಸಾಮ್ರಾಜ್ಯಶಾಹಿಯ ಉಗಮಕ್ಕೆ ಕಾರಣ. ಲೋಹಿಯಾವಾದಿಸಿದ್ದ ಸಾಮ್ರಾಜ್ಯಶಾಹಿವಾದ ಮುಂದೆ ಅವಲಂಭನಾ ಸಿದ್ದಾತಕ್ಕೆ ದಾರಿ ಮಾಡಿಕೊಟ್ಟಿದ್ದು ವಾಸ್ತವ. ಎ.ಜಿ.ಫ್ರಾಂಕ್, ವಲ್ಲೇರ್ ಸ್ಟೀನ್, ಸಮೀರ್ ಅಮೀನ್ ವಿವಿದೆಡೆ ಇದರ ಬಹುಮುಖ್ಯ ಪ್ರತಿಪಾದಕರಾದರೆ ಕರ್ನಾಟಕದಲ್ಲಿ ನಂಜುಂಡಸ್ವಾಮಿ ರೈತ ಚಳುವಳಿಯಲ್ಲಿ ಇದನ್ನು ಯಥಾವತ್ತಾಗಿ ರೈತ ಚಳುವಳಿಯ ಆರಂಭದ ದಿನಗಳಲ್ಲಿಯೇ ಅಳವಡಿಸಿದರು.ನಂಜುಂಡ ಸ್ವಾಮಿ ಮುಂದೆ ಪ್ರತಿಪಾದಿಸಿದ ಅಭಿವೃದ್ಧಿಯ ವಿಮರ್ಶೆ ಅಥವಾ ಸಿದ್ಧಾಂತ ವಾಸ್ತವವಾಗಿ ಅವಲಂಭನಾ ಸಿದ್ಧಾಂತವಲ್ಲದೇ, ಅದು ಮಾರ್ಕ್ಸವಾದಿ ರೋಜಾ ಲುಕ್ಸೆಂಬರ್ ಪ್ರತಿಪಾದಿಸಿದ "ಆಂತರಿಕ ವಸಾಹತುಶಾಹಿ"ವಾದವನ್ನು ಕೂಡ ಒಳಗೊಂಡಿತ್ತು. ವಿಚಿತ್ರವೆಂದರೆ ಈ ಸಂದರ್ಭದಲ್ಲಿ "ಬಡಕಲು ಬಂಡವಾಳಶಾಹಿ"ಯವಾದವನ್ನು ಫ್ರೋ.ಸ್ವಾಮಿ ಮುಂದಿಡುತ್ತಾರೆ.

ಆದರೆ ಇದೇ ಸಂದರ್ಭದಲ್ಲಿ ಲೋಹಿಯಾ ಪ್ರತಿಪಾದಿಸಿದ ಬಹುಮುಖ್ಯವಾದ "ಸಾಂಸ್ಕೃತಿಕ ಸಾಮ್ರಾಜ್ಯಶಾಹಿ"ಯನ್ನು ಮರೆತು ಬಿಡುತ್ತಾರೆ-ಈ ವಾದ ಬರುವುದು ಜಾಗತೀಕಣದ ಸಂದರ್ಭದಲ್ಲಿ ಅದರಲ್ಲೂ ಬಹುರಾಷ್ಟ್ರೀಯ ಕಂಪನಿಗಳ ಮೇಲೆ ನೇರ ಆಕ್ರಮಣ ಮಾಡಿದ ನಂತರ, ಅಥವಾ ಡಂಕೆಲ್ ಪ್ರಸ್ತಾವನೆ ಕುರಿತಾದ ಚರ್ಚೆಗಳು ಆರಂಭಗೊಂಡ ನಂತರವೆಂದೇ ಹೇಳಬಹುದು. ಈ ಎಲ್ಲಾ ವಾದವನ್ನು ನಾವು ರೈತ ಹೋರಾಟದ ತಾತ್ವಿಕ ನಿಲುವುಗಳೆಂದರೂ ಅಂತಿಮ ವಿಶ್ಲೇಷಣೆಯಲ್ಲಿ ಅದು ನಂಜುಂಡಸ್ವಾಮಿಯವರ ವಾದವೇ ಆಗಿತ್ತು. ಅವರ ವಾದವನ್ನು ಗಮನಿಸಿ. "ಭಾರತದಂತಹ ದೇಶಗಳ ಒಳಗಿನ ಅಸಮಾನತೆಗೆ ರಾಷ್ಟ್ರ ರಾಷ್ಟ್ರಗಳ ನಡುವಿನ ಅಸಮಾನತೆಗೆ ಇರುವ ಕಾರಣವೇ ಪ್ರಧಾನವಾದುದು. 1946ಕ್ಕೆ ಹಿಂದೆ ಪರಂಗಿ ಜನಾಂಗಗಳು ಯಾವ ಯಾವ ದೇಶಗಳನ್ನು ತಮ್ಮ ವಸಾಹತುಗಳಾಗಿಸಿಕೊಂಡಿದ್ದವೋ ಅಂತಹ ದೇಶಗಳು ಸ್ವತಂತ್ರರಾದ ಮೇಲೂ ಅವುಗಳ ಮೇಲೆ ಪರಂಗಿ ರಾಷ್ಟ್ರಗಳು ಆರ್ಥಿಕ ವಸಾಹತುವನ್ನು ಸ್ಥಾಪಿಸಿಕೊಂಡಿರುವುದೇ ಮುಖ್ಯ ಕಾರಣ. ಈ ದೇಶಗಳ ಆರ್ಥಿಕ ವ್ಯವಸ್ಥೆಯನ್ನು "ಬಡಕಲು ಬಂಡವಾಳಶಾಹಿಗಳಾಗಿಯೇ ಉಳಿಯುವಂತೆ ಈ ಪರಂಗಿ ದೇಶಗಳುಮಾಡಿವೆ."

ಈ ರೀತಿಯ ಚಿಂತನೆ ಕಾಲ ಕಳೆದಂತೆಲ್ಲಾ ರ್ಯಾಡಿಕಲ್ ಆಗುತ್ತಾ ಹೋಗುತ್ತದೆ. ಕೆಲವೊಮ್ಮೆ ಲೋಹಿಯಾ ವಾದದ ತುಣುಕುಗಳು ಕೂಡ ಇದರೊಟ್ಟಿಗೆ ಮಿಶ್ರಣಗೊಳ್ಳುತ್ತದೆ. ಇದಕ್ಕೆ ಉತ್ತಮ ಉದಾಹರಣೆ "ಪೀಪಲ್ಸ್ ಗ್ಲೋಬಲ್ ಅಕ್ಶನ್." ರೈತ ಚಳುವಳಿ 1990 ರ ಧಶಕದಲ್ಲಿ "ಪೀಪಲ್ಸ್ ಗ್ಲೋಬಲ್ ಅಕ್ಶನ್ ನ ಭಾಗವಾದಾಗ ರ್ಯಾಡಿಕಲಿಸಂನ ತುಣುಕಗಳೊಂದಿಗೆ ಲೋಹಿಯವಾದದ ತುಣುಕುಗಳು ಸೇರಿದ್ದವು.

"ಬಂಡವಾಳ ಯಾವತ್ತು ಜಾಗತೀಕ" ವೆಂದು ಪೀಪಲ್ಸ್ ಗ್ಲೋಬಲ್ ಅಕ್ಶನ್ ಪ್ರತಿವಾದಿಸಿದರೆ, ಆ ವಾದದ ತಳಹದಿ ಇರುವುದು ಲೋಹಿಯಾವಾದದಲ್ಲಿ ಎಂದರೂ ತಪ್ಪಾಗಲಾರದು. ವಾಸ್ತವವಾಗಿ ಪೀಪಲ್ಸ್ ಗ್ಲೋಬಲ್ ಅಕ್ಷನ್ ನ ಪೊಲಿಟಿಕಲ್ ಮೆನಿಫೆಸ್ಟೋ ಬರೆದವರು ಪ್ರೋ. ಸ್ವಾಮಿ ಎಂದರೂ ತಪ್ಪಾಗಲಾರದು. ಯಾಕೆಂದರೆ ಅವರು ಅದರ ಭಾಗವಾಗಿದ್ದರು, ಅದರ ಎಲ್ಲಾ ಸಿದ್ಧಾಂತಗಳನ್ನು ಒಪ್ಪಿಕೊಂಡಿದ್ದರು. ಅದರ ಮೆನಿಫೆಸ್ಟೋ ಬಹಳ ಮುಖ್ಯವಾಗಿ ರ್ಯಾಡಿಕಲ್ ಚಿಂತನೆಯಿಂದ ಕೂಡಿತ್ತು. ಅದನ್ನು ಪೊಲಿಟಿಕಲ್ ಮ್ಯಾನಿಫೆಸ್ಟೋನ ರಾಜಕೀಯ ತಂತ್ರಗಾರಿಕೆಯಲ್ಲಿ ನೋಡಬಹುದು: 1) ಅನ್ಯೆತಿಕವಾಗಿರುವ ಜಾಗತೀಕ ಸಂಸ್ಥೆಗಳನ್ನು ನಾಶಮಾಡುವುದು; 2) ಅನ್ಯೆತಿಕವಾಗಿರುವ ಅಂತರ ರಾಷ್ಟ್ರೀಯ ಬಂಡವಾಳ ಅಥವಾ ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಗಳನ್ನು ನಾಶಗೊಳಿಸುವುದು ಇತ್ಯಾದಿಗಳು ಸೇರಿಕೊಂಡಿದ್ದವು. –ಇದು ರ್ಯಾಡಿಕಲ್ ಅಲ್ಲದೇ ಮತ್ತೇನು?

ಇದೇ ರೀತಿಯ ರ್ಯಾಡಿಕಲಿಸಂ ಬೇರೆ ಬೇರೆ ಸಂದರ್ಭದಲ್ಲೂ ನೋಡಬಹುದು. ಜಾಗತೀಕರಣದ ವಿರುದ್ಧ ರೈತ ಸಂಘ 1990 ರ ದಶಕದಲ್ಲಿ ನಡೆಸಿದ "ಇಂಟರ್ ಕಾಂಟಿನೆಂಟಲ್ ಕ್ಯಾರವಾನ್"ನ ಪೋಲಿಟಿಕಲ್ ಮೆನಿಫೆಸ್ಟೋದಲ್ಲಿ ಇದರ ಪುನರಾವರ್ತನೆಯ ಛಾಯೆ ಕಂಡು ಬರುತ್ತದೆ. ಅದರಲ್ಲಿ ಜಾಗತೀಕ ಸಂಸ್ಥೆಗಳಿಗೆ, ಜಾಗತೀಕ, ಆರ್ಥಿಕ, ರಾಜಕೀಯ ಹಾಗೂ ಮಿಲಿಟರಿ ಆಡಳಿತಕ್ಕೆ ಅವಿಧೇಯತೆಯನ್ನು ತೋರಿಸುವಕರೆ ನಿಚ್ಚಳವಾಗಿ ಕಂಡು ಬರುತ್ತದೆ. ಜನರು ಎಲ್ಲಾ ರೂಪದ ಅಧಿಕಾರವನ್ನು ತಮ್ಮ ವಶಪಡಿಸಿಕೊಳ್ಳುವ ಗಂಭೀರವಾದ ಸಲಹೆ ಈ ಮೆನಿಫೆಸ್ಟೋದಲ್ಲಿದೆ. ಅಲ್ಲದೇ ಹೋಸ ಜಗತ್ತನ್ನು ಕಟ್ಟುವ ಅಥವಾ ನಿರ್ಮಿಸುವ ಕನಸು ಕೂಡ ಸೇರಿದೆ. ಅದರಲ್ಲಿ ಕೇಂದ್ರೀಕೃತವಾದ ಅಧಿಕಾರದ ಬದಲು ಜನರಾಧಾರಿತ ಸಂಪನ್ಮೂಲಗಳ ಹಿಡಿತಕ್ಕೆ ಒತ್ತು ಇದೆ. ಈ ರ್ಯಾಡಿಕಲ್ ಮೆನಿಫೆಸ್ಟೋಗೆ ಪ್ರೊ|| ನಂಜುಂಡ ಸ್ವಾಮಿಯವರ ಅನುಮತಿ ಇದ್ದದ್ದು ವಾಸ್ತವ. ಆದಕಾರಣ ಅವರು ಈ ರೀತಿಯ ರ್ಯಾಡಿಕಲಿ ಸಂನ ಭಾಗವಾಗಿಬಿಡುತ್ತಾರೆ.

ಎರಡು ಸಂಧರ್ಭದಲ್ಲಿ ಪ್ರೊ. ನಂಜುಂಡ ಸ್ವಾಮಿ ಲೋಹಿಯಾವಾದದಿಂದ ನಿಚ್ಚಳವಾಗಿ ರ್ಯಾಡಿಕಲ್ ರಾಜಕಾರಣದ ಭಾಗವಾಗಿ ಬಿಡುತ್ತಾರೆ. ಒಂದನೇದಾಗಿ 2004 ರಲ್ಲಿ ನಡೆದ "ಜಾಗತೀಕ ಸಾಮಾಜಿಕ ವೇದಿಕೆ" ಸಂದರ್ಭ. ಎರಡನೇದಾಗಿ ಅಂತರರಾಷ್ಟ್ರೀಯ ಜಾಗತೀಕರಣ ವಿರೋಧಿ ಸಂಘಟನೆ ಲಾ ವಿಯಾ ಕಂಪೆಸಿನಾದ ಭಾಗವಾದಾಗ. 2004ರಲ್ಲಿ ಮುಂಬಾಯಿಯಲ್ಲಿ ಜಾಗತೀಕ ಸಾಮಾಜಿಕ ವೇದಿಕೆ" ಅಥವಾ ವಲ್ಡ್ ಸೋಶಿಯಲ್ ಫೋರಂನ ಸಮ್ಮೇಳನ ನಡೆದಾಗ ಕರ್ನಾಟಕ ರೈತ ಚಳುವಳಿ ಅದರ ಭಾಗವಾಗಲಿಲ್ಲ. ಅದನ್ನು ಅಂತರ ರಾಷ್ಟ್ರೀಯ ಬಂಡವಾಳಗಾರರ ಸಮ್ಮೇಳನವೆಂದು ಜರೆಯಿತು. ಅದಕ್ಕೆ ಪರ್ಯಾಯವಾಗಿ ಅದು "ಮುಂಬಾಯಿ ರೆಸಿಸ್ಟೆಂಟ್" ಗುಂಪುವೊಂದ ಭಾಗವಾಯಿತು. ಅದರಲ್ಲಿ ಭಾಗವಹಿಸಿದ ಗುಂಪುಗಳನ್ನು ಗಮನಿಸಿ.

> **ಬೇರೆ ಬೇರೆ ಸಂದರ್ಭದಲ್ಲೂ ನೋಡಬಹುದು. ಜಾಗತೀಕರಣದ ವಿರುದ್ಧ ರೈತ ಸಂಘ 1990 ರ ದಶಕದಲ್ಲಿ ನಡೆಸಿದ "ಇಂಟರ್ ಕಾಂಟಿನೆಂಟಲ್ ಕ್ಯಾರವಾನ್"ನ ಪೋಲಿಟಿಕಲ್ ಮೆನಿಫೆಸ್ಟೋದಲ್ಲಿ ಇದರ ಪುನರಾವರ್ತನೆಯ ಛಾಯೆ ಕಂಡು ಬರುತ್ತದೆ. ಅದರಲ್ಲಿ ಜಾಗತೀಕ ಸಂಸ್ಥೆಗಳಿಗೆ, ಜಾಗತೀಕ , ಆರ್ಥಿಕ, ರಾಜಕೀಯ ಹಾಗೂ ಮಿಲಿಟರಿ ಆಡಳಿತಕ್ಕೆ ಅವಿಧೇಯತೆಯನ್ನು ತೋರಿಸುವಕರೆ ನಿಚ್ಚಳವಾಗಿ ಕಂಡು ಬರುತ್ತದೆ. ಜನರು ಎಲ್ಲಾ ರೂಪದ ಅಧಿಕಾರವನ್ನು ತಮ್ಮ ವಶಪಡಿಸಿಕೊಳ್ಳುವ ಗಂಭಿರವಾದ ಸಲಹೆ ಈ ಮೆನಿಫೆ ಸ್ಟೋದಲ್ಲಿದೆ.**

ಕೆಲವಂತೂ ಕ್ರಾಂತಿಯನ್ನೇ ಪ್ರತಿಪಾದಿಸುತ್ತಿದ್ದ ಗುಂಪುಗಳು ಇದ್ದವು. ಎಲ್ಲಾ ಗುಂಪುಗಳು ಸಾಮ್ರಾಜ್ಯಶಾಹಿ ಹಾಗೂ ಯುದ್ಧ ವಿರೋಧಿಯಾಗಿದ್ದವು. ಅವುಗಳ ಮುಖ್ಯ ಗುರಿ ಜಗತಿನಾದ್ಯಂತ ಸಾಮ್ರಾಜ್ಯ ಶಾಹಿ ವಿರೋಧಿ ಹೋರಾಟಗಳನ್ನು ತಯಾರು ಮಾಡಿಸುವುದಾಗಿತ್ತು. ಅಲ್ಲದೇ ಜಗತ್ತಿನಾದ್ಯಂತ ಸಾಮ್ರಾಜ್ಯಶಾಹಿಯನ್ನು ನಾಶಪಡಿಸುವುದು. ಅದರ ವಾದವನ್ನು ಗಮನಿಸಿ.

Imperialism cannot be reformed – it has to be smashed MR 2004 believes that the ravages of neo-liberal, imperialist globalization are not a result of the policies of particular individuals heading the imperialist bodies and governments, but are the natural outcome of the logic of imperialism which is to aggressively dominate the world, force open markets, destabilize and even overthrow 'unfriendly' governments etc.

Hence there is no way that these bodies or the system can be reformed, or given a 'human face' as many of the main spokespersons of the WSF wish to do. Globalisation can only be fought by targeting, rejecting, and smashing the imperialist/capitalist system that lies behind it.

All Imperialisms are the enemy – some may be temporarily more dangerous MR 2004 also believes that the needs of the imperialist/capitalist system themselves lead to the patterns that we are now witnessing under globalization – the attempt to aggressively dominate the world, capture resources, force open markets using political, financial and even military means, arm-twist, destabilize and even overthrow 'unfriendly' governments etc.

At a particular time and on a particular issue some sections of the imperialist/capitalist system may oppose actions by more powerful forces within it. They may attempt to portray themselves as 'principled opponents', 'friends of the people', 'anti-imperialist' etc. Yet their particular positions on specific issues, whether genuine or not, can never hide their real long term interests – to dominate and subjugate the world.

ಆಶ್ಚರ್ಯವೆಂದರೆ ಈ ಸಂಧರ್ಭದಲ್ಲಿ ಮಾರ್ಕ್ಸ್ ವಾದಿಗಳು, ಮಾವೋವಾದಿಗಳು, ಲೋಹಿಯಾವಾದಿಗಳು ಒಂದೇ ಚೌಕಟ್ಟಿನ್ನಲ್ಲಿ ಬರುತ್ತಾರಲ್ಲದೆ ಇಡೀ ಮುಂಬಾಯಿ ರಿಸಿಸ್ಟೆಂಟ್ ನ ಪೊಲಿಟಿಕಲ್ ಮೆನಿಫೆಸ್ಟೋವನ್ನು ಅನುಮೋದಿಸುತ್ತಾರೆ. ಅದರರ್ಥ ಲೋಹಿಯಾವಾದ ತೀವ್ರತರ ಸೋಶಿಯಲಿಸಂಅನ್ನು ಒಪ್ಪಿಕೊಳ್ಳುವ ಮನಸ್ಥಿತಿಯಲ್ಲಿತ್ತೆ? ಇದರಲ್ಲಿ ಹಾಗೂ ಲಾ ವಿಯಾ ಕಂಪೆಸಿನಾದ ತಾತ್ವಿಕತೆಯಲ್ಲಿ ಹೆಚ್ಚೇನು ವಿಭಿನ್ನತೆ ಇರಲಿಲ್ಲ.ನಂಜುಂಡಸ್ವಾಮಿ ಈ ವಾದವನ್ನು ಸಂಪೂರ್ಣವಾಗಿ ಅನುಮೋದಿಸಿದ್ದರು,

ಇಲ್ಲಿ ಪರ್ಯಾಯಗಳ ಹುಡುಕುವಿಕೆ ಕೂಡ ಅಷ್ಟೇ ಮುಖ್ಯವಾಗಿ ಬಿಡುತ್ತದೆ. 1980 ರ ದಶಕದಲ್ಲಿ ನಂಜುಂಡ ಸ್ವಾಮಿ ಸ್ವದೇಶಿ ಕಲ್ಪನೆಯೋಳಗೆ ಪರ್ಯಾಯಗಳನ್ನು ಹುಡುಕುತ್ತಾ ಹೋದರು. ಅದರಲ್ಲಿ ಲೋಹಿಯಾ ಸ್ಪಷ್ಟವಾಗಿ ಕಂಡುಬರುತ್ತಾರೆ, ಆ ಪರ್ಯಾಯವನ್ನು "ಖಾದಿ ಕರ್ಟನ್" ಎಂದೆಲ್ಲಾ ಕರೆದರು. ಆದರೆ ಅದನ್ನು ಜನಪ್ರಿಯಗೊಳಿಸಲಿಲ್ಲ. ಇದನ್ನು ಲೋಹಿಯವೋತ್ತರದ "ನಂಜುಂಡ ಸ್ವಾಮಿ ಸೋಶಿಯಲಿಸಂ" ಎಂದು ಕರೆಯಬಹುದೆ? ವಾಸ್ತವವಾಗಿ "ಖಾದಿ ಕರ್ಟನ್" ಎಂಬ ವಾದ ದೇಶಿಯ ನೆಲೆಗಟ್ಟಿನಲ್ಲಿ ಹೊಸತಾಗಿತ್ತು. ದುರಂತವೆಂದರೆ ಇದೊಂದು ಅಪೂರ್ಣಗೊಂಡ ಪರ್ಯಾಯ. ಅದರೆ ಅದೇ ಪರ್ಯಾಯ 1990 ಹಾಗೂ 2000 ರ ದಶಕದಲ್ಲಿ ವಿವಿಧ ಅಂತರ ರಾಷ್ಟ್ರೀಯ ಸಾಮಾಜಿಕ ಚಳುವಳಿಗಳಿಗೆ ಮುಖಾಮುಖಿಯಾದ ಸಂದರ್ಭದಲ್ಲಿ ಎಡ ಪಂಥೀಯ ತತ್ವಗಳನ್ನು ಅಂತರ್ಗತಗೊಳಿಸುವುದನ್ನು ನಾವು ನೋಡಬಹುದು.

ಅಂದರೆ ಲೋಹಿಯಾ ಸೋಶಿಯಲಿಸ್ಟರು ರ್ಯಾಡಿಕಲ್ ಸೋಶಿಲಿಸಂಅನ್ನು ತಮ್ಮ ತಾತ್ವಕ ನೆಲೆಗಟ್ಟಿನಲ್ಲಿ ಅಂತರ್ಗತಗೊಳಿಸುವಷ್ಟು ಅಥವಾ ಒಪ್ಪಿಕೊಳ್ಳುವಷ್ಟು ಮಾನಸಿಕವಾಗಿ ಬೆಳೆದಿದ್ದರು. ಅಥವಾ ಅಂತಹ ಸ್ಥಿತಿಯನ್ನು ತಲುಪಿದ್ದರು. ನಂಜುಂಡ ಸ್ವಾಮಿ ಈ ದಿಕ್ಕಿನಲ್ಲಿ ತಯಾರಿ ನಡೆಸಿದ್ದನ್ನ ನಾವು ತಿರಸ್ಕರಿಸಲು ಸಾಧ್ಯವಿಲ್ಲ. ಇದನ್ನು "ಲೋಹಿಯವೋತ್ತರ ನವ-ಸೋಶಿಯಲಿಸಂ" ಎಂದು ಕರೆದರೆ ಅತಿಶಯೋಕ್ತಿಯಾಗಲಾರದು. ಯಾಕೆಂದರೆ ಲೋಹಿಯಾ ಉಪಯೋಗಿಸಿದ, ತಂತ್ರಗಾರಿಕೆ, ರಾಜಕಾರಣ ಹಾಗೂ ಮೆಥಡಾಲಾಜಿಯನ್ನೇ ಪ್ರೋ ನಂಜುಂಡ ಸ್ವಾಮಿ ಉಪಯೋಗಿಸಿದರು. ಈ ನಿರ್ಮಿತಿಯಲ್ಲಿ ಪ್ರೊ.ನಂಜುಂಡ ಸ್ವಾಮಿವರನ್ನು ಗುರುತಿಸುವುದು ಅತೀ ಅವಶ್ಯಕ. □

ನಾಟಕ ಅವಲೋಕನ

ರಂಗಕ್ಕೆ ಬಂದ ಗಾಂಧಿ!

ಡಾ|| ಕಾ.ವೆಂ. ಶ್ರೀನಿವಾಸಮೂರ್ತಿ

ಗಾಂಧಿ ಬಂದ ; ಸಂಚಲನ ಮೂಡಿಸಿದ. ಅದು ಇತಿಹಾಸ ಅದೇ ಸಂಚಲನವನ್ನು ಬಯಸುವ ಯಾರೇ ಆದರೂ ಅಂತಹ ಆಗಮ ನವನ್ನು ಮತ್ತೆ; ಅಲ್ಲದೆ ಮತ್ತೆ ಮತ್ತೆ ಬಯಸುತ್ತಾರೆ. ಇದರರ್ಥ ಆಗ ಮನಕ್ಕೆ ಬೇಕಾದ ಸನ್ನಿವೇಶವನ್ನು ನಾವು ಉಳಿಸಿಕೊಂಡಿದ್ದೇವೆ ಎಂದು. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಪೂರ್ವ ಜಗತ್ತಿನಲ್ಲಿ ಗಾಂಧಿ ದೇಶದಾದ್ಯಂತ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ವಲಯಗಳಲ್ಲಿ ಮೂಡಿಸಿದ ಸಂಚಲವನ್ನು ಮತ್ತು ಅದರ ಇಂದಿನ ಪ್ರಸ್ತುತೆಯನ್ನು ಕೃತಿ ಯಶಸ್ವಿಯಾಗಿ ಮಂಡಿಸಿದೆ.

ಗಾಂಧಿ ಯಾರಿಗೆ ಕಾಡದೆ ಬಿಟ್ಟಿದ್ದಾರೆ? ಇದು ಯಕ್ಷ ಪ್ರಶ್ನೆ. ಧಾರ್ಮಿಕ ಮೂಲಭೂತವಾದಿಗಳು, ಜಾತಿವಾದಿಗಳು ಇನ್ನೊಂದೆಡೆ ಸಮಾಜವಾದಿಗಳು, ಸಮತಾವಾದಿಗಳು, ಈ ನಡುವೆ ಆಧ್ಯಾತ್ಮವಾದಿಗಳು, ಪರಿಸರವಾದಿಗಳು, ಸ್ತ್ರೀವಾದಿಗಳು ಹೀಗೆ ಎಲ್ಲರನ್ನು ಇವರು ತಮ್ಮೆಡೆಗೆ ಸೆಳೆದಿದ್ದಾರೆ. ಈ ವಿವಿಧ ವಲಯಗಳ ಜನ ತಮ್ಮ ಕ್ಷೇತ್ರಗಳಲ್ಲಿ ತಮ್ಮದೇ ಆದ ಬಗೆಯಲ್ಲಿ ಇವರಿಗೆ ಪ್ರತಿಕ್ರಿಯಿಸಿದ್ದಾರೆ ಮತ್ತು ಒಂದು ಹಂತದಲ್ಲಿ ಮಣಿದಿದ್ದಾರೆ. ಆದ್ದರಿಂದಲೇ ಗಾಂಧೀವಾದ ಎಂಬುದು ಪ್ರತ್ಯೇಕವಾಗಿ ರೂಪಿತಗೊಂಡ ಒಂದು ವಾದವಾಗಿದ್ದು. ಇದರ ಅರಿವಿನ ಹಿನ್ನೆಲೆಯಲ್ಲಿಯೇ ಗಾಂಧಿ ಅಭಿಮಾನಿಗಳು, ಇವರ ಕುರಿತ ಚಿಂತಕರು ಅಂದು ಜಗತ್ತಿನ ಹಲವು ದೇಶಗಳಲ್ಲಿ ಸಹ ಕಾಣಲಾರಂಭಿಸಿದ್ದು. ಈ ನಿಟ್ಟಿನಲ್ಲಿ ಚಾರ್ಲಿ ಚಾಪ್ಲಿನ್ ಒಂದು

> **ಗಾಂಧೀವಾದದಲ್ಲಿಯೇ ಅಂತಿಮ ಅಥವಾ ಮೂಲ ಭೂತ ಪರಿಹಾರವಿದೆ ಎಂದು ನಾನು ತಿಳಿದಿಲ್ಲ. ಆದರೂ ಇಂದಿನ ಸನ್ನಿವೇಶದಲ್ಲಿ ಶಾಂತಿ, ಸಹ ಬಾಳ್ವೆ, ಜಾತ್ಯಾತೀತತೆ, ದೇಶದ ಸಾರ್ವ ಭೌಮತೆ, ಮಾನವ ಹಕ್ಕುಗಳು ಇತ್ಯಾದಿ ಪ್ರಕ್ಷುಬ್ಧತೆಗೆ ಸಿಲಿಕಿರುವಾಗ ಇವರ ವಾದದಲ್ಲಿ ಗಮನಾರ್ಹ ಶಮನವಿದೆ ಎಂದು ನಾನು ತಿಳಿದಿದ್ದೇನೆ. ಈ ಹಿನ್ನೆಲೆಯಲ್ಲಿ ಎಚ್. ನಾಗವೇಣಿ ಅವರ 'ಗಾಂಧಿ ಬಂದ' ಪ್ರಸ್ತುತ ಎನ್ನಿಸಿದೆ. ಇದನ್ನು ಚಂಪಾಶೆಟ್ಟಿ ಗುರುತರವಾಗಿ ನಿರ್ದೇಶಿಸಿದ್ದಾರೆ.**

ಅತ್ಯಂತ ಸಣ್ಣ ನಿದರ್ಶನವಷ್ಟೇ ಎನ್ನಿಸುತ್ತದೆ. ಹೀಗಿರುವಾದ ನಮ್ಮ ಇಂದಿನ ಕಾಲವನ್ನು ಗಾಂಧಿ ಕಲಕದೇ ಇರುವುದು ಸಾಧ್ಯವೇ? ಇಂತಹ ಕಲಕುವಿಕೆ ಸಮಾಜದ ಆರೋಗ್ಯಕರ ಬೆಳವಣಿಗೆಗಳಲ್ಲಿ ಒಂದು ಎನ್ನಿಸುತ್ತದೆ.

ಇದರರ್ಥ ಗಾಂಧೀವಾದದಲ್ಲಿಯೇ ಅಂತಿಮ ಅಥವಾ ಮೂಲಭೂತ ಪರಿಹಾರವಿದೆ ಎಂದು ನಾನು ತಿಳಿದಿಲ್ಲ. ಆದರೂ ಇಂದಿನ ಸನ್ನಿವೇಶದಲ್ಲಿ ಶಾಂತಿ, ಸಹ ಬಾಳ್ವೆ, ಜಾತ್ಯಾತೀತತೆ, ದೇಶದ ಸಾರ್ವಭೌಮತೆ, ಮಾನವ ಹಕ್ಕುಗಳು ಇತ್ಯಾದಿ ಪ್ರಕ್ಷುಬ್ಧತೆಗೆ ಸಿಲಿಕಿರುವಾಗ ಇವರ ವಾದದಲ್ಲಿ ಗಮನಾರ್ಹ ಶಮನವಿದೆ ಎಂದು ನಾನು ತಿಳಿದಿದ್ದೇನೆ. ಈ ಹಿನ್ನೆಲೆಯಲ್ಲಿ ಎಚ್.ನಾಗವೇಣಿ ಅವರ 'ಗಾಂಧಿ ಬಂದ' ಪ್ರಸ್ತುತ ಎನ್ನಿಸಿದೆ. ಇದನ್ನು ಚಂಪಾಶೆಟ್ಟಿ ಗುರುತರವಾಗಿ ನಿರ್ದೇಶಿಸಿದ್ದಾರೆ. ಇದನ್ನು ಅರ್ಪಿಸುವ ಮೂಲಕ 'ರಂಗಮಂಟಪ' ಬೆಂಗಳೂರು ಇದರ ಗೆಳೆಯರು ಸಾಮಾಜಿಕ ಬದ್ಧತೆಯನ್ನು ತೋರಿದ್ದಾರೆ. 'ಕಲೆಗಾಗಿ ಕಲೆ' ಎಂಬ ತತ್ವದ ಆರಾಧನೆ ಇಂದಿಗೂ ವ್ಯಾಪಕವಾಗಿ ನಡೆದಿರುವ ಸಂದರ್ಭದಲ್ಲಿ ಇವರು ಸಮಾಜಕ್ಕಾಗಿ ಕಲೆ ಎಂಬ ತತ್ವವನ್ನು ಮೆರೆದಿರುವುದು ಇಂದಿನ ದಿನಮಾನಗಳಿಂತೂ ಅತ್ಯಂತ ತುರ್ತಿನದಾಗಿದೆ.

ಹಿಂದೂ ಮತದಲ್ಲಿ ಹುಟ್ಟಿದ್ದೇವೆಯೆಂದರೆ ಅದು ಸಾಮಾಜಿಕ ನರಕದಲ್ಲಿ ಹುಟ್ಟಿದ್ದೇವೆ ಎಂದರ್ಥ. ಅದರಲ್ಲೂ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬಗಳಲ್ಲಿ ಹೆಣ್ಣಾಗಿ, ಅದರಲ್ಲೂ ವಿಧವೆಯಾಗಿ ಬಾಳುವುದು ಏಳನೆಯ ನರಕಕ್ಕಿಂತ ಘೋರವಾದುದು! ಅಂತಹ ಬದುಕನ್ನು ಈಗಾಗಲೇ

(49ನೇ ಪುಟಕ್ಕೆ)

ಅಲಕ್ಷಿತರ ಪದತಲದಿಂದ ಅಭಿವೃದ್ಧಿಯ ಆರಂಭ



ಡಾ. ಟಿ.ಆರ್. ಚಂದ್ರಶೇಖರ್

ಪ್ರಸ್ತಾವನೆ

ನಮ್ಮ ಸಮಾಜ, ಆರ್ಥಿಕತೆ ಮತ್ತು ರಾಜಕಾರಣಗಳಲ್ಲಿ ಯಾವುದನ್ನು ಪ್ರಧಾನಧಾರೆ-ಯಜಮಾನವಾದಿ ಅಭಿವೃದ್ಧಿ ಪ್ರಣಾಳಿಕೆಯೆಂದು ಕರೆಯುತ್ತಾ ಬರಲಾಗಿದೆಯೋ ಅದು ಸಮಾಜದ ಪ್ರತಿಷ್ಠಿತ ವರ್ಗದ ಹಿತಾಸಕ್ತಿಗಳನ್ನು ಮಾತ್ರ ಪೋಷಿಸಬಲ್ಲದು. ಈ ಧಾರೆಯಲ್ಲಿರುವವರನ್ನು ಮಾತ್ರ ಅದು ಒಳಗೊಳ್ಳುತ್ತದೆ. ಈ ಬಗೆಯ ಪ್ರಣಾಳಿಕೆಗೆ ಸಮಾಜದಲ್ಲಿ ಅಧೀನ ವರ್ಗವನ್ನು ಹುಟ್ಟುಹಾಕುವುದು ಅನಿವಾರ್ಯವಾಗುತ್ತದೆ. ಅಧೀನವರ್ಗವನ್ನು ಹುಟ್ಟು ಹಾಕದೆ, ಸಮಾಜದಲ್ಲಿ ದುರ್ಬಲರನ್ನು ಅಂಚಿಗೆ ತಳ್ಳದೆ ಅವರನ್ನು ಪರಿಶಿಷ್ಟರನ್ನಾಗಿ ಮಾಡಿಕೊಳ್ಳದೆ ಪ್ರತಿಷ್ಠಿತ-ಪ್ರಧಾನ-ಶಿಷ್ಟ ವರ್ಗವು ತನ್ನ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದು ಸಾಧ್ಯವಿಲ್ಲ.

ಬಂಡವಾಳಶಾಹಿ ಅಭಿವೃದ್ಧಿ ಮೀಮಾಂಸೆಗೆ ಇದು ಎಷ್ಟು ಸತ್ಯವೋ ಅಷ್ಟೇ ಹಿಂದೂ ಅಭಿವೃದ್ಧಿ ಪ್ರಣಾಳಿಕೆಗೂ ಸತ್ಯ. ಶಿಷ್ಟ -ಪರಿಶಿಷ್ಟ ಎಂಬ ಶ್ರೇಣೀಕೃತ ವರ್ಗೀಕರಣವನ್ನು ಅಂತರ್ಗತ ಮಾಡಿಕೊಂಡಿರುವ ಯಜಮಾನವಾದಿ ಅಭಿವೃದ್ಧಿ ಮೀಮಾಂಸೆಯಲ್ಲಿ ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಸಾಮಾಜಿಕ ಅಸಮಾನತೆಗಳನ್ನು ಪೋಷಿಸಬಲ್ಲಂತಹ ಕಾರ್ಯತಂತ್ರವಿದೆ. ಅವುಗಳನ್ನು ತೊಡೆದುಹಾಕುವಂತಹ ವ್ಯವಸ್ಥೆಯಲ್ಲಿ ಇಲ್ಲ. ಈ ಬಗೆಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪ್ರತಿಷ್ಠಿತವರ್ಗವು ಅಧೀನವರ್ಗವನ್ನು ತುಳಿದೆ ತನ್ನ ಏಳಿಗೆಯನ್ನು ಕಂಡುಕೊಳ್ಳಬೇಕಾಗುತ್ತದೆ. ಇದು ಕೇವಲ ಅಭಿವೃದ್ಧಿ ಕಾರ್ಯತಂತ್ರಕ್ಕೆ ಸಂಬಂಧಿಸಿದ ಸಂಗತಿಯಲ್ಲ. ನಾವು ಅಭಿವೃದ್ದಿಯನ್ನು ಪರಿಭಾವಿಸಿಕೊಂಡಿರುವ ಪರಿಯಲ್ಲಿಯೇ ಸಮಸ್ಯೆಯಿದೆ. ಈ ಪ್ರಣಾಳಿಕೆಯಲ್ಲಿ ಅಧೀನ-ಪ್ರಧಾನ, ಶಿಷ್ಟ -ಪರಿಶಿಷ್ಟ, ಒಳಗೊಳ್ಳುವ-ಒಳಗೊಳ್ಳದಿರುವ ಎನ್ನುವ ತಾರತಮ್ಯವಾದಿ ಸಂಗತಿಗಳು ಅಂತರ್ಗತಗೊಂಡಿವೆ. ಇಲ್ಲಿ ಪರಿಶಿಷ್ಟರ ಪರಿಶ್ರಮವೇ ಪ್ರತಿಷ್ಠಿತರ ಪದಾರ್ಥವಾಗಿದೆ. ಆ ಪದಾರ್ಥದಲ್ಲಿ ಪರಿಶಿಷ್ಟರ ಪಾಲು ಕಡಿಮೆ.

ಸಾಂಪ್ರದಾಯಿಕವಾಗಿ ಅಭಿವೃದ್ಧಿಯನ್ನು ರೇಖಾತ್ಮಕವಾಗಿ, ಅಂಖಂಡ ಮತ್ತು ವಿಕಾಸವಾದಿ ನೆಲೆಯಲ್ಲಿ ಪರಿಭಾವಿಸಿಕೊಳ್ಳುವುದು ರೂಢಿಯಲ್ಲಿದೆ. ಪ್ರಧಾನ-ಅಧೀನ ಎನ್ನುವ ಸಂಗತಿಗಳು ಅಭಿವೃದ್ಧಿಯ ಆರಂಭದಲ್ಲಿ ಅನಿವಾರ್ಯವೆಂದು ಪ್ರತಿಪಾದಿಸಲಾಗಿದೆ. ಅಭಿವೃದ್ಧಿಯು ಒಂದು ಮಜಲನ್ನು ತಲುಪಿದ ಮೇಲೆ, ಅಂದರೆ ಅದು ಒಂದು ಮಟ್ಟದ ವರಮಾನನ್ನು ಸಾಧಿಸಿಕೊಂಡ ಮೇಲೆ ಪ್ರಧಾನ-ಅಧೀನವೆನ್ನುವ ಸಂಗತಿಗಳು ಸಹಜವಾಗಿ ಅಳಿಸಿ ಹೊಗುತ್ತವೆಯೆಂದು ಹೇಳಲಾಗಿದೆ. ಅಭಿವೃ ದ್ಧಿಯು ಕಾಲಕ್ರಮೇಣ ಜನರನ್ನು ಒಳಗೊಳ್ಳುವ ಸ್ವರೂಪ ಪಡೆದು ಕೊಂಡು ಬಿಡುತ್ತದೆ'ಯೆಂದು ನಂಬಲಾಗಿದೆ. ಈ ಭಿನ್ನತೆ ಅಳಿಸಿ ಹೋಗುವುದು ಕೇವಲ ಕಾಲದ ಸಂಗತಿ ಮಾತ್ರವಾಗಿದೆ. ಇವತ್ತಲ್ಲ ನಾಳೆ ಸಮಾಜದ ಎಲ್ಲರಿಗೂ ಅಭಿ ವೃದ್ಧಿಯ ಪಾಲು ದೊರೆಯುತ್ತದೆಯೆಂದು ಪ್ರತಿಪಾದಿಸಲಾಗುತ್ತಿದೆ ಆದರೆ ಇಲ್ಲಿನ ಪ್ರಶ್ನೆಯೆಂದರೆ ದಲಿತರು ಯಾಕೆ ವರಮಾನವು ಅದರಷ್ಟಕ್ಕೆ ಅದು ಹರಿದು ಅವರನ್ನು ತಲುಪುವುದರವರೆಗೆ ಕಾಯಬೇಕು?. ಪ್ರತಿಷ್ಠಿತರು ಪಡೆದುಕೊಳ್ಳುತ್ತಿರುವಂತೆ ದಲಿತರೂ ಅದನ್ನು ಪಡೆದುಕೊಳ್ಳಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬಾರದು?. ಮೇಲಿನಿಂದ ವರಮಾನ ಕಾಲಕ್ರಮೇಣ ಹರಿದುಬರುತ್ತದೆ ಎನ್ನುವ ವಿವರಣೆಯು ಅಭಿವೃದ್ಧಿ-ವಿರೋಧಿ ನಿಲವಾಗಿದೆ.

ತಜ್ಞರು ಹೇಳುವಂತೆ ಇಂತಹ ಸಮಜಾಯಿಶಿಯು ಕೇವಲ ಭ್ರಮೆ. ರೇಖಾತ್ಮಕವಾಗಿ ಮೇಲು ಮೇಲಕ್ಕೆ ಏಕಮುಖಿಯಾಗಿ ಸಾಗುವ ಅಭಿವೃದ್ಧಿಯು ಕಾಲಕ್ರಮೇಣ ಸಮಾಜದ ಅಧೀನ ವರ್ಗಕ್ಕೂ ವರಮಾನವನ್ನು ಹರಿಯ ಬಿಡುತ್ತದೆಯೆಂಬುದು ಒಂದು ಹುನ್ನಾರ. ಏಕೆಂದರೆ ವರಮಾನದ ತಳಮುಖಿ ಹರಿಯುವಿಕೆಗೆ ಅಡ್ಡಲಾಗಿ ಅನೇಕ ಗೋಡೆಗಳಿರುವುದು ತಿಳಿಯದ ಸಂಗತಿಯೇನಲ್ಲ. ಈ ವ್ಯವಸ್ಥೆಯಲ್ಲಿ ವರಮಾನವು ಮೇಲಿನ ವರ್ಗದಲ್ಲೇ ಮಡುಗಟ್ಟಿಕೊಳ್ಳುವಂತೆ ಮಾಡಲಾಗುತ್ತದೆ. ಈ ಸಂಗತಿಯನ್ನು ಗಮನದಲ್ಲಿಟ್ಟುಕೊಂಡೆ ಅಮರ್ತ್ಯಸೆನ್ ತನ್ನ 'ಪಾವರ್ಟಿ ಆಂಡ್ ಫೈಮೈನ್'ನಲ್ಲಿ (1981) 'ಹಸಿವು ಎಂಬುದು ಆಹಾರ ಇಲ್ಲದಿರುವುದರಿಂದ ಉಂಟಾಗುವ ಸಮಸ್ಯೆಯಲ್ಲ. ಅದು ಆಹಾರವು ಸಮಾಜದ ಕೆಲವು ವರ್ಗಗಳಿಗೆ ದೊರೆದಿರುವುದರಿಂದ ಉಂಟಾಗುವ ಸಮಸ್ಯೆಯಾಗಿದೆ' ಎಂದು ಹೇಳಿದ್ದಾನೆ.

ಹಸಿವನ್ನು ಕುರಿತಂತೆ ಸೆನ್ ಹೇಳಿದ ಮಾತುಗಳನ್ನು ನಾವು ಅಭಿವೃದ್ಧಿಗೂ ಅನ್ವಯಿಸಿ ಹೇಳಬಹುದಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಕರ್ನಾಟಕವನ್ನು ಗಮನದಲ್ಲಿಟ್ಟುಕೊಂಡು ಪರಿಶಿಷ್ಟರು ಹೇಗೆ ಅಭಿವೃದ್ಧಿಯಿಂದ ವಂಚಿತರಾಗುತ್ತಿದ್ದಾರೆ ಎಂಬುದನ್ನು ತೋರಿಸಲು ಪ್ರಯತ್ನಿಸಲಾಗಿದೆ. ಸಾಮಾಜಿಕತೆಗೆ ಬೆನ್ನುತಿರುವಿ ಸಾಮಾಜಿಕವಾಗಿ ನಿರಪೇಕ್ಷವಾದ ಮತ್ತು ಸಮಾಜಕ್ಕೆ ವಿಮುಖಿಯದ ಅಭಿವೃದ್ಧಿ ಪ್ರಣಾಳಿಕೆಯಲ್ಲಿ ಸಮಾನತೆಗೆ ಅವಕಾಶ ವಿರುವುದಿಲ್ಲ. ಸಾಮಾಜಿಕವಾಗಿ ಖಂಡಸ್ವರೂಪಿಯಾದ ಸಮಾಜದಲ್ಲಿ ಅಭಿವೃದ್ಧಿಯು ಅಖಂಡವಾಗಿರಲು ಸಾಧ್ಯವಿಲ್ಲ. ಅವಿಭಕ್ತತೆಯು ಅಭಿ ವೃದ್ಧಿಯ ಲಕ್ಷಣವೇನಲ್ಲ. ಖಂಡಸ್ವರೂಪಿ ಸಮಾಜದಲ್ಲಿ ಅಭಿವೃದ್ಧಿಯ ಫಲಗಳು ಸಮಾಜದ ಎಲ್ಲರಿಗೂ ಸಮಾನವಾಗಿ ದೊರೆಯುವುದು ಸಾಧ್ಯವಿಲ್ಲ. ಅಭಿವೃದ್ಧಿಯೆಂಬುದು ದಾನ ಅಲ್ಲ, ದತ್ತಿ-ಉಂಬಳಿಯೂ ಅಲ್ಲ. ಅದನ್ನು ಜನರು ದಕ್ಕಿಸಿಕೊಳ್ಳಬೇಕಾಗುತ್ತದೆ.

ಅಭಿವೃದ್ಧಿಯ ಫಲಗಳನ್ನು ಧಾರಣೆ ಮಾಡಿಕೊಳ್ಳಲು ಜನರಿಗೆ ಅಧಿಕಾರಬೇಕು. ಅವರ ಧಾರಣಾ ಸಾಮರ್ಥ್ಯವು ಸಾಕ್ಷರತೆಯಿಂದ, ಕುಶಲತೆಯಿಂದ, ಶಿಕ್ಷಣದಿಂದ, ತರಬೇತಿಯಿಂದ ಪ್ರಾಪ್ತವಾಗುತ್ತದೆ. ಅಮರ್ತ್ಯಸೆನ್ ಧಾರಣಾ ಶಕ್ತಿಯ ಕೊರತೆಯನ್ನು ಬಡತನವೆಂದು ಕರೆದಿದ್ದಾನೆ. ಇಲ್ಲಿ ಅಲಕ್ಷಿತರು ಎಂಬುದನ್ನು ಧಾರಣಾ ಶಕ್ತಿಯ ಕೊರತೆಯಿಂದ ಜರ್ಜರಿತರಾದ ಜನರೆಂದು ಭಾವಿಸಬಹುದು. ಧಾರಣ ಶಕ್ತಿಯ ಮೂಲ

ಅಭಿವೃದ್ಧಿಯನ್ನು ರೇಖಾತ್ಮಕವಾಗಿ, ಅಂಖಂಡ ಮತ್ತು ವಿಕಾಸವಾದಿ ನೆಲೆಯಲ್ಲಿ ಪರಿಭಾವಿಸಿಕೊಳ್ಳುವುದು ರೂಢಿಯಲ್ಲಿದೆ. ಪ್ರಧಾನ-ಅಧೀನ ಎನ್ನುವ ಸಂಗತಿಗಳು ಅಭಿವೃದ್ಧಿಯ ಆರಂಭದಲ್ಲಿ ಅನಿವಾರ್ಯ ವೆಂದು ಪ್ರತಿಪಾದಿ ಸಲಾಗಿದೆ. ಅಭಿವೃದ್ಧಿಯು ಒಂದು ಮಜಲನ್ನು ತಲುಪಿದ ಮೇಲೆ, ಅಂದರೆ ಅದು ಒಂದು ಮಟ್ಟದವರಮಾನನ್ನು ಸಾಧಿಸಿಕೊಂಡ ಮೇಲೆ ಪ್ರಧಾನ-ಅಧೀನ ವೆನ್ನುವ ಸಂಗತಿಗಳು ಸಹಜವಾಗಿ ಅಳಿಸಿ ಹೋಗುತ್ತವೆಯೆಂದು ಹೇಳಲಾಗಿದೆ. ಅಭಿವೃದ್ಧಿಯು ಕಾಲ ಕ್ರಮೇಣ ಜನರನ್ನು ಒಳಗೊಳ್ಳುವ ಸ್ವರೂಪ ಪಡೆದು ಕೊಂಡು ಬಿಡುತ್ತದೆಯೆಂದು ನಂಬಲಾಗಿದೆ. ಈ ಭಿನ್ನತೆ ಅಳಿಸಿ ಹೋಗು ವುದು ಕೇವಲ ಕಾಲದ ಸಂಗತಿ ಮಾತ್ರವಾಗಿದೆ.

ಧಾತುಗಳಾದ ಬಂಡವಾಳ, ಸಾಕ್ಷರತೆ, ಶಿಕ್ಷಣ, ಲಿಂಗ, ಕಸುಬು, ಆಹಾರ ಭದ್ರತೆ ಮುಂತಾದವುಗಳಿಗೆ ಸಂಬಂಧಿಸಿದಂತೆ ವಂಚಿತರಾದ ಜನರೇ ಅಲಕ್ಷಿತವರ್ಗ. ಈ ವರ್ಗಕ್ಕೆ ಬದುಕುವುದೇ ದುರ್ಲಭವಾಗಿರುತ್ತದೆ. ಸಮಾಜದಲ್ಲಿ ಹರಿದು ಬರುವ ಅವಕಾಶಗಳನ್ನು ಇವರಿಗೆ ಧಾರಣೆ ಮಾಡಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಅಭಿವೃದ್ಧಿಯು ಇಲ್ಲಿ ವಂಚಿತ ವರ್ಗವನ್ನು ಸಬಲೀಕರಿಸುವ ರೀತಿಯಲ್ಲಿರುವುದಿಲ್ಲ. ಅವರನ್ನು ಮೂಲೆ ಗುಂಪು ಮಾಡುವ ರೀತಿಯಲ್ಲಿರುತ್ತದೆ. ಈ ರೀತಿಯಲ್ಲಿ ವಂಚಿತರನ್ನು ಮೂಲೆಗೆ ತಳ್ಳುವುದರ ಮೂಲಕವೇ ಪ್ರತಿಷ್ಠಿತವರ್ಗ ತನ್ನ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುತ್ತಿರುತ್ತದೆ.

ಚಾರಿತ್ರಿಕ ಶ್ರೇಣೀಕರಣ

ಭೂಮಿಯು ಒಂದು ಸರಕಲ್ಲ. ಅದೊಂದು ಪ್ರತಿಷ್ಠೆಯ ಸಂಗತಿ. ಅದಕ್ಕೆ ಸಮಾಜದಲ್ಲಿ ಪವಿತ್ರವಾದ ಸ್ಥಾನವಿದೆ. ಅನಾದಿಕಾಲದಿಂದಲೂ ಭೂಮಿಯು ಪ್ರತಿಷ್ಠಿತರ ಮಾಲಿಕತ್ವದಲ್ಲೇ ಇರುತ್ತದೆ. ಪರಿಶಿಷ್ಟರಿಗೆ ಭೂಮಾಲಿಕತ್ವದ ಅವಕಾಶವೇ ಇರಲಿಲ್ಲ. ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ (528.52ಲಕ್ಷ) ದಲಿತರ ಸಂಖ್ಯೆ 120.28 ಲಕ್ಷದಷ್ಟಾದರೆ ಪ್ರತಿಷ್ಠಿತರ ಸಂಖ್ಯೆ 408.23ಲಕ್ಷ. ಇದೇ ರೀತಿ ಪರಿಶಿಷ್ಟ ದುಡಿಮೆಗಾರರಲ್ಲಿ(56.76ಲಕ್ಷ) ಸಾಗುವಳಿಗಾರರ ಪ್ರಮಾಣ ಶೇ21.53. ಆದರೆ ಪ್ರತಿಷ್ಠಿತ ವರ್ಗದಲ್ಲಿ ಪ್ರಮಾಣ ಶೇ27. 80. ಕರ್ನಾಟಕದಲ್ಲಿ 2001ರ ಜನಗಣತಿ ಪ್ರಕಾರ ಒಟ್ಟು ದಿನಗೂಲಿಗಳ ಸಂಖ್ಯೆ 62.27ಲಕ್ಷ. ಇವರಲ್ಲಿ ಪರಿಶಿಷ್ಟರ ಸಂಖ್ಯೆ24.75ಲಕ್ಷ (ಶೇ39.74). ಆದರೆ ಪ್ರತಿಷ್ಠಿತರಲ್ಲಿ ಇವರ ಪ್ರಮಾಣ ಕೇವಲ ಶೇ60. 26 (37.52ಲಕ್ಷ) ಅಂದರೆ ಜನಸಂಖ್ಯೆಯಲ್ಲಿ ಪರಿಶಿಷ್ಟರು ಎಷ್ಟು ಪಾಲುಪಡೆದಿದ್ದಾರೋ. (ಶೇ22.76) ಅದಕ್ಕಿಂತ ಅಧಿಕವಾಗಿ ಅವರು ದಿನಗೂಲಿ (ಶೇ39.74) ಕೆಲಸಗಳಲ್ಲಿ ಮುಗಿಬಿದ್ದಿದ್ದಾರೆ. ಪರಿಶಿಷ್ಟರಲ್ಲಿ ದಿನಗೂಲಿಗಳ ಪ್ರಮಾಣ ಶೇ43.60ರಷ್ಟಾದರೆ ಪ್ರತಿಷ್ಠಿತರಲ್ಲಿ ಅವರ ಪ್ರಮಾಣ ಶೇ 21.20 ಮಾತ್ರ. ಈ ಎಲ್ಲ ವಿವರಗಳನ್ನು ಇಲ್ಲಿ ನೀಡುವ ಕಾರಣವೆಂದರೆ ಪರಿಶಿಷ್ಟರು ಸಮಾಜದಲ್ಲಿ ದುಡಿಮೆಗೆ ನೀಡುತ್ತಿರುವ ಕಾಣಿಕೆ ಅಪಾರ.

ಆದರೆ ಅವರು ಅಭಿವೃದ್ಧಿಯಲ್ಲಿ ಪಡೆಯುತ್ತಿರುವ ಪಾಲು ಅತ್ಯಲ್ಪ. ಅಭಿವೃದ್ಧಿಯ ಪದತಲದಲ್ಲಿ ಪರಿಶಿಷ್ಟರಿದ್ದಾರೆ. ಅದರ ಫಲಗಳನ್ನು ಅನುಭವಿಸುವುದರಲ್ಲಿ ಪ್ರತಿಷ್ಠಿತರು ಮುಂದಿದ್ದಾರೆ. ದಲಿತರಿಗೆ ಭೂಮಿ ನೀಡಲು ತಿಣುಕಾಡುವ ಸರ್ಕಾರಗಳು ಉದ್ದಿಮೆಗಳಿಗೆ ಮಾತ್ರ ತಾನೇ ಮುಂದೆ ನಿಂತು ಭೂಮಿಯನ್ನು ಒದಗಿಸಿಕೊಡುತ್ತದೆ. 'ಜಮೀನು ನೀಡಿರಿ–ಉದ್ಯೋಗ ಪಡೆಯಿರಿ' ಎಂಬ ಘೋಷಣೆಯನ್ನು ಇಂದು ರೂಪಿಸಲಾಗಿದೆ. ಆದರೆ ದಲಿತರ ಸಂದರ್ಭದಲ್ಲಿ ಸರ್ಕಾರಗಳು ಇಂತಹ ಘೋಷಣೆಯನ್ನು ನುಡಿಯುವುದಿಲ್ಲ. ಎನ್‌ಸಿಇಎಆರ್ ಸಂಸ್ಥೆಯು 'ಭಾರತದಲ್ಲಿ ಮಾನವ ಅಭಿವೃದ್ಧಿ ಸವಾಲುಗಳು' ಎಂಬ ಅಧ್ಯಯನದಲ್ಲಿ ಸಾಮಾಜಿಕ ಅಸಮಾನ ತೆಯನ್ನು ಹಿಡಿದಿಡುವ ಪ್ರಯತ್ನಮಾಡಿದೆ. ಈ ಅಧ್ಯಯನಕ್ಕಾಗಿ ಸುಮಾರು 1503 ಹಳ್ಳಿಗಳಲ್ಲಿ 40000ಕ್ಕೂ ಮಿಕ್ಕ ಕುಟುಂಬಗಳ ಸಮೀಕ್ಷೆಯನ್ನು ಅದು ನಡೆಸಿದೆ. ಈ ಅಧ್ಯಯನದಲ್ಲಿ ಅದು ಕಂಡುಕೊಂಡ ಸತ್ಯವೆಂದರೆ:'ಏರಿಕೆಯಾದ ವರಮಾನವು ತನ್ನಷ್ಟಕ್ಕೆ ತಾನು ಸಮಾಜದ ಕೆಳಸ್ತರದಲ್ಲಿರುವ ದಲಿತರಿಗೆ, ಶೂದ್ರರಿಗೆ, ಹಿಂದುಳಿದ ವರ್ಗಗಳಿಗೆ, ಅಲ್ಪಸಂಖ್ಯಾತರಿಗೆ ಒದಗಿ ಬರುತ್ತದೆ ಎಂಬ ಸಾಂಪ್ರದಾಯಿಕ ನಂಬಿಕೆಯು ಹುಸಿಯಾದುದು'.

ನೊಬೆಲ್ ಪ್ರಶಸ್ತಿ ಅರ್ಥಶಾಸ್ತ್ರಜ್ಞ ಜೊಸೆಫ್ ಸ್ಟಿಗ್‌ಲಿಡ್ಜ್ ತನ್ನ ಪ್ರಸಿದ್ಧ ಜಾಗತೀಕರಣ ಕೃತಿಯಲ್ಲಿ ನಾವು ಯಾವುದನ್ನು 'ಟ್ರಿಕಲ್ ಡೌನ್ ಸಿದ್ಧಾಂತ' ವೆಂದು ಕರೆಯುತ್ತಾ ಬಂದಿದ್ದೇವೆಯೋ ಅದು ಹುಸಿ ಎಂಬುದನ್ನು ಆತ ಸಿದ್ಧಮಾಡಿ ತೋರಿಸಿದ್ದಾನೆ. ಎನ್‌ಸಿಇಎಆರ್ ಅಧ್ಯಯನದ ಪ್ರಕಾರ ದಲಿತ ಕುಟುಂಬಗಳ ತಲಾ ವಾರ್ಷಿಕ ವರಮಾನ ರೂ 20000 ದಿಂದ ರೂ 22000 ದಷ್ಟಾದರೆ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗಗಳ ವಾರ್ಷಿಕ ವರಮಾನ ಅದಕ್ಕಿಂತ ಸ್ವಲ್ಪ ಅಧಿಕ. ಆದರೆ ಹಿಂದೂಗಳು, ಸಿಖ್ಖರು ಮತ್ತು ಜೈನರು ಹಾಗೂ ಕ್ರಿಶ್ಚಿಯನ್ನರುಗಳ ತಲಾ ವಾರ್ಷಿಕ ವರಮಾನ ರೂ 48000 ದಿಂದ ರೂ52000. ಅಂದರೆ ನಮ್ಮ ಸಮಾಜದಲ್ಲಿ ಶ್ರೇಣೀಕರಣ ಹೇಗಿದೆಯೋ ಅದೇ ರೀತಿಯಲ್ಲಿ ಅಭಿವೃದ್ಧಿಯು ಸಂಭವಿಸುತ್ತಿದೆ. ಈ ಕಾರಣದಿಂದಾಗಿ ಅಭಿವೃದ್ಧಿಯು ಪರಿಶಿಷ್ಟರನ್ನು ಒಳಗೊಳ್ಳುತ್ತಿಲ್ಲ.

ಅಭಿವೃದ್ಧಿಯ ಯಾವುದೇ ಸೂಚಿಯನ್ನು ತೆಗೆದುಕೊಂಡರೂ ದಲಿತರು ಅಭಿವೃದ್ಧಿಯ ಶ್ರೇಣೀಕರಣದಲ್ಲಿ ಕೆಳಸ್ತರದಲ್ಲಿರುತ್ತಾರೆ. ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಮಧ್ಯಮ ಸ್ತರದಲ್ಲಿದ್ದರೆ ಹಿಂದೂಗಳು, ಸಿಖ್ಖರು, ಜೈನರು ಮತ್ತು ಕ್ರಿಶ್ಚಿಯನ್ನರು ಉನ್ನತ ಸ್ಥಾನದಲ್ಲಿರುತ್ತಾರೆ.ಸರ್ಕಾರಿ ಅಥವಾ ಖಾಸಗಿ ನೌಕರಿಗಳಲ್ಲಿ ಉನ್ನತ ವರ್ಗಗಳ ಪ್ರಾತಿನಿಧ್ಯ ದಲಿತರ ಪ್ರಾತಿನಿಧ್ಯಕ್ಕಿಂತ ಅಧಿಕ. ಅಲ್ಲಿನ ಪ್ರತಿ ಹತ್ತು ನೌಕರರಲ್ಲಿ ಮೂವರು ಉನ್ನತ ವರ್ಗದವರಾಗಿರುತ್ತಾರೆ. ಈ ಬಗೆಯ ಅವಕಾಶಗಳಲ್ಲಿ ಶಿಕ್ಷಣದಿಂದ ವಂಚಿತರಾದ ದಲಿತರ ಪ್ರಮಾಣ ಅಧಿಕವಿರಲು ಸಾಧ್ಯವಿಲ್ಲ. ಶಿಕ್ಷಣಪಡೆದ ಮಂದಿ ನೌಕರು ಹಿಡಿಯುವುದು ಸಾಧ್ಯ. ಅಂದರೆ ನಮ್ಮಲ್ಲಿ ಜನರನ್ನು ಒಳಗೊಳ್ಳುವ ಅಭಿವೃದ್ಧಿಯು ಯಶಸ್ವಿಯಾಗಿಲ್ಲ. ಪ್ರಾದೇಶಿಕ ಮತ್ತು ಲಿಂಗ ಸಂಬಂಧಿ ಅಸಮಾನತೆಯಿಂದ ಅದು ನರಳುತ್ತಿದೆ.

ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರ ದುಡಿಮೆಯು ಪುರುಷರ ದುಡಿಮೆಯ ಶೇ54ರಷ್ಟಾದರೆ ನಗರ ಪ್ರದೇಶದಲ್ಲಿ ಅದರ ಪ್ರಮಾಣ ಶೇ68. ಈ ವಿಷ ಯದಲ್ಲಿ ಹೆಚ್ಚು ವಂಚನೆಗೆ ಮತ್ತು ದಮನಕ್ಕೆ ಒಳಗಾಗಿರುವವರೆಂದರೆ ದಲಿತ ಮಹಿಳೆಯರು. ಕರ್ನಾಟಕದ ಪರಿಶಿಷ್ಟ ದಿನಗೂಲಿ ದುಡಿಮೆಗಾರರಲ್ಲಿ (24.75ಲಕ್ಷ) ಪುರುಷರ ಪ್ರಮಾಣ ಶೇ44.64ರಷ್ಟಾದರೆ ಮಹಿಳೆಯರ ಪ್ರಮಾಣ ಶೇ 55.36. ಕರ್ನಾಟಕದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ತಲಾ ವರಮಾನವು ಎರಡು ಪಟ್ಟು ಅಧಿಕವಾಗಿದೆ. ಅದು 2001–02ರಲ್ಲಿ ರಾಜ್ಯದ ತಲಾ ವರಮಾನ ಚಾಲ್ತಿ ಬೆಲೆಗಳಲ್ಲಿ ರೂ 19821ರಷ್ಟಿತ್ತು. ಅದು 2007–08ರಲ್ಲಿ ಅದು ರೂ41902 ಕ್ಕೇರಿದೆ (2.11ಪಟ್ಟು). ಆದರೆ ಜನರ ಬದುಕು ಮಾತ್ರ ಶೋಚನೀಯವಾಗಿ ಮುಂದು ವರಿದಿದೆ. ಈ ಏರಿಕೆಯ ಪರಿಣಾಮ ದಲಿಯರ ಮೇಲೆ ನಿಕೃಷ್ಟವಾಗಿದೆ.

ಅಲಕ್ಷಿತರ ಪದತಲ

ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಸಾಮಾಜಿಕ ಅಸಮಾನತೆಗಳ ಪದಾಘಾತಕ್ಕೆ ಸಿಕ್ಕು ಸಮಾಜದಲ್ಲಿ ಅಂಚಿಗೆ ದೂಡಲ್ಪಟ್ಟ ಜನರ ಗುಂಪನ್ನು ಅಲಕ್ಷಿತರೆಂದು ಕರೆಯಬಹುದು. ಆದರೆ ಅಭಿವೃದ್ಧಿಯ ಮೂಲ ದ್ರವ್ಯ ಪರಿಶಿಷ್ಟರ ಪರಿಶ್ರಮವೇ ಆಗಿದೆ. ಆದರೆ ಅವರು ಅಲಕ್ಷಿತರು, ಅಧೀನರು, ಪರಿಶಿಷ್ಟರು. ಅಭಿವೃದ್ಧಿಗೆ ಇವರ ಕಾಣಿಕೆ ಅಪಾರ. ಆದರೆ ಅದರಲ್ಲಿ ಇವರ ಪಾಲು ನಿಕೃಷ್ಟವಾದುದು. ಇದು ಎಷ್ಟು ನಿಕೃಷ್ಟವಾದುದು ಎಂಬುದನ್ನು ಇಲ್ಲಿ ಕೆಲವು ಸೂಚಿಗಳ ಮೂಲಕ ತೋರಿಸಲು ಪ್ರಯತ್ನಿಸಲಾಗಿದೆ,

ದುಡಿಮೆಯ ರಾಚನಿಕ ಸ್ವರೂಪ

ಕೃಷಿ, ಗಣಿಗಾರಿಕೆ, ಅರಣ್ಯಗಾರಿಕೆ ಮುಂತಾದ

ಅಭಿವೃದ್ಧಿಯ ಯಾವುದೇ ಸೂಚಿಯನ್ನು ತೆಗೆದು ಕೊಂಡರೂ ದಲಿತರು ಅಭಿವೃದ್ಧಿಯ ಶ್ರೇಣೀಕರಣದಲ್ಲಿ ಕೆಳಸ್ತರದಲ್ಲಿರುತ್ತಾರೆ. ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಮಧ್ಯಮ ಸ್ತರದಲ್ಲಿದ್ದರೆ ಹಿಂದೂಗಳು, ಸಿಖ್ಖರು, ಜೈನರು ಮತ್ತು ಕ್ರಿಶ್ಚಿಯನ್ನರು ಉನ್ನತ ಸ್ಥಾನದಲ್ಲಿರುತ್ತಾರೆ. ಸರ್ಕಾರಿ ಅಥವಾ ಖಾಸಗಿ ನೌಕರಿಗಳಲ್ಲಿ ಉನ್ನತ ವರ್ಗಗಳ ಪ್ರಾತಿನಿಧ್ಯ ದಲಿತರ ಪ್ರಾತಿನಿಧ್ಯಕ್ಕಿಂತ ಅಧಿಕ. ಅಲ್ಲಿನ ಪ್ರತಿಹತ್ತು ನೌಕರರಲ್ಲಿ ಮೂವರು ಉನ್ನತ ವರ್ಗದವರಾಗಿರುತ್ತಾರೆ. ಈ ಬಗೆಯ ಅವಕಾಶಗಳಲ್ಲಿ ಶಿಕ್ಷಣದಿಂದ ವಂಚಿತರಾದ ದಲಿತರ ಪ್ರಮಾಣ ಅಧಿಕವಿರಲು ಸಾಧ್ಯವಿಲ್ಲ. ಶಿಕ್ಷಣಪಡೆದ ಮಂದಿ ನೌಕರು ಹಿಡಿಯುವುದು ಸಾಧ್ಯ. ಅಂದರೆ ನಮ್ಮಲ್ಲಿ ಜನರನ್ನು ಒಳಗೊಳ್ಳುವ ಅಭಿವೃದ್ಧಿಯು ಯಶಸ್ವಿಯಾಗಿಲ್ಲ. ಪ್ರಾದೇಶಿಕ ಮತ್ತು ಲಿಂಗ ಸಂಬಂಧಿ ಅಸಮಾನತೆಯಿಂದ ಅದು ನರಳುತ್ತಿದೆ.

ಚಟುವಟಿಕೆಗಳನ್ನು ಒಳಗೊಂಡ ವಲಯವನ್ನು ಪ್ರಾಥಮಿಕ ವಲಯವೆಂದು ಕರೆಯಲಾಗಿದೆ. ಈ ವಲಯವನ್ನು ಅವಲಂಬಿಸಿಕೊಂಡವರ ಪ್ರಮಾಣ ಎಲ್ಲಿ ಅಧಿಕವಾಗಿರುತ್ತದೋ ಅದು ಹಿಂದುಳಿದ ಸ್ಥಿತಿಯಲ್ಲಿರುತ್ತದೆ ಎಂದು ಬಗೆಯಲಾಗಿದೆ. ಕರ್ನಾಟಕದಲ್ಲಿ ಪರಿಶಿಷ್ಟರಲ್ಲಿ ಕೃಷಿ ಅವಲಂಬನೆ ಶೇ69.48ರಷ್ಟಾದರೆ ಪ್ರತಿಷ್ಠಿತರಲ್ಲಿ ಅದು ಶೇ 51.31. ಪ್ರಾಥಮಿಕೇತರ ಚಟುವಟಿಕೆಗಳಾದ ಕೈಗಾರಿಕೆ, ಬ್ಯಾಂಕಿಂಗ್, ಸಾರಿಗೆ, ವಾಣಿಜ್ಯ, ಮುಂತಾದವುಗಳ ಮೇಲೆ ಪರಿಶಿಷ್ಟರ ಅವಲಂಬನೆ ಶೇ 30.52ರಷ್ಟಾದರೆ ಪ್ರತಿಷ್ಠಿತರಲ್ಲಿ ಅದರ ರಮಾಣ ಶೇ48.69. ಪ್ರಧಾನಧಾರೆ ಅಭಿವೃದ್ಧಿ ಮೀಮಾಂಸೆಯಲ್ಲಿ ಪ್ರತಿಪಾದಿಸಿರುವಂತೆ ಪ್ರಾಥಮಿಕ ವಲಯದಲ್ಲಿ ತಲಾ ಉತ್ಪನ್ನದ ಪ್ರಮಾಣವು ಪ್ರಾಥಮಿಕೇ ತರ ವಲಯದ ತಲಾ ಉತ್ಪನ್ನದ ಪ್ರಮಾಣಕ್ಕಿಂತ ಕಡಿಮೆಯಿರುತ್ತದೆ. ಸಾಮಾನ್ಯವಾಗಿ ಅರ್ಥಿಕತೆಯಲ್ಲಿ ವರಮಾನವು ಏರಿಕೆಯಾಗುತ್ತಿರುವಂತೆ ದುಡಿಮೆಗಾರರು ಪ್ರಾಥಮಿಕ ವಲಯದಿಂದ ಪ್ರಾಥಮಿಕೇತರ ವಲಯಕ್ಕೆ ವರ್ಗಾವಣೆಗೊಳ್ಳುವುದು ಕಂಡುಬರುತ್ತದೆ. ಆದರೆ ನಮ್ಮ ಸಂದರ್ಭದಲ್ಲಿ ಇದು ನಡೆಯುತ್ತಿಲ್ಲ. ಇದರಿಂದಾಗಿ ಪ್ರಾಥಮಿಕ ವಲಯದಿಂದ ಬರುವ ವರಮಾನ ಕಡಿಮೆಯಾಗುತ್ತಿದೆ.

ಪ್ರಾಥ ಮಿಕೇತರ ವಲಯದಿಂದ ಬರುತ್ತಿರುವ ವರಮಾನವು ಅಧಿ ಕವಾಗುತ್ತಿದೆ. ಈ ಬಗೆಯ ರಾಸಾನಿಕ ಬದಲಾವಣೆಯಿಂದಾಗಿ ಪ್ರಾಥಮಿಕ ವಲಯದಲ್ಲಿ ದುಡಿಮೆಗಾರರ ಪ್ರಮಾಣ ಅಧಿಕವಾಸಗಿರುತ್ತದೆ. ಅದರಿಂದ ಬರುವ ವರಮಾನ ಮಾತ್ರ ಕಡಿಮೆಯಾಗುತ್ತಿರುತ್ತದೆ. ಉದಾಹರಣೆಗೆ ಕರ್ನಾಟಕದಲ್ಲಿ ಪ್ರಾಥಮಿಕ ವಲಯವನ್ನು ಅವಲಂಬಿಸಿಕೊಂಡಿರುವವರ ಪ್ರಮಾಣ ಸುಮಾರು ಶೇ55ರ ಮಟ್ಟದಲ್ಲಿದೆ. ಆದರೆ 2007-08ರಲ್ಲಿ ಪ್ರಾಥಮಿಕ ವಲಯದಿಂದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಬಂದ ವರಮಾನ ಕೇವಲ ಶೇ18ರಷ್ಟಾಗಿದೆ. ಅಂದರೆ ಒಟ್ಟು ದುಡಿಮೆ ಗಾರರಲ್ಲಿ ಶೇ55ರಷ್ಟು ಜನರು ರಾಜ್ಯದ ವರಮಾನದ ಶೇ18 ರಷ್ಟನ್ನು ಪಡೆಯುತ್ತಿದ್ದರೆ ಪ್ರಾಥಮಿಕೇತರ ವಲಯದಲ್ಲಿರುವ ಶೇ45ರಷ್ಟು ಜನರು ವರಮಾನದ ಶೇ82ರಷ್ಟನ್ನು ಪಡೆಯುತ್ತಿದ್ದಾರೆ. ಇದು ವರಮಾನಕ್ಕೆ ಸಂಬಂಧಿಸಿದ ಅಸಮಾನತೆಯ ತೀವ್ರತೆಯನ್ನು ಸೂಚಿಸುತ್ತದೆ. ಈ ಅಸಮಾನತೆಯ ತೀವ್ರತೆಯು ಹೆಚ್ಚು ತಟ್ಟುತ್ತಿರುವುದು ದಲಿತ ಸಮುದಾಯವನ್ನು ಎಂಬುದು ಇಲ್ಲಿ ಮುಖ್ಯ. ಏಕೆಂದರೆ ಪ್ರಾಥಮಿಕ ವಲಯವನ್ನು ಅವಲಂಬಿಸಿ ಕೊಂಡಿರುವವರಲ್ಲಿ ದಲಿತರ ಪ್ರಮಾಣ ಅಗಾಧವಾಗಿದೆ. ಅಲ್ಲಿ ದಿನಗೂಲಿಮಾಡಿ ಬದುಕುತ್ತಿರುವವರಲ್ಲಿ ದಲಿತರ ಪ್ರಮಾಣ ಅಧಿಕ. ನಮ್ಮಲ್ಲಿ ನಡೆಯುತ್ತಿರುವ ರಾಚನಿಕ ಬದಲಾವಣೆಯು ದಲಿತರಿಗೆ ಅನುಕೂಲಕರವಾಗಿಲ್ಲ.

ಅಕ್ಷರ ಸಂಸ್ಕೃತಿ

ಸಾಕ್ಷರತೆಯನ್ನು ಲಾಗಾಯ್ತಿನಿಂದಲೂ ಅಭಿವೃದ್ಧಿಯ ಸಾಧನವನ್ನಾಗಿ ಪರಿಭಾವಿಸಿಕೊಂಡು ಬರಲಾಗಿದೆ. ನಿಜ, ಅದು ಅಭಿವೃದ್ಧಿಗೆ ಅನೇಕ ರೀತಿಯಲ್ಲಿ ಕಾಣಿಕೆ ನೀಡುತ್ತದೆ. ಆದರೆ ಅದು ಕೇವಲ ಅಭಿವೃದ್ಧಿ ಸಾಧನ ಮಾತ್ರವಲ್ಲ. ಅದು ಅಭಿವೃದ್ಧಿಯ ಫಲ ಮತ್ತು ಅಭಿವೃದ್ಧಿಯ ಅಂತರ್ಗತಭಾಗ. ಅದು ಅಭಿವೃದ್ಧಿಯ ಮಾಪನದ ಸೂಚಿ. ಜನರ ಧಾರಣಾಶಕ್ತಿಯನ್ನು ನಿರ್ಧರಿಸುವ ಒಂದು ನಿರ್ಣಾಯಕ ಸಂಗತಿ. ಕರ್ನಾಟಕದಲ್ಲಿ ಒಟ್ಟು ಸಾಕ್ಷರತಾ ಪ್ರಮಾಣ 2001ರಲ್ಲಿ ಶೇ66.64ರಷ್ಟಿತ್ತು. ಆದರೆ ದಲಿತೇತರರಲ್ಲಿ ಸಾಕ್ಷರತಾ ಪ್ರಮಾಣ ಶೇ70.94ರಷ್ಟಿದ್ದರೆ ದಲಿತರಲ್ಲಿ ಅದು ಶೇ51.55ರಷ್ಟಿದೆ. ಇಲ್ಲಿ ಅಂತರ ಶೇ19.39 ಅಂಶಗಷ್ಟಿದೆ. ಇಲ್ಲಿ ಉಂಟಾಗುತ್ತಿರುವ ಸಮಸ್ಯೆಯೊಂದನ್ನು ಗುರುತಿಸುವ ಅಗತ್ಯವಿದೆ.

ಸಾಮಾನ್ಯವಾಗಿ ಸಾಕ್ಷರತಾ ಅಂತರವನ್ನು ಒಟ್ಟು ಸಾಕ್ಷರತೆ ಮತ್ತು ದಲಿತರ ಸಾಕ್ಷರತೆ ನಡುವೆ ಲೆಕ್ಕ ಹಾಕುವ ಪದ್ಧತಿ ರೂಢಿಯಲ್ಲಿದೆ. ಆದರೆ ಈ ಅಂತರವನ್ನು ದಲಿತರು ಮತ್ತು ದಲಿತೇತರರ ನಡುವೆ ಲೆಕ್ಕ ಹಾಕಿದರೆ ಅಲ್ಲಿ ನಮಗೆ ದೊರೆಯುವ ಅಂತರ ಅಧಿಕವಾಗಿರುತ್ತದೆ. ಉದಾಹರಣೆಗೆ ಒಟ್ಟು ಸಾಕ್ಷರತೆಗೆ ಲೆಕ್ಕ ಹಾಕಿದರೆ ಅಂತರ ಶೇ15.09 ಅಂಶಗಷ್ಟಾಗುತ್ತದೆ. ಆದರೆ ದಲಿತರು ಮತ್ತು ದಲಿತೇತರರ ನಡುವೆ ಲೆಕ್ಕ ಹಾಕಿದರೆ ಅಂತರ ಶೇ19.39 ರಷ್ಟಾಗುತ್ತದೆ. ಸರ್ಕಾರದ ನೀತಿ-ನಿರ್ಣಯದ ದೃಷ್ಟಿಯಿಂದ ಇಂತಹ ಅಧ್ಯಯನ ವಿಧಾನಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಸಂವಿಧಾನ ರಚನಾ ಸಭೆಯು ನೇಮಿಸಿದ್ದ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಡಾ.ಬಿ.ಆರ್. ಅಂಬೇ ಡ್ಕರ್ ಅವರು ತಾವು ಸಿದ್ಧಪಡಿಸಿದ್ದ ಸಂವಿಧಾನದ ಕರ ಡನ್ನು ಸಭೆಯ ಮುಂದೆ ಮಂಡಿಸುತ್ತಾ ಅವರು 'ಈ 1950ರ ಜನವರಿ 26ರಂದು ನಾವು ವೈರುಧ್ಯಗಳಿಂದ ಕೂಡಿದ ಬದುಕನ್ನು ಪ್ರವೇಶಿಸುತ್ತಿದ್ದೇವೆ. ರಾಜಕೀಯದಲ್ಲಿ ಸ್ವಾತಂತ್ರ್ಯವೂ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಅಸಮಾನತೆಯು ಇರುವ ಬದುಕು ನಮ್ಮದಾಗಿರುತ್ತದೆ' ಎಂಬ ಎಚ್ಚರಿಕೆ ನೀಡುತ್ತಾರೆ. ಈ ಹಿನ್ನೆಲೆಯಲ್ಲಿ ಸಂವಿಧಾನಾತ್ಮಕ ವಾಗಿ ದುರ್ಬಲರಿಗೆ, ಪರಿಶಿಷ್ಟರಿಗೆ ಅನೇಕ ರೀತಿಯ ಭದ್ರತೆಯನ್ನು ನೀಡಲಾಗಿದೆ. ಆದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಸಮಾನತೆಗಳು ಮುಂದುವರಿಯುತ್ತಿವೆ.

ಆರೋಹಣವಾದಿ ಅಸಮಾನತೆ

ಸಂವಿಧಾನ ರಚನಾ ಸಭೆಯು ನೇಮಿಸಿದ್ದ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರು ತಾವು ಸಿದ್ಧಪಡಿಸಿದ್ದ ಸಂವಿಧಾನದ ಕರಡನ್ನು ಸಭೆಯ ಮುಂದೆ ಮಂಡಿಸುತ್ತಾ ಅವರು 'ಈ 1950ರ ಜನವರಿ 26ರಂದು ನಾವು ವೈರುಧ್ಯಗಳಿಂದ ಕೂಡಿದ ಬದುಕನ್ನು ಪ್ರವೇಶಿಸುತ್ತಿದ್ದೇವೆ. ರಾಜಕೀಯದಲ್ಲಿ ಸ್ವಾತಂತ್ರ್ಯವೂ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಅಸಮಾನತೆಯು ಇರುವ ಬದುಕು ನಮ್ಮದಾಗಿರುತ್ತದೆ' ಎಂಬ ಎಚ್ಚರಿಕೆ ನೀಡುತ್ತಾರೆ. ಈ ಹಿನ್ನೆಲೆಯಲ್ಲಿ ಸಂವಿಧಾನಾತ್ಮಕವಾಗಿ ದುರ್ಬಲರಿಗೆ, ಪರಿಶಿಷ್ಟರಿಗೆ ಅನೇಕ ರೀತಿಯ ಭದ್ರತೆಯನ್ನು ನೀಡಲಾಗಿದೆ. ಆದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಸಮಾನತೆಗಳು ಮುಂದುವರಿಯುತ್ತಿವೆ. ಅಭಿವೃದ್ಧಿಯೆಂಬ ಪಿರಮಿಡ್ಡಿನ ವಿಸ್ತೃತ ಅಡಿಪಾಯದಲ್ಲಿ ಅಗಾಧ ಪ್ರಮಾಣದಲ್ಲಿ ಪರಿಶಿಷ್ಟರು ಸಂದಣಿಗೊಂಡಿದ್ದಾರೆ. ಅದರ ಸಂಕುಚಿತವಾದ ತುದಿಯಲ್ಲಿ ಶಿಷ್ಟರು-ಪ್ರತಿಷ್ಠಿತರರು ನೆಲೆ ಗೊಂಡಿದ್ದಾರೆ. ಶಿಖರದಲ್ಲಿ ನೆಲೆಗೊಂಡಿರುವ ಜನರ ವರಮಾ ನವು ತೀವ್ರಗತಿಯಲ್ಲಿ ಬೆಳೆಯುತ್ತಿದೆ.

ಆದರೆ ಅದರ ತಳದಲ್ಲಿ ಸಂದಣಿಗೊಂಡಿರುವ ಜನರ ಬಡತನವು ಮಾತ್ರ ಮಂದಗತಿಯಲ್ಲಿ ಕಡಿಮೆಯಾಗುತ್ತಿದೆ. ಇದನ್ನು ಜನ್ ಬ್ರೆಮನ್ ಎಂಬ ಸಮಾಜ ವಿಜ್ಞಾನಿ 'ಆರೋಹಣವಾದಿ ಅಸಮಾನತೆ 'ಯೆಂದು ಕರೆದಿದ್ದಾನೆ. ನಮ್ಮ ಸಮಾಜದಲ್ಲಿ ಬ್ರೆಮೆನ್, ಅಂಬೇಡ್ಕರ್ ಹೇಳಿರುವರ ವಿಕೃತಿಗಳು ಮುಂದುವರಿದಿವೆ. ಅಂಬೇಡ್ಕರ್ ಹೇಳುತ್ತಿರುವ ಸ್ವಾತಂತ್ರ್ಯವನ್ನು ಅಮರ್ತ್ಯಸೆನ್ ನೇತ್ಯಾತ್ಮಕ ಸ್ವಾತಂತ್ರ್ಯವೆಂದು ಕರೆಯುತ್ತಾನೆ. ಇದಕ್ಕೆ ಪ್ರತಿಯಾಗಿ ನಮಗೆ ಅಗತ್ಯವಾಗಿರುವುದು ಇತ್ಯಾತ್ಮಕ ಸ್ವಾತಂತ್ರ್ಯ. ಸ್ವಾತಂತ್ರ್ಯತವೆಂದರೆ ನಿಯಂತ್ರಣಗಳಿಲ್ಲದ ಸಂಗತಿಯೆಂದು ತಿಳಿದುಕೊಳ್ಳಲಾಗಿದೆ. ನಮಗೆ ಅಗತ್ಯವಾಗಿರುವುದು ಸಮಾಜದಲ್ಲಿ

ಹರಿದು ಬರುವ ಅವಕಾಶಗಳನ್ನು ತನ್ನದಾಗಿಸಿಕೊಳ್ಳುವ ಸಾಮರ್ಥ್ಯ. ಇದನ್ನು ಸೆನ್ ಇಚ್ಛಾತ್ಮಕ ಸ್ವಾತಂತ್ರ್ಯವೆಂದು ಕರೆಯುತ್ತಾನೆ. ನಮಗೆ ಇಂದು ಅಗತ್ಯವಾಗಿರುವುದು ಕೇವಲ ಸ್ವಾತಂತ್ರ್ಯವಲ್ಲ. ಅದು ನಮ್ಮ ಧಾರಣಾ ಸಾಮರ್ಥ್ಯವನ್ನು ವಿಸ್ತೃತಗೊಳಿಸುವ ಸ್ವಾತಂತ್ರ್ಯವಾಗಿದೆ.

ಅಕ್ಷರ-ಅಧಿಕಾರ-ಅಂಬೇಡ್ಕರ್

ಅಕ್ಷರಕ್ಕೆ- ಲಿಖಿತ ಅಕ್ಷರಕ್ಕೆ ಅಂಬೇಡ್ಕರ್ ಬಹಳಷ್ಟು ಮಹತ್ವ ನೀಡುತ್ತಿದ್ದರು. ತಮ್ಮ ರಾಜಕೀಯ ಜೀವನದುದ್ದಕ್ಕೂ ಅವರ ಸರ್ಕಾರಗಳ ಮುಂದೆ ತಮ್ಮ ಒತ್ತಾಯಗಳನ್ನು, ಹಕ್ಕುಗಳನ್ನು ಲಿಖಿತ ರೂಪದಲ್ಲಿ ಮಂಡಿಸುತ್ತಿದ್ದರು. ಪ್ರತಿಯೊಂದು ಸಂದರ್ಭದಲ್ಲೂ ಅವರು ಮನವಿಗಳನ್ನು ಲಿಖಿತ ರೂಪವನ್ನು ಬಿಟ್ಟು ಮೌಖಿಕವಾಗಿ ನೀಡುತ್ತಿರಲಿಲ್ಲ. ಮೌಖಿಕ ಸಂಪ್ರದಾಯವನ್ನು ನಂಬಿಕೊಂಡಿದ್ದ ಸಮುದಾಯದಿಂದ ಅಂಬೇಡ್ಕರ್ ಬಂದಿದ್ದರು. ಸಮಾಜದಲ್ಲಿ ಪ್ರತಿಷ್ಠಿತ ವರ್ಗವು ಅಕ್ಷರದ ಮೇಲೆ ಅಧಿಕಾರ ಪಡೆದಿತ್ತು. ಈ ವೈರುಧ್ಯದ ಹಿಂದಿನ ಸಮಸ್ಯೆಗಳು ಅವರಿಗೆ ಅರ್ಥವಾಗಿದ್ದವು. ಅಕ್ಷರ- ಅಧಿಕಾರಗಳ ನಡುವಿನ ಸಂಬಂಧ ವನ್ನು ಅವರು ಮನಗಂಡಿದ್ದರು. ಅಕ್ಷರವೇ ಅಧಿಕಾರ ಎಂಬುದು ಅವರಿಗೆ ಅರ್ಥವಾಗಿತ್ತು. ಪ್ರತಿಷ್ಠಿತರ ಮನಾಪಲಿಯಾಗಿದ್ದ ಅಕ್ಷರದ ಮೇಲೆ ಅಂಬೇಡ್ಕರ್ ಪ್ರಭುತ್ವವನ್ನು ಸಾಧಿಸಿಕೊಂಡಿದ್ದರು. ಅಕ್ಷರದ ಮೇಲೆ ಪ್ರಭುತ್ವವನ್ನು ಸಾಧಿಸಿಕೊಂಡಿದ್ದರಿಂದ ಅವರಿಗೆ ಪರಿಶಿಷ್ಟರ ಸಮಸ್ಯೆಯನ್ನು ಜಾಗತಿಕ ಮಟ್ಟಕ್ಕೆ ಒಯ್ಯುವುದು ಸಾಧ್ಯವಾಯಿತು. ಈ ಅಕ್ಷರದ ಮೇಲಿನ ಪ್ರಭುತ್ವವು ಅವರಿಗೆ ಅಪಾರ ಅಧಿಕಾರವನ್ನು ಒದಗಿಸಿತು. ಅಕ್ಷರದ ಮೇಲೆ ವೈದಿಕರು ಸಾಧಿಸಿಕೊಂಡಿದ್ದ ಮನಾಪಲಿಯನ್ನು ಅಂಬೇಡ್ಕರ್ ಮುರಿದು ಬಿಟ್ಟರು. ಇದು ಅವರ ದೊಡ್ಡ ಸಾಧನೆಯಾಗಿದೆ.

ಅಭಿವೃದ್ಧಿಯ ನಿರ್ವಚನ

ಅಭಿವೃದ್ಧಿಯ ಪದತಲದಲ್ಲಿರುವ ಪರಿಶಿಷ್ಟರನ್ನು ಗಮನದಲ್ಲಿಟ್ಟುಕೊಂಡು ನಾವು ಅಭಿವೃದ್ಧಿಯನ್ನು ನಿರ್ವಚಿಸಬೇಕಾಗುತ್ತದೆ. ಸಾಂಪ್ರದಾಯಿಕ ಅಭಿವೃದ್ಧಿ ಮೀಮಾಂಸೆಯು ಅದನ್ನು ಸಾಮಾಜಿಕತೆಯಿಂದ ಬೇರ್ಪಡಿಸಿ ನಿರ್ವಚಿಸಿಕೊಂಡು ಬಂದಿದೆ. ಇಂತಹ ಮೀಮಾಂಸೆಯಲ್ಲಿ ಜನರನ್ನು ಒಳಗೊಳ್ಳುವ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಅಭಿವೃದ್ಧಿಯನ್ನು ಅಲಕ್ಷಿತರ-ಪರಿಶಿಷ್ಟರ ಪದತಲದಿಂದ ಪರಿಭಾವಿಸಿಕೊಳ್ಳುವ ಅಗತ್ಯವಿದೆ. ಅಲಕ್ಷಿತರ ನೆಲೆಯಿಂದ ಪರಿಭಾವಿಸಿಕೊಂಡರೆ ಮಾತ್ರ ಸಮಾಜದ ಎಲ್ಲರ ಸಮಸ್ಯೆಗಳು ಅರ್ಥವಾಗುತ್ತವೆ.

ಇದಕ್ಕೆ ಪ್ರತಿಯಾಗಿ ಪ್ರತಿಷ್ಠಿತರ ನೆಲೆಯಿಂದ ಅದನ್ನು ಪರಿಭಾವಿ ಸಿಕೊಂಡರೆ ಅಲ್ಲಿ ತಳಸ್ತರದಲ್ಲಿರುವವರ ಹಿತಾಸಕ್ತಿಗಳು ಗೋಚರಿಸುವುದಿಲ್ಲ. ವರಮಾನದ ವರ್ಧನೆಯೇ ಅಭಿವೃದ್ಧಿಯೆಂಬಸೀ ಮಿತ ನೆಲೆಯ ನಿರ್ವಚನವನ್ನು ಇಂದು ಕೈಬಿಡಲಾಗಿದೆ. ಸಮಾಜದಲ್ಲಿ ಲಭ್ಯವಿರುವ ಅವಕಾಶಗಳನ್ನು ಧಾರಣೆಮಾಡಿಕೊಳ್ಳುವ ಜನರ ಸಾಮರ್ಥ್ಯದ ವರ್ಧನೆಯನ್ನು ಅಭಿವೃದ್ಧಿಯೆಂದು ಕರೆಯಬಹುದು. ಈ ರೀತಿಯಲ್ಲಿ ಅಭಿವೃದ್ಧಿಯನ್ನು ಪರಿಭಾವಿಸಿ ಕೊಂಡಾಗ ಮಾತ್ರ ಪರಿಷ್ಟರ ಹಿತಾಸಕ್ತಿಗಳು ಮುಂಚೂಣಿಗೆ ಬರುವುದು ಸಾಧ್ಯ. ಧಾರಣಾಶಕ್ತಿಯ ವರ್ಧನೆಯು ಅಭಿವೃದ್ಧಿಯೆಂದಾಗ ಅನಕ್ಷರಸ್ಥರಿಗೆ ಅಕ್ಷರ ನೀಡುವುದು ಆದ್ಯತೆಯಾಗುತ್ತದೆ. ಆಹಾರದ ಹಕ್ಕಿ ನಿಂದ ವಂಚಿತರಾದವರಿಗೆ ಆಹಾರ ನೀಡುವುದು ಆದ್ಯತೆ ಯಾಗುತ್ತದೆ.

ಅಭಿವೃದ್ಧಿಯಲ್ಲಿ ಹೆಚ್ಚು ವಂಚಿತರಾದ ವರ್ಗವೆಂದರೆ ದಲಿತ ಮಹಿಳೆಯರು. ದಲಿತೇತರ ಮಹಿಳೆಯರ ಸಾಕ್ಷರತಾ ಪ್ರಮಾಣ 2001ರಲ್ಲಿ ಶೇ 61.66ರಷ್ಟಿದ್ದರೆ ಪರಿಶಿಷ್ಟರ ಸಾಕ್ಷರತಾ ಪ್ರಮಾಣ ಶೇ 40.26. ಇಲ್ಲಿ ಸಾಕ್ಷರತಾ ಅಂತರ ಶೇ 21.40 ಅಂಶಗಳು. ಗ್ರಾಮೀಣ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ48.01. ಗ್ರಾಮೀಣ ಪರಿಶಿಷ್ಟರ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ37.86. ಅಭಿವೃದ್ಧಿಯನ್ನು ಕೇವಲ ಬಂಡವಾಳ, ವಿದೇಶಿ ಬಂಡವಾಳ, ಉಳಿತಾಯ, ಉತ್ಪಾದನೆ, ತಂತ್ರಜ್ಞಾನ ಮುಂತಾದ ಸಂಗತಿಗಳ ನೆಲೆಯಲ್ಲಿ ನಿರ್ವಚಿಸಿಕೊಂಡರೆ ಸಾಕಾಗುವುದಿಲ್ಲ. ಈ ಸಂಗತಗಳ ಫಲ ಅಭಿವೃದ್ಧಿ ಎನ್ನುವ ಕಾಲ ಮುಗಿದು ಹೋಗಿದೆ. ಸಮಾಜದಲ್ಲಿ ಲಭ್ಯವಿರುವ ಅವಕಾಶಗಳನ್ನು ಧಾರಣೆ ಮಾಡಿಕೊಳ್ಳಲು ಸಾಧ್ಯವಾಗದಂತೆ ಮಾಡಿರುವ ಸಾಮಾಜಿಕ-ಸಾಂಸ್ಕೃತಿಕ ಗೋಡೆಗಳನ್ನು ನಾಶಮಾಡುವಂತಹ ಅಭಿವೃದ್ಧಿ ಪ್ರಣಾಳಿಕೆಯಿಂದ ಮಾತ್ರ ದಲಿತರ, ವಂಚಿತರ ಮತ್ತು ಮಹಿಳೆಯರ ಅಧೀನತೆ ಪರಿಹಾರವಾಗಿ ಬಿಡುತ್ತದೆ.

> **ಅಭಿವೃದ್ಧಿಯ ಪದತಲದಲ್ಲಿರುವ ಪರಿಶಿಷ್ಟರನ್ನು ಗಮನದಲ್ಲಿಟ್ಟುಕೊಂಡು ನಾವು ಅಭಿವೃದ್ಧಿಯನ್ನು ನಿರ್ವಚಿಸ ಬೇಕಾಗುತ್ತದೆ. ಸಾಂಪ್ರದಾಯಿಕ ಅಭಿವೃದ್ಧಿ ಮೀಮಾಂಸೆಯು ಅದನ್ನು ಸಾಮಾಜಿಕತೆಯಿಂದ ಬೇರ್ಪಡಿಸಿ ನಿರ್ವಚಿಸಿಕೊಂಡು ಬಂದಿದೆ. ಇಂತಹ ಮೀಮಾಂಸೆಯಲ್ಲಿ ಜನರನ್ನು ಒಳಗೊಳ್ಳುವ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಅಭಿವೃದ್ಧಿಯನ್ನು ಅಲಕ್ಷಿತರ-ಪರಿಶಿಷ್ಟರ ಪದತಲದಿಂದ ಪರಿಭಾವಿಸಿಕೊಳ್ಳುವ ಅಗತ್ಯವಿದೆ.**

ಸ್ವಾತಂತ್ರ್ಯದಿಂದ ವಂಚಿತರು

ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಜನರಿಗೆ ರಾಜಕೀಯ ಸ್ವಾತಂತ್ರ್ಯ ಬಂದಿದೆ. ಆದರೆ ಪರಿಶಿಷ್ಟರಿಗೆ ಅಧೀನತೆಯಿಂದ, ಆಹಾರ ಅಭದ್ರತೆಯಿಂದ, ಅನಕ್ಷರತೆಯಿಂದ, ಅವಮಾನದಿಂದ, ಬಡತನದಿಂದ ಬಿಡುಗಡೆದೊರೆತಿಲ್ಲ. ಸಾಮಾಜಿಕ ಸಂಕೋಲೆಯಿಂದ ಅವರಿಗೆ ಮುಕ್ತಿ ಸಾಧ್ಯವಾಗಿಲ್ಲ. ಅಭಿವೃದ್ಧಿಯು ಹರಿಯ ಬಿಡುವ ಅವಕಾಶಗಳನ್ನು ಧಾರಣೆ ಮಾಡಿಕೊಳ್ಳುವ ಸಾಮರ್ಥ್ಯದಿಂದ ಮತ್ತು ಸ್ವಾತಂತ್ರ್ಯದಿಂದ ಪರಿಶಿಷ್ಟರು ವಂಚಿತರಾಗಿದ್ದಾರೆ. ಅಲಕ್ಷಿತರೆಂದರೆ ಸ್ವಾತಂತ್ರ್ಯದಿಂದ ವಂಚಿತರಾದವರೆಂದೇ ಅರ್ಥ. ವರಮಾನ ಅಧಿಕಗೊಂಡು ಬಿಟ್ಟರೆ, ಉತ್ಪಾದನೆ ಏರಿಕೆಯಾಗಿ ಬಿಟ್ಟರೆ, ವಿದೇಶಿ ಬಂಡವಾಳ ಅಪಾರ ಪ್ರಮಾಣದಲ್ಲಿ ಹರಿದು ಬಂದುಬಿಟ್ಟರೆ, ದೇಶದಲ್ಲಿ ಬಿಲಿಯನೇರ್‌ಗಳು ಜಾಸ್ತಿಯಾಗಿ ಬಿಟ್ಟರೆ ಜನರಿಗೆ ಸ್ವಾತಂತ್ರ್ಯ ದೊರೆಯುವುದಿಲ್ಲ.

ಈ ರೀತಿಯಲ್ಲಿ ಹರಿದು ಹೋಗುವ ಅವಕಾಶಗಳನ್ನು ದಕ್ಕಿಸಿ ಕೊಳ್ಳಲು ಅಗತ್ಯವಾದ ಸಾಮರ್ಥ್ಯ ಮತ್ತು ಸ್ವಾತಂತ್ರ್ಯ ಒದಗಿಸಿ ಕೊಡುವುದೇ ಅಭಿವೃದ್ಧಿ. ತನ್ನ ಒಂದು ಕೃತಿಗೆ ಅಮರ್ತ್ಯಸೇನ್ 'ಸ್ವಾತಂತ್ರ್ಯವಾಗಿ ಅಭಿವೃದ್ಧಿ' ಎಂದು ಕರೆದಿದ್ದಾನೆ. ನಾವು ಒಂದು ಗಣರಾಜ್ಯವಾಗಿ ಅರವತ್ತು ವರ್ಷಗಳಾಗುತ್ತಾ ಬಂದಿದ್ದರೂ ನಮಗೆ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಸಾಧ್ಯವಾಗಿಲ್ಲ. ವೈಯುಕ್ತಿಕ ಮಟ್ಟದಲ್ಲಿ ಅದನ್ನು ಚಿಗೆಹರಿಸಿ ಕೊಂಡಿರಬಹುದು. ಆದರೆ ಒಂದು ವ್ಯವಸ್ಥೆಯಾಗಿ ಅದನ್ನು ಮೂಲೋತ್ಪಾಟನೆ ಮಾಡುವುದು ನಮಗೆ ಸಾಧ್ಯವಾಗಿಲ್ಲ. ಸಾಂಸ್ಥಿಕವಾಗಿ ಅದು ಇಂದಿಗೂ ಆಚರಣೆಯಲ್ಲಿದೆ. ಅದನ್ನು ಬೇರಾವುದೋ ರೂಪದಲ್ಲಿ ಆಚರಿಸುತ್ತಿರುವುದು ಕಂಡು ಬರುತ್ತದೆ. ಇಂದಿಗೂ ನಮ್ಮ ಅನೇಕ ದೇವಸ್ಥಾನಗಳಲ್ಲಿ, ಮಠಗಳಲ್ಲಿ ಮಹಿಳೆಯರಿಗೆ ಗರ್ಭ ಗುಡಿಯನ್ನು ಪ್ರವೇಶಿಸಿ ದೇವರನ್ನು ಮುಟ್ಟಿ ಪೂಜೆ ಮಾಡುವ ಅಧಿಕಾರವಿಲ್ಲ. ಅಂದಮೇಲೆ ದಲಿತರಿಗೆ ಸಂಬಂಧಿಸಿದಂತೆ ಅಸ್ಪೃಶ್ಯತೆ ನಿವಾರಣೆಯಾಗಿದೆ ಎಂದು ತಿಳಿದರೆ ಅದು ಮೂರ್ಖತನವಾದೀತು. ಇಂತಹ ಅನಿಷ್ಟಗಳನ್ನು ನಿವಾರಣೆ ಮಾಡಲು ನಮ್ಮ ರಾಜ್ಯವು ಶ್ರೀಮಂತವಾಗ ಬೇಕಾಗಿಲ್ಲ. ಅದಕ್ಕೆ ವಿದೇಶಿ ಬಂಡವಾಳ ಬೇಕಾಗಿಲ್ಲ. ನಮ್ಮ ನೀತಿಗಳು ಬದಲಾಗಬೇಕು.

ಅಭಿವೃದ್ಧಿಯ ಆರಂಬ ನಮ್ಮ ರಾಜ್ಯದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ವರಮಾನ ವ್ಯಸನದಿಂದ ಮತ್ತು ಉದ್ದಿಮೆ-ವ್ಯಸನದಿಂದ ಹೊರಬರಲಾಗಿಲ್ಲ. ಅದನ್ನು ಸಾಮಾಜಿಕ ನೆಲೆಯಿಂದ ಪರಿಭಾವಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಅಭಿವೃದ್ಧಿಯ ಮೂಲದ್ರವ್ಯ ಜನರು ಎಂಬುದನ್ನು ಸಂಬಂಧಿಸಿದವರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ. ಒಟ್ಟಾರೆ ಅಭಿವೃದ್ಧಿಯ ಆರಂಬವು ಪರಿಸಿಷ್ಟರ ಪದತಲದಿಂದ ನಡೆಯಬೇಕು. ಯಾವುದನ್ನು ಡಾ.ಬಿ.ಆರ್. ಅಂಬೇಡ್ಕರ್ 'ರಾಜಕೀಯ ಸ್ವಾತಂತ್ರ್ಯ ಮತ್ತು ಸಾಮಾಜಿಕ ಅಸಮಾನತೆ' ಎಂಬ ವಿಕೃತಿಯನ್ನು ತೋರಿಸಿದ್ದಾರೋ ಅದನ್ನು ತೊಡೆದುಹಾ ಕದ ಹೊರತು ದಲಿತರಿಗೆ ಬಿಡುಗಡೆ ಅಸಾಧ್ಯ. ಅಭಿವೃದ್ಧಿಯು ಯತೇಚ್ಚವಾಗಿ ಹರಿಯುತ್ತಿರಬಹುದು. ಅವುಗಳನ್ನು ಧಾರಣೆಮಾಡಿಕೊಳ್ಳಲು ಅಗತ್ಯವಾದ ಜನರ ಸಾಮರ್ಥ್ಯ ಮತ್ತು ಸ್ವಾತಂತ್ರ್ಯಗಳನ್ನು ನೀಡುವುದರ ಬಗ್ಗೆ ನಾವು ಚಿಂತಿಸಬೇಕಾಗಿದೆ. 'ಆರಂಬ' ಎನ್ನುವುದಕ್ಕೆ ಕನ್ನಡದಲ್ಲಿ ಬೇಸಾಯ-ವ್ಯವಸಾಯ ಎನ್ನುವ ಅರ್ಥವಿದೆ. ಒಂದು ವಿಧದಲ್ಲಿ ನಮ್ಮ ಗ್ರಾಮೀಣರು ಆರಂಬ ಎನ್ನು ವುದನ್ನು ಬದುಕು ಎಂಬ ಅರ್ಥದಲ್ಲೂ ಬಳಸುತ್ತಾರೆ.

ಅಭಿವೃದ್ಧಿಯ ಆರಂಬವು ಪರಿಶಿಷ್ಟರ ಪದತಲದಿಂದ ನಡೆಯುವಂತಾಗಬೇಕು. ಇದುವರೆವಿಗೂ ಯಾವುದನ್ನು ನಾವು ಪ್ರಧಾನಧಾರೆ ಅಭಿವೃದ್ಧಿ ಪ್ರಣಾಳಿಕೆ ಯೆಂದು ಕರೆದಿದ್ದೇವೆಯೋ ಅದು ಅಲಕ್ಷಿತರಿಗೆ-ಪರಿಶಿಷ್ಟರಿಗೆ ಅಲಿಪ್ತವಾಗುಳಿದು ಬಿಟ್ಟಿದೆ. ದಲಿತರನ್ನು ಅಲಾಯದ ಮಾಡಿಕೊಂಡು ಅಭಿವೃದ್ಧಿ ನಡೆದಿದೆ. ಇದು ಬದಲಾಗಬೇಕು. ಇದಕ್ಕೆ ದಲಿತರ ಸಂಘಟನೆಯಾಗಬೇಕು. ನಮ್ಮ ನೆಲೆಯಿಂದಲೇ ಅಭಿವೃದ್ಧಿಯ ಆರಂಭ ನಡೆಯಬೇಕೆಂದು ಅಲಕ್ಷಿತರು ಒತ್ತಾಯಿಸಬೇಕು.

ಅಭಿವೃದ್ಧಿಯೆನ್ನುವುದು ದಾನ-ದತ್ತಿ-ಭಿಕ್ಷೆಯಲ್ಲ. ಅದು ಜನರ ಹಕ್ಕು. ಅದು ದಲಿ ತರ ಮಾನವ ಹಕ್ಕು. ಸರ್ಕಾರವು ಅಭಿವೃದ್ಧಿಯು ದಾನ ಎಂದು ತಿಳಿದಿದ್ದರೆ ಅದು ತಪ್ಪು ಎಂದು ನಾವು ತಿಳಿಸಿ ಹೇಳಬೇಕಾಗಿದೆ. ಪರಿಶಿಷ್ಟರ ಪರಿಶ್ರಮಕ್ಕೆ ಪ್ರತಿಫಲ ದೊರೆಯಲೇಬೇಕು. ಇದಕ್ಕಾಗಿ ಪರಿಶಿಷ್ಟರ ಪದತಲದಿಂದ ಅಭಿವೃದ್ಧಿಯ ಆರಂಭ ನಡೆಯಬೇಕು. □

ಸಾಧಾರಣ ತಿಳುವಳಿಕೆಯ ಸಮಸ್ಯೆ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ಉತ್ತರ ಭಾರತದಲ್ಲಿ ಸಾಸಿವೆ ಎಣ್ಣೆ ಅತ್ಯಂತ ಜನಪ್ರಿಯವಾದುದು. ಆದರೆ ಸಾಸಿವೆಯನ್ನು ಪ್ರತ್ಯೇಕವಾಗಿ ಬೆಳೆಯುವುದಿಲ್ಲ. ಬಹುತೇಕ ಗೋಧಿಯ ಜೊತೆಗೆ ಸಾಸಿವೆಯನ್ನು ಬೆಳೆಯ ಲಾಗುತ್ತದೆ. ಇನ್ನು ತಂತ್ರ ಜ್ಞಾನದ ವಿಚಾರಕ್ಕೆ ಬರು ವುದಾದರೆ, ಗೋಧಿಯನ್ನು ಸಿಪ್ಪೆಯಿಂದ ಬಿಡಿಸುವ ಯಂತ್ರ, ಸಾಸಿವೆಯನ್ನು ಸಿಪ್ಪೆಯಿಂದ ಬೇರ್ಪಡಿಸುವುದಿಲ್ಲ. ಹಿಂದೆ ಕೃಷಿ ಕಾರ್ಮಿಕರು ಗೋಧಿ ಮತ್ತು ಸಾಸಿವೆಯನ್ನು ಒಟ್ಟಾಗಿ ಬೆಳೆಯುತ್ತಿದ್ದ ಸಂದರ್ಭದಲ್ಲಿ ತಮ್ಮ ಕೈಯಾರೆ ಗೋಧಿ ಮತ್ತು ಸಾಸಿವೆಯನ್ನು ಬೇರ್ಪಡಿಸುತ್ತಿದ್ದರು. ಆದರೆ ಈಗ ಕೃಷಿಯಂತ್ರ ಈ ರೀತಿ ಬೇರ್ಪಡಿಕೆಗೆ ಅವಕಾಶ ಕಲ್ಪಿಸದೆ ಇರುವುದರಿಂದ ಬಹುತೇಕ ರೈತರು ವಾಣಿಜ್ಯ ಬೆಳೆಯಾಗಿದ್ದರೂ ಕೂಡ ಸಾಸಿವೆ ಬೆಳೆಯುವುದನ್ನೇ ಬಿಟ್ಟಿದ್ದಾರೆ. ಸಾಸಿವೆಯ ಕೊಯ್ಲಿಗೆ ಸಂಬಂಧಿಸಿದ ಪ್ರತ್ಯೇಕವಾದ ಕೃಷಿ ಯಂತ್ರ ಇಲ್ಲದಿರುವುದೂ ಕೂಡ ಸಾಸಿವೆ ಬೆಳೆಗೆ ಮಾರಕವಾಗಿ ಪರಿಣಮಿಸಿದೆ.

ಪ್ರಸ್ತುತ ದೇಶದ ಪೆಟ್ರೋಲಿಯಂ ಉತ್ಪನ್ನಗಳ ಬೇಡಿಕೆಯನ್ನು ಪೂರೈಸಲು 70% ಕಚ್ಚಾ ತೈಲವನ್ನು ಭಾರತ ಆಮದು ಮಾಡಿಕೊಳ್ಳುತ್ತದೆ. ಭಾರತದ ಭೌಗೋಳಿಕ ಪ್ರದೇಶದಲ್ಲಿ ಕಚ್ಚಾತೈಲದ ನಿಕ್ಷೇಪಗಳು ಬೆರಳೆಣಿಕೆಯಷ್ಟು ಮಾತ್ರ ಇರುವುದರಿಂದ ಆಮದು ಮಾಡಿಕೊಳ್ಳುವುದರಲ್ಲಿ ಅರ್ಥವಿದೆ.

ಆದರೆ ಭಾರತ ಅಡುಗೆ ಎಣ್ಣೆಯನ್ನು ಕೂಡ ಯಾಕೆ ಆಮದು ಮಾಡಿಕೊಳ್ಳುತ್ತದೆ? ನಮ್ಮದು ಮೂಲತಃ ಕೃಷಿಪ್ರಧಾನ ದೇಶ ಎಂದು ಎಲ್ಲೆಡೆ ಒಪ್ಪಿತವಾಗಿರುವ ವಿಚಾರ. ಈ ಮಾನದಂಡವನ್ನು ಒಪ್ಪಿಕೊಳ್ಳುವುದಾದರೆ ಭಾರತೀಯ ಕೃಷಿಕರು ವಿಶ್ವದಲ್ಲಿಯೇ ಅತ್ಯುತ್ತಮರಾಗಿರಬೇಕಿತ್ತು.

ಅದಿರಲಿ ದೇಶದ ಪ್ರತಿ ವ್ಯಕ್ತಿ ಸರಾಸರಿ 10.6 ಕೆಜಿ ಅಡುಗೆ ಎಣ್ಣೆಯನ್ನು ಸೇವಿಸುತ್ತಾನೆ. ಚೀನಾದಲ್ಲಿ ಅಡುಗೆ ಎಣ್ಣೆ ಸೇವನೆಯ ಸರಾಸರಿ ಪ್ರಮಾಣ 12.5ರಷ್ಟಿದ್ದರೆ, ಜಪಾನ್‌ನಲ್ಲಿ 20.8 ಕೆಜಿ, ಬ್ರೆಜಿಲ್‌ನಲ್ಲಿ 21.3 ಕೆಜಿ, ಹಾಗೂ ಅಮೆರಿಕಾದಲ್ಲಿ 48 ಕೆಜಿ ಇದೆ.

ದೇಶದ 60% ಮಂದಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರೂ, ದೇಶದ ಅಡುಗೆ ಎಣ್ಣೆಯ ಬೇಡಿಕೆಯನ್ನು ಪೂರೈಸಲು ಇನ್ನೂ ಸಾಧ್ಯವಾಗಿಲ್ಲ. ಭಾರತದಲ್ಲಿ ಉತ್ಪಾದನೆಯಾಗುವ ಅಡುಗೆ ಎಣ್ಣೆಯ ಪ್ರಮಾಣ ವಾರ್ಷಿಕ 8.7 ದಶಲಕ್ಷ ಟನ್‌ಗಳಷ್ಟಿದ್ದರೆ, ಬಳಕೆಯ ಪ್ರಮಾಣ 14.26 ದಶಲಕ್ಷ ಟನ್‌ಗಳಷ್ಟಿವೆ. ಹೀಗಾಗಿ ಬೇಡಿಕೆಯನ್ನು ಪೂರೈಸಲು ಸಹಜವಾಗಿ ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಭಾರತಕ್ಕೆ ಆಮದಾಗುವ ಅಡುಗೆ ಎಣ್ಣೆಯಲ್ಲಿ ಸುಮಾರು 80% ಪಾಮೋಲಿಯನ್ ಎಣ್ಣೆಯೇ ಇದೆ. ಮನುಷ್ಯರು ಸೇವಿಸಬಹುದಾದ ತೀರ ಅಗ್ಗದ ಎಣ್ಣೆ ಇದು.

ಭಾರತದ ಬಹುತೇಕ ಮಂದಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರೂ ಕೂಡ ಯಾಕೆ ಅಡುಗೆ ಎಣ್ಣೆಯ ಉತ್ಪನ್ನದಲ್ಲಿ ಸ್ವಾವಲಂಬನೆ ಸಾಧಿಸಲು ಇನ್ನೂ ಸಾಧ್ಯವಾಗಿಲ್ಲ ಎಂಬ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕಾಗಿದೆ. ಇದಕ್ಕೆ ಕಾರಣವಾದರೂ ಏನೆಂದು ಭಾರತ ಸರ್ಕಾರಕ್ಕೆ ಗೊತ್ತಿದೆಯೇ?

ಯಾವುದೇ ವಿಚಾರಲ್ಲಿ ಅಲ್ಪ ಮಟ್ಟಿಗಿನ ತಿಳುವಳಿಕೆ ಅಜ್ಞಾನಕ್ಕೆ ಸಮಾನ. ಭಾರತದ ಆಹಾರ ಭದ್ರತೆಯ ಜವಾಬ್ದಾರಿ ಹೊತ್ತಿರುವ ತಜ್ಞರು ಅಜ್ಞಾನಿಗಳೇನೂ ಅಲ್ಲ. ಆದರೆ ವಿಷಯದ ಸಂಪೂರ್ಣ ತಿಳುವಳಿಕೆ ಕೂಡ ಇವರಲ್ಲಿ ಇಲ್ಲ. ಅಡುಗೆ ಎಣ್ಣೆ ಮತ್ತು ಎಣ್ಣೆಕಾಳುಗಳಿಗೆ ಭಾರೀ ಬೇಡಿಕೆ ಉಂಟಾದಾಗ ಆತಂಕಗೊಂಡ ಭಾರತ ಸರ್ಕಾರ 1986ರಲ್ಲಿ "ಎಣ್ಣೆಬೀಜಗಳು, ಕಾಳುಗಳ ತಂತ್ರಜ್ಞಾನ ಮಿಷನ್" ಆರಂಭಿಸಿತು. ಹೈಬ್ರಿಡ್ ತಳಿಗಳನ್ನು ಅಭಿವೃದ್ಧಿಪಡಿಸುವ ಮೂಲಕ ಇಳುವರಿ ಹೆಚ್ಚಿಸುವುದು, ರೈತರಿಗೆ ಬೆಂಬಲ ನೀಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರಗಳೊಂದಿಗೆ ಸಂಯೋಜನೆ ನಡೆಸುವುದು ಕಾರ್ಯಕ್ರಮದ ಭಾಗವಾಗಿತ್ತು. 1986ರಿಂದ ಈ ಯೋಜನೆ ಜಾರಿಯಲ್ಲಿದ್ದು, ಇಳುವರಿಯ ಪ್ರಮಾಣದಲ್ಲಿ ಗಣನೀಯವಾಗಿ ಹೆಚ್ಚಳ ಕಂಡುಬಂದಿದೆ. ಆದರೆ ಜೊತೆಜೊತೆಗೆ ಬೇಡಿಕೆ ಕೂಡ ಹೆಚ್ಚಾಗಿದ್ದು, ಪ್ರತಿವರ್ಷ ಆಮದಿನ ವೆಚ್ಚ ಕೂಡ ಹೆಚ್ಚಾಗುತ್ತಿದೆ.

ಇದರರ್ಥ ಏನೆಂದರೆ, ತಜ್ಞರ ತಿಳುವಳಿಕೆಯನ್ನು ಮೀರಿದ ಒಂದು ಸಮಸ್ಯೆ ಇರುವುದರಂತೂ ನಿಜ. ಇದರಿಂದಾಗಿಯೇ ಅಡುಗೆ ಎಣ್ಣೆಯ ಬೇಡಿಕೆ ಹೆಚ್ಚಾಗುತ್ತಲೇ ಇದೆ.

ಭಾರತದಲ್ಲಿ ಇತ್ತೀಚೆಗಿನ ವರ್ಷಗಳಳಲ್ಲಿ ದೊಡ್ಡ ಮಟ್ಟದ ಬದಲಾವಣೆಗಳಾಗುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಕಾರ್ಮಿಕರ ಕೊರತೆ ಈಗ ಬಹು ದೊಡ್ಡ ಸಮಸ್ಯೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮಾಡಲಾಗುವ ಕೆಲಸಕ್ಕೆ ನೀಡುವ ಕೂಲಿಯ ಸ್ವರೂಪ ಕೂಡ ಬದಲಾಗುತ್ತಿದೆ. ಈಗ ಕೃಷಿ ಕಾರ್ಮಿಕರು ಆಹಾರ ಧಾನ್ಯಗಳ ಬದಲಿಗೆ ಹಣವನ್ನು ಅಪೇಕ್ಷಿಸುತ್ತಾರೆ. ಇದಲ್ಲದೆ ಇತ್ತೀಚೆಗೆ ಗ್ರಾಮೀಣ ಪ್ರದೇಶದಲ್ಲಿ ಸೇವಾ ವಲಯ ಕೂಡ ವಿಸ್ತರಣೆಯಾಗಿದೆ. ಭಾರೀ ಸಂಖ್ಯೆಯಲ್ಲಿ ಗ್ರಾಮೀಣ ಜನರು ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಕೃಷಿ ಕಾರ್ಮಿಕರು ಈಗ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ತೀರ ಕೆಳವರ್ಗದವರ ಬಳಿ ಕೂಡ ಸ್ವಲ್ಪ ಹಣ ಚಲಾವಣೆಯಾಗುತ್ತಿದೆ. ದಲಿತರೂ ಕೂಡ ತಮ್ಮ ಆಹಾರಪದ್ಧತಿಯನ್ನು ಬದಲಾಯಿಸಿ ಕೊಳ್ಳುತ್ತಿದ್ದಾರೆ. ಅಡುಗೆ ಎಣ್ಣೆ, ಕಾಳುಗಳು, ತರಕಾರಿಗಳು ದಲಿತರ ಅಡುಗೆ ಮನೆಗಳನ್ನು ಪ್ರವೇಶಿಸುತ್ತಿವೆ. ಇದರಿಂದಾಗಿ ಬೇಡಿಕೆ ಹೆಚ್ಚಾಗಿದೆ. ತಜ್ಞರಿಗೆ ಈ ವಿದ್ಯಮಾನದ ಪರಿಚಯ ಇಲ್ಲವೆಂದೇನಲ್ಲ.

ಆದರೆ ಕೃಷಿ ವಿಧಾನದಲ್ಲಿ ಕೂಡ ಬದಲಾವಣೆ ಕಂಡು ಬಂದಿರುವುದು ಬಹುಶಃ ಈ ತಜ್ಞರಿಗೆ ಗೊತ್ತಾಗಿಲ್ಲ. ಇಳುವರಿಯ ಸಂದರ್ಭದಲ್ಲಿ ಮಾನವ ಕೆಲಸಗಾರರ ಅವಶ್ಯಕತೆ ಇರುವ ಕೃಷಿ ಮಾದರಿ ಬಹುತೇಕ ಕಣ್ಮರೆಯಾಗಿದೆ. ಉದಾಹರಣೆಗೆ ಎಣ್ಣೆಕಾಳುಗಳನ್ನು ಬೆಳೆಯಲು ಕೆಲಸಗಾರರ ಅವಶ್ಯಕತೆ ಇದೆ ಎಂದಾದರೆ ಬಹಳಷ್ಟು ಮಂದಿ ರೈತರು ಎಣ್ಣೆಕಾಳುಗಳ ಬದಲಿಗೆ ಕೃಷಿ ಯಂತ್ರಗಳ ಮೂಲಕ ಬಿತ್ತನೆ ಮಾಡಬಹುದಾದ ಗೋಧಿ ಮತ್ತು ಭತ್ತವನ್ನು ಬೆಳೆಯಲಾರಂಭಿಸುತ್ತಾರೆ. ಕಳೆದ ಋತುವಿನಲ್ಲಿ ನನ್ನ ಸ್ವಗ್ರಾಮದಲ್ಲಿ ಸುಮಾರು ಅರ್ಧದಷ್ಟು ಭತ್ತ ಮತ್ತು ಗೋಧಿಯ ಬಿತ್ತನೆಯನ್ನು ಕೃಷಿ ಯಂತ್ರದ ಮೂಲಕ ಮಾಡಲಾಗಿದೆ.

ಉತ್ತರ ಭಾರತದಲ್ಲಿ ಸಾಸಿವೆ ಎಣ್ಣೆ ಅತ್ಯಂತ ಜನಪ್ರಿಯವಾದುದು. ಆದರೆ ಸಾಸಿವೆಯನ್ನು ಪ್ರತ್ಯೇಕವಾಗಿ ಬೆಳೆಯುವುದಿಲ್ಲ. ಬಹುತೇಕ ಗೋಧಿಯ ಜೊತೆಗೆ ಸಾಸಿವೆಯನ್ನು ಬೆಳೆಯಲಾಗುತ್ತದೆ. ಇನ್ನು ತಂತ್ರಜ್ಞಾನದ ವಿಚಾರಕ್ಕೆ ಬರುವುದಾದರೆ, ಗೋಧಿಯನ್ನು ಸಿಪ್ಪೆಯಿಂದ ಬಿಡಿಸುವ ಯಂತ್ರ, ಸಾಸಿವೆಯನ್ನು ಸಿಪ್ಪೆಯಿಂದ ಬೇರ್ಪಡಿಸುವುದಿಲ್ಲ. ಹಿಂದೆ ಕೃಷಿ ಕಾರ್ಮಿಕರು ಗೋಧಿ ಮತ್ತು ಸಾಸಿವೆಯನ್ನು ಒಟ್ಟಾಗಿ ಬೆಳೆಯುತ್ತಿದ್ದ ಸಂದರ್ಭದಲ್ಲಿ ತಮ್ಮ ಕೈಯಾರೆ ಗೋಧಿ ಮತ್ತು ಸಾಸಿವೆಯನ್ನು ಬೇರ್ಪಡಿಸುತ್ತಿದ್ದರು. ಆದರೆ ಈಗ ಕೃಷಿಯಂತ್ರ ಈ ರೀತಿ ಬೇರ್ಪಡಿಕೆಗೆ ಅವಕಾಶ ಕಲ್ಪಿಸದೆ ಇರುವುದರಿಂದ ಬಹುತೇಕ ರೈತರು ವಾಣಿಜ್ಯ ಬೆಳೆಯಾಗಿದ್ದರೂ ಕೂಡ ಸಾಸಿವೆ ಬೆಳೆಯುವುದನ್ನೇ ಬಿಟ್ಟಿದ್ದಾರೆ. ಸಾಸಿವೆಯ ಕೊಯ್ಲಿಗೆ ಸಂಬಂಧಿಸಿದ ಪ್ರತ್ಯೇಕವಾದ ಕೃಷಿ ಯಂತ್ರ ಇಲ್ಲದಿರುವುದೂ ಕೂಡ ಸಾಸಿವೆ ಬೆಳೆಗೆ ಮಾರಕವಾಗಿ ಪರಿಣಮಿಸಿದೆ. ಈ ವರ್ಷದ ಬಜೆಟ್ ಭಾಷಣದಲ್ಲಿ ಹಣಕಾಸು ಸಚಿವ ಪ್ರಣಬ್ ಮುಖರ್ಜಿ ಈ ರೀತಿ ಹೇಳುತ್ತಾರೆ; "2010–11ನೆಯ ವರ್ಷದಲ್ಲಿ ಮಳೆ ನೀರಾವರಿ ಹೊಂದಿರುವ ಗ್ರಾಮಗಳಲ್ಲಿ 60,000 ಎಣ್ಣೆಕಾಳುಗಳನ್ನು ಪರಿಚಯಿ ಸಲಾಗುವುದು ಮತ್ತು ಬರಡು ಒಣಭೂಮಿಯ ಇಳುವರಿ ಯನ್ನು ಹೆಚ್ಚಿಸುವ ಉದ್ದೇಶದಿಂದ ನೀರಾವರಿ ವ್ಯವಸ್ಥೆ, ಮಣ್ಣಿನ ಗುಣಲಕ್ಷಣ, ಇವುಗಳ ಬಗ್ಗೆ ಸಮಗ್ರವಾದ

ಯೋಜನೆ ಹಮ್ಮಿಕೊಳ್ಳಲಾಗುವುದು."

ಭಾರತ ಯಾಕೆ ಅಡ್ಡುಗೆ ಎಣ್ಣೆ ಮತ್ತು ಎಣ್ಣೆಕಾಳುಗಳ ಕೊರತೆ ಅನುಭವಿಸುತ್ತದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲದಿರುವುದು ಹಣಕಾಸು ಸಚಿವರ ಭಾಷಣವನ್ನು ಗಮನಿಸಿದರೆ ಗೊತ್ತಾಗುತ್ತದೆ. ಕೃಷಿ ಕ್ಷೇತ್ರವನ್ನು ಕುರಿತು ತಜ್ಞರ ಇಂತಹ ಸಾಧಾರಣ ತಿಳುವಳಿಕೆಯೇ ಅಡುಗೆ ಎಣ್ಣೆ ಮತ್ತು ಎಣ್ಣೆಕಾಳುಗಳ ಕೊರತೆಗೆ ಕಾರಣ ಎಂದರೆ ತಪ್ಪಾಗಲಾರದು.

ಬೌದ್ಧಿಕ ದಾರಿದ್ರ್ಯ

ಇತ್ತೀಚೆಗೆ ನಾನು ದೇವರ ರಾಜ್ಯ ಕೇರಳಕ್ಕೆ ಭೇಟಿ ನೀಡಿದ್ದೆ. ಎಲ್ಲೆಲ್ಲೂ ಹಸಿರಿನಿಂದ ಕಂಗೊಳಿಸುವ ಕೇರಳ ಪ್ರಕೃತಿದತ್ತ ಕುಂಚ ಕಾವ್ಯವೇ ಸರಿ.

ಕೇರಳದ ಕೇಂದ್ರೀಯ ವಿಶ್ವವಿದ್ಯಾನಿಲಯದ ತೌಲನಿಕ ಸಾಹಿತ್ಯ ವಿಭಾಗದ ಡಾ. ರಾಘವನ್ ವೆಲ್ಲಿಕ್ಕೀಳ್ ಅವರ ಆಮಂತ್ರಣದ ಮೇಲೆ ನಾನು ಕೇರಳಕ್ಕೆ ಭೇಟಿ ನೀಡಿದ್ದೆ. 'ದಲಿತರ ಆಂಗ್ಲೀಕರಣ' ವಿಚಾರದ ಬಗ್ಗೆ ಮಾತನಾಡಲು ನನ್ನನ್ನು ಆಹ್ವಾನಿಸಲಾಗಿತ್ತು. ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಜಾನ್ಸಿ ಥಾಮಸ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕೊಟ್ಟಾಯಂನ ಮಹಾತ್ಮಗಾಂಧಿ ವಿಶ್ವವಿದ್ಯಾನಿಲಯದ ಡಾ. ಸನಲ್ ಮೋಹನ್, ಕಣ್ಣೂರು ವಿ.ವಿಯ ಪ್ರೊ. ಎಂ ದಾಸನ್, ಹೈದಸರಾಬಾದ್ ಇಎಫ್‌ಎಲ್‌ಯುದ ಡಾ. ವಿ. ಬಿ. ತಾರಕೇಶ್ವರ್, ದೆಹಲಿ ಆರ್‌ಜಿಎಫ್‌ದ ಡಿ ಶ್ಯಾಂ ಬಾಬು ಮತ್ತು ಅಣ್ಣಾ ವಿಶ್ವವಿದ್ಯಾನಿಲಯದ "ದಲಿತ ಕಾವ್ಯದ ದೇವತೆ" ಮೀನಾ ಕಂದಸ್ವಾಮಿ ಅವರಂತಹ ವಿದ್ವಾಂಸರು ವಿಚಾರ ಮಂಡನೆ ಮಾಡಿದರು.

ದೆಹಲಿಯ ಅಗ್ರಗಣ್ಯ ವಿದ್ಯಾಸಂಸ್ಥೆಗಳಲ್ಲಿ ನಡೆಯುವ ಹಲವಾರು ವಿಚಾರ ಸಂಕಿರಣಗಳಿಗಿಂತ ಅತ್ಯುತ್ತಮವಾಗಿ ಆಯೋಜಿಸಲ್ಪಟ್ಟ ಈ ವಿಚಾರ ಸಂಕಿರಣದ ಉದ್ದೇಶಗಳ ಬಗ್ಗೆ ವಿಶ್ವವಿದ್ಯಾನಿಲಯದ ಯುವ ಪ್ರಾಧ್ಯಾಪಕ ಪನ್ನಿಯನ್ ಪ್ರಸಾದ್ ಪರಿಚಯಿಸಿದರು. ಮತ್ತೋರ್ವ ಪ್ರಾಧ್ಯಾಪಕ ಡಾ. ಕೆ ಜೋಸೆಫ್ ಕಾರ್ಯಕ್ರಮದ ಉಸ್ತುವಾರಿ ವಹಿಸಿಕೊಂಡಿದ್ದರು. ಅತ್ಯಧಿಕ ಸಂಖ್ಯೆಯಲ್ಲಿ ನೆರೆದಿದ್ದ ವಿದ್ಯಾರ್ಥಿಗಳು ಅತ್ಯುತ್ತಮವಾದ ಪ್ರಶ್ನೆಗಳನ್ನು ಎತ್ತಿದರು. ವಿದ್ಯಾರ್ಥಿಗಳ ಉತ್ಸಾಹ ಎಷ್ಟಿತ್ತೆಂದರೆ, ನಾನು, ಡಾ. ಶ್ಯಾಂ ಬಾಬು, ಡಾ. ತಾರಕೇಶ್ವರ್ ಎರಡನೆಯದಿನ ಮತ್ತೊಂದು ಗೋಷ್ಠಿಯಲ್ಲಿ ಮಾತನಾಡಬೇಕಾಗಿ ಬಂತು.

ದಲಿತರ 'ಮಾತೃಭಾಷೆಯ' ಬಗೆಗಿನ ಚಿಂತನೆಯ ಬುಡವನ್ನು ಅಲುಗಾಡಿಸುವಲ್ಲಿ ವಿಚಾರ ಸಂಕಿರಣ ಯಶಸ್ವಿಯಾಯಿತು. ವಿಚಾರ ಮಂಡಿಸಿದ ಕೆಲವು ತಜ್ಞರು ದಲಿತರು ಮಾತನಾಡುವ ವಿವಿಧ ಭಾಷೆಗಳ ಬಗ್ಗೆ ಬೆಳಕು ಚೆಲ್ಲುವುದರ ಜೊತೆಗೆ ಮುಖ್ಯವಾಹಿನಿಯ ಹಿಂದಿ,ತಮಿಳು, ತೆಲುಗು, ಕನ್ನಡದಂತಹ ಭಾಷೆಗಳು ದಲಿತರ ಮಾತೃಭಾಷೆಯೇ ಆಗಿರಲಿಲ್ಲ ಎಂಬ ಬಗ್ಗೆ ವಿವರಗಳನ್ನು ನೀಡಿದರು. ಹೀಗಾಗಿ ದಲಿತರು ತಮ್ಮ 'ಮಾತೃಭಾಷೆ'ಗಳನ್ನು ತೊರೆದು ಇಂಗ್ಲಿಷ್ ಭಾಷೆಯನ್ನು ಮುಕ್ತವಾಗಿ ಬರಮಾಡಿಕೊಳ್ಳಬಹುದು. ಇದಲ್ಲದೆ ಇಂಗ್ಲಿಷ್ ಭಾಷೆಗೆ ಜಾತಿ ಅಥವಾ ಜಾತಿ ಆಧಾತಿತ ತಾರತಮ್ಯಗಳ ಹಂಗಿಲ್ಲ ಎಂಬ ಸಹಮತ ಕೂಡ ಸಂಕಿರಣದಲ್ಲಿ ವ್ಯಕ್ತವಾಯಿತು.

ವಿಚಾರ ಸಂಕಿರಣದ ಜೊತೆಜೊತೆಗೆ ಕಾಸರಗೋಡು ಜಿಲ್ಲೆಯ (ವಿಶ್ವವಿದ್ಯಾನಿಲಯ ಇರುವ ಜಿಲ್ಲೆ) ಕೆಲವು ದಲಿತ ಹಳ್ಳಿಗಳಿಗೆ ಭೇಟಿ ನೀಡಲು ವ್ಯವಸ್ಥೆ

ಇತ್ತೀಚೆಗಿನ ವರ್ಷಗಳಲ್ಲಿ ಭಾರತದ ಬೌದ್ಧಿಕ ಶಕ್ತಿ ಕ್ಷೀಣವಾಗುತ್ತಾ ಬಂದಿರುವುದಂತೂ ನಿಜ. ರಾಕೆಟ್ ವೇಗದ ಬದಲಾವಣೆಗೆ ಸ್ಪಂದಿಸಲು ದೇಶದ ಬೌದ್ಧಿಕ ವರ್ಗಕ್ಕೆ ಸಾಧ್ಯವಾಗುತ್ತಿಲ್ಲ. ದೇಶದ ಆರ್ಥಿಕ ಬಡತನಕ್ಕಿಂತ ಬೌದ್ಧಿಕ ದಾರಿದ್ರ್ಯ ನಿಜವಾಗಿಯೂ ಎಲ್ಲರೂ ತಲೆಕೆಡಿಸಿಕೊಳ್ಳಬೇಕಾದ ವಿಚಾರ. ಮುಂಬರುವ ದಿನಗಳಲ್ಲಿನ ಆಹಾರದ ಕೊರತೆಯನ್ನು ಸರಿದೂಗಿಸಬೇಕಾದರೆ ಕೃಷಿಯ ಆಧುನೀಕರಣಕ್ಕೆ ಹೆಚ್ಚಿನ ಬಂಡವಾಳ ಹೂಡಿಕೆಯಾಗಬೇಕಿದೆ.

ಮಾಡಲು ಡಾ. ರಾಘವನ್ ಅವರನ್ನು ನಾನು ಕೇಳಿಕೊಂಡೆ. ಕಣ್ಣೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ದಲಿತರು ಈಗಲೂ ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಆಯೋಜಕರು ನನಗೆ ತಿಳಿಸಿದರು.

ಸಿ ಕೆ ವಿಶ್ವನಾಥ್ ಅವರ ಮುಂದಾಳತ್ವದಲ್ಲಿ ನಾನು ಮತ್ತು ಡಿ ಶ್ಯಾಂ ಬಾಬು ಸುಮಾರು 12 ದಲಿತ ಕಾಲೋನಿಗಳಿಗೆ ಭೇಟಿ ನೀಡಿದೆವು. ಆದರೆ ಅವರಲ್ಲಿ ಯಾರೊಬ್ಬರೂ ಕೂಡ ಕೃಷಿ ಕಾರ್ಮಿಕರಾಗಿರಲಿಲ್ಲ. "ಕೇರಳದಲ್ಲಿ ಕೃಷಿ ಚಟುವಟಿಕೆಗಳು ಎಲ್ಲಿ ನಡೆಯುತ್ತಿವೆ?" ಎಂದು ಪ್ರಶ್ನಿಸಿದ ಅಲ್ಲಿನ ಹಿರಿಯ ದಲಿತನೋರ್ವ, "ಕೃಷಿ ಕೆಲಸದಲ್ಲಿ ನಮಗೆ ಯಾವುದೇ ಆಸಕ್ತಿ ಇಲ್ಲ" ಎಂದು ಹೇಳಿದಾಗ ನನಗೆ ಆಶ್ಚರ್ಯವಾಗಲಿಲ್ಲ. ರಾಜ್ಯದ ಭತ್ತದ ಕಣಜ ಪಲಕ್ಕಾಡ್‌ನಂತಹ ಸ್ಥಳಗಳಲ್ಲಿ ಎತ್ತಿನಗಾಡಿಯ ಸ್ಥಳವನ್ನು ಟ್ರ್ಯಾಕ್ಟರ್‌ಗಳು ಆಕ್ರಮಿಸಿಕೊಂಡಿವೆ ಎಂಬ ಅಂಶ ನನ್ನ ಗಮನಕ್ಕೆ ಬಂದಾಗಲೂ ಆಶ್ಚರ್ಯವಾಗಲಿಲ್ಲ. ಕೃಷಿಕಾರ್ಮಿಕರ ಕೊರತೆಯಿಂದಾಗಿ ರೈತರು ತಮ್ಮ ಕೃಷಿ ವಿಧಾನವನ್ನೇ ಬದಲಾಯಿಸಿಕೊಳ್ಳಬೇಕಾಗಿ ಬಂದುದರ ಬಗ್ಗೆ ಕೂಡ ನನಗೆ ಮಾಹಿತಿ ಸಿಕ್ಕಿತು.

ದೆಹಲಿಯಲ್ಲಿ ಸಣ್ಣ ಸಂಶೋಧನೆಯನ್ನು ಕೈಗೊಂಡ ನಾನು, ದೇಶದ ಕೃಷಿ ವಿಧಾನದಲ್ಲಿ ತ್ವರಿತಗತಿಯ ಬದಲಾವಣೆಗಳಾಗುತ್ತಿರುವುದನ್ನು ಕಂಡುಕೊಂಡಿದ್ದೇನೆ. 1980ರಲ್ಲಿ ಕೇರಳದ 801,700 ಹೆಕ್ಟೇರ್ ಪ್ರದೇಶದಲ್ಲಿ ಭತ್ತವನ್ನು ಬೆಳೆಯಲಾಗುತ್ತಿತ್ತು. 2006ರಲ್ಲಿ ಇದು 276,000 ಹೆಕ್ಟೇರ್‌ಗಳಿಗೆ ಕುಸಿದಿದೆ. 1980ರಲ್ಲಿ 13 ಲಕ್ಷ ಟನ್‌ಗಳಷ್ಟು ಅಕ್ಕಿ ಉತ್ಪಾದನೆಯಾಗುತ್ತಿದ್ದರೆ, 2006ರಲ್ಲಿ 6.3 ಲಕ್ಷ ಟನ್‌ಗಳಷ್ಟು ಮಾತ್ರ ಉತ್ಪಾದನೆಯಾಗುತ್ತಿದೆ. ಬದಲಾಗುತ್ತಿರುವ ಕೃಷಿ ವಿಧಾನದ ಪರಿಣಾಮವಾಗಿ 1981ರಲ್ಲಿ ಆಹಾರ ಬೆಳೆಯುವ ಪ್ರದೇಶಗಳ ಪ್ರಮಾಣ 37.5%ನಿಂದ 2006ರಲ್ಲಿ 12.5%ಗೆ ಇಳಿಕೆಯಾಗಿದೆ.

ಇನ್ನು ಉತ್ತರಪ್ರದೇಶದ ವಿಚಾರಕ್ಕೆ ಬರುವುದಾದರೆ, ಸಕ್ಕರೆ ಉತ್ಪಾದನೆಯಲ್ಲಿ ರಾಜ್ಯವನ್ನು ಹಿಂದಿಕ್ಕಿ ಮಹಾರಾಷ್ಟ್ರ ರಾಜ್ಯ ಮೊದಲ ಸ್ಥಾನಕ್ಕೆ ಬರುತ್ತಿದೆ. 2007-08ರಲ್ಲಿ ಕಬ್ಬು ಬೆಳೆಯುವ ಪ್ರದೇಶ, ಉತ್ತರಪ್ರದೇಶದಲ್ಲಿ 2.85 ದಶಲಕ್ಷ ಹೆಕ್ಟೇರ್‌ಗಳಷ್ಟಿದ್ದರೆ, 2008-09ರಲ್ಲಿ ಇದು 2.14 ದಶಲಕ್ಷ ಹೆಕ್ಟೇರ್‌ಗಳಿಗೆ ಕುಸಿದಿದೆ. ಸಮಾಜವಾದದಿಂದ ಕಂಗಾಲಾಗಿರುವ ಕೇರಳರಾಜ್ಯ "ವೆಸ್ಟರ್ನ್ ಯೂನಿಯನ್" ಆರ್ಥಿಕ ವ್ಯವಸ್ಥೆಯಾಗಿ ಮಾರ್ಪಾಟಾಗಿದೆ. ಅದೇ ರೀತಿ ಬಿಹಾರ, ಉತ್ತರ ಪ್ರದೇಶದ ಗ್ರಾಮೀಣ ಪ್ರದೇಶಗಳಿಂದ ಕೂಡ ಕೃಷಿ ಕಾರ್ಮಿಕರು ನಗರಗಳಿಗೆ ವಲಸೆ ಬರುತ್ತಿದ್ದು ಕೃಷಿ ವಿಧಾನದಲ್ಲಿ ಮಹತ್ತರ ಬದಲಾವಣೆಗಳಿಗೆ ಕಾರಣರಾಗಿದ್ದಾರೆ. ಕಳೆದ ದಶಕದಲ್ಲಿ ದೇಶದಲ್ಲಿ ಜಾರಿಯಲ್ಲಿರುವ ಆರ್ಥಿಕ ಸುಧಾರಣೆಯ ಪರಿಣಾಮವಾಗಿ ಸೃಷ್ಟಿಯಾಗಿರುವ ಹೊಸ ಅವಕಾಶಗಳು, ಕೃಷಿ ಕಾರ್ಮಿಕರನ್ನು ಕೃಷಿ ಚಟುವಟಿಕೆಗಳಿಂದ ಮುಕ್ತಿ ಹೊಂದುವಂತೆ ತೀವ್ರವಾಗಿ ಪ್ರೇರೇಪಿಸುತ್ತಿವೆ. ಉತ್ತರ ಭಾರತದಲ್ಲಿ ಈ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ.

ಇದರಿಂದಾಗಿ ದೇಶದಲ್ಲಿ ಅಕ್ಕಿ, ಸಕ್ಕರೆ, ಕಾಳುಗಳು, ಎಣ್ಣೆಕಾಳುಗಳು ಮತ್ತು ತರಕಾರಿಗಳ ಉತ್ಪಾದನೆ ಕಡಿಮೆಯಾಗಿ ದೇಶ ಒಂದು ದೊಡ್ಡ ಸಮಸ್ಯೆಯಲ್ಲಿ ಸಿಲುಕಲಿದೆ. ಉದಾಹರಣೆಗೆ ಉತ್ತರ ಭಾರತದಲ್ಲಿ ಮನುಷ್ಯರ ಕೆಲಸದ ಅವಶ್ಯಕತೆಯಿರುವ ಬಹುತೇಕ ಬೆಳೆಗಳ ಸ್ಥಳವನ್ನು ಗೋಧಿ ಆಕ್ರಮಿಸಲಿದೆ. ಆದರೆ ಈ ಸಮಸ್ಯೆಗೆ ಬೌದ್ಧಿಕವಾದ ಪರಿಹಾರ ಹುಡುಕುವ ನಿಟ್ಟಿನಲ್ಲಿ ದೇಶದ ಬುದ್ಧಿಜೀವಿಗಳು, ಯೋಜನಾಕಾರರು ಹಾಗೂ ಅಭಿಪ್ರಾಯ ನಾಯಕರು ವಿಫಲರಾಗಿದ್ದಾರೆ. ಈ ವರ್ಷದ ಬಜೆಟ್ ಭಾಷಣವನ್ನು ವಿಶ್ಲೇಷಿಸಿದರೆ ಈ ಅಂಶ ಇನ್ನೂ ಸ್ಪಷ್ಟವಾಗುತ್ತದೆ.

ಇತ್ತೀಚೆಗಿನ ವರ್ಷಗಳಲ್ಲಿ ಭಾರತದ ಬೌದ್ಧಿಕ ಶಕ್ತಿ ಕ್ಷೀಣವಾಗುತ್ತಾ ಬಂದಿರುವುದಂತೂನಿಜ. ರಾಕೆಟ್ ವೇಗದ ಬದಲಾವಣೆಗೆ ಸ್ಪಂದಿಸಲು ದೇಶದ ಬೌದ್ಧಿಕ ವರ್ಗಕ್ಕೆ ಸಾಧ್ಯವಾಗುತ್ತಿಲ್ಲ. ದೇಶದ ಆರ್ಥಿಕ ಬಡತನಕ್ಕಿಂತ ಬೌದ್ಧಿಕ ದಾರಿದ್ರ್ಯ ನಿಜವಾಗಿಯೂ ಎಲ್ಲರೂ ತಲೆ ಕೆಡಿಸಿಕೊಳ್ಳಬೇಕಾದ ವಿಚಾರ. ಮುಂಬರುವ ದಿನಗಳಲ್ಲಿನ ಆಹಾರದ ಕೊರತೆಯನ್ನು ಸರಿದೂಗಿಸಬೇಕಾದರೆ ಕೃಷಿಯ ಆಧುನೀಕರಣಕ್ಕೆ ಹೆಚ್ಚಿನ ಬಂಡವಾಳ ಹೂಡಿಕೆಯಾಗಬೇಕಿದೆ.

ದಲಿತ ಸಂಪಾದಕ ಸುನೀಲ್

ನಲವತ್ತೆಂಟನೆಯ ವಯಸ್ಸಿಗೆ ಮರಾಠಿ ದೈನಿಕ 'ಜನಚೇತನ ಮಹಾನಾಯಕ್' ಪತ್ರಿಕೆಯ ಸಂಪಾದಕರಾಗಿರುವ ಸುನೀಲ್ ಕೊಬ್ರಗಡೆ ದಲಿತ ಯುವಕರಿಗೆ ಪ್ರೇರಕಶಕ್ತಿಯಾಗಿದ್ದಾರೆ. ದಲಿತರ ಇತಿಹಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿರುವ 'ಮಹಾನಾಯಕ್' ಸುಮಾರು 25,000ಗಳಷ್ಟು ಪ್ರಸಾರ ಸಂಖ್ಯೆಯನ್ನು ಹೊಂದಿದ್ದು, ಸುನೀಲ್, ಪತ್ರಿಕೆಯ ಸಂಸ್ಥಾಪಕ ಸಂಪಾದಕರಾಗಿದ್ದಾರೆ. ವೆಬ್ ಆಫ್‌ಸೆಟ್ ಮುದ್ರಣ ಮತ್ತು ಷೇರು ವ್ಯವಹಾರ ನಡೆಸುವ ಸುನೀಲ್, ಉತ್ತಮ ಇಂಗ್ಲಿಷ್ ಭಾಷೆ ಮಾತನಾಡುತ್ತಾರೆ. ಐಷೋರಾಮಿ ಕಾರುಗಳನ್ನು ಹೊಂದಿರುವ ಇವರು ದಲಿತ ಕೋಟ್ಯಾಧಿಪತಿಗಳೂ ಹೌದು.

ಸುನೀಲ್ ಅವರ ಆಮಂತ್ರಣದ ಮೇರೆಗೆ ನಾನು ಇತ್ತೀಚೆಗೆ ಮುಂಬೈಗೆ ಭೇಟಿ ನೀಡಿದ್ದೆ. ಆಧುನಿಕ ಭಾರತದ ಅಂಬೇಡ್ಕರ್ ಎಂದೇ ಖ್ಯಾತರಾಗಿರುವ ಕಾನ್ಶಿರಾಂ ಅವರ ಜನ್ಮದಿನದಂದು 'ಮಹಾನಾಯಕ್' ಪತ್ರಿಕೆಯ ಐದನೆಯ ವಾರ್ಷಿಕೋತ್ಸವ ಸಮಾರಂಭದ ಆಚರಣೆಗೆ ನನ್ನನ್ನು ಆಹ್ವಾನಿಸಲಾಗಿತ್ತು. ಅಂದು ಮಧ್ಯರಾತ್ರಿಯವರೆಗೆ ಸಮಾರಂಭ ನಡೆಯಿತು.

ಮರುದಿನ ಸುನೀಲ್ ತನ್ನ ಸಹುದ್ಯೋಗಿ ಸಂತೋಷ್ ನಾನಾ ಪಗಾರೆ ಅವರೊಂದಿಗೆ ನನ್ನನ್ನು ಭೇಟಿ ಮಾಡಲು ನಾನು ತಂಗಿದ್ದ ಹೋಟೆಲ್‌ಗೆ ಬಂದರು. ನಾಲ್ಕು ಕಂಪನಿಗಳ ಸಿಇಓ ಆಗಿರುವ ಸಂತೋಷ್ ಈಗ

ದಲಿತ ಉದ್ಯಮಿಗಳ "ಡೀಪ್ ಎಕ್ಸ್‌ಪೋ"

ಸುನೀಲ್ ಅವರ ಕೈಜೋಡಿಸಿದ್ದಾರೆ. "ದಲಿತ ಉದ್ಯಮಿಗಳು ಹಣ ಗಳಿಸುವುದರ ಜೊತೆಗೆ ದಲಿತರ ಸೇವೆ"ಯ ಉದ್ದೇಶ ಹೊಂದಿರುವುದು ಈ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂತು.

ದಲಿತರ ಸಮಗ್ರ ಅಭಿವೃದ್ಧಿಯ ಉದ್ದೇಶದಿಂದ "ನಾವು ಆರ್ಥಿಕ ಸಾಕ್ಷರತೆ ಕಾರ್ಯಕ್ರಮವನ್ನು ದಲಿತ ಯುವಕರಿಗಾಗಿ ನಡೆಸುತ್ತಿದ್ದೇವೆ" ಎಂದು ಸಂತೋಷ್ ಹೇಳಿದಾಗ ನನಗೆ ಬಹಳ ಖುಷಿಯಾಯಿತು. ದಲಿತರು ಹಣಕಾಸಿನ ವ್ಯವಹಾರಕ್ಕೆ ಕಾಲಿರಿಸಬೇಕೆಂದು ಸದಾ ಬಯಸುವ ನಾನು ಈ ಕುರಿತು ಹೆಚ್ಚಿನ ವಿವರ ಕೇಳಿದೆ.

ಹೊಸ ಉದ್ಯಮವನ್ನು ಆರಂಭಿಸಲು ದಲಿತ ಯುವಕರಿಗೆ ಮಾರ್ಗದರ್ಶನ ನೀಡುವ ಕೆಲಸವನ್ನು ಸುನೀಲ್ ತನ್ನ ಯುವ ತಂಡದ ಮೂಲಕ ಮಾಡುತ್ತಿದ್ದಾರೆ. ಉದಾಹರಣೆಗೆ ಒಂದು ಕಿರಾಣಿ ಅಂಗಡಿ ತೆರೆಯಲು, ಉತ್ಪನ್ನಗಳ ಉದ್ಯಮ ಆರಂಭಿಸಲು, ಕಟ್ಟಡ ಕಾಮಗಾರಿಗಳ ವ್ಯವಹಾರ ಆರಂಭಿಸಲು, ಅಥವಾ ಷೇರುದಾರಾಗಲು ಯಾವರೀತಿಯ ಪರವಾನಗಿಗಳು, ಕಾನೂನು ಕಟ್ಟಳೆಗಳ ತಿಳುವಳಿಕೆ ಅಗತ್ಯ ಎಂದು ವಿವರ ನೀಡಲಾಗುತ್ತದೆ. ರಾಜ್ಯದ ತೆರಿಗೆ ವಿಧಾನದ ಬಗ್ಗೆ ಕೂಡ ವಿವರಗಳನ್ನು ನೀಡಲಾಗುತ್ತದೆ. ಉದ್ಯಮವನ್ನು ಆರಂಭಿಸುವುದಕ್ಕೆ ಮುಂಚೆ ಮಾರುಕಟ್ಟೆ ಸಮೀಕ್ಷೆ ನಡೆಸುವುದು ಹೇಗೆಂದು ತಿಳಿಸಿಕೊಡಲಾಗುತ್ತದೆ. ಬ್ಯಾಂಕ್ ಜೊತೆ ವ್ಯವ ಹರಿಸುವ ಸರಳ ಸೂತ್ರಗಳನ್ನು ಹೇಳಿಕೊಡಲಾಗುತ್ತದೆ. ಉದ್ಯಮದ ಟ್ರೆಂಡ್ ಬಗ್ಗೆ ಕೂಡ ಮಾಹಿತಿ ನೀಡಲಾಗುತ್ತದೆ.

"ಇದು ದಲಿತರ ಆರ್ಥಿಕ ಸ್ವಾತಂತ್ರ್ಯದ ಚಳುವಳಿ" ಎನ್ನುತ್ತಾರೆ ಸುನೀಲ್. ಇಂತಹ ಚಳುವಳಿಯನ್ನು ಆರಂಭಿಸುವ ಅಗತ್ಯತೆಯ ಬಗ್ಗೆ ಪ್ರಶ್ನಿಸಿದಾಗ ದಲಿತರ ಆರ್ಥಿಕ ಸ್ವಾತಂತ್ರ್ಯದ ಮಹತ್ವವನ್ನು ತಿಳಿಸಲು ಸುನೀಲ್ ತಮ್ಮ ಜೀವನದ ಕಥೆಯನ್ನು ನನಗೆ ಹೇಳಿದರು.

ಮಹಾರಾಷ್ಟ್ರದ ಗಢ್ ಚಿರೋಲಿ ಜಿಲ್ಲೆಯ ಗೋಬರ್ಧನ್ ಎಂಬ ಹಳ್ಳಿಯಲ್ಲಿ ಅನಕ್ಷರಸ್ಥ ಕೃಷಿ ಕಾರ್ಮಿಕರ ಮಗನಾಗಿ ಜನಿಸಿದ ಸುನೀಲ್, ಬಡತನದ ದಟ್ಟ ದಾರಿದ್ರ್ಯವನ್ನು ಅನುಭವಿಸಿದರು. "ಹೊಲಗಳಲ್ಲಿ ಕಾಣಿಸಿಕೊಳ್ಳುವ ಇಲಿಗಳನ್ನು ತಿಂದು ನಾನು ಬೆಳೆದೆ" ಎನ್ನುತ್ತಾರೆ ಸುನೀಲ್. ತನ್ನ ಪುಟ್ಟ ಮನೆಯಲ್ಲಿ ಬಿ ಆರ್ ಅಂಬೇಡ್ಕರ್ ಅವರ ಪೋಸ್ಟರನ್ನು ಹಚ್ಚಿ "ಶಿಕ್ಷಣ, ಸಂಘಟನೆ, ಹೋರಾಟ"ದ ಘೋಷಣೆಯನ್ನು ತಮ್ಮ ಧ್ಯೇಯವಾಕ್ಯವನ್ನಾಗಿ ಮಾಡಿಕೊಂಡ ಸುನೀಲ್, ಪ್ರತಿದಿನ ಸುಮಾರು 7 ಕಿ.ಮೀ ನಡೆದು ಶಾಲೆಗೆ ಹೋಗುತ್ತಿದ್ದರು. ಹಳ್ಳಿಯ ಶಾಲೆಯಲ್ಲಿ ಏಳನೆಯ ತರಗತಿಯನ್ನು ಪೂರೈಸಿ, ನಂತರ ತನ್ನ ಅಣ್ಣ ದರ್ಜಿಯಾಗಿ ಕೆಲಸ ಮಾಡುತ್ತಿದ್ದ ಚಂದರ್ ಪುರ್‌ಗೆ ಹೋಗಿ ವಿದ್ಯಾಭ್ಯಾಸ ಮುಂದುವರೆಸುತ್ತಾರೆ. ಬೀದಿಬದಿಯ ಹೋಟೆಲೊಂದರಲ್ಲಿ ಪಾರ್ಟ್‌ಟೈಂ ಕೆಲಸ ಮಾಡುತ್ತಾ ಹತ್ತನೆಯ ತರಗತಿಯಲ್ಲಿ ಮೊದಲ ದರ್ಜೆಯಲ್ಲಿ ಉತ್ತೀರ್ಣರಾಗುತ್ತಾರೆ. ನಂತರ ಹೆಚ್ಚಿನ ವಿದ್ಯಾಭ್ಯಾಸ ನಡೆಸಲು ತನ್ನ ಚಿಕ್ಕಪ್ಪ ವಾಸವಾಗಿರುವ ನಾಗಪುರಕ್ಕೆ ಹೋಗುತ್ತಾರೆ. ಅಲ್ಲಿ ಪಿ.ಯು.ಸಿ ಓದುವ ಸಂದರ್ಭದಲ್ಲಿ ಪತ್ರಿಕೆಗಳ ಮಾರಾಟ – ಕಚೇರಿಗಳಿಗೆ ಊಟ ತಲುಪಿಸುವ ಡಬ್ಬಾವಾಲಾ ಕೆಲಸ ಕೂಡ ಮಾಡಿದರು. 12ನೆಯ ತರಗತಿಯಲ್ಲಿ ಫೇಲಾದ ಸುನೀಲ್, ಹತ್ತನೆಯ ತರಗತಿಯ ಸರ್ಟಿಫಿಕೇಟ್ ಆಧಾರದ ಮೇಲೆ ಪಶು ವಿಜ್ಞಾನದ ಡಿಪ್ಲೊಮೋ ಕೋರ್ಸ್‌ಗೆ ಸೇರುತ್ತಾರೆ. ನಂತರ ಸರ್ಕಾರಿ ಇಲಾಖೆಯೊಂದರಲ್ಲಿ ಪಶುಗಳ ಮೇಲ್ವಿಚಾರಕರಾಗಿ ಕೆಲಸಕ್ಕೆ ಸೇರುತ್ತಾರೆ.

ಅತೀವ ಮಹತ್ವಾಕಾಂಕ್ಷೆಯನ್ನು ಹೊಂದಿದ್ದ ಸುನೀಲ್ ಸರ್ಕಾರಿ ಕೆಲಸದಲ್ಲಿದ್ದಾಗಲೇ ಎಂಎ ಪದವಿಯನ್ನು ಪೂರೈಸಿದರಷ್ಟೇ ಅಲ್ಲದೆ, ರಾಜ್ಯ ನಾಗರಿಕ ಸೇವಾ ಪರೀಕ್ಷೆಯಲ್ಲಿ ಕೂಡ ಉತ್ತೀರ್ಣರಾಗಿ ಕ್ಲಾಸ್ 2 ಅಧಿಕಾರಿಯಾದರು. ಆದರೆ ಇವರ ಜೀವನದಲ್ಲಿ ಮತ್ತೊಂದು ವಿಶೇಷ ಕಾದಿತ್ತು. ಹಿಂದೆ ಪತ್ರಿಕೆಗಳನ್ನು ಮಾರಾಟ ಮಾಡುತ್ತಿದ್ದ ಸುನೀಲ್ ಪತ್ರಿಕೆಯೊಂದರ ಸಂಪಾದಕರಾಗಬೇಕೆಂಬ ಕನಸು ಕಂಡಿದ್ದರು. ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ ಸುನೀಲ್ ತಮ್ಮ ಕನಸುಗಳನ್ನು ಬೆಂಬತ್ತಿ ಹೋದರು. ತಮ್ಮ ಉಳಿತಾಯದ ಹಣ–ಬ್ಯಾಂಕ್ ಸಾಲದ ಸಹಾಯದಿಂದ ಮುದ್ರಣ ಉದ್ಯಮವನ್ನು ಪ್ರಾರಂಭಿಸಿ ನಂತರ ಪತ್ರಿಕೆಯನ್ನು ಕೂಡ ಪ್ರಾರಂಭಿಸಿದರು. ಷೇರು ವ್ಯವಹಾರಕ್ಕೂ ಕೈಹಾಕಿ ಅದರಲ್ಲಿಯೂ ಯಶಸ್ಸು ಕಂಡರು. ಷೇರು ವ್ಯವಹಾರದ ಆದಾಯ ಈಗ 'ಮಹಾನಾಯಕ್' ಪತ್ರಿಕೆಗೆ ಬೆನ್ನೆಲುಬಾಗಿದೆ.

ಅಂದು ಮುಂಬೈನ ಪ್ರಖ್ಯಾತ ಶಿವಾಜಿ ಮಂದಿರ ಸಭಾಂಗಣ ಕಿಕ್ಕಿರಿದು ತುಂಬಿದ್ದ ಜನರು ಸುನೀಲ್‌ರ ಜನಪ್ರಿಯತೆಗೆ ಸಾಕ್ಷಿಯಾಗಿದ್ದರು. "ಹದಿನೆಂಟನೆಯ ವಯಸ್ಸಿಗೆ ನಾನು ಷೂ ಧರಿಸಲು ಆರಂಭಿಸಿದೆ. ನನ್ನ ಮದುವೆಗೆ ಒಂದು ಕಾರನ್ನು ವ್ಯವಸ್ಥೆ ಮಾಡಲು ನನ್ನ ಪೋಷಕರಿಗೆ ಸಾಧ್ಯವಾಗಿರಲಿಲ್ಲ" ಎಂದು ಹಣದ ಪ್ರಾಮುಖ್ಯತೆಯನ್ನು ವಿವರಿಸುವ ಸುನೀಲ್, "ದಲಿತರು ಮಾಲೀಕರಾಗುವ ಕಾಲ ಬರಬೇಕು" ಎಂದು ಆಶಿಸುತ್ತಾರೆ.

> **"ದಲಿತ ಯುವಕರು ಉದ್ಯಮ ಮತ್ತು ಕೈಗಾರಿಕೆಗಳನ್ನು ಪ್ರವೇಶಿಸಿ, ಅಲ್ಲಿ ತಮ್ಮ ಛಾಪನ್ನು ಮೂಡಿಸಲಿ; ಸಂಪತ್ತಿನ ಸೃಷ್ಟಿಯ ಮೂಲಕ ರಾಷ್ಟ್ರದ ಆರ್ಥಿಕತೆಗೆ ತಮ್ಮ ಕೊಡುಗೆ ನೀಡಲಿ; ಸಮುದಾಯದಲ್ಲಿ ಔದ್ಯಮಿಕ ಪ್ರಜ್ಞೆ ಮೂಡಿಸುವ ಕೆಲಸ ಮಾಡಲಿ ಎಂಬ ಉದ್ದೇಶದಿಂದ ದಲಿತ ಎಕ್ಸ್‌ಪೋ 2010ನ್ನು ಆಯೋಜಿಸಲಾಗಿದೆ"ಎಂದು ಕಾರ್ಯಕ್ರಮದ ರೂವಾರಿ ಮಿಲಿಂದ್ ಹೇಳುತ್ತಾರೆ. ಮಿಲಿಂದ್ ಸ್ವತಃ ಯಶಸ್ವಿ ಉದ್ಯಮಿಯಾಗಿದ್ದಾರೆ. ಶಾಲಾ ಶಿಕ್ಷಕರ ಮಗನಾಗಿ ಹುಟ್ಟಿದ ಮಿಲಿಂದ್ ಬಿ–ಟೆಕ್ ವಿದ್ಯಾಭ್ಯಾಸ ಮಾಡಿದ ನಂತರ ತನ್ನ ಸ್ವಂತ ಉದ್ಯಮವನ್ನು ಆರಂಭಿಸಲು ನಿರ್ಧಾರ ಮಾಡಿದರು.**

ಸ್ವಂತ ಶಕ್ತಿಯಿಂದ ಮಹತ್ವದ ಸಾಧನೆ ಮಾಡಿ ದಲಿತರಿಗೆ ಮಾದರಿ ಎನಿಸಿರುವ ಸುನೀಲ್ ಕೋಬ್ರಗಡೆ ಅವರಂತಹ ದಲಿತರನ್ನು ಪದ್ಮ ಪ್ರಶಸ್ತಿಗೆ ಯಾಕೆ ಸರ್ಕಾರ ಪರಿಗಣಿಸುವುದಿಲ್ಲ?

* * * * *

ಬರುವ ಜೂನ್ ತಿಂಗಳು ದಲಿತರ ಇತಿಹಾಸದಲ್ಲಿ ಅತ್ಯಂತ ಮಹ ತ್ವವಾದುದು. ಪುಣೆ ಮೂಲದ ದಲಿತ ಭಾರತೀಯ ವಾಣಿಜ್ಯ ಮತ್ತು ಉದ್ಯಮ ಸಂಸ್ಥೆಯು (ಡಿಐಸಿಸಿಐ), 'ಡೀಪ್ (ದಲಿತ ಉದ್ಯಮಿಗಳ ಸಬಲೀಕರಣ ಯೋಜನೆ) ಎಕ್ಸ್‌ಪೋ–2010" ಎಂಬ ಕಾರ್ಯಕ್ರಮವನ್ನು ಜೂನ್ 4 ರಿಂದ 6ರವರೆಗೆ ಆಯೋಜಿಸಲಿದೆ. ಇದು ದಲಿತ ಉದ್ಯಮಿಗಳ ಪಾಲಿಗೆ ಇದೊಂದು ಐತಿಹಾಸಿಕ ಸಮ್ಮೇಳನವಾಗಿದೆ.

ಇದು ಡಿಐಸಿಸಿಐನ ಸಂಸ್ಥಾಪಕ ಅಧ್ಯಕ್ಷರಾದ ಮಿಲಿಂದ್ ಕಾಂಬಳೆ ಅವರ ಕನಸಿನ ಕೂಸು. "ಡೀಪ್ ಎಕ್ಸ್‌ಪೋ" ಮಾಹಿತಿ ಪುಸ್ತಕದ ಒಂದೊಂದು ವಾಕ್ಯವೂ ದಲಿತರಿಗೆ ಪ್ರೇರಣೆ ಮತ್ತು ಉತ್ತೇಜನ ನೀಡುವಂತಿದೆ. "ಉದ್ಯಮದ ನಾಯಕತ್ವದ ಸೃಷ್ಟಿ" ಡಿಐಸಿಸಿಐನ ಧ್ಯೇಯವಾಕ್ಯವಾಗಿದೆ. ಕಪ್ಪು ಜನರ ಚಳುವಳಿಯಿಂದ ಸ್ಫೂರ್ತಿ ಪಡೆದ "ಇದು ನಮ್ಮಿಂದ ಸಾಧ್ಯ" ಎಂಬ ವಾಕ್ಯ ಕೂಡ ಇದೆ. "ಡೀಪ್ ಎಕ್ಸ್‌ಪೋ" ಮಾಹಿತಿ ಪುಸ್ತಕ ಅತ್ಯಂತ ವಿರಳವಾದ ದಲಿತ ದಾಖಲೆಯಾಗಿದ್ದು, ಇದರಲ್ಲಿ ದಲಿತ ಸಮುದಾಯದ ಬಗ್ಗೆ ಮರುಕ ಹುಟ್ಟಿಸುವ ಒಂದೇ ಒಂದು ವಾಕ್ಯ ಕೂಡ ಇಲ್ಲ. "ದಲಿತ ಪ್ರತಿಭೆ ಮತ್ತು ದಲಿತ ಉದ್ಯಮಿಗಳ ಸೃಷ್ಟಿಗೆ ಈ ಎಕ್ಸ್‌ಪೋ ವೇದಿಕೆಯಾಗಲಿದೆ. ಎಕ್ಸ್‌ಪೋನಲ್ಲಿ ದಲಿತ ಉದ್ಯಮಿಗಳು ಉತ್ಪಾದಿಸಿದ ಉತ್ಕೃಷ್ಟಗುಣಮಟ್ಟದ ವಸ್ತುಗಳ ಮಾರಾಟ ನಡೆಯಲಿದ್ದು, ಇದು ಭಾರತದಲ್ಲಿ ನಡೆಯುತ್ತಿರುವ ಇಂತಹ ಮೊಟ್ಟ ಮೊದಲ ಪ್ರದರ್ಶನವಾಗಿದೆ."

"ದಲಿತ ಯುವಕರು ಉದ್ಯಮ ಮತ್ತು ಕೈಗಾರಿಕೆಗಳನ್ನು ಪ್ರವೇಶಿಸಿ, ಅಲ್ಲಿ ತಮ್ಮ ಛಾಪನ್ನು ಮೂಡಿಸಲಿ; ಸಂಪತ್ತಿನ ಸೃಷ್ಟಿಯ ಮೂಲಕ ರಾಷ್ಟ್ರದ ಆರ್ಥಿಕತೆಗೆ ತಮ್ಮ ಕೊಡುಗೆ ನೀಡಲಿ; ಸಮುದಾಯದಲ್ಲಿ ಔದ್ಯಮಿಕ ಪ್ರಜ್ಞೆ ಮೂಡಿಸುವ ಕೆಲಸಮಾಡಲಿ ಎಂಬ ಉದ್ದೇಶದಿಂದ ದಲಿತ ಎಕ್ಸ್‌ಪೋ 2010ನ್ನು ಆಯೋಜಿಸಲಾಗಿದೆ"ಎಂದು ಕಾರ್ಯಕ್ರಮದ ರೂವಾರಿ ಮಿಲಿಂದ್ ಹೇಳುತ್ತಾರೆ.

ಮಿಲಿಂದ್ ಸ್ವತಃ ಓರ್ವ ಯಶಸ್ವಿ ಉದ್ಯಮಿಯಾಗಿದ್ದಾರೆ. ಶಾಲಾ ಶಿಕ್ಷಕರ ಮಗನಾಗಿ ಹುಟ್ಟಿದ ಮಿಲಿಂದ್ ಬಿ–ಟೆಕ್ ವಿದ್ಯಾಭ್ಯಾಸ ಮಾಡಿದ ನಂತರ ತನ್ನ ಸ್ವಂತ ಉದ್ಯಮವನ್ನು ಆರಂಭಿಸಲು ನಿರ್ಧಾರ ಮಾಡಿದರು. ಸು. 25 ದಶಲಕ್ಷಗಳಷ್ಟು ವಹಿವಾಟು ನಡೆಸುವ ಮಿಲಿಂದ್ ಅವರ ರಿಯಲ್ಟಿ ಕಂಪನಿ ಫಚ್ಯೂನ್, ಪುಣೆಯಲ್ಲಿ ಈಗಾಗಲೇ ಜನಪ್ರಿಯವಾಗಿದೆ. ಅತ್ಯುತ್ತಮ ಪ್ರೇರಕರಾಗಿರುವ ಮಿಲಿಂದ್, ನಗರದ ದಲಿತ ಬಿಲ್ಡರ್‌ಗಳು, ಉತ್ಪಾದಕರು, ಸೇವಾದಾರರು, ಹೋಟೆಲ್ ಉದ್ಯಮಿಗಳು, ಹೀಗೆ ವಿವಿಧ

ಉದ್ಯಮಗಳಲ್ಲಿ ತೊಡಗಿಸಿಕೊಂಡಿರುವವರನ್ನು ಡಿಐಸಿಸಿಐ ಸಂಸ್ಥೆಯಡಿ ಒಟ್ಟುಗೂಡಿಸಿದ್ದಾರೆ.

ಇತ್ತೀಚೆಗೆ ಡಿಐಸಿಸಿಐನ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಭಾಗವಹಿಸಲು ನಾನು ಪುಣೆಗೆ ಭೇಟಿ ನೀಡಿದ್ದೆ. ಸಭೆಯಲ್ಲಿ ಮಿಲಿಂದ್ ಕಾರ್ಯಕ್ರಮದ ರೂಪುರೇಷೆಯನ್ನು ಮುಂದಿಟ್ಟರು. "ಡೀಪ್ ಎಕ್ಸ್‌ಪೋ– 2010" ಪ್ರದರ್ಶನ ನಡೆಸಲು ಪುಣೆಯ ಪ್ರಖ್ಯಾತ ಇಂಜಿನಿಯರಿಂಗ್ ಕಾಲೇಜಿನ ಮೈದಾನವನ್ನು ಗೊತ್ತುಮಾಡಲಾಗಿದೆ. ಇಡೀ ಮೈದಾನವನ್ನು ಒಳಾಂಗಣ ಕ್ರೀಡಾಂಗಣದ ಮಾದರಿಯಲ್ಲಿ ತಾತ್ಕಾಲಿಕವಾಗಿ ಸಿದ್ಧಪಡಿಸಲಾಗುವುದು.

ಸುಮಾರು 121 ಮಳಿಗೆಗಳಲ್ಲಿ ದಲಿತ ಉದ್ಯಮಿಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಬಹುದು. ಉದ್ಯಮ ವ್ಯವಹಾರ ಕುರಿತು ವಿಚಾರ ಸಂಕಿರಣಗಳನ್ನು ನಡೆಸಲು ಒಂದು ಸಭಾಂಗಣವನ್ನು ಸಿದ್ಧಪಡಿಸಲಾಗುವುದು. ದಲಿತ ಕಲಾವಿದರು ಕಾರ್ಯಕ್ರಮ ನೀಡಲು ಪ್ರತ್ಯೇಕ ಸಭಾಂಗಣ ಕೂಡ ಇರಲಿದೆ. ಸುಮಾರು 10 ದಶಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುವ ಈ ಪ್ರದರ್ಶನ ಮಳಿಗೆಗಳ ನಿರ್ಮಾಣಕ್ಕೆ ಪುಣೆಯ ಖ್ಯಾತ ಆಯೋಜಕ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ. ಪ್ರಸ್ತುತ ಮಹಾರಾಷ್ಟ್ರ ರಾಜ್ಯದ ಪ್ರವಾಸದಲ್ಲಿರುವ ಮಿಲಿಂದ್ ದೊಡ್ಡ ಮಟ್ಟದ ದಲಿತ ಉದ್ಯಮಿಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಿದ್ದಾರೆ.

ಉದ್ಯಮದಲ್ಲಿ ಪ್ರತ್ಯೇಕತೆಯನ್ನು ಹೋಗಲಾಡಿಸುವುದು ಡಿಐಸಿಸಿಐನ ಮೂಲ ಉದ್ದೇಶ. "ಭಾರತದ ಮುಖ್ಯವಾಹಿನಿಯ ಉದ್ಯಮ ವ್ಯವಹಾರಗಳಲ್ಲಿ ದಲಿತರು ಯಾಕೆ ಪಾಲುದಾರರಾಗಬಾರದು?" ಎಂದು ಪ್ರಶ್ನಿಸುವ ಮಿಲಿಂದ್, ಸಿಐಐ ಮತ್ತು ಎಫ್‌ಐಸಿಸಿಐನಂತಹ ಉದ್ಯಮ ಸಂಸ್ಥೆಗಳನ್ನು ಕೂಡ ಆಹ್ವಾನಿಸುತ್ತಿದ್ದಾರೆ. "ನಾವು ರಾಜ್ಯ ಮತ್ತು ಕೇಂದ್ರ ಸರ್ಕಾರ ಕೂಡ ಭಾಗವಹಿಸುವಂತೆ ಮಾಡುತ್ತೇವೆ. ದೇಶದ ಇತರ ರಾಜ್ಯಗಳ ದಲಿತ ಉದ್ಯಮಿಗಳನ್ನು ಅತಿಥಿಗಳಾಗಿ ಆಹ್ವಾನಿಸುತ್ತೇವೆ." ಈ ಕಾರ್ಯಕ್ರಮವನ್ನು ಆಯೋಜಿಸಲು 10 ದಶಲಕ್ಷ ರೂ. ಎಲ್ಲಿಂದ ಬರುತ್ತದೆ ಎಂಬ ನನ್ನ ಪ್ರಶ್ನೆಗೆ, "ನಾವು ಪ್ರಾಯೋಜಕರನ್ನು ಹುಡುಕುತ್ತಿದ್ದೇವೆ. ಒಂದು ವೇಳೆ ಹಣಕಾಸಿನ ತೊಂದರೆಯಾದರೆ, ನಾನು ಮತ್ತು ನನ್ನ ಸಹುದ್ಯೋಗಿಗಳು ಹಣ ಖರ್ಚು ಮಾಡಲು ತಯಾರಿದ್ದೇವೆ. ನೀವು ಚಿಂತಿಸಬೇಡಿ" ಎನ್ನುತ್ತಾರೆ ಮಿಲಿಂದ್.

ಮಿಲಿಂದ್ ಅವರ ಈ ಮಹತ್ವದ ಕಾರ್ಯಕ್ರಮದ ಬಗ್ಗೆ ನಾನು ವಿವರಗಳನ್ನು ಪಡೆದುಕೊಳ್ಳುತ್ತಾ ಇದ್ದೇನೆ. ದಲಿತ್ ಎಕ್ಸ್‌ಪೋ ಕ್ರಾಂತಿಕಾರಿ ಆಯಾಮವನ್ನು ಹೊಂದಿರುವುದರಲ್ಲಿ ಅನುಮಾನವೇ ಇಲ್ಲ.

ಎಲ್ಲ ಮಹಾನ್ ಕಾರ್ಯಗಳ ಹಿಂದೆ ಮಹಾನ್ ಕನಸುಗಳಿರುತ್ತವೆ. "ಡೀಪ್ ಎಕ್ಸ್‌ಪೋ" ಅಮೆರಿಕಾದ ಕಪ್ಪು ಜನರಲ್ಲಿ ಕ್ರಾಂತಿಕಾರಿ ಬದಲಾವಣೆ ತಂದ "ಕಪ್ಪು ಜನರ ಬಂಡವಾಳಶಾಹಿ ವ್ಯವಸ್ಥೆ"ಯನ್ನು ನೆನಪಿಸುತ್ತದೆ. ಕಪ್ಪು ಜನರ ಕಲ್ಪನೆಗಳಿಗೆ ರೆಕ್ಕೆ ಪುಕ್ಕ ಒದಗಿಸಿದ ಕೀರ್ತಿ "ಬ್ಲ್ಯಾಕ್ ಕ್ಯಾಪಿಟಲಿಸಂ"ಗೆ ಸಲ್ಲುತ್ತದೆ. ಈ ಹಿಂದೆ ಬಿಳಿಯರ ಬಳಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದ ಕಪ್ಪು ಜನರು ಈಗ ಅದೇ ಬಿಳಿಯರಿಗೆ ಉದ್ಯೋಗ ನೀಡುವ ಮಾಲೀಕರಾಗಿರುವುದು ಕ್ರಾಂತಿಕಾರಿ ವಿಚಾರವಲ್ಲವೇ?

ಅದೇ ರೀತಿ ದಲಿತರು ಕೂಡ ಮಾಲೀಕರಾಗಿ ಬ್ರಾಹ್ಮಣರು, ಮರಾಠರು, ಠಾಕೂರ್‌ಗಳು, ಜಾಟ್‌ಗಳು, ಕಮ್ಮ–ರೆಡ್ಡಿಗಳು, ಗೌಡ–ಒಕ್ಕಲಿಗರು, ತೇವರ್, ವಣ್ಣಿಯಾರ್‌ಗಳಿಗೆ ಕೆಲಸ ಕೊಡುವಂತಾಗುವುದೂ ಕೂಡ ಕ್ರಾಂತಿಕಾರಿ ವಿಚಾರವೇ. ದಲಿತ ಚಳವಳಿಯ ಮಾತೃಭೂಮಿಯಾಗಿರುವ ಮಹಾರಾಷ್ಟ್ರ ರಾಜ್ಯದಲ್ಲಿ ನಡೆಯಲಿರುವ "ಡೀಪ್ ಎಕ್ಸ್‌ಪೋ" ದಲಿತರ ಹೋರಾಟಕ್ಕೆ ಹೊಸ ದಿಕ್ಕು ತೋರಿಸಿದೆ. ರಾಜಕೀಯ ರಂಗದ ಎಡ ಮತ್ತು ಬಲ ಪಂಥೀಯರು ಎಷ್ಟೇ ಕೊಸರಾಡಿದರೂ ದಲಿತ ಬಂಡವಾಳಶಾಹಿತ್ವದ ಬೀಜ ಮೊಳೆತು ಬೃಹತ್ ವೃಕ್ಷವಾಗಿ ಬೆಳೆಯುವುದರಲ್ಲಿ ಸಂಶಯವೇ ಇಲ್ಲ. □

ರಂಗಕ್ಕೆ ಬಂದ ಗಾಂಧಿ!

41ನೇ ಪುಟದಿಂದ

'ಫಣಿಯಮ್ಮ' ತೋರಿದ್ದಾಳೆ. ಅದರ ಸಹ್ಯತೆ ಸಾಧ್ಯವಿಲ್ಲ. ಅದು ಅಂತಿಮವಾಗಿ ಸ್ಫೋಟಗೊಂಡೇ ತೀರುತ್ತದೆ ಎನ್ನುವುದನ್ನು 'ಸಂಸ್ಕಾರ'ದ ಪ್ರಾಣೇಶಚಾರ್ಯ ತೋರಿದ್ದಾನೆ. ಈ ಹಿನ್ನೆಲೆಯಲ್ಲಿ ಈ ನಾಟಕದ 'ದ್ರೌಪದಿ' ಪಾತ್ರವನ್ನು ಗುರುತಿಸಿಕೊಳ್ಳಬೇಕಿದೆ.

ಇಲ್ಲಿ ಬಾಲ ವಿಧವೆ ಕೆಲ ಕಾಲದಲ್ಲಿಯೇ ಪುನಃ ಸೌಭಾಗ್ಯವತಿಯಾಗುತ್ತಾಳೆ. ಇದಕ್ಕೆ ಅವಕಾಶವಾಗುವುದು ಅದ್ರಾಮ'ನಿಂದ ಇದು ಸಾಧ್ಯವಾಗುವ ನಡುವೆ ಜಾತಿವಾದ ನಡುವೆ ಜಾತಿವಾದ ತಲೆ ಎತ್ತುತ್ತದೆ. ಅಲ್ಲಿ ಸನಾತನವಾದದ ಕೊಡುಗೆಯೂ ಬೆಂಬಲಕ್ಕೆ ನಿಲ್ಲುತ್ತದೆ. ನಿಂತು, ಅದು–ಮಾರ್ಗದರ್ಶನವನ್ನು ನೀಡುತ್ತದೆ. ಅಂಥಲ್ಲಿ ಮಾನವತಾವಾದ; ಅದರಲ್ಲೂ ತಾರುಣ್ಯದಲ್ಲಿ ಸಹಜವಾಗಿ ಇರುವ ಕಾಮದ ಬಯಕೆ ಕೇಂದ್ರಿತವೂ ಆದ ನಿಸರ್ಗವಾದವು ಅನೇಕರಿಗೆ ಮುಖ್ಯವಾಗುವುದಿಲ್ಲ. ಅದನ್ನು ಕೆಲವರು ನೆನಪಿಸಿದರೂ ಅದನ್ನು ಮೆಟ್ಟಿ ನಿಲ್ಲುವ ಉಗ್ರತ್ವವನ್ನು ಇಲ್ಲಿ ಮತೀಯ ಉಗ್ರವಾದಿಗಳು ತೋರುತ್ತಾರೆ.

ಅದೇ ಸಂದರ್ಭದಲ್ಲಿ 'ಅದ್ರಾಮ'ನಿಗೆ ಸಾಮಾಜಿಕ ಹಿನ್ನೆಲೆಯಾದ ಮುಸ್ಲಿಂ ಪರಿಸರದೊಳಗಿನ ಒಂದು ವಲಯವು ಧಾರ್ಮಿಕ ಮೂಲಭೂತವಾದವನ್ನು ಎತ್ತಿಹಿಡಿಯುತ್ತದೆ. ಇವರಿಗೆ ಅಂತರ್ ಜಾತೀಯ, ಅಂತರ ಧರ್ಮೀಯ ಮದುವೆಯಾಗಲೀ, ವಿಧವಾ ವಿವಾಹವಾಗಲೀ ನಿಷೇಧವಿಲ್ಲ. ಆದರೆ ಅಲ್ಲಿ ವೈವಾಹಿಕ ಚೌಕಟ್ಟಿನೊಳಕ್ಕೆ ಬರುವವರು ಆ ಸ್ವೀಕೃತ ಧರ್ಮದ ಮೂಲಭೂತವಾದವನ್ನು ಒಪ್ಪಬೇಕು ಮತ್ತು ಆಚರಿಸಬೇಕು ಅಷ್ಟೇ. ಇಲ್ಲಿ ಪ್ರೀತಿ–ಪ್ರೇಮ, ಮನುಷ್ಯ ಧರ್ಮ ಎಲ್ಲವೂ ನಗಣ್ಯ, ಆದ್ದರಿಂದ ಬಾಲ ವಿಧವೆಯಾದ ದ್ರೌಪದಿ ಕಡೆಯವರಿಂದಾಗಲೀ ಪ್ರೇಮಿ ಅದ್ರಾಮನ ಕಡೆಯವರಿಂದಾಗಲೀ ಬೆಂಬಲ ದೊರೆಯುವುದಿಲ್ಲ. ಆದರೆ ಇವರ ಪ್ರೀತಿ ಇಲ್ಲಿ ಅರಳಿಸುವುದು, ಜಾತಿ–ಧರ್ಮಗಳ ಎಲ್ಲೆಗಳನ್ನು ಪರಸ್ಪರ ಮೀರಿರುವುದು ಗಾಂಧೀವಾದದ ಪ್ರಭಾವದಿಂದ. ಇಂತಹ ಪ್ರಭಾವ ಈಗಾಗಲೇ ಅನೇಕರ ಮೇಲೂ ಇದೆ. ಹಾಗಾಗಿ ಈ ಬೆಂಬಲಿಗರ ಬಲದಿಂದಲೇ ಇವರ ಮದುವೆ ಸಾಧ್ಯವಾಗುತ್ತದೆ. ಇವರು ಮುಂದೆ ಗಾಂಧಿ ಚಳುವಳಿಯ ಭಾಗವೂ ಆಗುತ್ತಾರೆ.

> **ಲೇಖಕರು ಸಮಕಾಲೀನ ಒತ್ತಡಗಳ ಅನಿವಾರ್ಯತೆಯ ಹಿನ್ನೆಲೆಯಲ್ಲಿ ಗಾಂಧೀವಾದದ ಒಂದು ಮುಖ್ಯಭಾಗವನ್ನು ಉತ್ತಮ ಕಲಾಕೃತಿಯನ್ನಾಗಿ ಮಾಡಿದ್ದಾರೆ. ಇದರ ರೂಪುಧಾರಣೆಗೆ ಅಗತ್ಯವಾದ ಸ್ಥಳೀಯ ಸಂಸ್ಕೃತಿಯ ಸೊಗಡನ್ನು ಇಲ್ಲಿ ತುಂಬಿದ್ದಾರೆ.**

ಹೀಗೆ ಗಾಂಧೀವಾದ ಎಂಬುದು ಅಸಂಖ್ಯರನ್ನು ಪ್ರಭಾವಿಸಿದೆ, ರೂಪಿಸಿದೆ. ಇದು ಸಾಧ್ಯ ಆಗುವಲ್ಲಿ ಅನೇಕ ಜಡತೆಯ ಮನಸ್ಸುಗಳು ಪಲ್ಲವಿಸಿವೆ. ಅಂತೆಯೇ ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಅವುಗಳ ವಕ್ತಾರರು ನಲುಗಿದ್ದಾರೆ ಮತ್ತು ತಮ್ಮ ನೆಲೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಸಂಚು ರೂಪಿಸಿದ್ದಾರೆ; ಬಂದೂಕು ಹಾರಿಸಿದ್ದಾರೆ; ಈಗ ತ್ರಿಶೂಲವನ್ನೂ ಹಿಡಿದಿದ್ದಾರೆ. ಆದ್ದರಿಂದಲೇ ಗಾಂಧೀ ಹತ್ಯಾನಂತರದ ಭಾರತದಲ್ಲಿ ಜೀವಂತವಿರುವ ನೆನಪಿನ ಗಾಂಧಿಯನ್ನು ಭ್ರಷ್ಟಗೊಳಿಸುವ ಪ್ರಯತ್ನಸಾಗಿರುವುದು ಮತ್ತು ಅವರ ಹೆಜ್ಜೆ ಗುರುತುಗಳನ್ನು ಕಾಯ್ದುಕೊಳ್ಳ ಬಯಸುವವರನ್ನು ಕ್ರೌರ್ಯದಿಂದ ನಡೆಸಿಕೊಳ್ಳುತ್ತಿರುವುದು. ಈ ಹಿನ್ನೆಲೆಯಲ್ಲಿ ಗಾಂಧಿ ಬರುವನೋ ಬಿಡುವನೋನಾವಂತೂ ಗಾಂಧಿ ಬಂದ, ಗಾಂಧಿ ಬಂದ ಎಂದು ಸಮಾಜ ಘಾತುಕರನ್ನು ಮತೀಯವಾದಿಗಳನ್ನು ಪ್ರಗತಿ ವಿರೋಧಿಗಳನ್ನು ಬೆದರಿಸುತ್ತಲೇ ಇರಬೇಕು.

ಲೇಖಕರು ಸಮಕಾಲೀನ ಒತ್ತಡಗಳ ಅನಿವಾರ್ಯತೆಯ ಹಿನ್ನೆಲೆಯಲ್ಲಿ ಗಾಂಧೀವಾದದ ಒಂದು ಮುಖ್ಯಭಾಗವನ್ನು ಉತ್ತಮ ಕಲಾಕೃತಿಯನ್ನಾಗಿ ಮಾಡಿದ್ದಾರೆ. ಇದರ ರೂಪುಧಾರಣೆಗೆ ಅಗತ್ಯವಾದ ಸ್ಥಳೀಯ ಸಂಸ್ಕೃತಿಯ ಸೊಗಡನ್ನು ಇಲ್ಲಿ ತುಂಬಿದ್ದಾರೆ. ಇದರ ಭಾಗವಾಗಿ ತುಳುನಾಡಿನ ಆಡುಭಾಷೆ, ಭೂತಕೋಲ, ಕಂಬಳ ಮುಂತಾದ ವಿವರಗಳು ಇಲ್ಲಿಯ ಕಾಂತಿಯನ್ನು ಹೆಚ್ಚಿಸಿವೆ. ಇಲ್ಲಿಯ ಮೇಳ, ಕುಣಿತ ಆಹ್ಲಾದವನ್ನು ನೀಡುತ್ತವೆ.

ಇದೆಲ್ಲವನ್ನೂ ರಂಗದ ಮೇಲೆ ತರುವುದು, ಅದಕ್ಕಾಗಿ ದೊಡ್ಡ ಪ್ರಮಾಣದ ಕಲಾವಿದರ ತಂಡವನ್ನು ಒಂದೆರಡು ತಿಂಗಳ ಕಾಲ ಹಿಡಿದಿಟ್ಟುಕೊಳ್ಳುವುದು ಸುಲಭವಲ್ಲ. ಇಲ್ಲಿಯೇ ಬಹುಶಃ ತಪಸ್ಸಿನ ಪರಿಕಲ್ಪನೆ ಮರ್ಯಾದೆಯನ್ನು ಪಡೆಯುವುದು ಎನ್ನಿಸುತ್ತದೆ. ಇದಕ್ಕೆಪೂರಕವಾಗಿ ತಂತ್ರಜ್ಞರ ಬಳಗವೂ ದುಡಿದಿದೆ ಮತ್ತು ದುಡಿದಿದೆ.

ಹೀಗೆ ಕಲೆ ಮತ್ತು ಸಮಾಜ ಎರಡೂ ನೆಲಗಳಲ್ಲಿ 'ಗಾಂಧಿ ಬಂದ' ಕೃತಿ ಗಮನ ಸೆಳೆಯುತ್ತದೆ. □

ಬುದ್ಧಾಯಣ

೫೬

ಕೊಟ್ಟವನಿಗೆ ಕೊಟ್ಟು ಇಟ್ಟವನಿಗೆ ಇಡುವುದೇ ಧರ್ಮ !

"ತಂದೆ ಹೆಂಗಸರು ಮಾಯಾವಿಗಳು. ಸತ್ಯವನ್ನು ತಿನ್ನುವುದರಲ್ಲಿ ಮತ್ತು ತಿರುಚುವುದರಲ್ಲಿ ನಿಸ್ಸೀಮರು. ನೀನು ಈ ಬಗ್ಗೆ ವಿಷಯವನ್ನು ಆಕೆಯಲ್ಲಿ ಪ್ರಸ್ತಾಪಿಸುತ್ತಿದ್ದಂತೆ ನಮ್ಮ ಕಡೆ ಕೆಂಗಣ್ಣು ಬೀರುತ್ತಾಳೆ. ಅದೇ ಸಮಯದಲ್ಲಿ ನಿನ್ನೆದುರು ಹೇಗೆ ನಟಿಸಬೇಕು. ಹೇಗೆ ನಂಬಿಸಬೇಕು ಎಂಬುದನ್ನು ಆಕೆ ಬಲ್ಲಳು. ಮೊದಮೊದಲು ಸುಳ್ಳು ಹೇಳುತ್ತಾಳೆ. ಸತ್ಯವನ್ನು ತಿರುಚಿ ಕೊನೆಗೆ ನಮ್ಮ ಕುತ್ತಿಗೆಗೆ ಕಟ್ಟುವಳು. ನಂತರ ಕಣ್ಣೀರಾಕುವಳು. ಅಣೆ ಪ್ರಮಾಣ ಮಾಡುವಳು. ತನ್ನಂಥಹ ಕುಲಟೆಯರು ಮತ್ತು ವಿಲಾಸ ಪ್ರಿಯರನ್ನು ಸಾಕ್ಷಿ ತಂದು ನಿನ್ನ ಮತ್ತು ನಮ್ಮೆದುರು ನಿಲ್ಲಿಸುವಳು.

ಸಿ. ಹೆಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ವೇಳುವನದಲ್ಲಿ ತನ್ನ ಭಿಕ್ಷುಗಳೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವ ಕಾಲದಲ್ಲಿ ಮಗಧ ದೇಶದ ರಾಜಗ್ರಹ ನಗರದಲ್ಲಿ ಮಗಧನರೇಶನು ರಾಜ್ಯವಾಳುತ್ತಿದ್ದನ್ನು. ಆ ಸಂದರ್ಭದಲ್ಲಿ ಬೋಧಿಸತ್ವರು ಒಂದು ಶ್ರೇಷ್ಠಿ ಕುಟುಂಬದಲ್ಲಿ ಜನಿಸಿದ್ದರು. ಅವರ ತಂದೆ ತಾಯಿಗಳು ಅವರಿಗೆ "ಸಂಖಶ್ರೇಷ್ಠಿ" ಎಂದು ನಾಮಕರಣ ಮಾಡಿದರು. ಬೆಳೆದು ದೊಡ್ಡವರಾದ ನಂತರ ತಂದೆಯ ವೃತ್ತಿಯಾದ ವ್ಯಾಪಾರದಲ್ಲಿ ತಮ್ಮನ್ನು ತೊಡಗಿಸಿಕೊಂಡು ರಾಜ್ಯದಲ್ಲಿಯೇ ಆತನನ್ನು ಮೀರಿಸುವ ಶ್ರೀಮಂತನಿಲ್ಲದಂತೆ ಪ್ರಖ್ಯಾತರಾದರು. ಆ ಕಾರಣಕ್ಕಾಗಿ ರಾಜನು ಪ್ರತಿಷ್ಠಿತ ರಾಜಶ್ರೇಷ್ಠಿ ಪದವಿಯನ್ನು ನೀಡಿ ತನ್ನ ಸೇವೆಗೆ ನಿಯುಕ್ತಿ ಮಾಡಿಕೊಂಡನು. ಕೆಲವೆ ದಿನಗಳಲ್ಲಿ ಬೋಧಿಸತ್ವರು ರಾಜನಿಗೆ ಆತ್ಮೀಯರಾದರು.

ಅವರ ಬಳಿ ಎಂಬತ್ತು ಕೋಟಿ ಹಣವಿತ್ತು. ಬೋಧಿಸತ್ವರಾದ ಸಂಖಶ್ರೇಷ್ಠಿಗೆ ದೂರದ ವಾರಾಣಾಸಿ ನಗರದಲ್ಲಿ ಒಬ್ಬ ಮಿತ್ರನಿದ್ದ . ಆತನ ಹೆಸರು "ಪಿಳಿಯಶ್ರೇಷ್ಠಿ" ಎಂಬುದಾಗಿತ್ತು. ಆತ ಕೂಡ ಬಹಳ ದೊಡ್ಡ ವ್ಯಾಪಾರಸ್ಥನಾಗಿದ್ದನು. ಆತನ ಬಳಿಯು ಎಂಬತ್ತು ಕೋಟಿ ಹಣವಿತ್ತು. ಆದರೆ ಆತ ಹಣದ ಮಧದಿಂದ ದೃಷ್ಠ, ದುರಂಹಕಾರಿ, ಸಮಯ ಸಾಧಕ ಮತ್ತು ಉಪಕಾರ ಸ್ಮರಣೆಯ ಮನೋಭಾವವಿಲ್ಲದ ಕೃತ್ರಿಮ ಪ್ರವೃತ್ತಿವುಳ್ಳವನಾಗಿದ್ದ. ಆತ ತನ್ನ ಬಳಿ ಇರುವ ಹಣವು ಎಂದೆಂದೂ ಅಳಿಯದ ಅಕ್ಷಯ ಪಾತ್ರೆ ಎಂದು ನಂಬಿದ್ದವನಾಗಿದ್ದನು. ಆದರೆ ಆತನ ಪಾಪದ ಕೊಡವು ತುಂಬಲು ವ್ಯಾಪಾರದಲ್ಲಿ ಸೋಲಿನ ಮೇಲೆ ಸೋಲನ್ನು ಅನುಭವಿಸ ತೊಡಗಿದ. ಇದರ ಪರಿಣಾಮವಾಗಿ ಕೆಲವೇ ವರ್ಷಗಳಲ್ಲಿ ತನ್ನ ಸಂಪತ್ತನ್ನೆಲ್ಲ ಕಳೆದು ಕೊಂಡು ಬೀದಿಗೆ ಬಂದ .

ಅಂಥಹ ದುರ್ದಿನದ ಪರಿಸ್ಥಿತಿಯಲ್ಲಿ ಆತನಿಗೆ ನೆನಪಾದದ್ದು ತನ್ನ ಮಿತ್ರನಾದ ಸಂಖಶ್ರೇಷ್ಠಿ. ಆತನಿಂದ ನನಗೇನಾದರು ಸಹಾಯ ಸಿಗಬಹುದು ಎಂದು ಬಗೆದು ತನ್ನ ಪತ್ನಿಯೊಂದಿಗೆ ಕಾಲ್ನಡಿಗೆಯಲ್ಲಿ ವಾರಾಣಾಸಿಯಿಂದ ರಾಜಗ್ರಹಕ್ಕೆ ಬರುತ್ತಾನೆ. ಒಂದು ಮುಂಜಾನೆ ಮಿತ್ರನಾದ ಸಂಖಶ್ರೇಷ್ಠಿಯನ್ನು ಸಂಧಿಸಿ ತನ್ನ ಕಷ್ಟವನ್ನು ತೊಡಿಕೊಂಡು:

"ಮಿತ್ರ, ನೀನ್ನನ್ನೆ ನಂಬಿ ಬಲು ದೂರದಿಂದ ಬಂದಿದ್ದೇನೆ, ಇಲ್ಲವೆನ್ನದೆ ಸಹಾಯ ಮಾಡು!" ಎಂದು ಅಂಗಲಾಚಿದ. ಮಿತ್ರನ ಮಾತಿಗೆ ಬಲು ನೊಂದ ಆತ ಪಿಳಿಯಶ್ರೇಷ್ಠಿಯನ್ನು ಅಪ್ಪಿ ಸಂತೈಸುತ್ತಾ;

"ಮಿತ್ರ, ಚಿಂತಿಸದಿರು ಕಷ್ಟ ನಷ್ಟಗಳು ಸಂಭವಿಸುವುದು ಸಹಜವೇ ಸರಿ. ಅಂಥಹ ಸಂಧರ್ಭದಲ್ಲಿ ಮಿತ್ರರಲ್ಲಿ ಸಹಾಯ ಕೇಳುವುದು ಧರ್ಮವೇ ಆಗಿದೆ. ನನ್ನಲಿರುವ ಸಂಪತ್ತಿನಲ್ಲಿ ಅರ್ಧಭಾಗ ಹಣ ಮತ್ತು ಚರ ಸಂಪತ್ತನ್ನು ನಿನಗೆ ಕೊಡುತ್ತೇನೆ. ಇದನ್ನು ಸಾಲಬಾಧೆ ಎಂದು ತಿಳಿಯಬೇಡ. ಮಿತ್ರನೊಬ್ಬನ ಸಹಾಯಹಸ್ತ ಎಂದು ತಿಳಿ. ನಿನಗೆ ಅನು ಕೂಲವಾದ ಕಾಲಕ್ಕೆ ನನ್ನ ಸಂಪತ್ತನ್ನು ನನಗೆ ತಪ್ಪದೆ ಹಿಂದಿರುಗಿಸು. ಒಂದು ಪಕ್ಷ ಈ ಸಂಪತ್ತಿನಿಂದ ವೃದ್ದಿಯಾಗದೆ ಮತ್ತೆ ನಷ್ಟ ಹೊಂದಿ ದರೆ ಚಿಂತಿಸದೆ ಮತ್ತೆ ಬಂದು ನನ್ನನ್ನು ಕಾಣು. ಸಂತೋಷದಿಂದ ತೆಗೆದುಕೊಂಡು ಹೋಗಿ ಮುಂಜಾಗರೂಕನಾಗಿ ವ್ಯಾಪಾರದಲ್ಲಿ ತೊಡ ಗಿಸಿಕೊಂಡು ಅಭಿವೃದ್ಧಿ ಹೊಂದು!" ಎಂದ ಅವರು ತನ್ನ ಖಜಾನೆಯ ಬಾಗಿಲನ್ನು ತೆರೆದು ಅದರಲ್ಲಿದ್ದ ಎಂಬತ್ತು ಕೋಟಿ ರೂಪಾಯಿಗಳಲ್ಲಿ ನಲವತ್ತು ಕೋಟಿ ರೂಪಾಯಿ ಹಣವನ್ನು ತೆಗೆದು ಪಾಲು ಮಾಡಿ ಮಿತ್ರನಿಗೆ ಕೊಡುತ್ತಾನೆ. ಜೊತೆಗೆ ತನ್ನ ಬಳಿ ಇದ್ದ ಬೆಲೆ ಬಾಳುವ ವಸ್ತ್ರಾಭರಣದಲ್ಲಿಯು ಅರ್ಧ ಭಾಗವನ್ನು ಆತನಿಗೆ ಸಂತೋಷವಾಗಿ ಕೊಡುತ್ತಾನೆ. ನಂತರ ಕೆಲವು ದಿನ ತನ್ನಲ್ಲಿ ಅತಿಥಿಯಾಗಿ ಇರಿಸಿಕೊಂಡು ಆ ದಂಪತಿಗಳಿಗೆ ತನ್ನ ರಥದಲ್ಲಿ ಕಾವಲಿಗಾಗಿ ಸೇವಕರೊಂದಿಗೆ ಕಳುಹಿಸಿ ಕೊಡುತ್ತಾನೆ. ಪಿಳಿಯಶ್ರೇಷ್ಠಯು ವಾರಾಣಾಸಿಗೆ ಬಂದು ಮತ್ತೆ ತನ್ನ ವ್ಯಾಪಾರಕ್ಕೆ ತೊಡಗುತ್ತಾನೆ. ಹಿಂದಿನ ತಪ್ಪುಗಳನ್ನು ಸರಿಪಡಿಸಿಕೊಂಡು ವ್ಯಾಪಾರದಲ್ಲಿ ವೃದ್ಧಿಯಾಗುತ್ತಾನೆ. ಆತ ತನ್ನ ಹಿಂದಿನ ಕಷ್ಟಗಳ ದಿನಗಳನ್ನು ಮತ್ತು ಆ ಸಂಧರ್ಭದಲ್ಲಿ ಅಪಾರ ಉದಾರತೆ ತೋರಿ ಸಹಾಯ ಮಾಡಿದ ಸಂಖಶ್ರೇಷ್ಠಯ ಉಪಕಾರ ವನ್ನು ಸಂಪೂರ್ಣ ಮರೆತು ಬಿಡುತ್ತಾನೆ. ಎಂದಿ ನಂತೆಯೇ ತನ್ನ ದೃಷ್ಠ ಬುದ್ದಿಗೆ ಮತ್ತೆ ಶರಣಾಗುತ್ತಾನೆ. ಆತನ ಮನೆಯು ಸಕಲ ವೈಭವಗಳ ಆಗರವಾಗುತ್ತದೆ. ಆದರೆ ಆದರ ಅಂತಃರ್ಯದಲ್ಲಿ ಪ್ರೀತಿ, ಕರುಣೆ, ದಾನ, ಧರ್ಮ, ಉಪಕಾರ ಸ್ಮರಣೆಯಂತಹ ಮಾನವೀಯ ಮೌಲ್ಯಗಳು ತನ್ನ ಅಸ್ತಿತ್ವವನ್ನು ಕಳೆದುಕೊಂಡಿದ್ದವು.

ಇಂಥಹ ಸಂಧರ್ಭದಲ್ಲಿ ಸಂಖಶ್ರೇಷ್ಠಿಯು ವ್ಯಾಪಾ ರದಲ್ಲಿ ನಷ್ಟ ಹೊಂದಿ ದೀವಾಳಿಯಾಗಿ ಬಿಡುತ್ತಾನೆ. ಅದರಿಂದ ದಿಕ್ಕು ತೋಚದ ಆತನ ಹೆಂಡತಿಯು;

"ಸ್ವಾಮಿ, ನಮಗೀಗ ಯಾರು ಗತಿ? ಇರಲು ಆಶ್ರಯವಿಲ್ಲ. ಒಂದು ಹೊತ್ತಿನ ಊಟಕ್ಕೂ ಗತಿ ಇಲ್ಲ!" ಎನ್ನಲು ಶ್ರೇಷ್ಠಯು ಎದೆಗುಂದದೆ ;

"ಪ್ರೀಯೇ, ಚಿಂತಿಸದಿರು ವಾರಾಣಾಸಿಯಲ್ಲಿ ನನ್ನ ಮಿತ್ರನಿದ್ದಾನೆ. ನಾನು ಅವನಿಗೆ ಕಷ್ಟ ಕಾಲದಲ್ಲಿ ಸಹಾಯ ಮಾಡಿದ್ದೇನೆ. ಅವನಿಂದ ನಾನು ಇದುವರೆವೀಗೂ ಏನನು ಕೂಡ ನಿರೀಕ್ಷಿಸಿಲ್ಲ. ಆತನ ಬಳಿಗೆ ಹೋಗೋಣ. ಆತ ಈ ಸಂಧರ್ಭದಲ್ಲಿ ನನ್ನ ಕೈಬಿಡಲುಂಟೆ?" ಎನ್ನಲು ಆಕೆಗೆ ಧೈರ್ಯ ಬಂದಿತು. ದೂರದ ಭರವಸೆಯೊಂದು ಸಂಖ ಶ್ರೇಷ್ಠಿಯಲ್ಲಿ ಇದ್ದುದ್ದರ ಕಾರಣ ಕಳವಳಗೊಳ್ಳದೆ ತನ್ನ ಪತ್ನಿಯೊಂದಿಗೆ ವಾರಾಣಾಸಿಯನ್ನು ತಲುಪಿದ. ಅಂದು ರಾತ್ರಿ ನಗರದ ಹೊರವಲಯದಲ್ಲಿ ಇದ್ದ ಧರ್ಮಶಾಲೆಯಲ್ಲಿ ತಂಗಿ ಮರು ದಿನ ಮುಂಜಾನೆ ತನ್ನ ಪತ್ನಿಯನ್ನು ಉದ್ದೇಶಿಸಿ ;

"ಪ್ರಿಯಳೇ, ನನ್ನೊಂದಿಗೆ ಬೀದಿ ಬೀದಿ ಅಲೆಯುವುದು ಬೇಡ. ನೀನು ಇಲ್ಲಿಯೇ ತಂಗಿರು. ನಾನು ಹೋಗಿ ನನ್ನ ಮಿತ್ರನನ್ನು ಸಂಧಿಸುತ್ತೇನೆ. ಆತ ನನ್ನನ್ನು ಕಂಡೊಡನೆ ಅಪ್ಪಿ ಸಡಗರದಿಂದ ಸ್ವಾಗತಿಸುತ್ತಾನೆ. ಉಭಯ ಕುಶಲೋಪರಿಯನ್ನು ವಿಚಾರಿಸುತ್ತಾನೆ. ಆಗ ನಾನು ನನ್ನ ವ್ಯಥೆಯನ್ನು ತೋಡಿಕೊಂಡು ಪ್ರತಿ ಸಹಾಯವನ್ನು ಯಾಚಿಸುತ್ತೇನೆ. ಜೊತೆಗೆ ನೀನು ನನ್ನೊಂದಿಗೆ ಬಂದಿರುವ ಮತ್ತು ಧರ್ಮಶಾಲೆಯಲ್ಲಿ ಕುಳಿತಿರುವ ವಿಷಯವನ್ನು ತಿಳಿಸುತೇನೆ. ಆಗ ಅವನು ನಿನ್ನನ್ನು ಕರೆತರಲು ಸೇವಕರೊಂದಿಗೆ ರಥವನ್ನು ಕಳುಹಿಸುತ್ತಾನೆ!" ಎಂದ ಸಂಖಶ್ರೇಷ್ಠಿಯು ಅತ್ಯಂತ ಸಡಗರ, ಸಂಭ್ರಮ ಮತ್ತು ಅಪಾರ ವಿಶ್ವಾಸದಿಂದ ಮಿತ್ರನನ್ನು ಕಾಣಲು ಹೊರೆಟ.

ಮಿತ್ರನ ಮನೆಯನ್ನು ತಲುಪಿದ ನಂತರ ಸೇವಕ ನೊಂದಿಗೆ ತಾನು ಬಂದ ವಿಷಯವನ್ನು ತಿಳಿಸಿದ. ಸ್ವಲ್ಪ ಸಮಯದ ನಂತರ ಮರಳಿ ಬಂದ ಸೇವಕನು ಸಂಖ ಶ್ರೇಷ್ಠಿಯನ್ನು ತನ್ನ ಒಡೆಯನ ಬಳಿಗೆ ಕರೆದ್ಯೊಯ್ದ. ಲೋಕದಲ್ಲಿ ಯಾರೂ ಮಾಡದ ತ್ಯಾಗವನ್ನು ಮಾಡಿದ ಮತ್ತು ಮುರಿದು ಬಿದ್ದ ತನ್ನ ಸಂಸಾರಕ್ಕೆ ಆಸರೆ ಕೊಟ್ಟು ಮರು ಜೀವ ಕೊಟ್ಟ ತನ್ನ ಮಿತ್ರನು ಎದುರು ಬಂದು ನಿಂತಾಗ,

ಮುಖವನ್ನು ಗಂಟಿಕ್ಕಿಕೊಂಡ. ಕುಳಿತಲ್ಲಿಂದ ಮೇಲೆಳಲ್ಲಿಲ್ಲ, ಎದುರುಗೊಳ್ಳಲಿಲ್ಲ, ಸ್ವಾಗತಿಸಿ ಅಪ್ಪಿಕೊಳ್ಳಲಿಲ್ಲ, ಕೂರೆನ್ನಲ್ಲಿಲ್ಲ ಮತ್ತು ಉಭಯ ಕುಶಲೋಪರಿ ಯನ್ನು ವಿಚಾರಿಸಲ್ಲಿಲ್ಲ. ಬದಲಿಗೆ ಅಪರಿಚಿತನಂತೆ ನ ಸುತ್ತಾ;

"ಏತಕ್ಕೆ ಬಂದಿರುವೆ?" ಎಂದಷ್ಟೇ ಕೇಳಿದ.

ಸಂಖಶ್ರೇಷ್ಠಿ ಕಲ್ಪಿಸಿಕೊಂಡಿದ್ದ ಕನಸೆಲ್ಲವೂ ಭ್ರಮೆಯಂತೆ ಜಾರಿ ಹೋದವು. ಲೋಕದಲ್ಲಿ ಇಂಥಹ ಜನರೂ ಇರುವರೇ? ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಂಡ. ನಿಂತ ನೆಲ ಕುಸಿದಂತಾಯಿತು. ಗಂಟಲು ಒಣಗಿ ಬಂತು. ಮತ್ತೆ ಪಿಳಿಯಶ್ರೇಷ್ಠ ಹಿಂದಿನಂತೆಯೇ ಪ್ರಶ್ನಿಸಿದ. ವಾಸ್ತವ ಸ್ಥಿತಿಗೆ ಮರಳಿದ ಸಂಖಶೇಷ್ಠಿಯು;

"ನಿನ್ನನ್ನು ನೋಡಲು ಬಂದಿದ್ದೇನೆ?" "ಇರಲು ವಾಸ್ತವ್ಯವನ್ನು ಎಲ್ಲಿ ಮಾಡಿದ್ದೀಯೇ?"

"ಇನ್ನೂ ಎಲ್ಲಿಯೂ ಸರಿಯಾಗಿ ಮಾಡಿಲ್ಲ. ನನ್ನ ಪತ್ನಿಯನ್ನು ಧರ್ಮಶಾಲೆಯಲ್ಲಿ ಕೂರಿಸಿ ಬಂದಿದ್ದೇನೆ!"

"ಇಲ್ಲಿ ನೀನು ತಂಗಲು ಸ್ಥಳವಿಲ್ಲ, ನೇರವಾಗಿ ಹೋಗಿ ಎಲ್ಲಾದರೂ ಅಡಿಗೆ ಮಾಡಿಕೊಂಡು ಊಟ ಮಾಡಿ ಹೊರಟು ಹೋಗು. ಪುನಃ ನನ್ನ ಹತ್ತಿರ ಬರಬೇಡ!" ಎಂದ ಪಿಳಿಯಶ್ರೇಷ್ಠಿಯು ತನ್ನ ಸೇವಕನನ್ನು ಕರೆದು;

"ನಾಲ್ಕು ಮಾನದಷ್ಟು ಅಳತೆಯ ಅಕ್ಕಿ ನುಚ್ಚಿನಿಂದ ಕೂಡಿದ ತೌಡನ್ನು ಇವರ ಮಡಿಲಿಗೆ ಹಾಕು!" ಎಂದ ಅವನು ಅಲ್ಲಿ ನಿಲ್ಲದೆ ಹೊರಟು ಹೋದ. ಬಳಿಕ ಸೇವಕನು ಒಡಯನ ಮಾತಿನಂತೆ ನಾಲ್ಕು ಮಾನ ಅಳತೆಯ ನುಚ್ಚಿನಿಂದ ಕೂಡಿದ ತೌಡನ್ನು ತಂದು;

"ಸ್ವಾಮೀ, ಇದೋ ನಿಮ್ಮ ಪಾಲಿಗೆ ಸಲ್ಲಬೇಕಾದ ಬಿಕ್ಷೇ!" ಎಂದ. ಅದೇ ದಿನ ಒಂದು ಸಾವಿರ ಗಾಡಿ ಭತ್ತವನ್ನು ಅಕ್ಕಿ ಮಾಡಿಸಿ ತನ್ನ ಉಗ್ರಾಣಕ್ಕೆ ತುಂಬಿಸಿದ್ದ. ಅವನ ಮನೆಯು ಅರಮನೆಯಂತೆ ಸಿರಿಸಂಪತ್ತಿನಿಂದ ತುಂಬಿ ಕಂಗೊಳಿಸುತ್ತಿತ್ತು. ಅವನ ಖಜಾನೆಯಲ್ಲಿ ಎಂಬತ್ತು ಕೋಟಿಗೂ ಅಧಿಕ ಹಣವಿತ್ತು. ಆದರೆ ಅವನಲ್ಲಿ ಇಲ್ಲದೆ ಇದ್ದದು ಉಪಕಾರ ಸ್ಮರಣೆ ಮಾತ್ರ! ಇಂಥಹ ಅಘಾಧ ಅವಮಾನದಿಂದ ಕಂಪಿಸತೊಡಗಿದ ಸಂಖಶ್ರೇಷ್ಠಿಯು ಹೀಗೆ ಯೋಚಿಸತೊಡಗಿದ; ಆ ಸತ್ಪುರುಷನನ್ನಿಂದ ನಲವತ್ತು ಕೋಟಿ ಹಣ ಪಡೆದು ಈಗ ನಾಲ್ಕು ಮಾನದಷ್ಟು ಅಕ್ಕಿ ನುಚ್ಚಿನಿಂದ ಕೂಡಿದ ತೌಡನ್ನು ಪ್ರತಿಫಲವಾಗಿ ನೀಡಿತನ್ನ ದೃಷ್ಠ ಬುದ್ಧಿಯನ್ನು ಮೆರೆದಿದ್ದಾನೆ. ನಾನು ಈಗ ಆತ ಕೊಟ್ಟ ಉಡುಗೊರೆಯನ್ನು ದರ್ಪ ತೋರಿ ತಿರಸ್ಕರಿಸಿದರೆ ನಾನೂ ಕೂಡ ಅವನಂತೆ ಅಲ್ಪನಾಗುತ್ತೇನೆ. ಮೈತ್ರಿ ಧರ್ಮವನ್ನು ಮುರಿದವನಾಗುತ್ತೇನೆ. ನಾನು ಅವನ ಮೇಲಿನ ದ್ವೇಷಕ್ಕೆ ಧರ್ಮವನ್ನು ತ್ಯಜಿಸುವುದು ನ್ಯಾಯ ಸಮ್ಮತವಲ್ಲ, ಎಂದು ತನ್ನನೇ ತಾನು ಸಮಾದಾನ ಮಾಡಿಕೊಂಡ. ಬಳಿಕ ಮಿತ್ರನ್ನು ಕೊಟ್ಟ ನಾಲ್ಕು ಮಾನ ಅಳತೆಯ ಅಕ್ಕಿ ನುಚ್ಚಿನಿಂದ ಕೂಡಿದ ತೌಡನ್ನು ತನ್ನ ವಸ್ತ್ರ ಹಾಸಿ ಸ್ವೀಕರಿಸಿದ.

ಇತ್ತ ಸಂಖಶ್ರೇಷ್ಠಿಯ ಪತ್ನಿಯು ಧರ್ಮಶಾಲೆಯ ಮುಂಭಾಗದಲ್ಲಿ ಆಸೆಯ ಕಂಗಳಿಂದ ಬೀದಿಯಲ್ಲಿ ಹೋಗಿ ಬರುವ ಜನರನ್ನು ಮತ್ತು ರಥಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾ ಕುಳಿತಿದ್ದಳು. ತನ್ನನ್ನು ಗುರುತಿಸುವ ಯಾವ ರಥವು ಬರಲಿಲ್ಲ, ಯಾವ ಜನವೂ ಬರಲಿಲ್ಲ. ಕ್ಷಣದಿಂದ ಕ್ಷಣಕ್ಕೆ ಆಕೆಯ ದುಗುಡವು ಹೆಚ್ಚಿತು. ಅಷ್ಟರಲ್ಲಿ ಶ್ರೇಷ್ಠಯು ಬಂದು ಹೆಂಡತಿಯ ಎದುರು ನಿಲ್ಲುತ್ತಾರೆ.

"ಸ್ವಾಮೀ, ನಿಮ್ಮ ಸ್ನೇಹಿತರು ಸಿಕ್ಕರೇ? ನಿಮ್ಮನ್ನು ಕಂಡು ಸಂತೋಷಗೊಂಡರೆ? ನೀವು ಮಾಡಿದ ಉಪಕಾರ ವನ್ನು ಅವರು ಬಹುವಾಗಿ ಸ್ಮರಿಸಿದರೆ? ನಿಮ್ಮ ಋಣವನ್ನು ನಿಮಗೆ ಹಿಂದಿರುಗಿಸಿದರೆ?" ಎನ್ನಲು ಆತ ವಸ್ತ್ರದಲ್ಲಿ ಕಟ್ಟಿ ತಂದಿದ್ದ ಅಕ್ಕಿ ನುಚ್ಚಿನ ತೌಡನ್ನು ಆಕೆಯ ಎದುರು ತೆರೆದು ತೋರಿಸಿ ಮೌನವಾಗಿ ನಿಲ್ಲುತ್ತಾರೆ.

ಆಕೆ ಕಾತುರದಿಂದ;

"ಸ್ವಾಮೀ, ನಿಮ್ಮ ಸ್ನೇಹಿತರು ಸಿಕ್ಕರೇ? ನಿಮ್ಮನ್ನು ಕಂಡು ಸಂತೋಷಗೊಂಡರೆ? ನೀವು ಮಾಡಿದ ಉಪಕಾರವನ್ನು ಅವರು ಬಹುವಾಗಿ ಸ್ಮರಿಸಿದರೆ? ನಿಮ್ಮ ಋಣವನ್ನು ನಿಮಗೆ ಹಿಂದಿರುಗಿಸಿದರೆ?" ಎನ್ನಲು ಆತ ವಸ್ತ್ರದಲ್ಲಿ ಕಟ್ಟಿ ತಂದಿದ್ದ ಅಕ್ಕಿ ನುಚ್ಚಿನ ತೌಡನ್ನು ಆಕೆಯ ಎದುರು ತೆರೆದು ತೋರಿಸಿ ಮೌನವಾಗಿ ನಿಲ್ಲುತ್ತಾರೆ. ಆಕೆಯ ದುಖಃದ ಕಟ್ಟೆಯು ಹೊಡೆಯಲು ಜೋರಾಗಿ ಅಳತೊಡಗಿದಳು.

ಅಷ್ಟರಲ್ಲಿ ಈ ಹಿಂದೆ ಸಂಖಶ್ರೇಷ್ಠಿಯ ಬಳಿ ಸೇವಕನಾಗಿದ್ದು ಕಾರಣಾಂತರದಿಂದ ಅಲ್ಲಿ ಬಿಟ್ಟು ಈಗ ಪಿಳಿಯ ಶ್ರೇಷ್ಠಿಯ ಬಳಿ ಸೇವಕನಾಗಿ ಕೆಲಸ ಮಾಡುತ್ತಿದ್ದ ಸೇವಕನೊಬ್ಬನು ಅದೇ ಬೀದಿಯಲ್ಲಿ ಹೋಗುತ್ತಿದ್ದ. ಆತ ತನ್ನ ಹಿಂದಿನ ಯಜಮಾನ ಮತ್ತು ಅವರ ಪತ್ನಿಯನ್ನು ಗುರುತಿಸಿದ. ತನ್ನ ಒಡಯರ ಪತ್ನಿಯು ರೋಧಿಸುತ್ತಿರು ವುದನ್ನು ಕಂಡ ಅವನು ಇವರು ಯಾವುದೋ ಸಂಕಟದ ಪರಿಸ್ಥಿಯಲ್ಲಿ ಸಿಲುಕಿದ್ದಾರೆಂದು ಅರಿತ. ಆ ದಂಪತಿಗಳಿಗೆ ವಂದಿಸಿದ ಅವನು ಶ್ರೇಷ್ಠಯ ಪತ್ನಿಯ ಪಾದಗಳಿಗೆ ಬಿದ್ದು;

"ತಾಯೀ, ನೀವೇಕೆ ರೋಧಿಸುತ್ತಿರುವಿರಿ?" ಎನ್ನಲು ನೆಡೆದ ವಿಷಯವನ್ನೆಲ್ಲ ಆತನಲ್ಲಿ ತೋಡಿಕೊಂಡಳು. ಆತ ಅವರಿಗೆ ಧೈರ್ಯ ಹೇಳಿ ಆ ದಂಪತಿಗಳನ್ನು ತನ್ನ ಮನೆಗೆ ಕರೆತಂದ. ಅವರಿಗೆ ಸುಗಂಧಿತವಾದ ಪನ್ನೀರಿನಿಂದ ಸ್ನಾನ ಮಾಡಿಸಿದ. ಉತ್ತಮವಾದ ಭೋಜನ ಮಾಡಿಸಿ ತಾನೇ ಸಾಕು ಸಾಕು ಎನ್ನುವಷ್ಟು ಬಡಿಸಿದ. ಅವರಿಗೆ ತಂಗಲು ವ್ಯವಸ್ಥೆ ಮಾಡಿದ ಬಳಿಕ "ಒಡಯ ಚಿಂತಿಸದಿರಿ. ನನಗೆ ಅಲ್ಪ ಕಾಲಾವಕಾಶ ಕೊಡಿ. ನಾನು ಮಿತ್ರ ದ್ರೋಹಿಯಾದ ಪಿಳಿಯಶ್ರೇಷ್ಠಿಗೆ ತಕ್ಕ ಪಾಠ ಕಲಿಸಿ ತಮ್ಮ ನ್ಯಾಯಯುತ ಸಂಪತ್ತನ್ನು ತಮಗೆ ಸೇರುವಂತೆ ಮಾಡುವ ಮೂಲಕ ನನ್ನ ಋಣವನ್ನು ತೀರಿಸುತ್ತೇ ನೆಂದು!" ಎಂದು ಶಪಥ ತೊಟ್ಟ.

ಆ ಸೇವಕನು ಎಂದಿನಂತೆ ಅಂದು ಮುಂಜಾನೆ ಪಿಳಿಯಶ್ರೇಷ್ಠಿಯ ಅರಮನೆಯ ಸೇವೆಗೆ ಹಾಜರಾದ. ಬಳಿಕ ಅಲ್ಲಿನ ಮುಖ್ಯ ಸೇವಕನಲ್ಲಿ ನಮ್ಮ ಶೇಷ್ಠಿಯು ಮಾಡಿದ ಅನ್ಯಾಯವನ್ನು ವಿವರಿಸಿದ. ಆತ ಇತರೆ ಎಲ್ಲಾ ಸೇವಕರನ್ನು ಕರೆದು ವಿಷಯವನ್ನು ತಿಳಿಸಿದ ನಂತರ:

"ಮಿತ್ರರೇ, ನಮ್ಮ ಒಡಯ ಅಂಥಹ ಧರ್ಮಾತ್ಮನಿಗೇ ಇಂಥಹ ಘೋರ ಅನ್ಯಾಯ ಮಾಡಿರುವಾಗ ಮುಂದೆ ನಮಗೆ ಬಿಡುವನೇ? ಈ ಅನ್ಯಾಯವನ್ನು ಪ್ರತಿಭಟ್ಟಿಸಿ ನ್ಯಾಯ ಕೊಡಿಸುವುದು ನಮ್ಮ ಕರ್ತವ್ಯವಾಗಿದೆ. ನೆಡೆಯಿರಿ ನಾವುಗಳು ರಾಜನ ಬಳಿಗೆ ದೂರು ತೆಗೆದುಕೊಂಡು ಹೋಗೋಣ!" ಎಂದು ತೀರ್ಮಾನಿಸಿದ ಅವರು ಮರುದಿನ ಮುಂಜಾನೆ ರಾಜನಿಗೆ ದೂರು ಸಲ್ಲಿಸಿದರು. ರಾಜನು ಪಿಳಿಯಶ್ರೇಷ್ಠಿಯನ್ನು ಬಂಧಿಸಿ ಕರೆತರಲು ಆಜ್ಞೆ ಮಾಡಿದ. ಸೇನಾಧಿಪತಿಯು ಅಪರಾಧಿಯನ್ನು ಸೆರೆ ಹಿಡಿದು ತಂದು ರಾಜಪರಿಷತ್ತಿನ ಎದುರು ನಿಲ್ಲಿಸಿದರು.

ರಾಜನು ಮೊದಲಿಗೆ ಸಂಖಶ್ರೇಷ್ಠಿಯನ್ನು ಉದ್ದೇಶಿಸಿ;

"ಮಹಾಶ್ರೇಷ್ಠಿ, ನೀನು ನಿಜಕ್ಕೂ ಪಿಳಿಯಶ್ರೇಷ್ಠಿಗೆ ನಲವತ್ತು ಕೋಟಿ ಹಣವನ್ನು ಕೊಟ್ಟೆಯಾ?"

ಮಹಾರಾಜ, ಈ ನನ್ನ ಮಿತ್ರನು ಹಲವು ವರ್ಷಗಳ ಹಿಂದೆ ತನ್ನ ವ್ಯಾಪಾರದಲ್ಲಿ ನಷ್ಟವನ್ನು ಅನುಭವಿಸಿ ದಿವಾಳಿಯಾಗಿ ನೆಲೆ ಇಲ್ಲದೆ ಅಲೆಯುತ್ತಿದ್ದಂತಹ ಸಂದರ್ಭದಲ್ಲಿ ನನ್ನ ಬಳಿ ಬಂದು ವ್ಯಥೆಯನ್ನು ತೋಡಿಕೊಂಡ. ಆಗ ನಾನು ಸ್ನೇಹ, ಸಹಕಾರ, ಪ್ರೀತಿ ಮತ್ತು ಮಾನವೀಯ ಸಂಬಂಧಗಳಿಗೆ ಬೆಲೆ ಕೊಟ್ಟು ನನ್ನ ಬಳಿ ಇದ್ದ ಎಂಬತ್ತು ಕೋಟಿ ಹಣದಲ್ಲಿ ಅರ್ಧ ಭಾಗವಾದ ನಲವತ್ತು ಕೋಟಿ ಹಣವನ್ನು ಮತ್ತು ಅರ್ಧ ಭಾಗ ಚರ ಆಸ್ತಿಯನ್ನು ಕೊಟ್ಟು ಕಳುಹಿಸಿದ್ದೆ!"

"ಎಲೈ ಪಿಳಿಯಶ್ರೇಷ್ಠಯೇ, ಈ ಮಾತು ಸತ್ಯವೇ?"

"ದೇವಾ, ಈ ಮಾತು ಸತ್ಯ !"

"ನಿನಗೆ ಎದುರಾದ ಪರಿಸ್ಥಿತಿ ಅವರಿಗೆ ಸಂಭವಿಸಲು ಅವರು ನಿನ್ನ ಬಳಿ ಬಂದಾಗ ನೀನು ಅವರಿಗೆ ಹೇಗೆ ಸ್ಪಂಧಿಸಿದೆ? ಹೇಗೆ ಸತ್ಕಾರಿಸಿದೆ? ನಿನಗೆ ಕೊಟ್ಟ ಐಶ್ವರ್ಯಕ್ಕೆ ಬದಲಾಗಿ ಅವರಿಗೆ ಏನು ಉಡುಗೊರೆ ಕೊಟ್ಟೆ ? " ಎನ್ನಲು ಆತ ತಲೆಬಾಗಿ ಮೌನವಾಗಿ ನಿಂತ.

ರಾಜನು ಮಾತನ್ನು ಮುಂದುವರಿಸುತ್ತಾ ;

"ಎಲೈ ಶ್ರೇಷ್ಠಿಯೇ, ಅವರು ಮಾಡಿದ ಉಪಕಾರಕ್ಕೆ ಬದಲಾಗಿ ನೀನು ಅವರಿಗೆ ನಾಲ್ಕು ಮಾನದಷ್ಟು ಅಳತೆಯ ನುಚ್ಚಿನಿಂದ ಕೂಡಿದ ತೌಡನ್ನು ಅವರ ಸೆರಗಿಗೆ ಹಾಕಿ ಕಳುಹಿಸಿದೆ ಅಲ್ಲವೇ?" ರಾಜನಿಗೆ ನನ್ನ ಎಲ್ಲಾ ದೃಷ್ಠ ಕೃತ್ಯಗಳು ತಿಳಿದು ಹೋಗಿದೆ ಇನ್ನೂ ನನಗೆ ಉಳಿಗಾಲವಿಲ್ಲ ಎಂದು ಅರಿತ ಪೀಳಿಯಶ್ರೇಷ್ಠಿಯು ಮತ್ತೂ ಕುಸಿದು ಮೌನವಾಗಿ ನಿಂತ. ಆಗ ರಾಜನು ತನ್ನ ಸೇನಾಧಿಪತಿಯನ್ನು ಉದ್ದೇಶಿಸಿ;

"ಎಲೈ ಸೇನಾಧಿಪತಿಯೇ, ಈಗೀಂದ್ ಈಗಲೇ ಸೈನಿಕರನ್ನು ಕರೆದುಕೊಂಡು ಹೋಗಿ ಪಿಳಿಯಶ್ರೇಷ್ಠಿಯ ಅರಮನೆಯನ್ನು ಜಪ್ತಿ ಮಾಡಿ. ಈತನ ಸಕಲ ಸಿರಿಸಂಪತ್ತನ್ನೆಲ್ಲ ಸಂಗ್ರಹಿಸಿ ಈ ಸಂಖಶ್ರೇಷ್ಠಿಗೆ ಕೊಡಿರಿ" ಎನ್ನಲು ಸಂಖಶ್ರೇಷ್ಠಯು ರಾಜನನ್ನು ಉದ್ದೇಶಿಸಿ;

"ಪ್ರಭು, ನನ್ನದಲ್ಲದ ಹೆಚ್ಚಿನ ಸಂಪತ್ತು ನನಗೆ ಬೇಡ. ನಾನು ಧರ್ಮವಾಗಿ ಕೊಟ್ಟಷ್ಟು ಕೊಟ್ಟರೆ ಅಷ್ಟೇ ಸಾಕು!" ಎನ್ನಲು ರಾಜನು ಹಾಗೆಯೇ ಮಾಡಿದನು.

ಮಿತ್ರನಾದ ಸಂಖಶ್ರೇಷ್ಠಿಯು ನ್ಯಾಯಯುತ ಸಂಪತ್ತನ್ನು ರಥಗಳಿಗೆ ತುಂಬಿಕೊಂಡು ತನ್ನ ಊರಿಗೆ ತೆರಳುವ ಮುನ್ನ ಪಿಳಿಯಶ್ರೇಷ್ಠಿಗೆ ತನ್ನ ತಪ್ಪಿನ ಪೂರ್ಣ ಅರಿವಾಗಲು ತಲೆಬಾಗಿ ಮಿತ್ರನಿಗೆ ವಂದಿಸುತ್ತಾ "ಮಿತ್ರ, ನೀನು ನಿಜಕ್ಕೂ ಮಹಾತ್ಮನೇ ಸರಿ! ಸುಖದಲ್ಲಿಯು ದುಖಃದಲ್ಲಿಯು ತಾಳ್ಮೆ, ಸಹನೆ, ಶೀಲ ಮತ್ತು ನ್ಯಾಯಪರತೆಯನ್ನು ಮೆರೆದು ಬಿಟ್ಟೆ! ನಿನ್ನ ಪಾಲನ್ನು ನೀನು ಪಡೆದು ನನ್ನ ಪಾಲನ್ನು ನನಗೆ ಬಿಟ್ಟ ನೀನು ಸಮಾನತೆಯ ಹರಿಕಾರನೇ ಸರಿ!! ಎಂದ. □

'SAMVADA' Kannada Monthly, May 2010 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month

ಕರ್ನಾಟಕ ಉತ್ಕೃಷ್ಟ ಕಲೆ, ಸಾಹಿತ್ಯ, ಸಂಸ್ಕೃತಿ..........ಗಳ ಬೀಡು

ಸಾವಿರಾರು ವರ್ಷಗಳ ಶ್ರೇಷ್ಠ ಸಂಸ್ಕೃತಿ, ಶ್ರೀಮಂತ ಕಲೆ, ಅನುಪಮ ಸಾಹಿತ್ಯ ಭಂಡಾರ ಹೊಂದಿರುವ ಕರ್ನಾಟಕದ ವೈಭವವನ್ನು ದೇಶದ ಉದ್ದಗಲಕ್ಕೂ ಮೆರೆಸಿದ ಹಿರಿಮೆ ಕನ್ನಡಿಗರದು. ಸಾಮಾಜಿಕ ಸಮಾನತೆ, ಹೃದಯ ವೈಶಾಲ್ಯತೆಯ ಮೂಲ ಸೆಲೆಯಲ್ಲಿ ಮೂಡಿಬಂದ ಈ ನಾಡಿನ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳು ಸದಾ ಪ್ರಸ್ತುತ. ಅವು ಮನುಕುಲಕ್ಕೆ ನೀಡಿದ ಅಭೂತಪೂರ್ವ ಕೊಡುಗೆಗಳು.

ದೇಶದ ಕಲೆ, ಸಾಹಿತ್ಯ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನಗಳಂತಹ ಮಹತ್ತರ ರಂಗಗಳಲ್ಲಿ ಮಹೋನ್ನತ ಕಾಣಿಕೆ ನೀಡಿದ ಕರ್ನಾಟಕವನ್ನು ಮತ್ತಷ್ಟು ಸಮೃದ್ಧಗೊಳಿಸಬೇಕೆಂಬುದೇ ಸರ್ಕಾರದ ಧೃಢ ಸಂಕಲ್ಪ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಒತ್ತು ನೀಡಿರುವ ಸರ್ಕಾರ ಉತ್ತರ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಶಸ್ತ್ಯ ನೀಡಿ ಕಾರ್ಯಪ್ರವೃತ್ತವಾಗಿದೆ.

ಕರ್ನಾಟಕ ವಾರ್ತೆ
Karnataka Information